*Pandit Teaches the Bible Series*

# Let's Read 1 and 2 Peter

**Kannada Edition**

**Author: T. Pandit**

**Translator: Pastor Vinayak**

**Layout: Genie Cliff**

This is the Kannada version of a college level textbook on First and Second Peter prepared a few years ago for a Bible college in South India. It was written it with the South Indian Christian context in mind. With minor adaptions it should, however, be useful also in other cultural contexts.

T. Pandit has many years of experience as an educationist, a Bible teacher and a college principal, in India as well as in internationally. He is now retired.

Vinayak is pastoring a church in Bidar in northern Karnataka. He is also an experienced Bible teacher and a translator of textbooks for Kannada Satyaveda College in Davangere.

Genie Cliff was formerly the administrator of Kannada Satyaveda College in Davangere.

July 2018


## Copyright waiver

The authors of this work hereby waive all claim of copyright (economic and moral) in this work and immediately place it in the public domain. It may be used, distorted or destroyed in any manner whatsoever without further attribution or notice to the creators.

The authors of this work would, however, object to to any republishing of this work for the purposes of financial gain.

ಕನ್ನಡ ಸತ್ಯವೇದ ಮಹಾವಿದ್ಯಾಲಯ ಪಠ್ಯಪುಸ್ತಕ ಸರಣಿ

# ಪೇತ್ರನು ಬರೆದ ಪತ್ರಿಕೆಗಳನ್ನು ಓದೋಣ!

*ಮೊದಲನೆಯ ಕನ್ನಡ ಆವೃತ್ತಿ*


ಪ್ರಧಾನ ಸಂಪಾದಕರು

**ಟಿ. ಪಂಡಿತ್**

ಲೇಖಕರು

**ಟಿ. ಪಂಡಿತ್**

ಅನುವಾದಕರು

**ಪಾಸ್ಟರ್ ವಿನಯ್**

# Let's Read 1 and 2 Peter! (Kannada Edition)

## *by*T. Pandit

T. Pandit has many years of experience as an educationist, a Bible teacher and a college principal. He has been closely involved with Kannada Satyaveda College since its beginning in 2006.

This book is translated into Kannada by Pastor Vinay from Udupi, who is a B.Th. graduate and currently pioneering a church in Bidar and also teaching in Kannada Satyaveda College. He lives with his wife and daughter in Bidar.

Copyright © 2016 by Kannada Satyaveda College

Davangere, India

*e-mail:*ksc.ffpck@gmail.com

*Website:* www.ksc1.webs.com

*Cover design & layout*

**Genie Cliff** ⓓJLF.inc

This book has been produced in

few copies for private use.

It is not for sale.

ಎಲ್ಲಾ ಸತ್ಯವೇದ ವಚನಗಳನ್ನು

ನ್ಯೂ ಇಂಡಿಯಾ ಬೈಬಲ್ ವರ್ತನ್‌ನಿಂದ

ತೆಗೆದುಕೊಳ್ಳಲಾಗಿದೆ.

****

# ಮುನ್ನುಡಿ

ಈ ಮಹಾವಿದ್ಯಾಲಯ ಮಟ್ಟದ ಪಠ್ಯಪುಸ್ತಕವು ದಕ್ಷಿಣ ಭಾರತದಲ್ಲಿನ ಸತ್ಯವೇದ ಮಹಾವಿದ್ಯಾಲಯಗಳಿಗಾಗಿ ಸಿದ್ಧಮಾಡಲ್ಪಟ್ಟಿದೆ. ಈ ಪಠ್ಯಪುಸ್ತಕವು ಕನ್ನಡ ಭಾಷಾಂತರದ ಆವೃತ್ತಿಯಾಗಿದೆ. ಈ ಪಠ್ಯಪುಸ್ತಕವು ಇಂಗ್ಲಿಷ್ ಆವೃತ್ತಿಯಲ್ಲಿಯೂ ಲಭ್ಯವಿದೆ. ಈ ಪಠ್ಯಪುಸ್ತಕವು ಕರ್ನಾಟಕ ರಾಜ್ಯದ ದಾವಣಗೆರೆ ಜಿಲ್ಲೆಯಲ್ಲಿರುವ *ಕನ್ನಡ ಸತ್ಯವೇದ ಮಹಾವಿದ್ಯಾಲಯಕ್ಕಾಗಿ* ಸಿದ್ಧಮಾಡಲ್ಪಟ್ಟು, ಅದೇ ಮಹಾವಿದ್ಯಾಲಯದಲ್ಲಿ ಬಳಸಲಾಗುತ್ತಿದೆ.

ಹಾಗಾದರೆ ಇದು ಯಾವ ರೀತಿಯ ಪಠ್ಯಪುಸ್ತಕವಾಗಿದೆ?

1. ಇದು ವಾಚಕವಾದದ್ದು: ವಿದ್ಯಾರ್ಥಿಗಳು ಪೇತ್ರನು ಬರೆದ 1 ಮತ್ತು 2 ನೇ ಪತ್ರಿಕೆಗಳನ್ನು ತಿಳುವಳಿಕೆಯೊಂದಿಗೆ ಓದಬೇಕೆಂದು ಅಪೇಕ್ಷಿಸಲ್ಪಟ್ಟಿದೆ. ವಿದ್ಯಾರ್ಥಿಗಳು ತಾವು ಓದಿದಂತವುಗಳ ಕುರಿತು ಆಲೋಚಿಸಲು ಈ ಪುಸ್ತಕದಲ್ಲಿರುವ ಅನೇಕ ಪ್ರಶ್ನೆಗಳು ಅವರನ್ನು ಪ್ರೋತ್ಸಾಹಿಸುತ್ತವೆ.

2. ಇದು ಒಂದು ಪಠ್ಯಪುಸ್ತಕವಾಗಿದೆ: ಈ ಪಠ್ಯಪುಸ್ತಕವು ಪಾಶ್ಚಾತ್ಯ ಜಗತ್ತಿನ ಮತ್ತು ಉನ್ನತ ಶಿಕ್ಷಣದ ಜ್ಞಾನವನ್ನು ಹೊಂದದ ದಕ್ಷಿಣ ಭಾರತದಲ್ಲಿರುವ ಸತ್ಯವೇದದ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಬರೆಯಲ್ಪಟ್ಟಿದೆ.

3. ಈ ಪಠ್ಯಪುಸ್ತಕವು ಅನುಭವರಹಿತ ಮತ್ತು ಬಹುಶಃ ಅಸುರಕ್ಷಿತವುಳ್ಳ ಸತ್ಯವೇದ ಉಪದೇಶಕರನ್ನೂ ಸಹ ಗಮನದಲ್ಲಿರಿಸಿಕೊಂಡು ಬರೆಯಲ್ಪಟ್ಟಿದೆ: ನಾನು ನನ್ನ ಸ್ವಂತ ಪ್ರಶ್ನೆಗಳನ್ನು ಉತ್ತರಿಸಿದ್ದೇನೆ ಮತ್ತು ಸಾಕಷ್ಟು ವಿವರಣೆಯನ್ನು ಸಹ ನೀಡಿದ್ದೇನೆ. ನಾನು ಶಿಕ್ಷಕರಿಗಾಗಿ ಸಹ ಒಂದು ವ್ಯತ್ಯಾಸ ಭಾಗವನ್ನು ಸೇರಿಸಿದ್ದೇನೆ. ಈ ಭಾಗವು ಉಪನ್ಯಾಸಕರಿಗೆ ಎರಡು ವಾರದ ಈ ವಿಷಯಕ್ಕಾಗಿ ಸಿದ್ಧಗೊಳ್ಳಲು ಸಹಾಯಮಾಡುತ್ತವೆ.

4. ಇದು ಒಂದು ಕೈಪಿಡಿಯಾಗಿದೆ ಮತ್ತು ಸಂಪನ್ಮೂಲವಾಗಿದೆ: ಈ ಪಠ್ಯಪುಸ್ತಕವು ಸತ್ಯವೇದ ಮಹಾವಿದ್ಯಾಲಯದಿಂದ ಪದವೀದರರಾಗಿ ಹೊರಬಂದು ಹಲವು ವರ್ಷಗಳನ್ನು ಕಳೆದ ಸುವಾರ್ತಿಕರು, ಸಭಾಪಾಲಕರುಗಳು ಮತ್ತು ಸತ್ಯವೇದ ಬೋಧಕರಾಗಿರುವವರಿಗೆ ಒಂದು ಸಂಪನ್ಮೂಲವಾಗುವ ರೀತಿಯಲ್ಲಿ ಬರೆಯಲ್ಪಟ್ಟಿದೆ.

5. ಇದು ಪಂಚಾಶತ್ತಮವಾದದ್ದು/ಸುವಾರ್ತಿಕವಾದದ್ದು: ಈ ಪುಸ್ತಕವು ಸಿದ್ಧಮಾಡಲ್ಪಟ್ಟ ಸತ್ಯವೇದ ಮಹಾವಿದ್ಯಾಲಯವೂ ಪೆಂತಕೋಸ್ತವಾದದ್ದು. ಸತ್ಯವೇದವು ಇಂದು ನಿಜವಾಗಲೂ ನಮಗೆ ದೇವರ ವಾಕ್ಯವಾಗಿದೆ ಎಂದು ಈ ಪುಸ್ತಕವು ಕಾಣುತ್ತದೆ.

6. ಇದು ಆಧ್ಯಾತ್ಮಕವಾದದ್ದು: ಈ ಪುಸ್ತಕವು ಧ್ಯಾನಕ್ಕಾಗಿ ರೂಪಿಸಲಾಗಿರುವ ಭಾಗವನ್ನೂ ಒಳಗೊಂಡಿದೆ. ಅದನ್ನು ಅವಲೋಕನ ಎಂಬ ಶೀರ್ಷಿಕೆಯ ಅಡಿಯಲ್ಲಿ ಮಾತ್ರವಲ್ಲದೆ ನನ್ನ ಉತ್ತರಗಳಲ್ಲಿಯೂ ಕಾಣಬಹುದು.

ಈ ರೀತಿಯ ಪಠ್ಯಪುಸ್ತಕವನ್ನು ಸಿದ್ಧಪಡಿಸಲು ಸಂಪನ್ಮೂಲದ ಅವಶ್ಯಕತೆಯಿದೆ. ಖಂಡಿತವಾಗಲೂ ನಾನು (*ಎನ್.ಐ.ವಿ. ಸ್ಟಡಿ ಬೈಬಲ್‌*ನ್ನು ಒಳಗೊಂಡು) ಅನೇಕ ಸತ್ಯವೇದ ನಿಘಂಟುಗಳ, ಪ್ರಮಾಣಗ್ರಂಥಗಳ ಮತ್ತು ವ್ಯಾಖ್ಯಾನ ಗ್ರಂಥಗಳ ಸಲಹೆಯನ್ನು ಪಡೆದಿದ್ದೇನೆ. ನಾನು ಬಳಸಿರುವ ಬಹುತೇಕ ಚಿತ್ರಣಗಳು ಇಂಟರ್‌ನೆಟ್‌ನಿಂದ ತೆಗೆದುಕೊಂಡದ್ದಾಗಿದೆ.

ಅಂತಿಮವಾಗಿ, ಈ ಮಹಾವಿದ್ಯಾಲಯ ಪಠ್ಯಪುಸ್ತಕವು ದಕ್ಷಿಣ ಭಾರತದ ಸುವಾರ್ತಿಕರು, ಸಭಾಪಾಲಕರುಗಳು ಮತ್ತು ಸತ್ಯವೇದ ಬೋಧಕರುಗಳಿಗೆ ಉಪಯೋಗಕರವಾಗಿರುವುದೆಂದು ನಾನು ನಿರೀಕ್ಷಿಸುತ್ತೇನೆ. ಅದು ಮಾತ್ರವಲ್ಲದೆ ದೇವರ ವಾಕ್ಯವನ್ನು ಪ್ರಾಮಾಣಿಕವಾಗಿ ಕಲಿಯಲು ಬಯಸುವ ಸಾಧಾರಣ ವಿದ್ಯಾರ್ಥಿಗೂ ಉಪಯೋಗಕರವಾಗಿರುವುದೆಂದು ನಾನು ನಿರೀಕ್ಷಿಸುತ್ತೇನೆ.

ಟಿ. ಪಂಡಿತ್

ಜುಲೈ 2013

# ವಿಷಯಾನುಕ್ರಮಣಿಕೆ

## ಅಧ್ಯಯನಗಳು


ಪೇತ್ರನು ಬರೆದ ಮೊದಲನೆಯ ಪತ್ರಿಕೆಯ ಪರಿಚಯ 09

ಪೇತ್ರನು ಬರೆದ ಮೊದಲನೆಯ ಪತ್ರಿಕೆಯನ್ನು ಓದುವುದು 12

ಅಧ್ಯಯನ 1. ವಂದನೆಗಳು, 1:1–2 13

ಅಧ್ಯಯನ 2. ಜೀವಕರವಾದ ನಿರೀಕ್ಷೆ, 1:3–12 14

ಅಧ್ಯಯನ 3. ಪರಿಶುದ್ಧರಾಗಿರ್ರಿ, 1:13–2:3 16

ಅಧ್ಯಯನ 4. ದೇವರಿಗೆ ಮೀಸಲಾದ ಜನರು, 2:4–10 18

ಅಧ್ಯಯನ 5. ಹೊಸದಾದ ಜೀವನಶೈಲಿ, ಭಾಗ–1, 2:11–20 20

ಅಧ್ಯಯನ 6. ಹೊಸದಾದ ಜೀವನಶೈಲಿ, ಭಾಗ–2,2:21–3:7 22

ಅಧ್ಯಯನ 7. ನೀತಿಯ ನಿಮಿತ್ತ ನ್ಯಾಯವಾದದ್ದಕ್ಕಾಗಿ ಬಾಧೆಪಡುವದು, 3:8–22 24

ಅಧ್ಯಯನ 8. ದೇವರ ಚಿತ್ತಕ್ಕಾಗಿ ಜೀವಿಸುವದು, 4:1–11 26

ಅಧ್ಯಯನ 9. ಬಾಧೆ ಪಡುತ್ತಿರುವ ಸಭೆ, 4:12–19 29

ಅಧ್ಯಯನ 10. ದೀನತೆಯನ್ನು ಧರಿಸಿಕೊಳ್ಳಿರಿ, 5:1–11 31

ಅಧ್ಯಯನ 11. ಅಂತಿಮ ವಂದನೆಗಳು, 5:12–14 33

ಅಧ್ಯಯನ 12. ಪೇತ್ರನು ಬರೆದ ಮೊದಲನೆಯ ಪತ್ರಿಕೆಯ ಕುರಿತು ಯೋಚಿಸಿರಿ 36

ಪೇತ್ರನು ಬರೆದ ಎರಡನೆಯ ಪತ್ರಿಕೆಯ ಪರಿಚಯ 37

ಪೇತ್ರನು ಬರೆದ ಎರಡನೆಯ ಪತ್ರಿಕೆಯನ್ನು ಓದುವುದು 40

ಅಧ್ಯಯನ 13. ವಂದನೆ, 1:1–2 41

ಅಧ್ಯಯನ 14. ನಿಮ್ಮ ಕರೆಯುವಿಕೆಯನ್ನೂ ಆಯ್ಕೆಯನ್ನೂ ದೃಢಪಡಿಸಿಕೊಳ್ಳಿರಿ, 1:3–11 43

ಅಧ್ಯಯನ 15. ಸಾಕ್ಷಿಗಳನ್ನು ಜ್ಞಾಪಿಸಿಕೊಳ್ಳಿರಿ, 1:12–21 45

ಅಧ್ಯಯನ 16. ಸುಳ್ಳುಬೋಧಕರ ಕುರಿತು ಎಚ್ಚರದಿಂದಿರಿ, 2:1–9 47

ಅಧ್ಯಯನ 17. ಸುಳ್ಳುಬೋಧಕರನ್ನು ಗುರುತಿಸಿರಿ, 2:10–22 50

ಅಧ್ಯಯನ 18. ವಾಗ್ದಾನವನ್ನು ನೆನಪುಮಾಡಿಕೊಳ್ಳಿರಿ, 3:1–7 51

ಅಧ್ಯಯನ 19. ಇದು ಕಳ್ಳನಂತೆ ಇರುವುದು, 3:8–10 53

ಅಧ್ಯಯನ 20. ಕರ್ತನ ದಿನವನ್ನು ಮುನ್ನೋಡುವುದು, 3:11–18 55

ಅಧ್ಯಯನ 21. ಪೇತ್ರನು ಬರೆದ ಎರಡನೆಯ ಪತ್ರಿಕೆಯ ಕುರಿತು ಯೋಚಿಸಿರಿ 56

## ಉತ್ತರಗಳು

ಪೇತ್ರನು ಬರೆದ ಮೊದಲನೆಯ ಪತ್ರಿಕೆಯ ಪರಿಚಯ 58

ಪೇತ್ರನು ಬರೆದ ಮೊದಲನೆಯ ಪತ್ರಿಕೆಯನ್ನು ಓದುವುದು 61

ಉತ್ತರಗಳು 1. ವಂದನೆಗಳು, 1:1–2 64

ಉತ್ತರಗಳು 2. ಜೀವಕರವಾದ ನಿರೀಕ್ಷೆ, 1:3–12 69

ಉತ್ತರಗಳು 3. ಪರಿಶುದ್ಧರಾಗಿರ್ರಿ, 1:13–2:3 73

ಉತ್ತರಗಳು 4. ದೇವರಿಗೆ ಮೀಸಲಾದ ಜನರು, 2:4–10 77

ಉತ್ತರಗಳು 5. ಹೊಸದಾದ ಜೀವನಶೈಲಿ, ಭಾಗ–1, 2:11–20 83

ಉತ್ತರಗಳು 6. ಹೊಸದಾದ ಜೀವನಶೈಲಿ, ಭಾಗ–2,2:21–3:7 87

ಉತ್ತರಗಳು 7. ನೀತಿಯ ನಿಮಿತ್ತ ನ್ಯಾಯವಾದದ್ದಕ್ಕಾಗಿ ಬಾಧೆಪಡುವದು, 3:8–22 93

ಉತ್ತರಗಳು 8. ದೇವರ ಚಿತ್ತಕ್ಕಾಗಿ ಜೀವಿಸುವದು, 4:1–11 99

ಉತ್ತರಗಳು 9. ಬಾಧೆ ಪಡುತ್ತಿರುವ ಸಭೆ, 4:12–19 105

ಉತ್ತರಗಳು 10. ದೀನತೆಯನ್ನು ಧರಿಸಿಕೊಳ್ಳಿರಿ, 5:1–11 111

ಉತ್ತರಗಳು 11. ಅಂತಿಮ ವಂದನೆಗಳು, 5:12–14 117

ಉತ್ತರಗಳು 12. ಪೇತ್ರನು ಬರೆದ ಮೊದಲನೆಯ ಪತ್ರಿಕೆಯ ಕುರಿತು ಯೋಚಿಸಿರಿ 124

ಪೇತ್ರನು ಬರೆದ ಎರಡನೆಯ ಪತ್ರಿಕೆಯ ಪರಿಚಯ ಭಾಗದ ಉತ್ತರಗಳು 126

ಪೇತ್ರನು ಬರೆದ ಎರಡನೆಯ ಪತ್ರಿಕೆಯನ್ನು ಓದುವುದು ಭಾಗದ ಉತ್ತರಗಳು 128

ಉತ್ತರಗಳು 13. ವಂದನೆ, 1:1–2 131

ಉತ್ತರಗಳು 14. ನಿಮ್ಮ ಕರೆಯುವಿಕೆಯನ್ನೂ ಆಯ್ಕೆಯನ್ನೂ ದೃಢಪಡಿಸಿಕೊಳ್ಳಿರಿ, 1:3–11 134

ಉತ್ತರಗಳು 15. ಸಾಕ್ಷಿಗಳನ್ನು ಜ್ಞಾಪಿಸಿಕೊಳ್ಳಿರಿ, 1:12–21 141

ಉತ್ತರಗಳು 16. ಸುಳ್ಳುಬೋಧಕರ ಕುರಿತು ಎಚ್ಚರದಿಂದಿರಿ, 2:1–9 148

ಉತ್ತರಗಳು 17. ಸುಳ್ಳುಬೋಧಕರನ್ನು ಗುರುತಿಸಿರಿ, 2:10–22 155

ಉತ್ತರಗಳು 18. ವಾಗ್ದಾನವನ್ನು ನೆನಪುಮಾಡಿಕೊಳ್ಳಿರಿ, 3:1–7 165

ಉತ್ತರಗಳು 19. ಇದು ಕಳ್ಳನಂತೆ ಇರುವುದು, 3:8–10 169

ಉತ್ತರಗಳು 20. ಕರ್ತನ ದಿನವನ್ನು ಮುನ್ನೋಡುವುದು, 3:11–18 173

ಉತ್ತರಗಳು 21. ಪೇತ್ರನು ಬರೆದ ಎರಡನೆಯ ಪತ್ರಿಕೆಯ ಕುರಿತು ಯೋಚಿಸಿರಿ 180

## ಆತ್ಮಿಕ ಕೂಟ

ಆತ್ಮಿಕ ಕೂಟದ ಪರಿಚಯ 182

ಅವಧಿ 1. ಪರಿಶುದ್ಧರಾಗಿರ್ರಿ! 184

ಅವಧಿ 2. ಹೊಸ ಜೀವನಶೈಲಿ 187

ಅವಧಿ 3. ಮಾನವನ ದುರಾಶೆಗಳೋ ಅಥವಾ ದೇವರ ಚಿತ್ತವೋ? 191

ಅವಧಿ 4. ಹಿಂಸೆಪಡುತ್ತಿರುವ ಸಭೆ 194

ಅವಧಿ 5. ಅಧೀನರಾಗಿರ್ರಿ ಮತ್ತು ದೀನರಾಗಿರ್ರಿ! 198

ಅವಧಿ 6. ಸಮತೋಲನದ ಜೀವನ ನಡೆಸಿರಿ! 202

ಅವಧಿ 7. ಅಪಾಯಗಳನ್ನು ಗುರುತಿಸಿರಿ! 206

ಅವಧಿ 8. ಕ್ರಿಸ್ತನ ಬರೋಣಕ್ಕಾಗಿ ಸಿದ್ಧಗೊಳ್ಳಿರಿ! 210

## ಶಿಕ್ಷಕರಿಗಾಗಿ

ಸಾಮಾನ್ಯ ಸಲಹೆಗಳು 214

ಈ ಕೋರ್ಸ್‌ನ ಯೋಜನೆ 217

ಆತ್ಮಿಕ ಕೂಟ 220

ಪದಸೂಚಿ 223

# ಅಧ್ಯಯನಗಳು

# ಪೇತ್ರನು ಬರೆದ ಮೊದಲನೆಯ ಪತ್ರಿಕೆಯ ಪರಿಚಯ

## ಲೇಖಕ

ಪೇತ್ರನು ಬರೆದ ಮೊದಲನೆಯ ಪತ್ರಿಕೆಯ ಲೇಖಕನು ತನ್ನನ್ನು ಯೇಸು ಕ್ರಿಸ್ತನ ಅಪೋಸ್ತಲನಾದ ಪೇತ್ರನು ಎಂದು ಕರೆದುಕೊಳ್ಳುತ್ತಾನೆ. ಪೇತ್ರನು ಯೇಸುವಿನ ಹನ್ನೆರಡು ಶಿಷ್ಯರಲ್ಲಿ ಒಬ್ಬನಾಗಿದ್ದನು ಮತ್ತು ನಾಲ್ಕು ಸುವಾರ್ತೆಗಳಲ್ಲಿ ಅನೇಕ ಬಾರಿ ಆತನು ಪ್ರಸ್ತಾಪಿಸಲ್ಪಟ್ಟಿದ್ದಾನೆ. ಹಾಗಾಗಿ ಈ ಪುಸ್ತಕದ ಲೇಖಕನು ಯಾರೆಂಬುದು ಸ್ಪಷ್ಟವಾಗಿದೆ.

ಆದರೆ ಪೇತ್ರನು ಈ ಪುಸ್ತಕದ ಲೇಖಕನಾಗಿದ್ದಾನೆ ಎಂಬುದಕ್ಕೆ ಒಂದು ಅಡ್ಡಿಯಿದೆ: ಈ ಪತ್ರಿಕೆಯಲ್ಲಿರುವ ಗ್ರೀಕ್ ಭಾಷೆಯು ಅತ್ಯುತ್ತಮವಾಗಿದ್ದು ಒಬ್ಬ ಯೆಹೂದ್ಯ ಬೆಸ್ತನು ಇಷ್ಟು ಉತ್ತಮವಾಗಿ ಬರೆಯುವುದು ಅಸಾಧ್ಯವೆನಿಸುತ್ತದೆ. ಈ ವಾಸ್ತವಾಂಶದ ನಿಮಿತ್ತ ಅನೇಕ ಸತ್ಯವೇದ ಶಾಸ್ತ್ರಜ್ಞರುಗಳು ಯೇಸುವಿನ ಶಿಷ್ಯನಾದ ಪೇತ್ರನು ಈ ಪತ್ರಿಕೆಯನ್ನು ಬರೆದಿದ್ದಾನೆಂಬುದನ್ನು ಸಂಶಯಪಡುತ್ತಾರೆ.

ಆದರೆ ಈ ಪತ್ರಿಕೆಯ ಕೊನೆಯಲ್ಲಿಯೇ ಈ ಕಷ್ಟಕ್ಕೆ ಪರಿಹಾರವನ್ನು ನಾವು ಕಂಡುಕೊಳ್ಳಬಹುದು.ಅಲ್ಲಿ ಪೇತ್ರನು ಹೀಗೆ ಬರೆಯುತ್ತಾನೆ: ಇತರೆ ಹೊಸ ಒಡಂಬಡಿಕೆಯ ಪುಸ್ತಕಗಳಿಂದ ನಾವು ಸೀಲನ (ಅಥವಾ ಸಿಲ್ವಾನನ) ಕುರಿತು ತಿಳಿದುಕೊಳ್ಳುತ್ತೇವೆ. ಆತನು ಯೆರುಸಲೇಮಿನ ಸಭೆಯ ಒಬ್ಬ ವಿಶ್ವಾಸಾರ್ಹ ನಾಯಕನಾಗಿದ್ದನು (ಅ. ಕೃ. 15:22). ಆತನು ಯೆರುಸಲೇಮಿನಿಂದ ಅಂತಿಯೋಕ್ಯ ಸಭೆಗೆ ಒಂದು ಪತ್ರವನ್ನು ತಂದಿದ್ದನು. ಆತನು ಅಲ್ಲಿ ಪೌಲನನ್ನು ಸಂಧಿಸಿದನು ಮತ್ತು ಆನಂತರ ಪೌಲನ ಜೊತೆ–ಸೇವಕನಾದನು (ವ. 40) ಮತ್ತು ಜೊತೆ–ಬರಹಗಾರನಾದನು (1 ಥೆಸ. 1:1; 2 ಥೆಸ. 1:1). ಸೀಲನು ರೋಮನ್ ಪ್ರಜೆಯಾಗಿದ್ದನು (ಅ. ಕೃ. 16:38), ಹಾಗಾಗಿ ಆತನು ಚದುರಿ ಹೋಗಿದ್ದ ಯೆಹೂದ್ಯರಲ್ಲಿ ಒಬ್ಬನಾಗಿದ್ದನು. ಪರಿಣಾಮವಾಗಿ, ಆತನು ಗ್ರೀಕ್ ಭಾಷೆಯನ್ನು ಚೆನ್ನಾಗಿ ಬಲ್ಲವನಾಗಿದ್ದನು. ಹಾಗಾಗಿ ಪೇತ್ರನು ಈ ಪತ್ರಿಕೆಯ ಲೇಖಕನಾಗಿದ್ದನು. ಆದರೆ ಆತನು ಸೀಲನನ್ನು ತನ್ನ ಕಾರ್ಯದರ್ಶಿಯಾಗಿ ಬಳಸಿದನು.

ಪತ್ರಿಕೆಯ ಅಂತ್ಯದಲ್ಲಿ ಪೇತ್ರನು ಬಾಬಿಲೋನಿನಿಂದ ಬರೆಯುತ್ತಿದ್ದಾನೆ ಎಂದು ಹೇಳುತ್ತಿರುವಂತೆ ತೋರುತ್ತದೆ (5:13). ಆ ದಿನಗಳಲ್ಲಿ ಭೌಗೋಳಿಕವಾಗಿ ಹೇಳಬೇಕಾದರೆ ಎರಡು ಬಾಬಿಲೋನ್ ಇದ್ದವು. ಅದರಲ್ಲಿ ಒಂದು ಯುಫ್ರೇಟಿಸ್ ನದಿಯ ಬಳಿಯಲ್ಲಿದ್ದ ಬಾಬಿಲೋನಿಯನ್ ಸಾಮ್ರಾಜ್ಯದ ಪ್ರಾಚೀನ ರಾಜಧಾನಿಯ ಶೇಷಾಂಶವಾಗಿತ್ತು. ಆದರೆ ಈ ಬಾಬಿಲೋನಿನಲ್ಲಿ ಯಾವುದೇ ಕ್ರೈಸ್ತರಿದ್ದ ದಾಖಲೆಗಳಿಲ್ಲ. ಇನ್ನೊಂದು ಈಜಿಪ್ಟಿನಲ್ಲಿದ್ದ ಒಂದು ಸೇನಾ ವಸತಿಯಾಗಿದ್ದು ಪೇತ್ರನು ಅಲ್ಲಿಗೆ ಭೇಟಿ ನೀಡಿರುವುದು ಅಸಂಭವನೀಯವಾಗಿದೆ. ಇದರ ಅರ್ಥ ಪೇತ್ರನು ರೋಮ್‌ನ್ನು ಗೌಪ್ಯವಾಗಿ ಸೂಚಿಸಲು 'ಬಾಬಿಲೋನ್' ಎಂಬ ಪದವನ್ನು ಬಳಸುತ್ತಿದ್ದಾನೆ. ಪೇತ್ರನು ತನ್ನ ಜೀವನದ ಅಂತ್ಯದಲ್ಲಿ ರೋಮ್ ಪಟ್ಟಣದಲ್ಲಿ ಜೀವಿಸಿದನು ಮತ್ತು ಅಪೊಸ್ತಲ ಪೌಲನೊಂದಿಗೆ ಆತನೂ ಸಹ ಚಕ್ರವರ್ತಿಯಾದ ನಿರೋನ ಹಿಂಸೆಯ ಅವಧಿಯಲ್ಲಿ ರಕ್ತಸಾಕ್ಷಿಯಾಗಿ ಸತ್ತನುಎಂಬುದು ನಮಗೆ ತಿಳಿದದೆ. ತನ್ನ ಮೊದಲ ಸೆರೆವಾಸದಲ್ಲಿ (ಕ್ರಿ. ಶ. 60–62 ರಲ್ಲಿ) ಪೌಲನು ರೋಮ್‌ನಲ್ಲಿದ್ದಾಗ್ಯೂ ಪೇತ್ರನು ಆತನ ಹೆಸರನ್ನು ಪ್ರಸ್ತಾಪಿಸುತ್ತಿಲ್ಲ. ಹಾಗಾಗಿ 1 ಪೇತ್ರ ಪತ್ರಿಕೆಯು ಬಹುಶಃ ಕ್ರಿ.ಶ. 62 ರ ನಂತರ ಹಾಗೂ ಅದರ ಕೆಲವರ್ಷಗಳ ನಂತರ ಸಂಭವಿಸಿದ ನಿರೋನ ಹಿಂಸೆಗಿಂತ ಸ್ವಲ್ಪ ಮುಂಚೆ ಬರೆಯಲ್ಪಟ್ಟಿರಬಹುದು.

## ಶ್ರೋತೃಗಳು

ಪೇತ್ರನು ತನ್ನ ಪತ್ರದ ಪ್ರಾರಂಭದಲ್ಲಿಯೇ ತನ್ನ ಶ್ರೋತೃಗಳ ಕುರಿತು ಒಂದು ರೀತಿಯ ಗೊಂದಲಮಯವಾದ ದೈವಶಾಸ್ತ್ರೀಯ ಪದಗಳಲ್ಲಿ ವರ್ಣಿಸುತ್ತಾನೆ. ನಾವು ಈ ವರ್ಣನೆಯನ್ನು ನಮ್ಮ ಮೊದಲ ಅಧ್ಯಯನದಲ್ಲಿ ವಿವರವಾಗಿ ನೋಡಲಿದ್ದೇವೆ.

ಪೇತ್ರನು ತನ್ನ ಮೊದಲ ಓದುಗರ ಭೌಗೋಳಿಕ ಸ್ಥಳವನ್ನು ತಿಳಿಸುತ್ತಾನೆ. ಅವರು ಇಂದು ಟರ್ಕಿ ಎಂದು ಕರೆಯಲ್ಪಡುವ ಆಗಿನ ನಾಲ್ಕು ರೋಮನ್ ಪ್ರಾಂತಗಳಲ್ಲಿ ವಾಸವಾಗಿದ್ದರು: ಬಿಥಿನಿಯ ಮತ್ತು ಪೊಂತ, ಗಲಾತ್ಯ, ಕಪ್ಪದೋಕ್ಯ ಮತ್ತು ಏಷ್ಯಾ.

ಪೇತ್ರನು ತನ್ನ ಮೊದಲ ಶ್ರೋತೃಗಳನ್ನು ವರ್ಣಿಸಲು ಡಯಾಸ್ಪೊರಾ (ಅಂದರೆ 'ಚದುರಿದ', ಅನೇಕ ಸ್ಥಳಗಳಿಗೆ ಚದುರಿ ಹೋಗಿದ್ದ ಯೆಹೂದ್ಯರನ್ನು ಸೂಚಿಸಲು ಈ ಪದವನ್ನು ಬಳಸಲಾಗುತ್ತಿತ್ತು) ಎಂಬ ಗ್ರೀಕ್ ಪದವನ್ನು ಬಳಸುತ್ತಿದ್ದಾನೆ. ಹಾಗಾಗಿ ಈ ಅಂಶವು ಅವರು ಯೆಹೂದ್ಯ ಹಿನ್ನಲೆಯುಳ್ಳವರಾಗಿದ್ದರು ಎಂದು ಊಹಿಸಿಕೊಳ್ಳುವಂತೆ ಕೆಲವು ಸತ್ಯವೇದ ಶಾಸ್ತ್ರಜ್ಞರುಗಳನ್ನು ನಡೆಸಿದೆ. ಆದರೆ ಪತ್ರಿಕೆಯಲ್ಲಿರುವ ಮಾಹಿತಿಯನ್ನು ಓದುವಾಗ ಅದು ಇನ್ನೊಂದು ದಿಕ್ಕಿನಲ್ಲಿ ನಡೆಸುವುದಾಗಿದೆ – ಏನಂದರೆ, ಅವರಲ್ಲಿ ಅನೇಕರು ಅನ್ಯ ಧರ್ಮಗಳ ಹಿನ್ನಲೆಯಿಂದ ರಕ್ಷಣೆ ಹೊಂದಿದ್ದ ಜನರಾಗಿದ್ದರು. ಈ ಅಂಶವು 1:18 ರಲ್ಲಿ (ವಿಗ್ರಹಾರಾಧನೆಯ ಉಲ್ಲೇಖದಲ್ಲಿ) ಮತ್ತು 4:3 ರಲ್ಲಿ (ವಿಗ್ರಹಾರಾಧಕ ಆಚರಣೆಗಳ ಉಲ್ಲೇಖದಲ್ಲಿ) ಸ್ಪಷ್ಟವಾಗಿ ಕಂಡುಬರುತ್ತದೆ. ಅವರ ಹಳೆಯ ಜೀವನಗಳು ವಿಗ್ರಹಾರಾಧನೆಯಿಂದಲೂ ಮತ್ತು ತಮ್ಮ ಪೂರ್ವಜರಿಂದ ಪಡೆದ ವಿಗ್ರಹಾರಾಧಕ ಆಚರಣೆಗಳಿಂದಲೂ ಕೂಡಿದ್ದವು ಎಂಬುದನ್ನು ಈ ವಚನಗಳು ತೋರಿಸುತ್ತವೆ. 1 ಪೇತ್ರ ಹಳೆ ಒಡಂಬಡಿಕೆಯ ಅನೇಕ ಉಲ್ಲೇಖಗಳನ್ನು ಹೊಂದಿದೆ ಎಂಬುದು ಸತ್ಯ. ಈ ಉಲ್ಲೇಖಗಳು ಅನ್ಯಧರ್ಮೀಯ ಹಿನ್ನಲೆಯಿಂದ ಬಂದಿದ್ದ ಶ್ರೋತೃಗಳಿಗೆ ಅಪರಿಚಿತವಾಗಿದ್ದವು. ಆದರೆ ಈ ಉಲ್ಲೇಖಗಳನ್ನು ಪೇತ್ರನ ಸ್ವಂತ ಯೆಹೂದ್ಯ ಹಿನ್ನಲೆ ಹಾಗೂ ದೈವಶಾಸ್ತ್ರದ ಬೆಳಕಿನಲ್ಲಿ ಅರ್ಥಮಾಡಿಕೊಳ್ಳಬೇಕು. ಪೌಲನು ಕೊರಿಂಥದವರಿಗೆ ಬರೆದ ತನ್ನ ಸ್ವಂತ ಪತ್ರಗಳಲ್ಲಿಯೂ ಹೀಗೆಯೇ ಮಾಡಿದನು. ಕೊರಿಂಥದಲ್ಲಿದ್ದವರ ಹಿನ್ನಲೆಯೂ ಸಹ ಹೆಚ್ಚಾಗಿ ಅನ್ಯಧರ್ಮೀಯವಾಗಿತ್ತು.

## ಪತ್ರಿಕೆಯಲ್ಲಿರುವ ಸಂದೇಶ

ಪೇತ್ರನು ಹಿಂಸೆಯನ್ನು ಮತ್ತು ಇತರೆ ಕಷ್ಟಗಳನ್ನು ಎದುರಿಸುತ್ತಿದ್ದ ಸಭೆಗಳಿಗೆ ತನ್ನ ಪತ್ರವನ್ನು ಬರೆದನು. ಹಾಗಾಗಿ ಆತನು ತನ್ನ ಶ್ರೋತೃಗಳನ್ನು ಪ್ರೋತ್ಸಾಹಿಸಲು ಮತ್ತು ಬಲಪಡಿಸಲು ಈ ಪತ್ರವನ್ನು ಬರೆಯುತ್ತಿದ್ದಾನೆ (5:12). ಅದನ್ನು ಸಾಧಿಸುವುದಕ್ಕಾಗಿ ಪೇತ್ರನು ಬಳಸುವ ವಿಧಾನವು ದೇವರು ಅವರ ರಕ್ಷಣೆಗಾಗಿ ಯೇಸುವಿನ ಮೂಲಕ ಮಾಡಿರುವದನ್ನು ವಿವರಿಸುವದಾಗಿದೆ. ಯೇಸುವಿನಲ್ಲಿಟ್ಟಿರುವ ಅವರ ನಂಬಿಕೆಯ ಒಂದು ಆಳವಾದ ತಿಳುವಳಿಕೆಯು ಕಷ್ಟ ಮತ್ತು ಹಿಂಸೆಗಳ ಪರಿಸ್ಥಿತಿಯಲ್ಲಿ ಅವರು ದೃಢವಾಗಿ ನಿಲ್ಲುವಂತೆ ಸಹಾಯ ಮಾಡುವುದು.

ಒಂದು ವೇಳೆ ಯೇಸು ಅವರಿಗಾಗಿ ಹಿಂಸೆಯನ್ನು ಅನುಭವಿಸಿ ಸತ್ತಿದ್ದು ನಿಜವಾದರೆ ಅವರು ಆತನಿಗಾಗಿ ಸ್ವಲ್ಪ ಕಾಲವಾದರೂ ಹಿಂಸೆಯನ್ನು ಅನುಭವಿಸಲು ಸಿದ್ಧರಿರಬೇಕು. ಹಿಂಸೆಯ ವಿಷಯದಲ್ಲಿಯೂ ಯೇಸು ಅವರಿಗೆ ಆದರ್ಶ ವ್ಯಕ್ತಿಯಾಗಿರಬೇಕು.

ಕಷ್ಟದ ಸಮಯದಲ್ಲಿ ಅವರ ದೃಢತೆ ಮತ್ತು ನಂಬಿಗಸ್ತಿಕೆ; ಅವರ ಕ್ರಿಸ್ತೀಯ ಜೀವನಶೈಲಿ; ಮತ್ತು ಸಭೆಯೊಳಗೆ ಅವರು ವ್ಯಕ್ತಪಡಿಸುವ ದೀನತೆ ಮತ್ತು ಸೌಹಾರ್ದತೆ – ಇವೆಲ್ಲಾ ಸಂಗತಿಗಳು ಅವರ ಸುತ್ತಲಿರುವ ವಿಗ್ರಹಾರಾಧಕ ಸಮಾಜಕ್ಕೆ ಒಂದು ಸಕಾರಾತ್ಮಕವಾದ ಸಾಕ್ಷಿಯಾಗಿರುವುದು.

## ಪ್ರಶ್ನೆಗಳು

1. ಪೇತ್ರನು ಮೊದಲ ಪತ್ರಿಕೆಯನ್ನು ಬರೆಯುವಾಗ ಸೀಲನು ಆ ಕಾರ್ಯದಲ್ಲಿ ಒಂದು ಮುಖ್ಯ ಪಾತ್ರವನ್ನು ಹೇಗೆ ವಹಿಸಿರಬಹುದೆಂದು ವಿವರಿಸಿರಿ.
2. ಪೇತ್ರನು ಬರೆದ ಮೊದಲ ಪತ್ರಿಕೆಯು ರೋಮ್ ಪಟ್ಟಣದಲ್ಲಿ ಕ್ರಿ.ಶ. 62 ರ ನಂತರ ಬರೆಯಲ್ಪಟ್ಟಿತು ಎಂದು ನಾವು ಹೇಗೆ ಊಹಿಸಿಕೊಳ್ಳಬಹುದು?
3. ಪೇತ್ರನು ಬರೆದ ಮೊದಲ ಪತ್ರಿಕೆಯ ಶ್ರೋತೃಗಳು ಬಹುಶಃ ಅನ್ಯಧರ್ಮೀಯ ಹಿನ್ನಲೆಯಿಂದ ಬಂದ ವಿಶ್ವಾಸಿಗಳಾಗಿದ್ದರು ಎಂದು ಹೇಗೆ ಹೇಳಬಹುದು? ವಿವರಿಸಿರಿ.
4. ಪೇತ್ರನು ಯಾಕೆ ಈ ಪತ್ರಿಕೆಯನ್ನು ಬರೆದನೆಂದು ನೀವು ಯೋಚಿಸುತ್ತೀರಿ?

# ಪೇತ್ರನು ಬರೆದ ಮೊದಲನೆಯ ಪತ್ರಿಕೆಯನ್ನು ಓದುವುದು

## ಪರಿಚಯ


ಪೇತ್ರನು ಬರೆದ ಮೊದಲನೆಯ ಪತ್ರಿಕೆಯ ವಿವಿಧ ವೇದಭಾಗಗಳನ್ನು ವಿವರವಾಗಿ ಅಧ್ಯಯನ ಮಾಡುವುದಕ್ಕಿಂತ ಮುಂಚೆ ಇಡೀ ಪುಸ್ತಕದ – ಸಾಹಿತ್ಯ ಶೈಲಿ, ಶಬ್ಧಕೋಶ, ಪ್ರಧಾನ ವಿಷಯಗಳು ಮತ್ತು ಚರ್ಚೆಯ ಶೈಲಿ, ಇವುಗಳ – ಒಂದು ಚಿತ್ರಣವನ್ನು ನೀವು ಹೊಂದಿಕೊಳ್ಳುವುದು ಪ್ರಾಮುಖ್ಯವಾಗಿದೆ. ಇದನ್ನು ಸಾಧಿಸಲು ನೀವು ಈ ಪತ್ರಿಕೆಯನ್ನು ಪ್ರಾರಂಭದಿಂದ ಕೊನೆಯವರೆಗೆ ಒಂದೇ ಸಮಯದಲ್ಲಿ ಓದಿ ಮುಗಿಸಬೇಕು.

ಎರಡು ಅಥವಾ ಮೂರು ಮೂರು ಗುಂಪುಗಳಾಗಿ ಸೇರಿಕೊಂಡು ಈ ಕಾರ್ಯವನ್ನು ಮಾಡಿರಿ. ಇಡೀ ಪತ್ರಿಕೆಯನ್ನು ಪೂರ್ಣವಾಗಿ ಓದಿರಿ. ಅದನ್ನು ಮಾಡಿದ ನಂತರ ಕೆಳಗಿರುವ ಪ್ರಶ್ನೆಗಳನ್ನು ಉತ್ತರಿಸಿರಿ. ಹೆಚ್ಚಿನ ವಿವರಗಳ ಮೇಲೆ ಸಮಯವನ್ನು ಕಳೆಯಬೇಡಿರಿ ಮತ್ತು ನಿಮಗೆ ಅರ್ಥವಾಗದ ವಿಷಯಗಳಲ್ಲೇ ತಟಸ್ಥರಾಗಬೇಡಿರಿ.

## ಪ್ರಶ್ನೆಗಳು

1. 3–4 ಪ್ರಧಾನ ವಿಷಯಗಳ ಒಂದು ಪಟ್ಟಿಯನ್ನು ಮಾಡಿರಿ.
2. ಅನೇಕರಿಗೆ ಪೇತ್ರನು ಬರೆದ ಮೊದಲನೆಯ ಪತ್ರಿಕೆಯು ಸವಾಲನ್ನೊಡ್ಡುವ ಪುಸ್ತಕವಾಗಿದೆ. ನಿಮಗೆ ವೈಯಕ್ತಿಕವಾಗಿ ಸವಾಲೆನಿಸುವ 2–3 ಸಂಗತಿಗಳನ್ನು ಪಟ್ಟಿ ಮಾಡಿರಿ.
3. ಅನೇಕರಿಗೆ ಪೇತ್ರನು ಬರೆದ ಮೊದಲನೆಯ ಪತ್ರಿಕೆಯು ಓದಲು ಕಷ್ಟಕರವೆನಿಸುವ ಪುಸ್ತಕವಾಗಿದೆ. ನೀವು ಅನುಭವಿಸಿದ ಕಷ್ಟಗಳೇನು?
4. ಈ ಪತ್ರಿಕೆಯ 'ಸ್ವರವನ್ನು' ಅಥವಾ 'ಭಾವವನ್ನು' ನೀವು ಹೇಗೆ ವರ್ಣಿಸುವಿರಿ? ಕೆಲವು ಮುಖ್ಯ ಪದಗಳನ್ನು ಪಟ್ಟಿಮಾಡಿರಿ.
5. ಬಹುಶಃ ನಿಮಗೆ ಕೆಲವು ಹೇಳಿಕೆಗಳು ಅಥವಾ 'ಸಿದ್ಧಾಂತಗಳು' ಗೊಂದಲಮಯವೆನಿಸಬಹುದು ಅಥವಾ ಅರ್ಥಮಾಡಿಕೊಳ್ಳಲು ಕಷ್ಟಕರವೆನಿಸಬಹುದು – ಮತ್ತು ಈ ಕೋರ್ಸ್‌ನಲ್ಲಿ ಅದನ್ನು ಸ್ಪಷ್ಟಪಡಿಸಿಕೊಳ್ಳಲು ಬಯಸುತ್ತಿರಬಹುದು. ಅಂತಹ ಹೇಳಿಕೆಗಳ ಅಥವಾ 'ಸಿದ್ಧಾಂತಗಳ' ಒಂದು ಪಟ್ಟಿಯನ್ನು ಮಾಡಿರಿ.

*ಯೇಸುವಿನ ಶಿಷ್ಯನೂ, ಅಪೋಸ್ತಲನೂ ಮತ್ತು 1 ಮತ್ತು 2 ಪೇತ್ರದ ಲೇಖಕನೂ ಆದ ಪೇತ್ರನ ಕುರಿತು ಚಿತ್ರಕಾರನ ಮನಸ್ಸಿನಲ್ಲಿ ಮೂಡಿದ ಒಂದು ಚಿತ್ರ*



# ಅಧ್ಯಯನ 1: ವಂದನೆಗಳು, 1:1–2

## ಪರಿಚಯ

ಪೇತ್ರನು ತನ್ನ ಪತ್ರಿಕೆಯ ಈ ಎರಡು ಸಂಕ್ಷಿಪ್ತ ವಚನಗಳ ಪರಿಚಯದಲ್ಲಿ ತನ್ನ ಕುರಿತಾಗಿ, ಹಾಗೂ ತಾನು ಯಾರಿಗಾಗಿ ಬರೆಯುತ್ತಿದ್ದಾನೆ ಎಂಬುದನ್ನು ವಿವರಿಸುತ್ತಾ ತನ್ನ ಶ್ರೋತೃಗಳನ್ನು ಆಶೀರ್ವದಿಸಲು ಮುಂದಾಗುತ್ತಾನೆ.

## ಓದಿರಿ

1 ಪೇತ್ರ 1:1–2

## ಪ್ರಶ್ನೆಗಳು

1. ನಿಮ್ಮ ಹಿಂದಿನ ಅಧ್ಯಯನಗಳಿಂದ ಪೇತ್ರನ ಕುರಿತು ಏನನ್ನು ತಿಳಿದುಕೊಂಡಿದ್ದೀರಿ? ಕೆಲವು ಮುಖ್ಯ ಅಂಶಗಳನ್ನು ಬರೆಯಿರಿ.
2. ನಾವು ಈ ಪಠ್ಯದಿಂದ ಪೇತ್ರನ ಕುರಿತು ಏನನ್ನು ಕಲಿಯುತ್ತೇವೆ?
3. ಈ ವಚನಗಳು ಮೂರು 'ಅಂಶಗಳನ್ನು' ಹೊಂದಿವೆ. ಅವುಗಳು ಯಾವವು?
4. ಪೇತ್ರನು ತನ್ನ ಶ್ರೋತೃಗಳ ಪ್ರಸ್ತುತ ಸನ್ನಿವೇಶವನ್ನು ಹೇಗೆ ವಿವರಿಸುತ್ತಾನೆ?
5. ನೀವು ನಿಮ್ಮ ಸ್ವಂತ ಸಭಾ ಅನ್ಯೋನ್ಯತೆಯನ್ನು ಪೇತ್ರನ ವಿವರಣೆಯೊಂದಿಗೆ ಗುರುತಿಸಿಕೊಳ್ಳಲು ಸಾಧ್ಯವೇ (ಹಿಂದಿನ ಪ್ರಶ್ನೆಯ ನಿಮ್ಮ ಉತ್ತರವನ್ನು ಗಮನಿಸಿರಿ)? ವಿವರಿಸಿರಿ.
6. ಈ ವೇದಭಾಗದಲ್ಲಿ ಕಂಡುಬರುವ 'ಆಯ್ಕೆಯ' ಸಿದ್ಧಾಂತವನ್ನು ನೀವು ಹೇಗೆ ಅರ್ಥಮಾಡಿಕೊಳ್ಳುತ್ತೀರಿ? ದೇವರು ಎಲ್ಲರೂ ರಕ್ಷಣೆ ಹೊಂದಬೇಕೆಂದು ಆರಿಸಿಕೊಳ್ಳಲಿಲ್ಲವಾದ್ದರಿಂದ ಕೆಲವರು ಮಾತ್ರ ರಕ್ಷಣೆ ಹೊಂದಬೇಕೆಂದು ಆತನು ತೀರ್ಮಾನಿಸಿದನು ಎಂದು ಇದರ ಅರ್ಥವೋ?



*ದೂತರು ಕಣ್ಣಿಟ್ಟು ನೋಡಬೇಕೆಂದು ಅಪೇಕ್ಷಿಸುವಂಥ ಕಾರ್ಯಗಳು (1 ಪೇತ್ರ 1:12)*

# ಅಧ್ಯಯನ 2: ಜೀವಕರವಾದ ನಿರೀಕ್ಷೆ, 1:3–12

## ಪರಿಚಯ

ಈ ವೇದಭಾಗದಲ್ಲಿ ಪೇತ್ರನು ನಮ್ಮ ಕ್ರಿಸ್ತೀಯ ನಿರೀಕ್ಷೆಗಾಗಿ ದೇವರನ್ನು ಕೊಂಡಾಡುತ್ತಾನೆ. ಈ ನಿರೀಕ್ಷೆಯು ಜೀವಕರವಾದ ನಿರೀಕ್ಷೆಯಾಗಿದೆ ಯಾಕೆಂದರೆ ಯೇಸು ಜೀವವುಳ್ಳವನಾಗಿದ್ದಾನೆ. ಆತನು ಸತ್ತನು, ಆದರೆ ಆತನು ಸತ್ತವರೊಳಗಿಂದ ಎದ್ದು ಪರಲೋಕಕ್ಕೆ ಏರಿ ಹೋಗಿದ್ದಾನೆ. ಆತನು ಹಿಂತಿರುಗಿ ಬರುವಾಗ ನಮ್ಮ ನಂಬಿಕೆಯ ಫಲವಾಗಿರುವ – ನಮ್ಮ ರಕ್ಷಣೆಯು – ಪರಿಪೂರ್ಣವಾಗುವುದು. ಇದೇ ನಮ್ಮ ಕ್ರಿಸ್ತೀಯ ನಿರೀಕ್ಷೆಯಾಗಿದೆ. ನಾವು ಈ ಲೋಕದಲ್ಲಿ ಎದುರಿಸಬಹುದಾದ ಎಲ್ಲಾ ಕಷ್ಟಗಳನ್ನು ಹಾದು ಹೋಗಲು ಅದು ನಮಗೆ ಸಹಾಯ ಮಾಡುತ್ತದೆ.

## ಓದಿರಿ

1 ಪೇತ್ರ 1:3–12

## ಪ್ರಶ್ನೆಗಳು

1. ಪೇತ್ರನು ಯಾಕೆ ದೇವರನ್ನು ಕೊಂಡಾಡುತ್ತಾನೆ (ವ. 3)?
2. ಯೇಸು ನಮಗಾಗಿ ಏನನ್ನು ಮಾಡಿದ್ದಾನೆ (ವ. 3–4)?
3. ನಾವು ಈ ವೇದಭಾಗದಿಂದ 'ಜೀವಕರವಾದ ನಿರೀಕ್ಷೆಯ' ಕುರಿತು ಏನನ್ನು ಅರ್ಥಮಾಡಿಕೊಳ್ಳುತ್ತೇವೆ (ವ. 4–5)?
4. ಈ ಲೋಕದಲ್ಲಿರುವ ವಿಶ್ವಾಸಿಗಳ ಜೀವನದ ಕುರಿತು ಪೇತ್ರನು ಏನನ್ನು ಹೇಳುತ್ತಾನೆ (ವ. 5–6)?
5. ವಿಶ್ವಾಸಿಗಳ ಹಿಂಸೆಗೆ ಕೊನೆ ಎಂದು (ವ. 5)?
6. ವಚನ 7–9 ರಲ್ಲಿ ನಮ್ಮ ಕ್ರಿಸ್ತೀಯ ನಂಬಿಕೆಯ ಕುರಿತು ನಾವು ಏನನ್ನು ಕಲಿಯುತ್ತೇವೆ ವ. 7–9?
7. ವಚನ 10–12 ರಲ್ಲಿ ರಕ್ಷಣೆಯ ಕುರಿತು ಮಾತನಾಡುವ ಹಳೆ ಒಡಂಬಡಿಕೆಯ ಪ್ರವಾದನಾ ವಾಕ್ಯದ ಕುರಿತು ನಾವು ಏನನ್ನು ಅರ್ಥಮಾಡಿಕೊಳ್ಳುತ್ತೇವೆ?

## ಗ್ರಂಥಾಲಯ ಸಮಯಕ್ಕೆ ಸಲಹೆಗಳು




1. ನೀವು ಇಲ್ಲಿಯವರೆಗೆ ಅಭ್ಯಸಿಸಿರುವ ಸಂಗತಿಗಳನ್ನು ಮತ್ತೊಮ್ಮೆ ಓದಿರಿ.
2. ನೀವು ಬರೆದುಕೊಂಡಿರುವ ಅಂಶಗಳೆಲ್ಲವೂ ಪುಸ್ತಕದಲ್ಲಿ ಇವೆಯೋ ಮತ್ತು ಅವುಗಳು ನೀಟಾಗಿಯೂ ಹಾಗೂ ಸರಿಯಾಗಿಯೂ ಇದೆ ಎಂಬುದನ್ನು ಖಚಿತಪಡಿಸಿಕೊಳ್ಳಿರಿ.

3. ಒಬ್ಬ ಸಭೆಗೆ ಬರುವ ಸ್ನೇಹಿತನಿಗೆ ಪೇತ್ರನು ಸಭೆಯ ಕುರಿತು ಬಳಸುವ ಈ ಪದಗಳನ್ನು ಯಾವ ಅರ್ಥದಲ್ಲಿ ಹೇಳುತ್ತಿದ್ದಾನೆ ಎಂಬುದನ್ನು ವಿವರಿಸುತ್ತಾ ಒಂದು ಚಿಕ್ಕ ಪುಟವನ್ನು ಬರೆಯಿರಿ: 'ನಮ್ಮ ತಂದೆ ದೇವರ ಸಂಕಲ್ಪಾನುಸಾರವಾಗಿ ಆಯ್ಕೆಯಾದವರಿಗೆ'. ಅಧ್ಯಯನ 1 ರಲ್ಲಿರುವ ಅಂಶಗಳನ್ನು ಬಳಸಿಕೊಳ್ಳಿರಿ.

4. 'ಯೇಸು ನಮ್ಮ ಜೀವಕರವಾದ ನಿರೀಕ್ಷೆಯಾಗಿದ್ದಾನೆ' ಎಂಬ ಶೀರ್ಷಿಕೆಯುಳ್ಳ ಒಂದು ಸಂಕ್ಷಿಪ್ತ ಧ್ಯಾನವನ್ನು ಸಿದ್ಧಪಡಿಸಿರಿ. ನೀವು ಅಧ್ಯಯನ 2 ರಲ್ಲಿ ಕಲಿತಿರುವ ನಿಮ್ಮ ಧ್ಯಾನದ ಮೇಲೆ ಅದನ್ನು ಆಧರಿಸಿ ಸಿದ್ಧಪಡಿಸಿರಿ.

# ಅಧ್ಯಯನ 3. ಪರಿಶುದ್ಧರಾಗಿರ್ರಿ, 1:13–2:3

## ಪರಿಚಯ

ಈ ವಾಕ್ಯಭಾಗವು ಕ್ರೈಸ್ತೀಯ ಪರಿಶುದ್ಧತೆಯ ಕುರಿತಾಗಿದೆ. ಪೇತ್ರನು ರಕ್ಷಣೆ ಮತ್ತು ಪರಿಶುದ್ಧತೆಯ ನಡುವೆ ಒಂದು ಬಲವಾದ ಜೋಡಣೆಯನ್ನು ಮಾಡುತ್ತಾನೆ. ಒಂದು ನಿಜವಾದ ರಕ್ಷಣೆಯ ಅನುಭವವು ಒಂದು ಹೊಸ ಜೀವನದಲ್ಲಿ ತೋರ್ಪಡಲೇಬೇಕು. ಈ ನವಜೀವನವು ಕ್ರಿಯಾತ್ಮಕ ಪರಿಶುದ್ಧತೆಯ ಜೀವನವಾಗಿದ್ದು ಆತ್ಮಸಂಯಮ, ವಿಧೇಯತೆ ಮತ್ತು ದೈವಭಕ್ತಿಯ ಗುಣಲಕ್ಷಣಗಳಿಂದ ಕೂಡಿರುತ್ತದೆ. ನಮ್ಮ ರಕ್ಷಣೆಯು ನಮ್ಮ ಹಳೆಯ ಪಾಪಮಯ ಜೀವನ ಮಾರ್ಗದಿಂದ ನಮ್ಮನ್ನು ಬಿಡುಗಡೆಗೊಳಿಸಿದ ಕ್ರಿಸ್ತನ ಪರಿಪೂರ್ಣ ತ್ಯಾಗದ ಫಲವಾಗಿದೆ. ದೇವರ *ಜೀವವುಳ್ಳ ಮತ್ತು ಶಾಶ್ವತವಾದ* ವಾಕ್ಯಕ್ಕೆ ನಾವು ಪ್ರತಿಕ್ರಿಯಿಸುವದರ ಮೂಲಕ ನಾವು ಹೊಸದಾಗಿ ಹುಟ್ಟಿದೆವು ಮತ್ತು ನಿಷ್ಕಪಟ, ಪ್ರಮಾಣಿಕ ಸಹೋದರ ಸ್ನೇಹವುಳ್ಳ ಜೀವನವನ್ನು ನಡೆಸಲು ಶುದ್ಧೀಕರಿಸಲ್ಪಟ್ಟೆವು. ನಾವು *ಪರಿಶುದ್ಧವಾದ ಆತ್ಮಿಕ ಹಾಲನ್ನು* (ದೇವರ ವಾಕ್ಯ) ಕುಡಿಯಬೇಕು. ಆ ಮೂಲಕ ನಾವು ನಮ್ಮ ಪರಿಶುದ್ಧತೆಯಲ್ಲಿ (ಅಥವಾ ಪೇತ್ರನು ವ್ಯಕ್ತಪಡಿಸಿದಂತೆ 'ನಮ್ಮ ರಕ್ಷಣೆಯಲ್ಲಿ') ಬೆಳೆಯುವೆವು.

## ಓದಿರಿ

1 ಪೇತ್ರ.1:13–2:3

## ಪ್ರಶ್ನೆಗಳು

1. 'ಆದದರಿಂದ' ಏನನ್ನು ಸೂಚಿಸುತ್ತದೆ (ವ–13)?
2. ಈ ವಾಕ್ಯಭಾಗದಲ್ಲಿ ಪೇತ್ರನು ಯಾವ ರೀತಿಯ ಭಾಷೆಯನ್ನು ಉಪಯೋಗಿಸುತ್ತಾನೆ? ಕ್ರಿಯಾಪದಗಳ ರೂಪವನ್ನು ನೋಡಿರಿ.
3. ವ. 13–16 ರಲ್ಲಿನ ಪೇತ್ರನ ಆಜ್ಞೆ ಮತ್ತು ಪ್ರಬೋಧನೆಗಳ ಪಟ್ಟಿಮಾಡಿರಿ. ಅವುಗಳ ಅರ್ಥವನ್ನು ವಿವರಿಸಿರಿ. ಸಾಧ್ಯವಾದಷ್ಟು ನಿಮ್ಮ ಸ್ವಂತ ಪದಗಳನ್ನು ಉಪಯೋಗಿಸಿರಿ.
4. ಯಾಕೆ ವಿಶ್ವಾಸಿಗಳು ಈ ಲೋಕದಲ್ಲಿ ಪ್ರವಾಸಿಗಳಂತೆ ಭಯಭಕ್ತಿಯಿಂದ ಜೀವಿಸಬೇಕು? (ವ. 17–19)?
5. ವ. 18–21 ರಿಂದ ಯೇಸು ಕ್ರಿಸ್ತನ ಬಗ್ಗೆ ನಾವು ಏನನ್ನು ಕಲಿಯುತ್ತೇವೆ?
6. ನಮ್ಮ ಸಹೋದರರಿಗಾಗಿ ನಿಷ್ಕಪಟ ಸ್ನೇಹವುಳ್ಳವರಾಗಿರಲು ಪೇತ್ರನು ಕೊಡುವ ಕಾರಣಗಳೇನು (ವ. 22–23)?
7. ವ. 24–25 ರಲ್ಲಿ ತನ್ನ ವಾದವನ್ನು ಬೆಂಬಲಿಸಲು ಪೇತ್ರನು ಯೆಶಾಯ 40:6–8 ನ್ನು ಉಪಯೋಗಿಸುತ್ತಾನೆ. ಹೇಗೆಂದು ವಿವರಿಸಿರಿ.

8. ಪೇತ್ರನು ಮತ್ತೆ 2:1 ರಲ್ಲಿ 'ಆದದರಿಂದ' ಪದವನ್ನು ಉಪಯೋಗಿಸುತ್ತಾನೆ. (1:13 ರಲ್ಲಿನ 2:1 ರ ಗ್ರೀಕ್ ಪದಗಳು ವಿಭಿನ್ನವಾಗಿವೆ, ಆದರೆ ಅವು ಒಂದೇ ಅರ್ಥವನ್ನು ಕಲ್ಪಿಸುತ್ತವೆ) ಯಾಕೆ?

9. ಆತ್ಮಿಕ ಬೆಳವಣಿಗೆಯನ್ನು ವಿವರಿಸಲು ಪೇತ್ರನು ಯಾವ ಉಪಮೆಯನ್ನು ಬಳಸುತ್ತಾನೆ (ವ.2) ನಿಮ್ಮ ಸ್ವಂತ ವಾಕ್ಯಗಳಲ್ಲಿ ವಿವರಿಸಿರಿ.

# ಅಧ್ಯಯನ 4. ದೇವರಿಗೆ ಮೀಸಲಾದ ಜನರು, 2:4–10

## ಪರಿಚಯ

ಪೇತ್ರನು ತನ್ನ ಓದುಗರಿಗೆ 'ಅವರು ತಮ್ಮ ರಕ್ಷಣೆಯಲ್ಲಿ ಬೆಳೆಯಬೇಕೆಂಬುವ' ಪ್ರಬೋಧಿಸುವದರೊಂದಿಗೆ ಹಿಂದಿನ ವಾಕ್ಯಭಾಗವು ಮುಕ್ತಾಯವಾಗುತ್ತದೆ. ಅವರು ತಮ್ಮ ಕರ್ತನನ್ನು, ತಮ್ಮ ರಕ್ಷಕನನ್ನು ಅರಿತಿದ್ದಾರೆ ಮತ್ತು ಆತನು ಒಳ್ಳೆಯವನೆಂದು ಅನುಭವ ಸವಿದು ನೋಡಿದ್ದಾರೆ.

ಇಲ್ಲಿ ಪೇತ್ರನು ಕ್ರಿಸ್ತನ ಮತ್ತು ಆತನ ಸಭೆಯ ಚಿತ್ರಣವನ್ನು ಪ್ರಸ್ತುತಪಡಿಸುತ್ತಾನೆ. ಅವರೆಡರ ನಡುವಿನ ಸಂಬಂಧವನ್ನು ಆತನು ವಿವರಿಸುತ್ತಾನೆ. ಇದು ಒಂದು 'ಸಭೆಯ ಸಿದ್ಧಾಂತ'ದ ಕಡೆಗೆ ನಡೆಸುತ್ತದೆ.

ಹೊಸ ಒಡಂಬಡಿಕೆಯಲ್ಲಿನ ಕೆಲವು ವಾಕ್ಯಭಾಗಗಳು ಚಿತ್ರಣಗಳಿಂದ ಮತ್ತು ಈ ಒಂದು ಹಳೆಯ ಒಡಂಬಡಿಕೆಯ ಹೇಳಿಕೆಗಳಿಂದ ಪ್ರಬೋಧಿಸಲ್ಪಟ್ಟಿವೆ. ಇದು ಆಧುನಿಕ ಓದುಗರಿಗೆ ಸಮಸ್ಯೆ ಉದ್ಭವಿಸುವಂತೆ ಮಾಡುತ್ತದೆ.

## ಓದಿರಿ

1 ಪೇತ್ರ 2:4–10

## ಪ್ರಶ್ನೆಗಳು

1. ವ. 4 ರಲ್ಲಿ ಯೇಸು ಕ್ರಿಸ್ತನು ಹೇಗೆ ವರ್ಣಿಸಲ್ಪಟ್ಟಿದ್ದಾನೆ?
2. 'ಜೀವವುಳ್ಳ ಕಲ್ಲು' ಎಂಬ ರೂಪಾಲಂಕಾರವನ್ನು ನೀವು ಹೇಗೆ ಅರ್ಥೈಯಿಸಿಕೊಳ್ಳುವಿರಿ (ವ.4)?
3. 'ಆತ್ಮಿಕ ಸಂಬಂಧವಾದ ಮಂದಿರ' ಎಂಬ ಅಲಂಕಾರಿಕ ಹೇಳಿಕೆಯನ್ನು ನೀವು ಹೇಗೆ ಅರ್ಥೈಯಿಸಿಕೊಳ್ಳುವಿರಿ (ವ.5)?
4. ಆತ್ಮಿಕ ಮಂದಿರದ ಯಾಜಕ ಮತ್ತು ವಿಶ್ವಾಸಿಗಳನ್ನು ಒಳಗೊಂಡಿರುವ ಯಾಜಕ ವರ್ಗದವರು ಯಾರು (ವ.4–5)?
5. ಯೇಸು ಕ್ರಿಸ್ತನ ಬಗ್ಗೆ ತನ್ನ ಬೋಧನೆಯನ್ನು ಬೆಂಬಲಿಸಲು ಪೇತ್ರನು ಹೇಗೆ ಯೇಶಾಯ.28:16 (ವ.6), ಕೀರ್ತನೆ.118:22 (ವ.7) ಮತ್ತು ಯೇಶಾಯ.8:14 (ವ.8) ನ್ನು ಉಪಯೋಗಿಸುತ್ತಾನೆಂದು ವಿವರಿಸಿರಿ.
6. ಒಬ್ಬ ವ್ಯಕ್ತಿಯು ಹೇಗೆ ಆತ್ಮಿಕ ಮಂದಿರದ ಮತ್ತು ಪವಿತ್ರ ಯಾಜಕ ವರ್ಗದ ಭಾಗವಾಗಬಲ್ಲನು (ವ.4,7)?
7. ದೇವಜನರ ಸೇವಾಕಾರ್ಯವನ್ನು ಪೇತ್ರನು ಹೇಗೆ ವರ್ಣಿಸುತ್ತಾನೆ (ವ.5, 9)?

8. ಸಭೆಯು ಹಳೆಯ ಒಡಂಬಡಿಕೆಯ ಹಿನ್ನಲೆಯನ್ನು ಹೊಂದಿದೆಯೆಂದು ಕೆಲವು ಹೇಳಿಕೆಗಳು ವಿವರಿಸುತ್ತದೆ. ಕೆಳಕಂಡ ವಾಕ್ಯಭಾಗಗಳನ್ನು ನೋಡಿ, ನಿಮ್ಮ ಟಿಪ್ಪಣಿಗಳನ್ನು ಕೊಡಿರಿ.

   a. ದೇವರಾದುಕೊಂಡು ಜನಾಂಗ (ವ.9), ಯೇಶಾಯ.43:10, 20; 44:1–3.

   b. ರಾಜವಂಶಸ್ಥರು (ವ.9). ವಿಮೋಚನಕಾಂಡ.19:6

   c. ಮೀಸಲಾದ ಜನರು (ವ.9). ವಿಮೋ.19:6, ಧರ್ಮೋ.28:8


   d. ದೇವರ ಸ್ವಕೀಯ ಪ್ರಜೆ (ವ.9). ವಿಮೋ.19:5

   e. ಕತ್ತಲೆಯಿಂದ ಆತನ ಆಶ್ಚರ್ಯವಾದ ಬೆಳಕಿಗೆ ಕರೆಯಲ್ಪಟ್ಟವರು (ವ.9)– ಕೀರ್ತನೆ. 107:14, ಯೆಶಾಯ.9:2, 42:7, 16, 60:2 ಹೋಲಿಸಿ. ಅ.ಕೃ.26:18

   f. ಒಂದು ಬಾರಿ (ಮೊದಲು) ಪ್ರಜೆಯಾಗಿರದ ಜನರು (ವ.10). ಯೆಶಾಯ.19:23–25.

   g. ವಾತ್ಸಲ್ಯ (ಕರುಣೆ) ಹೊಂದಿರುವ ಜನಾಂಗ (ವ.10). ಮೀಕ.7:20, ಯೇಶಾಯ.63:9

9. ಈ ಹಿಂದಿನ ಪ್ರಶ್ನೆಯನ್ನು ಮುಗಿಸಿದ ನಂತರ ನೀವು ಯಾವ ಎರಡು ಮುಖ್ಯ ಮುಕ್ತಾಯಕ್ಕೆ ಬಂದಿರಿ?



*ನಿರೋ ರೋಮನ್ ಸಾಮ್ರಾಜ್ಯವನ್ನು ಕ್ರಿ.ಶ. 54–68 ರವರೆಗೆ ಆಳಿದನು.*

*ಪೇತ್ರನು ಆತನ ಆಳ್ವಿಕೆಯ ಅಡಿಯಲ್ಲಿಯೇ ರೋಮ್ ಪಟ್ಟಣದಲ್ಲಿ ರಕ್ತಸಾಕ್ಷಿಯಾಗಿ ಸತ್ತನು.*

# ಅಧ್ಯಯನ 5. ಹೊಸದಾದ ಜೀವನಶೈಲಿ, ಭಾಗ–1, 2:11–20

## ಪರಿಚಯ

ಈ ಹಿಂದಿನ ಅಧ್ಯಯನದಲ್ಲಿ 'ಸಭೆಯ ಸಿದ್ಧಾಂತವನ್ನು' ತಿಳಿಸಿದ ನಂತರ ಪೇತ್ರನು ಈಗ ಹೆಚ್ಚಾಗಿ ಪ್ರಾಯೋಗಿಕ ಸಂಗತಿಗೆ ಬರುತ್ತಾನೆ. ಪ್ರಬೋಧನೆಗಳ ಸರಣಿಯಲ್ಲಿ ಆತನು ಆ ದಿನಗಳಲ್ಲಿ ರೋಮನ್ ಸಾಮ್ರಾಜ್ಯದುದ್ದಕ್ಕೂ ಚದುರಿಸಲ್ಪಟ್ಟ ಹೊಸ ಒಡಂಬಡಿಕೆಯ ವಿಶ್ವಾಸಿಗಳಿಗೆ ಅವಶ್ಯಕವಾಗಿರುವ ಜೀವನಶೈಲಿ/ನಡತೆಯ ವಿಷಯಗಳೊಂದಿಗೆ ವ್ಯವಹರಿಸುತ್ತಾನೆ. ಎಲ್ಲಾ ಸಂಗತಿಗಳು ಪ್ರಸಕ್ತ ದಕ್ಷಿಣ ಏಷ್ಯಾದ ಸಭೆಗಳಿಗೆ ಸಮಂಜಸವೆನಿಸುವದಿಲ್ಲ. ಆದರೆ ಅವು ತಿಳಿಸುವ ಸತ್ಯವೇದದ ನಿಯಮಗಳು ಈಗಲೂ ಪ್ರಾಮುಖ್ಯವಾಗಿವೆ.

## ಓದಿರಿ

1 ಪೇತ್ರ 2:11–20

## ಪ್ರಶ್ನೆಗಳು

1. ವಿಶ್ವಾಸಿಗಳ ಜೀವನವನ್ನು ಪೇತ್ರನು ಹೇಗೆ ವಿವರಿಸುತ್ತಾನೆ (ವ.11–12)? ನಿಮ್ಮ ಸ್ವಂತ ವಾಕ್ಯಗಳಲ್ಲಿ ವಿವರಿಸಿರಿ.

2. ವ. 12–18 ರಲ್ಲಿ ಪೇತ್ರನು ಯಾವ ರೀತಿಯ ಭಾಷೆಯನ್ನು ಉಪಯೋಗಿಸುತ್ತಾನೆ? ಕ್ರಿಯಾಪದ ರೂಪಗಳನ್ನು ನೋಡಿರಿ. ಹಾಗಾಗಿ ಇಲ್ಲಿ ನಾವು ಯಾವ ರೀತಿಯ ವಾಕ್ಯಭಾಗದೊಂದಿಗೆ ವ್ಯವಹರಿಸುತ್ತೇವೆ?

10. ವ. 17 ರಲ್ಲಿ ವಿಶ್ವಾಸಿಗಳು ತಮ್ಮ ಸುತ್ತಲಿನ ಜನರೊಂದಿಗೆ ವ್ಯವಹರಿಸಬೇಕಾದ ಮಾರ್ಗ/ರೀತಿಯನ್ನು ಸಾರಾಂಶಗೊಳಿಸುತ್ತಾನೆ. ಆತನು ಹೇಳುವದನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ವಿವರಿಸಿರಿ.

11. ವಚನಗಳಲ್ಲಿ ಈ ಸಾರಾಂಶಕ್ಕಿಂತ ಮೊದಲು (ಹಿಂದಿನ ಪ್ರಶ್ನೆಯನ್ನು ನೋಡಿರಿ) ಯಾಕೆ ವಿಶ್ವಾಸಿಗಳು ಪ್ರತಿಯೊಬ್ಬರಿಗೂ ಸರಿಯಾದ ಗೌರವವನ್ನು ಕೊಡಬೇಕೆನ್ನುವದಕ್ಕೆ 3 ಪ್ರಮುಖ ಕಾರಣಗಳನ್ನು ಕೊಡುತ್ತಾನೆ. (ವ. 13–16) ಆ ಕಾರಣಗಳು ಯಾವುವು? ನಿಮ್ಮ ಸ್ವಂತ ವಾಕ್ಯಗಳಲ್ಲಿ ವಿವರಿಸಿರಿ.

3. ವ. 16 ರಲ್ಲಿ ಪೇತ್ರನು 'ಸ್ವಾತಂತ್ರ್ಯ'ದ ಬಗ್ಗೆ ಬರೆಯುತ್ತಾನೆ. ಆತನು ಹೇಳುವುದರ ಅರ್ಥವನ್ನು ವಿವರಿಸಿರಿ. ನಿಮ್ಮ ಸ್ವಂತ ವಾಕ್ಯಗಳಲ್ಲಿ ವಿವರಿಸಿರಿ.


4. ವ. 19 ರಲ್ಲಿ ಅನ್ಯಾಯವಾಗಿ ಬಾಧೆಪಡುವುದರ ಬಗ್ಗೆ ಪೇತ್ರನು ಹೇಳುವ ಅಂಶವನ್ನು ವಿವರಿಸಿರಿ.

5. ವ. 20 ರಲ್ಲಿ ಪೇತ್ರನ ದೃಷ್ಟಿಕೋನ/ಅಂಶವನ್ನು ವಿವರಿಸಿರಿ.

6. ವ. 18 ನ್ನು ಗುಲಾಮತನ/ದಾಸತ್ವವನ್ನು ಬೆಂಬಲಿಸಲು ಉಪಯೋಗಿಸಬಹುದೆಂದು ನೀವು ಯೋಚಿಸುವಿರಾ? ಯಾಕೆ? ಯಾಕೆ ಇಲ್ಲ?

# ಗ್ರಂಥಾಲಯ ಸಮಯಕ್ಕೆ ಸಲಹೆಗಳು

1. ಬೇಗ ಮುಗಿಸಲು ಸಮಯ ಸಿಗದ 3–5 ಅಧ್ಯಾಯನಗಳ ಉಳಿದ ಪ್ರಶ್ನೆಗಳನ್ನು ಮುಗಿಸಿರಿ.
2. ಈ ವರೆಗೂ ನೀವು ಅಭ್ಯಾಸಿಸಿದ ಸಂಗತಿಗಳನ್ನು ವಿಶೇಷವಾಗಿ ಅಧ್ಯಾಯ 3–5 ನ್ನು ಮರು ಪರಿಶೀಲಿಸಿರಿ.



3. ನಿಮ್ಮ ನೋಟ್ಸ್‌ಗಳು ಸರಿಯಾಗಿಯೂ ಸ್ಪುಟವಾಗಿಯೂ ಸ್ವಚ್ಚವಾಗಿಯೂ ಇರಬೇಕು.
4. ಸಭೆಯ ಬಗ್ಗೆ ಪೇತ್ರನು ತನ್ನ ಓದುಗರಿಗೆ ಏನನ್ನು ಬೋಧಿಸುತ್ತಾನೆಂಬುದನ್ನು ಸಭೆಯ ಒಬ್ಬ ಸ್ನೇಹಿತನಿಗೆ ವಿವರಿಸುವ ಒಂದು ಚಿಕ್ಕ ಪ್ರಬಂಧವನ್ನು ಬರೆಯಿರಿ. ಸತ್ಯವೇದವನ್ನು ನೋಟ್ಸ್‌ನ್ನು ನಕಲಿಮಾಡದೆ ನಿಮ್ಮ ಸ್ವಂತ ವಾಕ್ಯಗಳಲ್ಲಿ ವಿವರಿಸಿರಿ. ಅಧ್ಯಾಯನ 4 ರಿಂದ ಮಾಹಿತಿ/ವಿಷಯಗಳನ್ನು ತೆಗೆದುಕೊಳ್ಳಬಹುದು.
5. 'ಯೇಸು ಕ್ರಿಸ್ತನು– ಜೀವವುಳ್ಳ ಕಲ್ಲಿನ' ಎಂಬ ಒಂದು ಚಿಕ್ಕ ಧ್ಯಾನವನ್ನು ಸಿದ್ಧಪಡಿಸಿರಿ. ಅಧ್ಯಾಯನ 4 ರಲ್ಲಿ ನೀವು ಏನನ್ನು ಕಲಿತಿರೆಂಬುದರ ಮೇಲೆ ಈ ಧ್ಯಾನ ಆಧಾರವಾಗಿರಬೇಕು.



*ನೀವು ಕುರಿಗಳಂತೆ ದಾರಿ ತಪ್ಪಿದವರಾಗಿದ್ದಿರಿ. ಆದರೆ ಈಗ ನೀವು ತಿರುಗಿ ನಿಮ್ಮ ಆತ್ಮಗಳ ಕುರುಬನೂ ಅಧ್ಯಕ್ಷನೂ ಆಗಿರುವಾತನ ಬಳಿಗೆ ಬಂದಿದ್ದೀರಿ (1 ಪೇತ್ರ 2:25).*

# ಅಧ್ಯಯನ 6. ಹೊಸದಾದ ಜೀವನಶೈಲಿ, ಭಾಗ–2, 2:21–3:7

## ಪರಿಚಯ

ಭಾದೆಯ ಸಮಯದಲ್ಲಿ ಯಾವ ರೀತಿ ಸ್ಪಂದಿಸಬೇಕೆನ್ನುವದು ಹೊಸ ಜೀವನಶೈಲಿಯ ಒಂದು ಭಾಗವಾಗಿದೆ. ಪಾಪವನ್ನೇ ಮಾಡದ ಯೇಸುವು ಭಾದೆಪಡುವುದರಲ್ಲಿಯೂ ಸಹ ನಮಗೆ ಮಾದರಿಯಾಗಿದ್ದಾನೆ. ಪೇತ್ರನು ಹೇಳುತ್ತಾನೆ– 'ನೀವು ತನ್ನ ಹೆಜ್ಜೆಯ ಜಾಡಿನಲ್ಲಿನಡೆಯಬೇಕೆಂದು ಮಾದರಿಯನ್ನು ತೋರಿಸಿ ಹೋದನು' (ವ. 21). ಕ್ರೈಸ್ತೀಯ ಜೀವನ ಶೈಲಿಯು ನಮ್ಮ ಕೌಟಂಬಿಕ ಜೀವನವನ್ನು ಸಹ ಪ್ರಭಾವಿಗೊಳಿಸುತ್ತದೆ.

## ಓದಿರಿ

1 ಪೇತ್ರ 2:21–3:7

## ಪ್ರಶ್ನೆಗಳು

1. ಈ ವಾಕ್ಯಭಾಗವು 'ಇದಕ್ಕಾಗಿಯೇ ನೀವು ಕರೆಯಲ್ಪಟ್ಟಿರಿ' ಎಂಬ ಮಾತನೊಂದಿಗೆ (ವ. 21) ಪ್ರಾರಂಭವಾಗುತ್ತದೆ. ಈ ಹೇಳಿಕೆ ಏನನ್ನು ಸೂಚಿಸುತ್ತದೆ?
2. ಈ ಸನ್ನಿವೇಶದಲ್ಲಿ ಪೇತ್ರನು ಯಾಕೆ ಯೇಸು ಕ್ರಿಸ್ತನ ಮಾದರಿಯನ್ನು ತರುತ್ತಾನೆ?
3. ಯಾಕೆ ಯೇಸು ಕ್ರಿಸ್ತನು ಮತ್ತು ಆತನ ಹಿಂಬಾಲಕರು (ಸಭೆ) ಇಬ್ಬರೂ ತಪ್ಪು ಮಾಡದಿರುವದಕ್ಕೆ ಭಾದೆಯನ್ನು ಅನುಭವಿಸಲೇಬೇಕು ಎಂಬುದನ್ನು ವಿವರಿಸಿರಿ.
4. 'ಯಾರನ್ನು ಬೆದರಿಸದೆ ನ್ಯಾಯವಾಗಿ ತೀರ್ಪು ಮಾಡುವಾತನಿಗೆ ತನ್ನ ಕಾರ್ಯವನ್ನು ಒಪ್ಪಿಸಿದನು' (ವ. 23). ಈ ಹೇಳಿಕೆಯಲ್ಲಿ 'ಆತನಿಗೆ' ಎನ್ನುವುದು ಯಾರ ಕುರಿತಾಗಿದೆ?
5. ಈ ವಾಕ್ಯಭಾಗದಲ್ಲಿ (ವ. 21–25) ಪೇತ್ರನು ದೇವರ ರಾಜ್ಯದ ಜೀವನಶೈಲಿ, ಒಂದು ಹೊಸ ಜೀವನಶೈಲಿಯನ್ನು ನಡೆಸಲು ವಿಶ್ವಾಸಿಗಳನ್ನು ಉತ್ತೇಜಿಸಲು ಕ್ರಿಸ್ತನ ಉದಾಹರಣೆ/ಮಾದರಿಯನ್ನು ಉಪಯೋಗಿಸುತ್ತಾನೆ. ಈ ವಚನಗಳಲ್ಲಿ ಕ್ರಿಸ್ತನ ಬಗ್ಗೆ ನಾವು ಏನನ್ನು ಕಲಿಯುತ್ತೇವೆ?
6. ವ. 1–7 ರಲ್ಲಿ 'ಅದೇ ರೀತಿಯಾಗಿ' ಎಂಬ ಹೇಳಿಕೆಯನ್ನು ಎರಡು ಬಾರಿ ಉಪಯೋಗಿಸುತ್ತಾನೆ. ಇದು ಸೂಚಿಸುವದಾಗಿದೆ?
7. ಯೇಸು ಕ್ರಿಸ್ತನು ನಮ್ಮನ್ನು ಹೇಗೆ ಪರಿಗಣಿಸುತ್ತಾನೆಂಬುದನ್ನು ಸೂಚಿಸಿ, ಇಬ್ಬರೂ ಪರಸ್ಪರ ಅದೇ ರೀತಿಯಾಗಿ ವರ್ತಿಸಬೇಕೆಂದು ತಿಳಿಸಲ್ಪಟ್ಟಿರುವಾಗ "ಸ್ತ್ರೀಯರು ತಮ್ಮ ಗಂಡಂದಿರಿಗೆ ಅಧೀನರಾಗಬೇಕು" (ವ.1) ಮತ್ತು "ಪುರುಷರು ತಮ್ಮ ಹೆಂಡತಿಯರ ಸಂಗಡ ವಿವೇಕದಿಂದ ಒಗೆತನ ಮಾಡಬೇಕು" ಇವೆರಡರ ನಡುವಿನ ವ್ಯತ್ಯಾಸವನ್ನು ನೀವು ಹೇಗೆ ವಿವರಿಸುವಿರಿ?

8. ವ. 3–4 ರಲ್ಲಿ ತನ್ನ ವಾದವನ್ನು ಮಂಡಿಸಲು ಪೇತ್ರನು ಜಡೆ ಎಣೆದುಕೊಳ್ಳುವದು, ಚಿನ್ನದ ಒಡವೆಗಳನ್ನು ಇಟ್ಟುಕೊಳ್ಳುವದು ಮತ್ತು ವಸ್ತ್ರಗಳನ್ನು ಧರಿಸಿಕೊಳ್ಳುವದು ಮುಂತಾದ ಹೊರಗಣ ಶೃಂಗಾರಗಳನ್ನು ಯಾವ ರೀತಿಯಲ್ಲಿ ಉಪಯೋಗಿಸುತ್ತಾನೆ?

9. ಯಾಕೆ ಪೇತ್ರನು ಹೆಂಡತಿಯರನ್ನು ಬಲಹೀನರು ಎಂಬುದಾಗಿ ಕರೆಯುತ್ತಿದ್ದಾನೆ (ವ.7)?

10. "ಅವರು ಜೀವವರಕ್ಕೆ ನಿಮ್ಮೊಂದಿಗೆ ಬಾಧ್ಯರಾಗಿದ್ದರೆ ಎಂಬ ಹೇಳಿಕೆಯನ್ನು ನೀವು ಹೇಗೆ ತರ್ಜುಮೆಗೊಳಿಸುವಿರಿ" (ವ.7)?

11. ಗಂಡಂದಿರು ತಮ್ಮ ಹೆಂಡತಿಯರನ್ನು ಸರಿಯಾಗಿ ನೋಡಿಕೊಳ್ಳದಿದ್ದರೆ ಅದರಿಂದ ಯಾವ ಪರಿಣಾಮವಾಗುತ್ತದೆ ಎಂದು ಪೇತ್ರನು ತಿಳಿಸುತ್ತಿದ್ದಾನೆ?

# ಅಧ್ಯಯನ 7. ನ್ಯಾಯವಾದದ್ದಕ್ಕಾಗಿ ಬಾಧೆಪಡುವದು, 3:8–22

## ಪರಿಚಯ

ವಾಕ್ಯಭಾಗದ ಮೊದಲ ಪದವು (ಕಡೆಗೆ) ಪೇತ್ರನು ತನ್ನ ಓದುಗರು ಸಭೆಯ ಭಕ್ತಿಯುತ ಜೀವನಶೈಲಿಯನ್ನು ಪ್ರತಿಬಿಂಬಿಸುವ ಜೀವಿತವನ್ನು ಜೀವಿಸಬೇಕೆಂಬುದರ ಬಗ್ಗೆ ತನ್ನ ಹಿಂದಿನ ಪ್ರಬೋಧನೆಯನ್ನು ಸಾರಾಂಶಗೊಳಿಸುವದನ್ನು ತೋರಿಸುತ್ತದೆ. ತದನಂತರ ಆತನು ಬಾಧೆಪಡುವ ವಿಷಯಕ್ಕೆ ಬರುತ್ತಾನೆ ಮತ್ತು ವಿಶ್ವಾಸಿಗಳ ಬಾಧೆಯನ್ನು ಯೇಸು ಕ್ರಿಸ್ತನ ಬಾಧೆಯ ಬೆಳಕಿನಡಿಯಲ್ಲಿ ನೋಡುತ್ತಾನೆ. ವ. 18–19 ರಲ್ಲಿ ಕಂಡುಬರುವ ಕೆಲವು ಗ್ರೀಕ್ ಹೇಳಿಕೆಗಳನ್ನು ಅರ್ಥೈಯುಸಿಕೊಳ್ಳಲು ಸತ್ಯವೇದ ತಜ್ಞರು ಕಷ್ಟಪಟ್ಟರೆಂದು ಸತ್ಯವೇದಗಳ ನಡುವಿನ ಭಾಷಾಂತರದ ಹೋಲಿಕೆಯು ಪ್ರಕಟಪಡಿಸುತ್ತದೆ. ಇದರ ಕುರಿತ ಚರ್ಚೆಗಾಗಿ ಉತ್ತರ 7 ನ್ನು ನೋಡಿರಿ.

## ಓದಿರಿ

1 ಪೇತ್ರ 3:18–22

## ಪ್ರಶ್ನೆಗಳು

1. ವ. 8 ರಲ್ಲಿ ಪೇತ್ರನು ತಿಳಿಸುವ ಕ್ರೈಸ್ತೀಯ ಜೀವನ ಶೈಲಿಯ ಸಾರಾಂಶ (ಒಬ್ಬ ಸತ್ಯವೇದ ತಜ್ಞರು ಇದನ್ನು 'ಆಶೀರ್ವಾದದ ಜೀವನ' ಎನ್ನುತ್ತರೆ)ವನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ವಿವರಿಸಿರಿ.
2. ಜನರು ನಮ್ಮನ್ನು ಕೆಟ್ಟದಾಗಿ ನೋಡಿಕೊಳ್ಳುವಾಗ ಮತ್ತು ನಿಂಧಿಸುವಾಗ ವಿಶ್ವಾಸಿಗಳಾದ ನಾವು ಏನು ಮಾಡಬೇಕು (ವ.9)?
3. ನಮ್ಮ ಸ್ವಂತ ಸಭೆಯಲ್ಲಿನ ಜೀವನದೊಂದಿಗಿನ ಪೇತ್ರನ ಪ್ರಬೋಧನೆಯನ್ನು (ಇದು ಪೇತ್ರನು ಸಭೆಯು ಹೇಗಿರಬೇಕೆಂದು ಬಯುಸುತ್ತಾನೆಂಬ ಸಂಕ್ಷಿಪ್ತ ಚಿತ್ರಣವನ್ನು ನಮಗೆ ಕೊಡುತ್ತದೆ) ಹೋಲಿಸಿ ನೋಡಿರಿ.
4. ಯಾಕೆ ಪೇತ್ರನು ಕೀರ್ತನೆ 34:12–16 (ವ.10–12) ನ್ನು ಉಪಯೋಗಿಸುತ್ತಾನೆ?
5. ತಪ್ಪುಮಾಡದೆ ನ್ಯಾಯವಾದದ್ದಕ್ಕಾಗಿ ಬಾಧೆಪಡುವದನ್ನು ಪೇತ್ರನು ಹೇಗೆ ಅರ್ಥ ಮಾಡಿಕೊಳ್ಳುತ್ತಾನೆ?
6. ಕ್ರಿಸ್ತನನ್ನು ಕರ್ತನೆಂದು ನಿಮ್ಮ ಹೃದಯಗಳಲ್ಲಿ ಪ್ರತಿಷ್ಠೆಪಡಿಸಿರಿ (ವ.15) ಎಂದು ಪೇತ್ರನು ಹೇಳುವದರ ಅರ್ಥವೇನು?
7. ವ.15 ನಾವು ಉತ್ತರ/ಸಾಕ್ಷಿ ಹೇಳುವದರ ಬಗ್ಗೆ ತಿಳಿಸುತ್ತದೆ. ಮುಂದಿನ (ವ.16–17) ವಚನಗಳು ಯಾವುದರ ಕುರಿತು ಮಾತನಾಡುತ್ತವೆ?
8. "ಕ್ರಿಸ್ತನ ಬಾಧೆಯ ವಿಜಯ" ಎಂಬ ಹೇಳಿಕೆಯು ವ.18–22 ರಲ್ಲಿನ ಪೇತ್ರನ ವಾದಕ್ಕೆ ಸಾರಾಂಶವಾಗಬಹುದು. ಹೇಗೆ ಎಂಬುವದನ್ನು ವಿವರಿಸಿರಿ.

9. ಈ ವಾಕ್ಯಭಾಗದಲ್ಲಿ ನಾವು ಹಳೆ ಒಡಂಬಡಿಕೆಯ ಮಾದಾರಿಯನ್ನು ಕಾಣಬಹುದು ಮತ್ತು ಇದು ಹೊಸ ಒಡಂಬಡಿಕೆಯಪ್ರತಿಬಿಂಬವಾಗಿದೆ. ಹೇಗೆಂದು ವಿವರಿಸಿರಿ.

10. ನಮ್ಮ ಜಗತ್ತು ಅನೀತಿಯಿಂದ ತುಂಬಿದೆ. ನಿಮ್ಮ ಕೆಲವು ಹಿಂದಿನ ಮತ್ತು ಪ್ರಸ್ತುತ ಬಾಧೆಗಳನ್ನು ಯೋಚಿಸಿರಿ. ಈ ವಾಕ್ಯಭಾಗದಲ್ಲಿ ತಿಳಿಸಲ್ಪಟ್ಟ ಕ್ರಿಸ್ತನ ಚಿತ್ರಣವು ನಿಮಗೆ ಹೇಗೆ ನಿರೀಕ್ಷೆಯನ್ನು ತರಬಲ್ಲದು?

# ಅಧ್ಯಯನ 8. ದೇವರ ಚಿತ್ತಕ್ಕಾಗಿ ಜೀವಿಸುವದು, 4:1–11

## ಪರಿಚಯ

ಈ ವಾಕ್ಯಭಾಗದಲ್ಲಿ ಪೇತ್ರನು ಜೀವಿಸುವ ಎರಡು ಭಿನ್ನತೆಗಳನ್ನು ಎತ್ತಿ ತೋರಿಸುತ್ತಾನೆ. ಒಂದು ಹಳೆಯ ಜೀವನ. ಇದು ಆತನ ಮೊದಲ ಓದುಗರು ಕ್ರಿಸ್ತನ ಕಡೆಗೆ ತಿರುಗಿಕೊಳ್ಳುವ ಮೊದಲನೆ ಲಕ್ಷಣವಾಗಿತ್ತು. ಮತ್ತು ಇನ್ನೊಂದು. ಹೊಸ ಕ್ರೈಸ್ತೀಯ ಜೀವನ. ಇದು ಈಗ ಯೇಸು ಕ್ರಿಸ್ತನನ್ನು ಸ್ವೀಕರಿಸಿದವರ ಜೀವನದ ಲಕ್ಷಣವಾಗಿರಬೇಕೆಂದು ಪೇತ್ರನು ಅಪೇಕ್ಷಿಸುತ್ತಾನೆ. ಪೇತ್ರನು ಹಳೆಯ ಜೀವನವನ್ನು ಮನುಷ್ಯರ ದುಷ್ಟ ಅಭಿಲಾಷೆಗಳ ಜೀವನ ಮತ್ತು ದೇವರ ಚಿತ್ತದ ಪ್ರಕಾರದ ಹೊಸ ಜೀವನ ಎಂದು ಕರೆಯುತ್ತಾನೆ (ವ.2).

## ಓದಿರಿ

1 ಪೇತ್ರ 4:1–11

## ಪ್ರಶ್ನೆಗಳು

1. ಗ್ರೀಕ್ ಮೂಲವು "ಆದುದ್ದರಿಂದ" (ಇಂಗ್ಲೀಷ್ ಎನ್.ಐ.ವಿ ಯಲ್ಲಿದ್ದಂತೆ) ಎಂಬ ಪದದಿಂದ ಪ್ರಾರಂಭವಾಗುತ್ತದೆ. ಈ ಪದವು ಕನ್ನಡದ ಎನ್.ಐ.ಬಿ.ವಿ ಮತ್ತು ಜೆ.ವಿ ಸತ್ಯವೇದಗಳಲ್ಲಿ ಭಾಷಾಂತರಿಸಲ್ಪಟ್ಟಿಲ್ಲ. "ಆದುದ್ದರಿಂದ" ಪದವು ಏನನ್ನು ಸೂಚಿಸುತ್ತದೆಂದು ನೀವು ತಿಳಿಯುವಿರಿ?
2. ಅನ್ಯರ ಜೀವನವನ್ನು ಪೇತ್ರನು ಕೆಳಕಂಡ ಹೇಳಿಕೆಗಳ ಮೂಲಕ ವರ್ಣಿಸುತ್ತಾನೆ. ನಿಮ್ಮ ಸ್ವಂತ ವಾಕ್ಯಗಳಲ್ಲಿ ಅದರ ಅರ್ಥವೇನೆಂದು ವಿವರಿಸುವಿರಿ.

   a) ಬಂಡುತನ

   b) ದುರಾಶೆ

   c) ಕುಡುಕತನ

   d) ದುಂದೌತಣ

   e) ಮದ್ಯಪಾನ ಗೋಷ್ಠಿ

   f) ಅಸಹ್ಯವಾದ ವಿಗ್ರಾಹಾರಾಧನೆ

   g) ದುಷ್ಟತ್ವ
3. ವ. 6 ರಲ್ಲಿ "ಸತ್ತಿರುವವರು" ಎಂಬುದನ್ನು ಈ ವಾಕ್ಯಭಾಗ ಹಿನ್ನಲೆಯಲ್ಲಿ ನೀವು ಹೇಗೆ ಅರ್ಥೈಸಿಕೊಳ್ಳುವಿರಿ?

4. ವ.7–11 ರಲ್ಲಿ ಪೇತ್ರನ ಪ್ರಬೋಧನೆಯ ಹಿನ್ನಲೆಯೇನು? ವಾಕ್ಯಭಾಗವು ಹೇಗೆ ಪ್ರಾರಂಭವಾಗುತ್ತದೆಂಬುದನ್ನು ಗಮನಿಸಿರಿ.

5. ಪೇತ್ರನ ಹಳೆಯ ಪಾಪದ ಜೀವನದ (ವ.2–4) ವಿವರಣೆಯನ್ನು, ಆತನು ವಿಶ್ವಾಸಿಗಳು ಯಾವ ರೀತಿ ಜೀವಿಸಬೇಕೆಂದು ಬಯಸುವುದರೊಂದಿಗೆ (ವ.7–11) ಹೋಲಿಸಿ ನೋಡಿರಿ. ಎರಡು ವಿಭಾಗದಲ್ಲಿ ನಿಮ್ಮ ಪರಿಶೀಲನೆಯನ್ನು ಬರೆಯಿರಿ.

6. ಆದಿಸಭೆಯ ಸೇವೆಯಲ್ಲಿ ಉಪಯೋಗಿಸಲ್ಪಟ್ಟ ಎರಡು ವಿವಿಧ ನಾಯಕತ್ವ (ವರ)ದ ಬಗ್ಗೆ ಪೇತ್ರನು ಮಾತನಾಡುತ್ತಾನೆ (ವ.10–11). ಅವು ಯಾವುವು? ಪೇತ್ರನು ಅವುಗಳನ್ನು ಹೇಗೆ ವಿವರಿಸುತ್ತಾನೆ?

7. ಪೇತ್ರನು ಹೇಳುವ ಕ್ರೈಸ್ತಿಯ ಮನೆವಾರ್ತೆಯವರ ಉದ್ದೇಶವೇನು (ವ.11)?

## ಗ್ರಂಥಾಲಯ ಸಮಯದ ಸಲಹೆಗಳು





1. ನಿಮಗೆ ಮುಗಿಸಲು ಸಮಯ ಸಿಗದ ಅಧ್ಯಯನ 6–8 ರಿಂದ ಉಳಿದಿರುವ ಪ್ರಶ್ನೆಗಳನ್ನು ಉತ್ತರಿಸಿರಿ.

2. ಇಲ್ಲಿಯ ವರೆಗೆ ವಿಶೇಷವಾಗಿ ಅಧ್ಯಯನ 6–8 ರ ಸಂಗತಿಗಳನ್ನು ಮರುಪರಿಶೀಲಿಸಿ.

3. ನಿಮ್ಮ ನೋಟ್ಸ್‌ಗಳನ್ನು ಸ್ಪುಟವಾಗಿರಿಲಿ ಪೂರ್ಣವಾಗಿರಲಿ ಮತ್ತು ಅಚ್ಚುಕಟ್ಟಾಗಿರಲಿ.

4. ಪೇತ್ರನು ತನ್ನ ಓದುಗರಿಗೆ ಹೇಗೆ ದೇವರ ಚಿತ್ತಕ್ಕನುಸಾರವಾಗಿ ಜೀವಿಸಬೇಕೆಂಬುದನ್ನು ಬೋಧಿಸುವದನ್ನು ಒಬ್ಬ ಸಭೆಯ ಸ್ನೇಹಿತನಿಗೆ ನೀವು ಹೇಗೆ ವಿವರಿಸುವುರೆಂಬುದನ್ನೂ ಒಂದು ಪುಟ ಬರೆಯಿರಿ ಅಷ್ಟೇ ಅಲ್ಲದೆ ಈ ಭಕ್ತಿಯುತ ಜೀವನದೊಂದಿಗೆ ಯೇಸು ಕ್ರಿಸ್ತನ ಮರಣ ಮತ್ತು ನಮ್ಮ ನೀರಿನ ದೀಕ್ಷಾಸ್ನಾನದ ಪಾಲೇನೆಂಬುದನ್ನು ಬರೆಯಿರಿ. ಸತ್ಯವೇದ ಅಥವಾ ನೋಟ್ಸ್‌ನ್ನು ನಕಲಿಮಾಡದೇ ನಿಮ್ಮ ಸ್ವಂತ ವಾಕ್ಯಗಳಲ್ಲಿ ವಿವರಿಸಿರಿ.ಅಧ್ಯಯನ 8 ರಿಂದ ಮಾಹಿತಿ ಉಪಯೋಗಿಸಬಹುದು.

5. "ಆಶೀರ್ವಾದದ ಒಂದು ಜೀವನ" ಎಂಬ ಒಂದು ಧ್ಯಾನಮಾಲೆಯನ್ನು ಸಿದ್ಧಪಡಿಸಿರಿ. ಇದು ಅಧ್ಯಯನ 7 ರಲ್ಲಿ 1 ನೇ ಪ್ರಶ್ನೆಯ ಉತ್ತರವನ್ನು ಆಧಾರಗೊಂಡಿರಲಿ ಮತ್ತು ನಿಮ್ಮ ಸತ್ಯವೇದ ಕಾಲೇಜಿನ ಆತ್ಮಿಕ ಪರಿಸ್ಥಿತಿಗೆ ಇದನ್ನು ಅಳವಡಿಸಿಕೊಳ್ಳಿರಿ.




*ರೋಮನ್ನರು ವಿಗ್ರಹಾರಾಧಕರಾಗಿದ್ದು ಅನೇಕ ವಿಭಿನ್ನ ದೇವರಗಳನ್ನು ಪೂಜಿಸುತ್ತಿದ್ದರು. ಪೇತ್ರನು ಅನ್ಯಜನರ ನಂಬಿಕೆಯನ್ನು ಮತ್ತು ಜೀವನ ಶೈಲಿಯನ್ನು ಕಠಿಣ ಪದಗಳಿಂದ ಖಂಡಿಸುತ್ತಾನೆ:*

*''ನೀವು ಬಂಡುತನ, ದುರಾಶೆ, ಕುಡುಕುತನ, ದುಂದೌತಣ, ಮದ್ಯಪಾನ, ಅಸಹ್ಯವಾದ ವಿಗ್ರಹಾರಾಧನೆ ಈ ಮೊದಲಾದವುಗಳನ್ನು ನಡೆಸುವುದರಲ್ಲಿಯೂ ಅನ್ಯಜನರಿಗೆ ಇಷ್ಟವಾದ ದುಷ್ಕೃತ್ಯಗಳನ್ನು ಮಾಡುವವದರಲ್ಲಿಯೂ ಕಳೆದುಹೋದ ಕಾಲವೇ ಸಾಕು'' (1 ಪೇತ್ರ 4:3).*

# ಅಧ್ಯಯನ 9. ಬಾಧೆಪಡುತ್ತಿರುವ ಸಭೆ, 4:12–19

## ಪರಿಚಯ

ವಿಶ್ವಾಸಿಗಳ ಬಾಧೆಯು 1 ಪೇತ್ರದಲ್ಲಿ ಆಗಾಗ್ಗೆ ಕಂಡುಬರುವ ವಿಷಯಾಂಶವಾಗಿದೆ. ಈ ಅಧ್ಯಾಯದಲ್ಲಿ ನಾವು ಪೇತ್ರನ "ಬಾಧೆ ಪಡುತ್ತಿರುವ ಸಭೆಯ ಸಿದ್ಧಾಂತ"ದ ಕೆಲವು ಅಂಶಗಳನ್ನು ನೋಡೋಣ. ಹೆಚ್ಚಿನ ವಿಶ್ವಾಸಿಗಳು ಪಡುತ್ತಿರುವ ಬಾಧೆಯೇ ಈ ಜಗತ್ತಿನಲ್ಲಿ ಸಭೆಯು ಬಾಧೆಯನ್ನು ಅನುಭವಿಸಬೇಕೆನ್ನುವದಕ್ಕೆ ಸತ್ಯಾಂಶವಾಗಿದೆ.

## ಓದಿರಿ

1 ಪೇತ್ರ 4:12–19

## ಪ್ರಶ್ನೆಗಳು

1. ಈ ವಾಕ್ಯಭಾಗದ ಪ್ರಕಾರ ಕ್ರೈಸ್ತರು ಬಾಧೆಪಡಲು ಸರಿಯಾದ ಮತ್ತು ತಪ್ಪಾದ ಮಾರ್ಗಗಳಿವೆ. ಅದು ಹೇಗೆ ಎಂದು ವಿವರಿಸಿರಿ.
2. ಒಬ್ಬ ವಿಶ್ವಾಸಿಯು ಕ್ರಿಸ್ತನಿಗಾಗಿ ಬಾಧೆ ಪಡುವಾಗ ಅವನು ಹೇಗೆ ಪ್ರತಿಕ್ರಿಯಿಸಬೇಕು? ಈ ವಾಕ್ಯಭಾಗದಲ್ಲಿ ಪೇತ್ರನು ತಿಳಿಸಿರುವ 7 ಅಂಶಗಳನ್ನು ಕಂಡುಹಿಡಿಯಲು ಪ್ರಯತ್ನಿಸಿರಿ.
3. ವ. 13 ರಲ್ಲಿನ ಸಂತೋಷದ 2 ಹಂತಗಳನ್ನು ವಿವರಿಸಿರಿ. ನಿಮ್ಮ ಸ್ವಂತ ವಾಕ್ಯಗಳಲ್ಲಿ ವಿವರಿಸಿರಿ.
4. 17 ನೇ ವಚನದ ಮೊದಲ ಭಾಗವು "ಆ ವಿಚಾರಣೆಯು ದೇವರ ಮನೆಯಲ್ಲಿಯೇ ಪ್ರಾರಂಭವಾಯಿತಲ್ಲಾ" ಎಂಬ ಹೇಳಿಕೆಯೊಂದಿಗೆ ಪ್ರಾರಂಭವಾಗುತ್ತದೆ. ಇದು ಕ್ರೈಸ್ತರ ಬಾಧೆಯನ್ನು ಸೂಚಿಸುತ್ತದೆ. ಪೌಲನು ತನ್ನ ಮೊದಲ ಪ್ರಯಾಣದಿಂದ ಹಿಂತಿರುಗುವಾಗ ಹೊಸದಾಗಿ ಸ್ಥಾಪಿಸಲ್ಪಟ್ಟ ಸಭೆಗಳನ್ನು ಉತ್ತೇಜಿಸುವಲ್ಲಿ ಸಹ ಪೌಲನು ಅದೇ ರೀತಿಯ ಹೇಳಿಕೆಯನ್ನು ಉಪಯೋಗಿಸುತ್ತಾನೆ. "ನಾವು ಬಹು ಸಂಕಟಗಳನ್ನು ತಾಳಿ ದೇವರ ರಾಜ್ಯದೊಳಗೆ ಸೇರಬೇಕೆಂಬುದಾಗಿ" (ಅ.ಕೃ: 14:22). ನಮಗೆ ಸ್ವೀಕರಿಸಲು ಇದೊಂದು ಬಹು ಕ್ಲಿಷ್ಟಕರ/ಕಷ್ಟಮಯ ಸಂಗತಿಯಾಗಿದೆ. ಆದರೆ ಇದರ ಹಿನ್ನಲೆಯನ್ನು ಹಳೆಒಡಂಬಡಿಕೆಯ ಪ್ರವಾದಿಗಳ ಸಂದೇಶದಲ್ಲಿ ಕಾಣಬಹುದಾಗಿದೆ. ನೋಡಿರಿ– ಯೆಹೆಜ್ಕೇಲ್.9:6, ಜೆಕರ್ಯ.13:7–9, ಮಲಾಕಿ.3:1–5. ಪೇತ್ರನ ಈ ಹೇಳಿಕೆಯನ್ನು ಹಳೆಒಡಂಬಡಿಕೆಯ ಪ್ರವಾದನೆಗಳ ಹಿನ್ನಲೆಯಲ್ಲಿ ವಿವರಿಸಿರಿ.
5. ಮುಂದಿನ 18 ನೇ ವಚನದಲ್ಲಿ ಪೇತ್ರನು ಹಿಂದಿನ ವಚನದಲ್ಲಿ ಪರಿಚಯಸಲ್ಪಟ್ಟ ತನ್ನ "ಬಾಧೆ ಪಡುತ್ತಿರುವ ಸಭೆಯ ಸಿದ್ಧಾಂತ"ವನ್ನು ಬೆಂಬಲಿಸಲು ಜ್ಞಾನೋಕ್ತಿ 11:13 ನ್ನು ಉಪಯೋಗಿಸುತ್ತಾನೆ. ಹೇಗೆ ಎಂದು ವಿವರಿಸಿರಿ.

6. ವಚನ 19 ರಲ್ಲಿ ಮಾತ್ರ ಹೊಸ ಒಡಂಬಡಿಕೆಯಲ್ಲಿ ದೇವರು "ಸೃಷ್ಠಿಕರ್ತ"ನೆಂದು ಕರೆಯಲ್ಪಟ್ಟಿದ್ದಾನೆ. ಈ ಜಗತ್ತಿನಲ್ಲಿ ಬಾಧೆ ಪಡುತ್ತಿರುವ ವಿಶ್ವಾಸಿಗಳಿಗೆ ಇದರ ಪ್ರಾಮುಖ್ಯತೆಯೇನು?

7. ತನ್ನ ನಂಬಿಕೆಯ ನಿಮಿತ್ತ ಬಾಧೆಪಡುತ್ತಿರುವ ವಿಶ್ವಾಸಿಗೆ ವಚನ 19 ಹೇಗೆ ಸಾಂತ್ವನ ಮತ್ತು ಸವಾಲಾಗಿಯೂ ಆಗಬಹುದು?

# ಅಧ್ಯಯನ 10. ದೀನತೆಯನ್ನು ಧರಿಸಿಕೊಳ್ಳಿರಿ, 5:1–11

## ಪರಿಚಯ

ಈ ವಾಕ್ಯಭಾಗದಲ್ಲಿ ಸಭೆಯೊಳಗಿನ ಸಂಬಂಧದ ಬಗ್ಗೆ ಪೇತ್ರನು ಪ್ರಬೋಧನೆಗಳ ಸರಣಿಯನ್ನು ಬಿಡುಗಡೆ ಮಾಡುತ್ತಾನೆ. ಇಲ್ಲಿನ ಮುಖ್ಯ ಪದವು 'ದೀನತೆ'ಯಾಗಿದೆ.

## ಓದಿರಿ

1 ಪೇತ್ರ.5:1–11

## ಪ್ರಶ್ನೆಗಳು

1. ಈ ವಾಕ್ಯಭಾಗದ ಮೊದಲ ಭಾಗದಲ್ಲಿ ಪೇತ್ರನು ಯಾರನ್ನು ಕುರಿತು ಹೇಳುತ್ತಾನೆ (ವ.1–4)?
2. ವ. 1–4 ರಲ್ಲಿ ಪೇತ್ರನು ತನ್ನನ್ನು ತಾನು ಹೇಗೆ ವರ್ಣಿಸಿಕೊಳ್ಳುತ್ತಾನೆ? ಆತನು ಉಪಯೋಗಿಸುವ ಹೇಳಿಕೆಗಳ ತಾತ್ಪರ್ಯವೇನಿರಬಹುದು?
3. ದೇವರ ಮಂದೆಯನ್ನು ಕಾಯುವ ಕುರುಬರಾಗಿರಿ (ವ. 2. ಕನ್ನಡದ ಎರಡು ಭಾಷಾಂತರಗಳಲ್ಲಿಯೂ ಸಹ ಕುರುಬರಾಗಿರಿ ಎಂದು ಇಲ್ಲ, ಆದರೆ ಕಾಯಿರಿ/ ಕಾಳಜಿವಹಿಸಿರಿ ಎಂದು ಬರೆದಿದೆ) ಎಂದು ಸಭಾ ನಾಯಕರಿಗೆ ಬರೆಯುವಾಗ ಹಳೆಯ ಒಡಂಬಡಿಕೆಯ ರೂಪಾಲಂಕಾರವನ್ನು ಉಪಯೋಗಿಸುತ್ತಾನೆ.ವ. 2 ರಲ್ಲಿ ಕುರುಬರು ಮತ್ತು ಅವರ ಮಂದೆಯ ನಡುವಿನ ಸಂಬಂಧದ ಬಗ್ಗೆ ಆತನು ಏನೆಂದು ಹೇಳುತ್ತಾನೆ?
4. ಸಭೆಯ ನಾಯಕರುಗಳು ಹೇಗಿರಬೇಕೆಂದು ಪೇತ್ರನು ವರ್ಣಿಸುವ ವಿಧವನ್ನು ಅಭ್ಯಾಸಿಸಿರಿ (ವ.2,3). ಆತನ ಹೇಳಿಕೆಗಳನ್ನು ಎರಡು ವಿಭಾಗಗಳಾಗಿ ಮಾಡಿ ಎಡಭಾಗದಲ್ಲಿ 'ಅವರು ಹೇಗಿರಬೇಕೆಂದೂ' ಮತ್ತು ಬಲಭಾಗದಲ್ಲಿ 'ಅವರು ಹೇಗಿರಬಾರದೆಂದು' ತಿಳಿಸಿರಿ.
5. ವ. 2–3 ರಲ್ಲಿ ಪೇತ್ರನ ಹೇಳಿಕೆಗಳ ಅರ್ಥವೇನೆಂದು ನಿಮ್ಮ ಸ್ವಂತ ವಾಕ್ಯಗಳಲ್ಲಿ ವಿವರಿಸಿರಿ.

   a) ಕಾಯುವುದು (ಕಾಳಜಿ)

   b) ಮೇಲ್ವಿಚಾರಣೆ ಮಾಡುವುದು

   c) ಸಿದ್ಧಮನಸ್ಸು

   d) ಇಷ್ಟಪೂರ್ವಕವಾಗಿ

   e) ದ್ರವ್ಯಾಶೆ

   f) ದೊರೆತನ

g) ಮಾದರಿಯಾಗಿರುವದು

6. ಪೇತ್ರನು 5 ನೇ ವಚನವನ್ನು 'ಅದೇ ರೀತಿಯಾಗಿ' ಎಂಬ ಹೇಳಿಕೆಯೊಂದಿಗೆ ಪ್ರಾರಂಭಿಸುತ್ತಾನೆ. ಅದರ ತಾತ್ಪರ್ಯವೇನಿರಬಹುದು?

7. ಅದೇ ವಚನದಲ್ಲಿ (ವ. 5) ದೀನತೆಯು ಯಾಕೆ ಪ್ರಾಮುಖ್ಯವೆಂದು ಪೇತ್ರನು ವಿವರಿಸುತ್ತಾನೆ? ನಿಮ್ಮ ಸ್ವಂತ ವಾಕ್ಯಗಳಲ್ಲಿ ಆತನ ಅಂಶವನ್ನು ವಿವರಿಸಿರಿ.

8. ಮುಂದಿನ ವಚನದಲ್ಲಿ (ವ. 6) ಕ್ರೈಸ್ತೀಯ ದೀನತೆಯ ಫಲಿತಾಂಶವನ್ನು ಪೇತ್ರನು ವಿವರಿಸುತ್ತಾನೆ. ಆತನು ಹೇಳುವದನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ವಿವರಿಸಿರಿ.

9. ದೇವರು ನಮಗಾಗಿ ಚಿಂತಿಸುವದರಿಂದ ನಾವು ನಮ್ಮ ಚಿಂತೆಯನ್ನೆಲ್ಲಾ ಆತನ ಮೇಲೆ ಹಾಕಬಹುದು (ವ. 7). ಇದು ಸರಿಯಾದ/ನಿಜವಾದ ಹೇಳಿಕೆಯಾಗಿದೆ ಎಂದು ನಾವು ಹೇಗೆ ತಿಳಿಯಬಹುದು? ನಿಮ್ಮ ಹೇಳಿಕೆಗಳನ್ನು ಪಟ್ಟಿಮಾಡಿರಿ.

10. ಯಾಕೆ ವಿಶ್ವಾಸಿಗಳು ಸ್ವಸ್ಥಚಿತ್ತರಾಗಿದ್ದು ಎಚ್ಚರವಾಗಿಬೇಕು (ವ.8)?

11. ವಿಶ್ವಾಸಿಗಳು ಸೈತಾನನನ್ನು ಎದುರಿಸಲು ಸಾಧ್ಯವೆನ್ನುವುದಕ್ಕೆ ಪೇತ್ರನು ಹೆಚ್ಚು ಕಡಿಮೆ 3 ಕಾರಣಗಳನ್ನು ಕೊಡುತ್ತಾನೆ (ವ.9–16). ಅವು ಯಾವುವು? ಅವು ಹೇಗೆ ಸಹಾಯಕವಾಗಬಲ್ಲವೆಂದು ವಿವರಿಸಿರಿ.

12. ಪೇತ್ರನು ಈ ವಾಕ್ಯಭಾಗವನ್ನು ಹೇಗೆ ಮುಗಿಸುತ್ತಾನೆ? ಇದರಿಂದ ನಾವು ಏನನ್ನು ಕಲಿಯಬಹುದು?



*ಸ್ವಸ್ಥ ಚಿತ್ತರಾಗಿರಿ, ಎಚ್ಚರವಾಗಿರಿ, ನಿಮ್ಮ ವಿರೋಧಿಯಾಗಿರುವ ಸೈತಾನನು ಗರ್ಜಿಸುವ ಸಿಂಹದೋಪಾದಿಯಲ್ಲಿ ಯಾರನ್ನು ನುಂಗಲಿ ಎಂದು ಹುಡುಕುತ್ತಾ ತಿರುಗುತ್ತಾನೆ (1 ಪೇತ್ರ.5:8).*

# ಅಧ್ಯಯನ 11. ಅಂತಿಮ ವಂದನೆಗಳು, 5:12–14

## ಪರಿಚಯ

ಈಗ ನಾವು ಪೇತ್ರನ ಪತ್ರಿಕೆಯ ಮುಕ್ತಾಯಕ್ಕೆ ಬಂದಿದ್ದೇವೆ. ಸಾಂಪ್ರದಾಯಿಕ ವಂದನೆಗೆ ಇನ್ನೂ ಸೇರಿಸಿ ಹೇಳುವುದಾದರೆ ಈ ಕಡೇ ವಚನಗಳು ಇದರ ಹಿನ್ನಲೆ, ಇದರ ಸಂದೇಶದ ಸಾರಾಂಶ ಮತ್ತು ಉದ್ದೇಶಗಳ ಬಗ್ಗೆ ಮಾಹಿತಿಯನ್ನು ಒದಗಿಸುತ್ತವೆ.

## ಓದಿರಿ

1 ಪೇತ್ರ 5:12–14

## ಪ್ರಶ್ನೆಗಳು

1. ಸಿಲ್ವಾನನ ಸಹಾಯದಿಂದ ಎಂಬ ಹೇಳಿಕೆಯನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ (ವ.12)?
2. ಪೇತ್ರನು ತನ್ನ ಪತ್ರಿಕೆಯ ಸಂದೇಶವನ್ನು ವ.12 ರಲ್ಲಿ ಸಾರಾಂಶಗೊಳಿಸುತ್ತಾನೆ.
   a) ಆತನ ಎರಡು ಅಂಶಗಳೇನು?
   b) ಈ ಎರಡು ಅಂಶಗಳು ಒಂದಕ್ಕೊಂದು ಹೇಗೆ ಸಂಬಂಧಿಸಿವೆ ಎಂದು ನಿಮ್ಮ ಸ್ವಂತ ವಾಕ್ಯಗಳಲ್ಲಿ ವಿವರಿಸಿರಿ.
3. ನನ್ನ ಮಗನಾದ ಮಾರ್ಕನು ಯಾರು (ವ.13)? ಈ ವಚನಗಳಲ್ಲಿ ನೋಡಿರಿ ಮತ್ತು ಆತನ ಕುರಿತು ಒಂದು ಪುಟ ಬರೆಯಿರಿ. ಅ.ಕೃ: 12:12,25. 15:37–39. ಕೊಲೊಸ್ಸೆ: 4:10. 2ತಿಮೊಥಿ: 4:11.
4. 1 ಪೇತ್ರ 3:8 ನ್ನು ಉಪಯೋಗಿಸಿ ಪೌಲ ಮತ್ತು ಆತನ ಜೊತೆ ಕೆಲಸಗಾರರಾದ ಬಾರ್ನಬ ಮತ್ತು ಮಾರ್ಕನ ನಡುವಿನ ಸಂಬಂಧವನ್ನು ಮೌಲ್ಯಮಾಪನ ಮಾಡಿರಿ/ಪರಿಶೀಲಿಸಿರಿ (ಹಿಂದಿನ ಪ್ರಶ್ನೆಯಲ್ಲಿ ವಾಕ್ಯಭಾಗವನ್ನು ನೋಡಿರಿ).
5. ವಚನ.13 ರಲ್ಲಿ ಬ್ಯಾಬಿಲೋನಿನ ಕುರಿತಾಗಿನ ಗ್ರೀಕ್ ಹೇಳಿಕೆಯನ್ನು ಹೇಗೆ ಅರ್ಥೈಸಿಕೊಳ್ಳಬೇಕೆಂಬುದನ್ನು ಸತ್ಯವೇದ ತಜ್ಞರು ಒಪ್ಪುವುದಿಲ್ಲ. (ಹೆಚ್ಚಿನ ಇಂಗ್ಲೀಷ ಭಾಷಾಂತಾರವು ಗ್ರೀಕ್ ಮೂಲಕ್ಕೆ ಹತ್ತಿರವೆನಿಸುವ ಬ್ಯಾಬಿಲೋನಿನಲ್ಲಿರುವವಳು ಎಂದಿದೆ. ಕನ್ನಡದ ಎರಡು ಭಾಷಾಂತಾರಗಳು ಬ್ಯಾಬಿಲೋನಿನಲ್ಲಿರುವ ಸಭೆಯು ಎಂಬುದನ್ನು ಒಳಗೊಂಡಿದೆ) ಇದಕ್ಕೆ ಒಂದು ಕಾರಣವೆಂದರೆ ಈ ಇತಿಹಾಸ ಸಮಯದಲ್ಲಿ ಬ್ಯಾಬಿಲೋನಿನ ಹಳೆಯ ಪಟ್ಟಣವು ಅತಿಯಾಗಿ ಉದ್ದವಾಗಿತ್ತು. ಇದನ್ನು ಹೇಗೆ ಅರ್ಥೈಸಿಕೊಳ್ಳಬೇಕೆಂದು ನೀವು ಯೋಚಿಸುವಿರಿ?
6. ಪೇತ್ರನು ತನ್ನ ಪತ್ರಿಕೆಯನ್ನು ಹೇಗೆ ಮುಕ್ತಾಯಗೊಳಿಸುತ್ತಾನೆ?

7. ಮತ್ತೊಮ್ಮೆ 1 ಪೇತ್ರ ಪತ್ರಿಕೆಯ ಪರಿಚಯ/ಪೀಠಿಕೆ ಅಧ್ಯಯನಕ್ಕೆ ಹೋಗಿ ಅಲ್ಲಿ ಕೊಡಲ್ಪಟ್ಟ ಮಾಹಿತಿಗಳಿಂದ ಉತ್ತರಗಳನ್ನು ಪ್ರಶ್ನೆ 1, 2 ಮತ್ತು 4 ಕ್ಕೆ ಹೋಲಿಸಿ ನೋಡಿರಿ. ಕೆಲವು ಪರಾಮರ್ಶೆಗಳನ್ನು ಪಟ್ಟಿಮಾಡಿರಿ.

8. ಅಧ್ಯಾಯ 5 ರಲ್ಲಿ ಮೂರು ಬಾರಿ ಪೇತ್ರನು "ಬಾಧೆ ಪಡುವುದು" ಎಂಬ ವಿಷಯಾಂಶವನ್ನು ತಿಳಿಸುತ್ತಾನೆ. ಆತನ ಓದುಗರು ಸನ್ನಿಹಿತವಾದ ಬಾಧೆಯ ಬೆದರಿಕೆಗಳನ್ನು ಎದುರಿಸುತ್ತಿದ್ದರು, ಮತ್ತು ಅವರ ಬಾಧೆಗೆ ಕಾರಣವು ಅವರ ನಂಬಿಕೆಯಾಗಿತ್ತು. ಆದರೆ ಅವರು ಎಷ್ಟು ಬೇಗ ಸಭೆಗೆ ಬೆನ್ನು ತಿರುಗಿಸಿ ತಮ್ಮ ಹಳೆಯ ಜೀವನಕ್ಕೆ ಹಿಂತಿರುಗುವರೋ ಅಷ್ಟೇ ಬೇಗನೇ ಅವರ ಬಾಧೆಯು ಮುಕ್ತಾಯವಾಗುತ್ತಿತ್ತು. ಹೀಗಾಗಿ ಅನೇಕ ವಿಶ್ವಾಸಿಗಳು ಹಿಂಜಾರಲು, ಗರ್ಜಿಸುವ ಸಿಂಹದೋಪಾದಿಯಲ್ಲಿ ತಿರುಗುವ ಸೈತಾನನಿಂದ ನುಂಗಲ್ಪಡಲು ಇದೊಂದು ನಿಜವಾದ ಶೋದನೆಯಾಗಿತ್ತು.

   ತನ್ನ ಓದುಗರಿಗೆ ಕೃಪೆಯಲ್ಲಿ ನಿಲ್ಲಿರೆಂದು ಪ್ರಬೋಧಿಸುವುದರ ಮೂಲಕ ಪೇತ್ರನು ತನ್ನ ಪತ್ರಿಕೆಯನ್ನು ಮುಗಿಸುತ್ತಾನೆ (ವ.12). ಆದರೆ ಅಧ್ಯಾಯದ ಪ್ರಾರಂಭದಲ್ಲಿ ಆತನು (5:1–9 ರಲ್ಲಿ ಆತನ ಅನೇಕ ಎಚ್ಚರಿಕೆಗಳ ಮೂಲಕ) ಸಭೆಯ ಅನ್ಯೋನ್ಯತೆಯಲ್ಲಿ ವಿಶ್ವಾಸಿಗಳು ಒಬ್ಬರಿಗೊಬ್ಬರು ಹೇಗೆ ವ್ಯವಹರಿಸಬೇಕೆಂದು ವಿವರಿಸುತ್ತಾನೆ.

   ಅಧ್ಯಾಯ 5 ರಲ್ಲಿ ಸಭೆಯ ಸಂಬಂಧದ ಬಗೆಗಿನ ಪೇತ್ರನ ಬೋಧನೆಯು ನಿಮ್ಮ ಕ್ರೈಸ್ತೀಯ ನಂಬಿಕೆಯಲ್ಲಿ ದೃಢವಾಗಿ ನಿಲ್ಲಲು ಹೇಗೆ ಸಹಾಯವಾಗುತ್ತದೆ?

## ಗ್ರಂಥಾಲಯ ಸಮಯದ ಸಲಹೆಗಳು

1. ಈ ಹಿಂದೆ ಮುಗಿಸಲು ಸಮಯ ಸಿಗದ ಅಧ್ಯಾಯ 9 ರ ಪ್ರಶ್ನೆಗಳನ್ನು ಉತ್ತರಿಸಿರಿ.
2. ವಿಶೇಶವಾಗಿ ಅಧ್ಯಾಯ 9–11 ರ ಮತ್ತು ಈ ವರೆಗೂ ಕಲಿತ ಪಾಠವನ್ನೆಲ್ಲಾ ಪುನರ್ ವಿವರಿಸಿರಿ.



3. ನಿಮ್ಮ ನೋಟ್ಸ್‌ಗಳು ಸಂಪೂರ್ಣ, ಸ್ಪುಟ, ಮತ್ತು ಅಚ್ಚುಕಟ್ಟಾಗಿರಲಿ.
4. ಕೆಳಕಂಡವುಗಳಲ್ಲಿ ಒಂದನ್ನು ಬರೆಯಿರಿ.

   a) ನಿಮ್ಮ ಸಭೆಯ ಸ್ನೇಹಿತರೊಬ್ಬರಿಗೆ ಬಾಧೆ ಪಡುತ್ತಿರುವ ಸಭೆಯ ಬಗ್ಗೆ ಪೇತ್ರನು ಏನೆಂದು ಬೋಧಿಸುತ್ತಾನೆಂಬುದರ ಬಗ್ಗೆ ಒಂದು ಪುಟ್ಟ ಪ್ರಬಂದ ಬರೆಯಿರಿ. ನಿಮ್ಮ ಸ್ವಂತ ವಾಕ್ಯಗಳಲ್ಲಿ ವಿವರಿಸಿರಿ. ಸತ್ಯವೇದ ಅಥವಾ ನೋಟ್ಸ್‌ನ್ನು ನಕಲುಮಾಡಬೇಡಿರಿ. ಅಧ್ಯಾಯ 9 ರಿಂದ ಮಾಹಿತಿ ಬಳಸಿರಿ.

   b) ಬಾಧೆಪಡುತ್ತಿರುವ ಸಭೆ ಎಂಬುದಾಗಿ ಒಂದು ಸತ್ಯವೇದ ಧ್ಯಾನ ಮಾಲೆಯನ್ನು ಸಿದ್ಧಪಡಿಸಿರಿ. ಅಧ್ಯಾಯ 9 ರಲ್ಲಿನ ನೀವು ಕಲಿತ ಸಂಗತಿಗಳನ್ನು ಉಪಯೋಗಿಸಿರಿ.



*ಕ್ರಿಸ್ತ ಯೇಸುವಿನಲ್ಲಿರುವ ನಿಮ್ಮೆಲ್ಲರಿಗೆ ಶಾಂತಿಯಿರಲಿ! (1 ಪೇತ್ರ 5:1)*

# ಅಧ್ಯಯನ 12. ಪೇತ್ರನು ಬರೆದ ಮೊದಲನೆಯ ಪತ್ರಿಕೆಯ ಕುರಿತು ಯೋಚಿಸಿರಿ

## ಪರಿಚಯ

1 ಪೇತ್ರ ಪತ್ರಿಕೆಯನ್ನು ಸಾರಾಂಶಗೊಳಿಸಲು ನಿಮಗೆ ಸಮಯ ಬಂದಿದೆ. ಇನ್ನೊಂದು ಬಾರಿ ನೀವು ಈ ಪತ್ರಿಕೆಯನ್ನು ಪೂರ್ತಿಯಾಗಿ ಓದಿರಿ. ಇದು ನಿಮ್ಮನ್ನು ಕಳೆಗುಂದಿಸದಿರಲಿ. ಈಗ ನೀವು ಇದುವರೆಗೂ ಸವಿವರವಾಗಿ ಕಲಿತ ವ್ಯಕ್ತಿಗತ ವಾಕ್ಯಭಾಗಗಳನ್ನು ಒಂದು ಹೊಸ ನೋಟದೊಂದಿಗೆ ಓದುವಿರಿ.

## ಓದಿರಿ

1 ಪೇತ್ರ1–5, ಆದರೆ ನೀವು ಇದನ್ನು ಮೊದಲು ಕೆಳಗಿರುವ ಪ್ರಶ್ನೆಗಳನ್ನು ನೋಡಿರಿ. ನೀವು ಓದುವಾಗ ಅದನ್ನು ಮನಸ್ಸಿನಲ್ಲಿಟ್ಟುಕೊಳ್ಳಿರಿ.

## ಪ್ರಶ್ನೆಗಳು

1. ನೀವು ಮುಂದಿನ ಪ್ರಶ್ನೆಯನ್ನು ಉತ್ತರಿಸುವಾಗ ನೀವು ಮನಸ್ಸಿನಲ್ಲಿಟ್ಟುಕೊಳ್ಳಬೇಕಾದ 1 ಪೇತ್ರದಲ್ಲಿರುವ ಕೆಲವು ಪ್ರಮುಖ ಅಂಶಗಳು ಇಲ್ಲಿವೆ.

    a) ದೇವರ ಕೃಪೆ (1:1, 10, 3, 4:10, 5:5, 10, 12)

    b) ಈ ಲೋಕದಲ್ಲಿ ವಿಶ್ವಾಸಿಗಳ ಚದುರಿರುವಂತ ಪ್ರವಾಸಿಗಳ ಜೀವನ (1:1, 2:19–23, 3:14, 17, 4:1, 12–16, 19, 5:1, 9–10)

    c) ಬಾಧೆ, ವಿಶ್ವಾಸಿಗಳ ಬಾಧೆ ಮತ್ತು ಕ್ರಿಸ್ತನ ಬಾಧೆ (1:6, 11, 2:19–23, 3:14, 17, 4:1, 12–16, 19, 5:1, 9–10)

    d) ಯೇಸು ಕ್ರಿಸ್ತನ ಎರಡನೇ ಬರೋಣ, ದೇವರ ನ್ಯಾಯತೀರ್ಪಿನ ದಿನ ಮತ್ತು ಶಾಶ್ವತವಾದ ಮಹಿಮೆ (1:4–5, 7, 9, 3:9, 4:5, 13, 5:1, 4, 10)

    e) ಈ ಲೋಕದಲ್ಲಿ ಭಕ್ತಿಯುತ ಜೀವನವನ್ನು ಹೇಗೆ ಜೀವಿಸುವುದು (1:13–16, 22, 2:1–3, 12–20, 3:1–9, 15, 4:1–11, 5:1–9)

    f) ಸಭೆಯ ಸಿದ್ಧಾಂತ ಮತ್ತು ಮೇಲ್ಕಂಡ ಎ ಮತ್ತು ಈ ಅಂಶಗಳಿಗೆ ಹೆಚ್ಚುವರಿ ಮಾಹಿತಿ (2:1–1–4–12)

    g) ಯೇಸು ಮತ್ತು ಆತನು ನಮಗಾಗಿ ಏನನ್ನು ಮಾಡಿದನು (1:2–3, 18–21, 2:21–25, 3:18, 21–22)

2. 1 ಪೇತ್ರ ಪತ್ರಿಕೆಯಲ್ಲಿ ಪೇತ್ರನ ಸಂದೇಶವನ್ನು ನೀವು ಹೇಗೆ ಸಾರಾಂಶಗೊಳಿಸುವಿರಿ?

# ಪೇತ್ರನು ಬರೆದ ಎರಡನೆಯ ಪತ್ರಿಕೆಯ ಪರಿಚಯ

## ಗ್ರಂಥಕರ್ತ

ಈ ಪತ್ರಿಕೆಯ ಗ್ರಂಥಕರ್ತನು ತನ್ನನ್ನು ಯೇಸು ಕ್ರಿಸ್ತನ ದಾಸನೂ, ಅಪೋಸ್ತಲನೂ ಆಗಿರುವ ಸಿಮೆಯೋನ ಪೇತ್ರನೆಂದು ಪರಿಚಯಿಸಿಕೊಳ್ಳುತ್ತಾನೆ (1:1). ಇದು ಮೊದಲ ಅಪೋಸ್ತಲರಲ್ಲಿ ಒಬ್ಬನೂ, ಆದಿ ಯೆರೂಸಲೇಮಿನ ಸಭೆಯ ನಾಯಕನೂ ಯೇಸು ಕ್ರಿಸ್ತನ ಶಿಷ್ಯನೂ ಆಗಿರುವ ಪೇತ್ರನನ್ನು ಸೂಚಿಸುತ್ತದೆ.

ಹಾಗಾಗದೆ ಯಾಕೆ ಅನೇಕ ಆಧುನಿಕ ಸತ್ಯವೇದ ಪಂಡಿತರು ಇದರ ಗ್ರಂಥಕರ್ತನು ಬೇರೆ ಯಾರಾದರೂ ಇರಬಹುದು, ಪೇತ್ರನ ಹೆಸರಿನಲ್ಲಿ ಬೇರೆ ಯಾರೋ ವ್ಯಕ್ತಿ ಈ ಪತ್ರವನ್ನು ಬರೆಯುತ್ತಿರಬಹುದೆಂದು ಯೋಚಿಸುತ್ತಾರೆ? (ಈ ರೀತಿ ಮಾಡುವದು ಪ್ರಾಚೀನ ಕಾಲದಲ್ಲಿ ಸರ್ವೆಸಾಮಾನ್ಯವಾಗಿತ್ತು) ಅವರು ತಮ್ಮ ಅಭಿಪ್ರಾಯವನ್ನು 3 ಮುಖ್ಯ ಪರಿಸ್ಥಿತಿಗಳ ಅಧಾರದ ಮೇಲೆ ನಿರೂಪಿಸುತ್ತಾರೆ.

1. ಮೊದಲನೆಯದು, ನಾವು 1 ನೇ ಪೇತ್ರ ಪತ್ರಿಕೆಗಿಂತ ಇದರಲ್ಲಿನ ಗ್ರೀಕ್ ಭಾಷೆ ಮತ್ತು ಬರವಣಿಗೆಯು ಶೈಲಿಯಿಂದ ವಿಭಿನ್ನವಾಗಿವೆ. ಹಾಗಾಗಿ ಒಬ್ಬನೇ ವ್ಯಕ್ತಿ ಇವೆರಡೂ ಪತ್ರಿಕೆಗಳನ್ನು ಬರೆದಿರಲಾರನು. ಆದುದ್ದರಿಂದ 1ನೇ ಪೇತ್ರ ಪತ್ರಿಕೆಯನ್ನು ಪೇತ್ರನು ಬರೆದರೆ 2ನೇ ಪತ್ರಿಕೆಯನ್ನು ಇದಕ್ಕೆ ಹೆಚ್ಚಿನ ಅಧಿಕಾರ ಕೊಡುವುದಕ್ಕಾಗಿ ಬೇರೆ ಯಾರೋ ಪೇತ್ರನ ಹೆಸರನ್ನು ಉಪಯೋಗಿಸಿಕೊಂಡು ಬರೆದಿರಬಹುದು.

2. ಎರಡನೆಯದು, ಸಭೆಯ ಪರಿಸ್ಥಿತಿ/ಸನ್ನಿವೇಶ ಮತ್ತು ಈ ಪತ್ರಿಕೆಯಲ್ಲಿ ಪ್ರಸ್ತಾಪಿಸಲಾದ ವಿಷಯವೆಲ್ಲವೂ ಪೇತ್ರನು ತೀರಿ ಹೋದ ನಂತರದ ಅವಧಿಯನ್ನು ಪ್ರತಿಬಿಂಭಿಸುತ್ತವೆ.

3. ಮೂರನೆಯದು, ಪೌಲನ ಪತ್ರಿಕೆಗೆ ಆಧಾರ/ವಾಕ್ಯಗಳು (3:15–16) ನಂತರದ ಸಮಯವನ್ನು , ಅಂದರೆ ಪೌಲನ ಪತ್ರಿಕೆಗಳು ಸಂಗ್ರಹಿಸಲ್ಪಟ್ಟು ಸಭೆಗಳಲ್ಲಿ ಹಂಚಲ್ಪಡುತ್ತಿರುವಾಗಿನ ಸಮಯವನ್ನು ಸೂಚಿಸುತ್ತವೆ.

ಹಾಗಾದರೆ ಈ 3 ಅಂಶಗಳ ಬಗ್ಗೆ ನಾವು ಏನನ್ನು ಹೇಳಬಹುದು? ನಿಜವಾಗಲೂ ಅವು ಎಷ್ಟಾಗಿ ಒಪ್ಪುವಂತವುಗಳು? ಅವು ಎಂದಿಗೂ ಒಪ್ಪುವಂತವುಗಳಲ್ಲವೆಂದು ನಾನು ಕಂಡುಕೊಂಡೆನು.

1. 1 ನೇ ಪೇತ್ರ ಪತ್ರಿಕೆಯ ಪರಿಚಯ ಭಾಗದಲ್ಲಿ ನಾವು ಮೊದಲ ಅಂಶವನ್ನೀಗಾಗಲೇ ಚರ್ಚಿಸಿದ್ದೇವೆ.ಪೇತ್ರನು ಬರೆದಿರುವನೆಂದು ಗುಣಧರ್ಮವನ್ನು ತೋರಿಸುವ ಈ ಎರಡು ಪತ್ರಿಕೆಗಳು ಭಾಷೆ ಮತ್ತು ಶೈಲಿಯಲ್ಲಿ ವಿಭಿನ್ನವಾಗಿರುವುದಂತೂ ಸತ್ಯ. ಆದರೆ ವ್ಯತ್ಯಾಸಗಳು ವಿವರಿಸಲು ಸರಳವಾಗಿವೆ. 1 ಪೇತ್ರ ಪತ್ರಿಕೆಯು ಸಿಲ್ವಾನನ ಸಹಾಯದಿಂದ ಬರೆಯಲ್ಪಟ್ಟಿದೆ. 2ನೇ ಪೇತ್ರ ಪತ್ರಿಕೆಯು ತನ್ನ ಜೀವನದ ಅಂತಿಮ ದಿನಗಳಲ್ಲಿ ಸ್ವತಃ ಪೇತ್ರನಿಂದಲೇ ಬರೆಯಲ್ಪಟ್ಟಿದೆ. ಹೆಚ್ಚುವರಿಯಾಗಿ ಹೇಳುವುದಾದರೆ ಪತ್ರಿಕೆಗಳು ವಿಭಿನ್ನವಾದ ವಿಷಯ/ಸಂಗತಿಗಳು ಶೈಲಿ ಮತ್ತು ಭಾಷೆಯ ಮೇಲೆ ಪ್ರಭಾವ ಬೀರುವುದಾಗಿದೆ.

2. 2ನೇ ಪೇತ್ರ ಪತ್ರಿಕೆಯಲ್ಲಿ ಹೊಸ ಒಡಂಬಡಿಕೆಯ ಯಾವ ಭಾಗದಲ್ಲಿ ಉಪಯೋಗಿಸಲ್ಪಡದಂತಹ ಪದಗಳನ್ನು ಮತ್ತು ವಿಷಯಗಳನ್ನು ಉಪಯೋಗಿಸಲಾಗಿದೆ ಎಂಬುದು ಸಹ ಸತ್ಯವಾಗಿದೆ. ಆದರೆ ಅವಶ್ಯಕವಾಗಿ ಅವು ನಂತರದ ಐತಿಹಾಸಿಕ ಸಮಯವನ್ನು ಪ್ರತಿಬಿಂಭಿಸುತ್ತವೆಂದರ್ಥವಲ್ಲ. ಪದಗಳು/ಶಬ್ದಗಳು ಮತ್ತು ವಿಷಯಾಂಶಗಳು ಪರಿಸ್ಥಿತಿಗಳಿಗೆ

ಸಂಬಂಧಿಸಿದವುಗಳಾಗಿವೆ. 2 ನೇ ಪೇತ್ರ ಪತ್ರಿಕೆಯು ತಿಳಿಸುವ ಸಂಗತಿಗಳು ಪೌಲನ ಜೀವನ ಮತ್ತು ಪತ್ರಿಕೆಗಳಲ್ಲಿಯೂ ಕಾಣಬರುತ್ತದೆ. ಹಾಗಾಗಿ ಅವು ಸಭೆಗೆ ಪ್ರಾಮುಖ್ಯ ಮತ್ತು ಸಮಂಜಸವೆನಿಸಿದರೂ ಸಹ ಅವು ನಂತರದ ಸಮಯಕ್ಕೆ ಸಂಬಂಧಿಸಬೇಕಾದ ಅಗತ್ಯವಿಲ್ಲ. ಆದರೆ ಪರಿಸ್ಥಿತಿಗಳು ಖಂಡಿತವಾಗಿಯೂ ವಿಶೇಷವೆನಿಸುತ್ತವೆ.

3. ಪೌಲನ ಎಲ್ಲಾ ಪತ್ರಿಕೆಗಳು ಈ ಸಮಯದಲ್ಲಿ ಬರೆಯಲ್ಪಟ್ಟಿದ್ದವು ಮತ್ತು ಅವುಗಳಲ್ಲಿ ಹೆಚ್ಚಿನವುಗಳು ರೋಮನ್ ಸಾಮ್ರಾಜ್ಯದಲ್ಲಿನ ಸಭೆಗಳಲ್ಲಿ ಉಪಯೋಗಿಸಲ್ಪಡುತ್ತಿದ್ದವೆಂಬುದನ್ನು ನಾವು ಊಹಿಸಬಹುದು.

ಮುಕ್ತಾಯದಲ್ಲಿ ಪತ್ರಿಕೆಯ ಪ್ರಾರಂಭಿಕ ವಾಕ್ಯವನ್ನು ನಾವು ವಾಸ್ತವಿಕ ಹೇಳಿಕೆಯೆಂದು ಭರವಸೆಯಿಂದ ಒಪ್ಪಬಹುದು. ಯೇಸು ಕ್ರಿಸ್ತನ ಶಿಷ್ಯನಾದ ಪೇತ್ರನೇ 2 ನೇ ಪೇತ್ರ ಪತ್ರಿಕೆಯ ಗ್ರಂಥಕರ್ತನಾಗಿದ್ದಾನೆ. ಆತನು ಕ್ರಿಸ್ತನ ಅತೀ ಸಮೀಪ ಶಿಷ್ಯವೃಂದಕ್ಕೆ ಸೇರಿದವನಾಗಿದ್ದು– ರೂಪಾಂತರ ಬೆಟ್ಟದಲ್ಲಿ ಸಹ ಉಪಸ್ಥಿತನಿದ್ದನು (1:16–18, ಮತ್ತಾಯ 17:1–9). ಇವನು ಈ ಪತ್ರಿಕೆಯನ್ನು ಆತನ ಮರಣಕ್ಕಿಂತ ತುಸು ಮುನ್ನ ಬರೆದನು (1:14). ಪೇತ್ರನು ಸರಿಸುಮಾರು ಕ್ರಿ.ಶ. 65 ರಲ್ಲಿ ನಿರೋ ಚಕ್ರವರ್ತಿಯ ನೇತೃತ್ವದ ಹಿಂಸೆಯ ಸಮಯದಲ್ಲಿ ರೋಮ್‌ನಲ್ಲಿ ರಕ್ತಸಾಕ್ಷಿಯಾದನು.

## ಓದುಗರು/ಸ್ವೀಕೃತರು

ಈ ಪತ್ರಿಕೆಯು ಯಾರಿಗೆ ಬರೆಯಲ್ಪಟ್ಟಿದೆಯೆಂಬುದನ್ನು ಸ್ಪಷ್ಟವಾಗಿ ತಿಳಿಸುವುದಿಲ್ಲ. ಆದರೆ ಪ್ರಾರಂಭಿಕ ವಚನದಲ್ಲಿ– ಇದರ ಓದುಗರು ಪೇತ್ರನ ಕ್ರೈಸ್ತ ನಂಬಿಕೆಯನ್ನು ಹಂಚಿಕೊಂಡವರೆಂಬುದನ್ನು ತೋರಿಸುವ ಸಾಮಾನ್ಯ ಹೇಳಿಕೆಯಲ್ಲಿ ಕಾಣಬಹುದು. 3:1 ರಲ್ಲಿ ಸಹ ನಾವು ಒಂದು ಮಾಹಿತಿಯ ತುಣಕನ್ನು ಕಾಣಬಹುದು: “ಪ್ರೀಯರೇ ನಿಮಗೀಗ ಬರೆಯುವದು ಎರಡನೇಯ ಪತ್ರಿಕೆ”. ಒಂದು ವೇಳೆ ಈ ಹೇಳಿಕೆಯಿಂದ ನಮ್ಮ ಸತ್ಯವೇದದಲ್ಲಿ ಪೇತ್ರನು 1 ನೇ ಪೇತ್ರ ಪತ್ರಿಕೆಯನ್ನು ಸೂಚಿಸಿ ಹೇಳುತ್ತಿದ್ದಾನೆಂದು ಪರಿಗಣಿಸಿದರೆ ಆಗ ನಾವು ಓದುಗರು ಮುಖ್ಯವಾಗಿ ರೋಮನ ನಾಲ್ಕು ಪ್ರಾಂತ್ಯಗಳಾದ ಪೋಂತ್ಯ, ಬಿಥೂನ್ಯ, ಗಲಾತ್ಯ ಮತ್ತು ಏಷ್ಯಗಳಲ್ಲಿನ (1 ಪೇತ್ರ 1:1) ಅನ್ಯ ಹಿನ್ನಲೆಯಿಂದ ಬಂದ ವಿಶ್ವಾಸಿಗಳಾಗಿರಬಹುದೆಂದು ನಾವು ಊಹಿಸಬಹುದು.

## ಪತ್ರಿಕೆಯ ಸಂದೇಶ

ಪೇತ್ರನು ತನ್ನ ಈ ಪತ್ರಿಕೆಯನ್ನು ಸಭೆಯೊಳಗೆ ಸುಳ್ಳುಬೋಧಕರನ್ನು ಎದುರಿಸುತ್ತಿರುವ ಸಭೆಗಳಿಗೆ ಬರೆಯುತ್ತಾನೆ. ಇದು ಎಫೆಸದ ಹಿರಿಯರಿಗೆ ಪೌಲನ ಬಿಳ್ಕೊಡುಗೆಯ ಮಾತನ್ನು ತಿಳಿಯಪಡಿಸುತ್ತದೆ. (ನೆನಪಿಡಿರಿ– ಎಫೆಸವು ಅಸ್ಯಸೀಮೆಯ ರೋಮ್ ಪ್ರಾಂತ್ಯದ ರಾಜಧಾನಿಯಾಗಿತ್ತು). “ನಾನು ಹೋದ ಮೇಲೆ ಕ್ರೂರವಾದ ತೋಳಗಳು ನಿಮ್ಮೊಳಗೆ ಬರುವವೆಂದು ನಾನು ಬಲ್ಲೆನು, ಅವು ಹಿಂಡನ್ನು ಕನಿಕರಿಸುವುದಿಲ್ಲ. ಇದಲ್ಲದೇ ನಿಮ್ಮಲ್ಲಿಯೂ ಕೆಲವರು ಎದ್ದು ವ್ಯತ್ಯಾಸ ಬೋಧನೆಗಳನ್ನು ಮಾಡಿ ಯೇಸುವಿನ ಶಿಷ್ಯರನ್ನು ತಮ್ಮ ಹಿಂದೆ ಎಳಕೊಳ್ಳುವರು” (ಅ.ಕೃ. 20:29–30). ಈಗ ಆ ಕ್ರೂರವಾದ ತೋಳಗಳು ಬಂದಿವೆ. ಅವರು ವಿಶ್ವಾಸಿಗಳನ್ನು ಹಾದಿತಪ್ಪಿಸುತ್ತಿದ್ದರು ಮತ್ತು ಅನ್ಯರ ನಡುವೆ ಕ್ರೈಸ್ತ ಸಭೆಯ ಹೆಸರನ್ನು ಸಹ ಹಾಳುಮಾಡುತ್ತಿದ್ದರು. ಪೇತ್ರನು ಈ ಸಮಸ್ಯೆಯೊಂದಿಗೆ ಈ

ರೀತಿ ವ್ಯವಹರಿಸುತ್ತಾನೆ: ಮೊದಲ ಅಧ್ಯಾಯದಲ್ಲಿ ಆತನು ಕ್ರೈಸ್ತೀಯ ಅಭಿವೃದ್ಧಿ ಮತ್ತು ಬೆಳವಣಿಗೆಯನ್ನು ಉತ್ತೇಜಿಸಲು ನಂಬಿಕೆಯ ವಿಶ್ವಾಸಿಗಳಿಗೆ ಜ್ಞಾಪಕ ಪಡಿಸುತ್ತಾನೆ. ಎರಡನೆಯ ಅಧ್ಯಾಯದಲ್ಲಿ ಆತನು ಸುಳ್ಳುಬೋಧಕರನ್ನು ವರ್ಣಿಸುತ್ತಾನೆ ಮತ್ತು ಖಂಡಿಸುತ್ತಾನೆ. ಕೊನೆಯದಾಗಿ ಮೂರನೇ ಅಧ್ಯಾಯದಲ್ಲಿ ಯೇಸು ಕ್ರಿಸ್ತನ ಎರಡನೇ ಬರೋಣವನ್ನು ಖಚಿತಪಡಿಸುತ್ತಾನೆ, ಅಲ್ಲಿಂದ ಹಾಗೆಯೇ ಸಭೆಯಲ್ಲಿ ಸಮಸ್ಯೆಯನ್ನು ಸೃಷ್ಟಿಸಿದ ಒಂದು ಸಂಗತಿಯ ಕುರಿತು ತಿಳಿಸುತ್ತಾನೆ.

## ಪ್ರಶ್ನೆಗಳು

1. 2 ನೇ ಪೇತ್ರ ಪತ್ರಿಕೆಯು ಪೇತ್ರನಿಂದ ಬರೆಯಲ್ಪಟ್ಟಿದೆ ಎಂಬುದನ್ನು ಅನೇಕ ಸತ್ಯವೇದ ಪಂಡಿತರು ಒಪ್ಪದೇ ಇರುವದಕ್ಕೆ 3 ಕಾರಣಗಳನ್ನು ವಿವರಿಸಿರಿ.
2. ಈ ಸತ್ಯವೇದ ಪಂಡಿತರನ್ನು ನೀವು ಹೇಗೆ ಖಂಡಿಸುವಿರಿ?
3. ಪೇತ್ರನು ಈ ಪತ್ರಿಕೆಯನ್ನು ಯಾವಾಗ ಮತ್ತು ಎಲ್ಲಿಂದ ಬರೆದನೆಂದು ನೀವು ಯೋಚಿಸುವಿರಿ? ಕಾರಣಗಳನ್ನು ಕೊಡಿರಿ.
4. ಯಾಕೆ ಈ ಪತ್ರಿಕೆಯನ್ನು ಪೇತ್ರನು ಬರೆದನು?

# ಪೇತ್ರನು ಬರೆದ ಎರಡನೆಯ ಪತ್ರಿಕೆಯನ್ನು ಓದುವದು

## ಪರಿಚಯ

2 ನೇ ಪೇತ್ರದಲ್ಲಿರುವ ವಿವಿಧ ವಾಕ್ಯಭಾಗಗಳನ್ನು ಸಹಿತವಾಗಿ ನಾವು ಅಭ್ಯಾಸಿಸುವುದಕ್ಕಿಂತ ಮುನ್ನ ಸಂಪೂರ್ಣವಾದ ಈ ಪುಸ್ತಕಕ್ಕಾಗಿ ಇದರ ಬರವಣಿಗೆಯ ಶೈಲಿ, ಇದರಲ್ಲಿ ಬಳಸಿದ ಶಬ್ದಗಳು, ಮುಖ್ಯ ವಿಷಯಗಳು, ಇದರ ವಾದದ ಶೈಲಿ ಇವುಗಳಿಗಾಗಿ ನೀವೊಂದು ಭಾವನೆಯನ್ನು ಹೊಂದಬೇಕು. ಇದನ್ನು ಸಾಧಿಸಲು ಒಂದು ಅವಧಿಯಲ್ಲಿ ನೀವು ಇಡೀ ಈ ಪುಸ್ತಕವನ್ನು ಪ್ರಾರಂಭದಿಂದ ಕೊನೆಯವರೆಗೂ ಓದಬೇಕು.

ಎರಡು ಅಥವಾ ಮೂರು ಜನರ ಗುಂಪಿನಲ್ಲಿ ಇದನ್ನು ಮಾಡಿರಿ. ಇಡೀ ಪುಸ್ತಕವನ್ನು ಓದಿರಿ, ಓದಿ ಆದ ನಂತರ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿರಿ. ಸಂಪೂರ್ಣ ವಿವರಗಳ ಬಗ್ಗೆ ತಲೆಕೆಡಿಸಿಕೊಳ್ಳಬೇಡಿರಿ ಮತ್ತು ನಿಮಗೆ ಅರ್ಥವಾಗದೇ ಇರುವ ವಿಷಯದಲ್ಲಿ ಸಿಕ್ಕಿಹಾಕಿಕೊಳ್ಳಬೇಡಿರಿ.

## ಪ್ರಶ್ನೆಗಳು

1. ಕಡೇ ಪಕ್ಷ ಪ್ರತಿ ಮೂರು ಅಧ್ಯಾಯಗಳಿಂದ ಎರಡು ಸಂಗತಿ/ವಿಷಯಗಳನ್ನಾದರೂ ಪಟ್ಟಿಮಾಡಿರಿ.
2. ಹೆಚ್ಚಿನ ಜನರು 2ನೇ ಪೇತ್ರ ಪತ್ರಿಕೆಯು ಬಹಳ ಸವಾಲಿನಿಂದ ಕೂಡಿದೆ ಎನ್ನುವರು. ನೀವು ವೈಯಕ್ತಿಕವಾಗಿ ಕಾಣುವ 2–3 ಸವಾಲುಗಳನ್ನು ಪಟ್ಟಿಮಾಡಿರಿ.
3. ಅನೇಕರು 2ನೇ ಪೇತ್ರ ಓದಲು ಬಹಳ ಕಷ್ಟಕರ ಎನ್ನುವರು. ಓದುವಾಗ ಯಾವ ಕಷ್ಟಗಳನ್ನು ನೀವು ಕಾಣುವಿರಿ?
4. ಈ ಪುಸ್ತಕದ ದಾಟಿ ಅಥವಾ ಭಾವವನ್ನು (ಭಾವನೆ) ನೀವು ಹೇಗೆ ವಿವರಿಸುವಿರಿ? ಕೆಲವು ಮುಖ್ಯ ಪದಗಳನ್ನು ಪಟ್ಟಿಮಾಡಿರಿ.
5. ಹೇಗೂ ನೀವು ಕೆಲವು ಗಲಿಬಿಲಿಯನ್ನುಂಟುಮಾಡುವ ಅಥವಾ ಅರ್ಥೈಸಿಕೊಳ್ಳಲು ಕ್ಲಿಷ್ಟಕರವೆನಿಸುವ ಕೆಲವು ಹೇಳಿಕೆ ಅಥವಾ ಸಿದ್ಧಾಂತಗಳನ್ನು ಇದರಲ್ಲಿ ಹಾದು ಹೋಗಿರಬಹುದು ಮತ್ತು ನೀವು ಅವುಗಳನ್ನು ಬಗೆಹರಿಸುವ ಬಯಸುವವರಾಗಿದ್ದೀರಿ. ಆ ಹೇಳಿಕೆ ಅಥವಾ ಸಿದ್ಧಾಂತಗಳ ಪಟ್ಟಿಮಾಡಿರಿ.

# ಅಧ್ಯಯನ 13. ವಂದನೆ, 1:1–2

## ಪರಿಚಯ

ತನ್ನ ಪತ್ರಿಕೆಗೆ ಚಿಕ್ಕದಾದ ಪೀಠಿಕೆಯಲ್ಲಿ ಗ್ರಂಥಕರ್ತನು ತಾನು ಯಾರೆಂದು ತಿಳಿಸಿ ಯಾರಿಗೆ ಬರೆಯುತ್ತಿರುವೆನೆಂತಲು ವರ್ಣಿಸುತ್ತಾ ಮತ್ತು ಅವರ ಮೇಲೆ ತನ್ನ ಆಶೀರ್ವಾದವನ್ನು ಕೋರುತ್ತಾನೆ.

## ಓದಿರಿ

2 ಪೇತ್ರ 1:1–2

## ಪ್ರಶ್ನೆಗಳು

1. ವಚನ. 3 ರಲ್ಲಿನ ಮುಖ್ಯ ಪದ 'ಶಕ್ತಿ' ಮತ್ತು ವಚನ 4 ರಲ್ಲಿನ ಮುಖ್ಯ ಪದ 'ವಾಗ್ದಾನಗಳು', ಹಾಗಾದರೆ 'ಯೇಸು ಕ್ರಿಸ್ತನ ಶಕ್ತಿ' ಮತ್ತು 'ವಾಗ್ದಾನಗಳ' ಬಗ್ಗೆ ನಾವು ಈ ವಚನಗಳಲ್ಲಿ ಏನನ್ನು ಕಲಿಯುತ್ತೇವೆ? ಸಾಧ್ಯವಾದಷ್ಟು ನಿಮ್ಮ ಸ್ವಂತ ವಾಕ್ಯಗಳಲ್ಲಿ ವಿವರಿಸಿರಿ.
2. ನಮಗೆ ಜೀವಕ್ಕೂ ಭಕ್ತಿಗೂ ಬೇಕಾಗಿರುವುದೆಲ್ಲವನ್ನು ದೇವರು ಕೊಟ್ಟಿದ್ದಾನೆಂದು ಪೇತ್ರನು ಬರೆಯುತ್ತಾನೆ (ವ.3) ಈ 'ಭಕ್ತಿ' ಎಂಬ ಮಾತನ್ನು ನಿಮ್ಮ ಒಬ್ಬ ಅಕ್ರೈಸ್ತ ಸ್ನೇಹಿತ ಅಥವಾ ನೆರೆಯವನು ಹೇಗೆ ಅರ್ಥೈಸಿಕೊಳ್ಳುವನೆಂದು ನೀವು ಯೋಚಿಸುವಿರಿ?
3. ಈ ವಾಕ್ಯಭಾಗವನ್ನು ಓದಿರಿ (ವ. 3–11) ಮತ್ತು ಪೇತ್ರನು ಭಕ್ತಿಯ ಬಗ್ಗೆ ಏನೆಂದು ಹೇಳುತ್ತಾನೆಂಬ ಒಂದು ಪಟ್ಟಿಯನ್ನು ಮಾಡಿರಿ. ಇದು ಸ್ವಲ್ಪ ಉದ್ದವಾಗಬಹುದು.
4. ಪೇತ್ರನು ವ. 4 ರಲ್ಲಿ ದೇವರ ವಾಗ್ದಾನಗಳ ನಿಮಿತ್ತ ವಿಶ್ವಾಸಿಗಳಾದ ನಾವು ಲೋಕದಲ್ಲಿ ದುರಾಶೆಯಿಂದುಂಟಾದ ಕೆಟ್ಟತನಕ್ಕೆ ತಪ್ಪಿಸಿಕೊಂಡು ದೈವಸ್ವಭಾವದಲ್ಲಿ ಪಾಲನ್ನು ಹೊಂದುವವರಾಗಬೇಕೆಂಬ ಉದ್ದೇಶದಿಂದ ಎಂದು ಬರೆಯುತ್ತಾನೆ. ನಮ್ಮ ಪವಿತ್ರ ಜೀವವನ್ನು ವೃದ್ಧಿಪಡಿಸಿಕೊಳ್ಳಲು ನಾವು ಏನನ್ನು ಮಾಡಬೇಕೆಂದು ಆತನು ಅಪೇಕ್ಷಿಸುತ್ತಾನೆ?
5. ಯೇಸು ಕ್ರಿಸ್ತನ ಕುರಿತಾದ ಪರಿಜ್ಞಾನ ಮತ್ತು ಭಕ್ತಿಯುತ ಜೀವನವು ಒಂದಕ್ಕೊಂದು ಹೇಗೆ ಸಂಬಂಧಿಸುತ್ತವೆ (ವ.8–9)?
6. ಒಬ್ಬ ಮನುಷ್ಯನು ದೇವರಿಂದ ಕರೆಯಲ್ಪಡುವುದು ಮತ್ತು ಆವರಿಸಲ್ಪಡುವದು ಎಂಬುದರ ಅರ್ಥವೇನೆಂದು ನೀವು ಯೋಚಿಸುವಿರಿ (ವ.10–11)? ನಿಮ್ಮ ಮುಕ್ತಾಯಕ್ಕೆ ಕಾರಣಗಳನ್ನು ಕೊಡಿರಿ.
7. ಈ ಹಿಂದಿನ ಪ್ರಶ್ನೆಗೆ ನಿಮ್ಮ ಉತ್ತರದ ಬೆಳಕಿನಡಿಯಲ್ಲಿ ಪೇತ್ರನ ನಿಮ್ಮನ್ನು ಕರೆದದ್ದನ್ನು, ಆಯ್ದುಕೊಂಡದ್ದನ್ನು ನೀವು ದೃಢಪಡಿಸಿಕೊಳ್ಳಿರಿ (ವ.10) ಎಂಬ ಪ್ರಬೋಧನೆಯನ್ನು (ಎಚ್ಚರಿಕೆಯನ್ನು) ನೀವು ಹೇಗೆ ಅರ್ಥೈಸಿಕೊಳ್ಳುವಿರಿ?

8. ಈ ಪ್ರಬೋಧನೆ/ಎಚ್ಚರಿಕೆಗಳನ್ನು ಕಂಡುಕೊಳ್ಳುವವರಿಗೆ ಇರುವ ವಾಗ್ದಾನಗಳು ಯಾವುವು (ವ.10–11)?



*ದೇವರ ಮತ್ತು ನಮ್ಮ ರಕ್ಷಕನಾದ ಯೇಸು ಕ್ರಿಸ್ತನ ನೀತಿಯಿಂದ ನಮ್ಮೊಂದಿಗೆ ಅಮೂಲ್ಯವಾದ ನಂಬಿಕೆಯನ್ನು ಹೊಂದಿದವರಿಗೆ ಬರೆಯುವುದು: ದೇವರ ವಿಷಯವಾಗಿಯೂ ನಮ್ಮ ಕರ್ತನಾದ ಯೇಸುವಿನ ವಿಷಯವಾಗಿಯೂ ಪರಿಜ್ಞಾನ ನಿಮಗೆ ಉಂಟಾಗುವುದರಲ್ಲಿ ಕೃಪೆಯೂ ಶಾಂತಿಯೂ ಹೆಚ್ಚು ಹೆಚ್ಚಾಗಿ ದೊರೆಯಲಿ (2 ಪೇತ್ರ 1:2–3)*

# ಅಧ್ಯಯನ 14. ನಿಮ್ಮ ಕರೆಯುವಿಕೆಯನ್ನೂ ಆಯ್ಕೆಯನ್ನೂ ದೃಢಪಡಿಸಿಕೊಳ್ಳಿರಿ, 1:3–11

## ಪರಿಚಯ

ಇದೊಂದು ಶ್ರೀಮಂತ ವೇದಭಾಗವಾಗಿದೆ. ಅದು ನಂಬಿಕೆಯನ್ನು (ಅಂದರೆ ಆತನ ಕುರಿತಾದ ಜ್ಞಾನವನ್ನು ಅಥವಾ ಆತನೊಟ್ಟಿಗಿನ ವೈಯಕ್ತಿಕ ಸಂಬಂಧವನ್ನು) ದೈವಭಕ್ತಿಯೊಂದಿಗೆ ಅಥವಾ ದೇವರಿಗೆ ಭಯಪಡುವ ಜೀವನವನ್ನು ಹೇಗೆ ಜೀವಿಸಬೇಕೆಂಬುದಕ್ಕೆ ಕೂಡಿಸುತ್ತಾನೆ. ಯೇಸುವನ್ನು ವೈಯಕ್ತಿಕವಾಗಿ ತಿಳಿದುಕೊಳ್ಳುವಾಗ ಸದ್ಗುಣ, ದಮೆ, ತಾಳ್ಮೆ, ಸಹೋದರ ಸ್ನೇಹ ಮತ್ತು ಪ್ರೀತಿಗಳೆಂಬ ಫಲವನ್ನು ಕೊಡುವವರಾಗುತ್ತೇವೆ. ಈ ಕ್ರಿಸ್ತೀಯ ಸದ್ಗುಣಗಳು ನಾವು ಯೇಸುವಿಗೆ ಸಂಬಂಧಪಟ್ಟವರು ಎಂಬುದನ್ನು ನಮ್ಮ ಸ್ನೇಹಿತರಿಗೂ ನೆರೆಹೊರೆಯವರಿಗೂ ತೋರಿಸುತ್ತದೆ.

## ಓದಿರಿ

2 ಪೇತ್ರ 1:3–11

## ಪ್ರಶ್ನೆಗಳು

1. ವಚನ 3 ರಲ್ಲಿರುವ ಮುಖ್ಯ ಪದವು 'ಶಕ್ತಿ' ಎಂಬುದಾಗಿದೆ ಮತ್ತು ವಚನ 4 ರಲ್ಲಿರುವ ಮುಖ್ಯ ಪದವು 'ವಾಗ್ದಾನಗಳು' ಎಂಬುದಾಗಿದೆ. ಹಾಗಾಗಿ ಈ ವಚನಗಳಲ್ಲಿ ಯೇಸುವಿನ 'ಶಕ್ತಿ' ಮತ್ತು 'ವಾಗ್ದಾನಗಳ' ಕುರಿತು ಏನನ್ನು ಕಲಿಯುತ್ತೇವೆ? ಸಾಧ್ಯವಾದಷ್ಟು ನಿಮ್ಮ ಸ್ವಂತ ಪದಗಳನ್ನು ಬಳಸಿರಿ.
2. *ಜೀವಕ್ಕೂ ಭಕ್ತಿಗೂ ಬೇಕಾದದ್ದೆಲ್ಲವುಗಳನ್ನು ನಮಗೆ ದಯಪಾಲಿಸಿದ್ದಾನೆ* ಎಂದು ಪೇತ್ರನು ಬರೆಯುತ್ತಾನೆ (ವ. 3). ಒಬ್ಬ ಅಕ್ರೈಸ್ತನು ಅಥವಾ ನೆರೆಯವನು ದೈವಭಕ್ತಿ ಎಂಬ ಪದವನ್ನು ಹೇಗೆ ಅರ್ಥಮಾಡಿಕೊಳ್ಳುತ್ತಾನೆ ಎಂದು ನಿಮಗೆ ಅನ್ನಿಸುತ್ತದೆ?
3. ಈ ವಾಕ್ಯಭಾಗವನ್ನು ಓದಿ (ವ. 3–11) ದೈವಭಕ್ತಿಯ ಕುರಿತು ಪೇತ್ರನು ಹೇಳುವುದರ ಒಂದು ಪಟ್ಟಿಯನ್ನು ಮಾಡಿರಿ. ಒಂದು ಉದ್ದವಾದ ಪಟ್ಟಿಯಾಗಬಹುದು!
4. ದೇವರ ವಾಗ್ದಾನಗಳ ನಿಮಿತ್ತ ವಿಶ್ವಾಸಿಗಳಾದ ನಾವು *ಲೋಕದಲ್ಲಿ ದುರಾಶೆಯಿಂದುಂಟಾದ ಕೆಟ್ಟತನಕ್ಕೆ ತಪ್ಪಿಸಿಕೊಂಡು ದೈವಸ್ವಭಾವದಲ್ಲಿ ಪಾಲನ್ನು ಹೊಂದುವವರಾಗಬೇಕೆಂದು* ಪೇತ್ರನು ವಚನ 4 ರಲ್ಲಿ ಹೇಳುತ್ತಾನೆ. ನಮ್ಮ ಸ್ವಂತ ಪವಿತ್ರ ಜೀವನವನ್ನು ಬೆಳೆಸಲು ನಾವು ಏನು ಮಾಡಬೇಕೆಂದು ನಿರೀಕ್ಷಿಸುತ್ತಾನೆ?
5. ಯೇಸುವಿನ ಕುರಿತಾದ ಜ್ಞಾನವು ಮತ್ತು ದೈವಭಕ್ತಿಯು ಒಂದಕ್ಕೊಂದು ಹೇಗೆ ಸಂಬಂಧಿಸಿದೆ (ವ. 8–9)?

6. ಒಬ್ಬ ವ್ಯಕ್ತಿಯು ದೇವರಿಂದ ಆರಿಸಲ್ಪಟ್ಟಿದ್ದಾನೆ ಮತ್ತು ಕರೆಯಲ್ಪಟ್ಟಿದ್ದಾನೆ ಎಂಬುದರ ಅರ್ಥವೇನಿರಬಹುದೆಂದು ನಿಮಗೆ ಅನ್ನಿಸುತ್ತದೆ (ವ. 10–11)? ನಿಮ್ಮ ಸಮಾರೋಪಗಳಿಗೆ ಕಾರಣ ಕೊಡಿರಿ.

7. ಹಿಂದಿನ ಪ್ರಶ್ನೆಯ ಉತ್ತರದ ಬೆಳಕಿನಲ್ಲಿ *ನಿಮ್ಮ ಕರೆಯುವಿಕೆಯನ್ನೂ ಆಯ್ಕೆಯನ್ನೂ ದೃಢಪಡಿಸಿಕೊಳ್ಳುವುದಕ್ಕೆ ಜಾಗ್ರತೆಯಾಗಿರಿ* (ವ. 10) ಪೇತ್ರನ ಪ್ರಬೋಧನೆಯನ್ನು ಹೇಗೆ ಅರ್ಥಮಾಡಿಕೊಳ್ಳುತ್ತೀರಿ?

8. ಈ ಪ್ರಬೋಧನೆಯನ್ನು ಪಾಲಿಸುವವರಿಗೆ ಯಾವ ವಾಗ್ದಾನಗಳು ಮಾಡಲ್ಪಟ್ಟಿವೆ (ವ. 10–11)?

# ಅಧ್ಯಯನ 15. ಸಾಕ್ಷಿಗಳನ್ನು ಜ್ಞಾಪಿಸಿಕೊಳ್ಳಿರಿ, 1:12–21

## ಪರಿಚಯ

ಪೇತ್ರನ ಎರಡನೇ ಪತ್ರಿಕೆಯು ಆತನ ಜೀವನದ ಅಂತ್ಯ ದಿನಗಳಲ್ಲಿ/ಆಸುಪಾಸಿನಲ್ಲಿ ಬರೆಯಲ್ಪಟ್ಟಿದೆ. ಇದು ಓದುಗರಿಗೆ ತನ್ನ ಕೊನೆಯ ಪತ್ರಿಕೆಯೆಂಬುದನ್ನು ಆತನು ಅರಿತಿದ್ದನು. ಆದ್ದರಿಂದ ಅವರ ನಂಬಿಕೆಯ ಬಗ್ಗೆ ಅವರನ್ನು ಆತನು ಜ್ಞಾಪಕಪಡಿಸುತ್ತಾನೆ. ಅಷ್ಟೇ ಅಲ್ಲದೇ ಆತನು ಅವರನ್ನು ಕೆಲವು ವಾಕ್ಯಭಾಗಗಳಿಗೆ, ಸಾಕ್ಷಿಗಳೆಡೆಗೆ ಮಾರ್ಗದರ್ಶಿಸುತ್ತಾನೆ. ಯಾಕೆಂದರೆ ಅವು ಅವರಿಗೆ ನಂಬಿಕೆಯಲ್ಲಿ ಮುಂದುವರಿಯಲು ಸಹಾಯಕವಾಗಲೆಂದು.

## ಓದಿರಿ

2 ಪೇತ್ರ 1:12–21

## ಪ್ರಶ್ನೆಗಳು

1. ಪೇತ್ರನು ತನ್ನ ಸ್ವಂತ ಭವಿಷ್ಯದ ಬಗ್ಗೆ ಏನೆಂದು ತಿಳಿದಿದ್ದನು ಮತ್ತು ಈ ತಿಳುವಳಿಕೆಗೆ ಆತನು ಹೇಗೆ ಬಂದನು?
2. ಮರಣವನ್ನು ವರ್ಣಿಸಲು ಪೇತ್ರನು ಯಾವ ಅಲಂಕಾರಿಕ ಹೇಳಿಕೆಯನ್ನು ಉಪಯೋಗಿಸುತ್ತಾನೆ (ವ.12–15)? ಅವು ಹೇಗೆ ಅರ್ಥೈಸಿಲ್ಪಡಬೇಕೆಂದು ವಿವರಿಸಿರಿ.
3. ಮೇಲ್ಕಂಡ ಪ್ರಶ್ನೆಗೆ ನಿಮ್ಮ ಉತ್ತರವನ್ನು ನೋಡಿ. ಸ್ವತಃ ತನ್ನ ಮರಣದೆಡೆಗೆ ಪೇತ್ರನ ಮನೋಭಾವನೆಯನ್ನು ನೀವು ಹೇಗೆ ವರ್ಣಿಸುವಿರಿ?
4. ವ.12–15 ರಲ್ಲಿ ಒಂದು ಮುಖ್ಯ ಪದ (ಸಂಗತಿಯು) 3 ಬಾರಿ ಕಂಡುಬರುತ್ತದೆ. ಆ ಪದ ಯಾವುದು? ಇದರ ಪುನರಾವರ್ತನೆಯ ಪ್ರಾಮುಖ್ಯತೆಯೇನಿರಬಹುದು?
5. ವ.12–15 ರಿಂದ ಪೇತ್ರನ ಸಭಾಪಾಲಕತ್ವದ ಕಾಳಜಿಯ ಬಗ್ಗೆ ಯಾವ ಮುಕ್ತಾಯವನ್ನು ನೀವು ಹೊರತರುವಿರಿ?
6. "ನಿಮ್ಮನ್ನು ಜ್ಞಾಪಕಪಡಿಸಿ ಪ್ರೇರಿಸುವದು ಯುಕ್ತವೆಂದೆಣಿಸುತ್ತೇನೆ" (ವ.13) ಎಂದು ಪೇತ್ರನು ಬರೆಯುತ್ತಾನೆ. ಆತನ ಓದುಗರಿಗೆ ಏನನ್ನು ಆತನು ನೆನಪಿಸುತ್ತಾನೆ (ವ.16–21)?
7. 1:16–18 ರಲ್ಲಿ ಮತ್ತು ಮತ್ತಾಯ 17:1–8 ರಲ್ಲಿ ಪೇತ್ರನು ಯೇಸು ಕ್ರಿಸ್ತನ ರೂಪಾಂತರದ ಕುರಿತು ತಿಳಿಸುತ್ತಾನೆ. ಈ ಎರಡು ವಾಕ್ಯಭಾಗಗಳನ್ನು ಉಪಯೋಗಿಸಿ ಮತ್ತು ಯಾವ ವಿಧದಲ್ಲಿ ಈ ಘಟನೆಯು ಯೇಸು ಕ್ರಿಸ್ತನ ಮಹಿಮೆಯನ್ನು ಪ್ರಕಟಪಡಿಸುತ್ತದೆಂಬುದನ್ನು ಪಟ್ಟಿಮಾಡಿರಿ.
8. ಯೇಸು ಕ್ರಿಸ್ತನ ಕುರಿತಾದ ಪೇತ್ರನ ಬೋಧನೆಗಳು *ಆತನ ಮಹತ್ತನ್ನು ಕಣ್ಣಾರೆ ಕಂಡ* ವ್ಯಕ್ತಿಯಿಂದ ಬಂದಿದೆ ಎಂದು ತಿಳಿದವರಿಗೆ ಹೇಗೆ ವ್ಯತ್ಯಾಸವೆನಿಸಬಹುದು?

9. ವಚನ 19–21 ರಲ್ಲಿ ಪೇತ್ರನು ರೂಪಾಲಂಕಾರಗಳನ್ನು ಉಪಯೋಗಿಸುತ್ತಾನೆ. ಅವು ಯಾವುವು ಮತ್ತು ಅವನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ?

10. 1:19–21 ಹಳೆ ಒಡಂಬಡಿಕೆಯ ಮೂಲ (ಉಗಮ)ದ ಬಗ್ಗೆ ಏನೆಂದು ತೋರಿಸುತ್ತವೆ?

11. ನಮ್ಮ ಬೋಧನೆ ಮತ್ತು ಸುವಾರ್ತೆ ಸೇವೆಗಳಿಗಾಗಿನ ಅಧ್ಯಯನದಿಂದ ಆ ದಿನ ದಕ್ಷಿಣ ಭಾರತದಲ್ಲಿ ನಾವು ಏನೆಂದು ಬೋಧಿಸಬಹುದು ಮತ್ತು ಪ್ರಸಂಗಿಸಬಹುದು? ಇದನ್ನು ಪಟ್ಟಿಮಾಡಿರಿ ಮತ್ತು ನಿಮ್ಮ ಕಾರಣಗಳನ್ನು ಕೊಡಿರಿ.

# ಅಧ್ಯಯ 16. ಸುಳ್ಳುಬೋಧಕರ ಕುರಿತು ಎಚ್ಚರದಿಂದಿರಿ, 2:1–9

## ಪರಿಚಯ

ಧರ್ಮ ಮತ್ತು ಸಾಂಸ್ಕೃತಿಕ ಪರಂಪರೆಯ ಭಾಗವಾಗಿರುವ ದೇಶದಲ್ಲಿ ನಾವು ವಾಸಿಸುತ್ತಿದ್ದೇವೆ. ಒಂದು ಪಕ್ಷ ನಾವು ಹಿಂದೂ ಸಮುದಾಯಕ್ಕೆ ಸೇರಿದವರಾಗಿದ್ದೇವೆ ಅಥವಾ ಬೇರೊಂದು ಸಮುದಾಯಕ್ಕೆ ಸೇರಿದವರಾಗಿದ್ದೇವೆ. ಇದು ಮುಸ್ಲಿಮ್, ಕ್ರೈಸ್ತ, ಸಿಖ್, ಬೌದ್ಧ ಅಥವಾ ಯಾವುದೇ ಆಗಿರಬಹುದು.

ಅಷ್ಟೇ ಅಲ್ಲದೇ ಯಾವುದೇ ನಂಬಿಕೆಯು ನಿಮಗೆ ಆದರಣೆಯನ್ನು ಕೊಡುತ್ತದೋ ಅಥವಾ ನಿಮ್ಮನ್ನು ಸಂತೋಷಿತರನ್ನಾಗಿ ಮಾಡುತ್ತದೋ ಅದೇ ಧರ್ಮವಾಗಿದೆ ಎಂದು ಯೋಚಿಸುವ 'ಆಧುನಿಕ' ಮತ್ತು 'ಲೌಕಿಕ' ಜನರ ಯುಗದಲ್ಲಿ ನಾವು ಜೀವಿಸುತ್ತೇವೆ.

ಹೆಚ್ಚುವರಿಯಾಗಿ– ದಕ್ಷಿಣ ಭಾರತದ ವಿಶ್ವಾಸಿಗಳಾದ ನಾವು ವಿಭಿನ್ನ ಬಗೆಯ ಕ್ರೈಸ್ತೀಯ ನಂಬಿಕೆಗಳಿಗೆ ಮುಕ್ತವಾಗಿ ಸಮಾಜದಲ್ಲಿ ಜೀವಿಸುತ್ತೇವೆ. ಎಲ್ಲಾ ರೀತಿಯ ಅಂತರಾಷ್ಟ್ರೀಯ ಪಂಗಡಗಳ ಪ್ರಸಂಗಿಗಳ 'ಗಾಡ್ ಚಾನಲ್'ನ್ನು ನಾವು ದೂರದರ್ಶನದಲ್ಲಿ ವೀಕ್ಷಿಸುತ್ತೇವೆ. ಅವರ ದೈವಶಾಸ್ತ್ರದ ಹಿನ್ನಲೆಯ ಬಗ್ಗೆ ನಮಗೆ ಸ್ವಲ್ಪ ಮಾತ್ರ ತಿಳಿದಿರುವ ಪ್ರಸಂಗಿಗಳಿಂದ ಸಂಘಟಿಸಲ್ಪಟ್ಟ ಕ್ರೂಸೇಡ್ ಮತ್ತು ಕೂಟಗಳನ್ನು ನಾವು ಸಂಧಿಸುತ್ತೇವೆ. ರುಚಿಸುವ/ಇಷ್ಟವಾಗುವ ಶಿರೋನಾಮೆ ಹೊಂದಿರುವ ಆದರೆ ಅಸ್ಪಷ್ಟವಾದ ಆದರ್ಶಗಳನ್ನು ವ್ಯಕ್ತಪಡಿಸುವ ಆತ್ಮಿಕ ಪುಸ್ತಕಗಳನ್ನು ನಾವು ಓದುತ್ತೇವೆ. ಹಾಗಾಗಿ ನೋಡುವ, ಕೇಳುವ ಮತ್ತು ಓದುವವಗಳಿಂದ ಪ್ರಭಾವಿತರಾಗಿದ್ದೇವೆ.

ಕಡೆಯದಾಗಿ, ಇನ್ನೂ ನಮ್ಮದೇ ಕೆಲವು ಸ್ವಂತ ಸಭೆಗಳಲ್ಲಿ ಸ್ವಯಂ ಘೋಷಿತ ಸಭಾಪಾಲಕರುಗಳು (ಮತ್ತು ಅಥಿತಿ ಬೋಧಕರುಗಳು) ವೈಯಕ್ತಿಕ ಅಭಿರುಚಿಯ ವಿಚಾರ ಮತ್ತು ಸಿದ್ಧಾಂತಗಳನ್ನು ಬೋಧಿಸುತ್ತಾರೆಯೇ ವಿನಃ ಆದರೆ ಯಾವಾಗಲೂ ದೈವಶಾಸ್ತ್ರಕ್ಕನುಸಾರವಾದ ಮತ್ತು ಸ್ವಸ್ಥ ಬೋಧನೆಗಳನ್ನು ಅಲ್ಲ.

ಯಾವುದು ಸರಿ ಮತ್ತು ಯಾವುದು ತಪ್ಪು? ನೀವು ಏನಾಗಲು ಬಯಸುವಿರೋ ಅದರಂತೆಯೇ ಕ್ರೈಸ್ತತ್ವವು ಆಗಬಹುದೇ? ಅಥವಾ ಎಂದಿಗೂ ಬದಲಾಗದಂತ/ಬದಲಾಗಿಸಲಾಗದಂತ ಸಿದ್ಧಾಂತ ಮತ್ತು ಸತ್ಯಗಳು ಕ್ರೈಸ್ತ ನಂಬಿಕೆಯಲ್ಲಿವೆಯೇ? ಮತ್ತು ತೆಗೆದು ಹಾಕಲು ಆಗದಂತ ಸಿದ್ಧಾಂತ ಮತ್ತು ಸತ್ಯಗಳಿವೆಯೇ? ಒಂದು ವೇಳೆ ಅವು ಬದಲಾದರೆ ಅಥವಾ ತೆಗೆದುಹಾಕಲ್ಪಟ್ಟರೆ ಇನ್ನು ಇದನ್ನು 'ಕ್ರೈಸ್ತತ್ವ'ವೆಂದು ಕರೆಯಲು ಉಳಿಯುವುದಾದರೇನು? ಅಥವಾ ಇದು 'ಅಕ್ರೈಸ್ತ'ವಾಯಿತೋ?

ಈ ರೀತಿಯ ಪ್ರಶ್ನೆಗಳ ಬಗ್ಗೆ ಅಪೋಸ್ತಲ ಪೇತ್ರನು ಬಲವಾದ ಅಭಿಪ್ರಾಯಗಳನ್ನು ಹೊಂದಿದವನಾಗಿದ್ದನು. ಕೆಲವು ನಂಬಿಕೆಗಳು ನಿಜವಾದ ಕ್ರೈಸ್ತತ್ವವಾಗಿದೆಯೆಂದು ಆತನು ಹೇಳುತ್ತಾನೆ. ಇತರೆ ನಂಬಿಕೆಗಳು ತಪ್ಪಾದವುಗಳಾಗಿದ್ದು ಮತ್ತು ಆ ನಿಮಿತ್ತ ಅವು ಕ್ರೈಸ್ತೀಯವಲ್ಲವೆಂದೂ ಆತನು ಹೇಳಿದನು. ಆತನ ಪತ್ರಿಕೆಯ ಎರಡನೆಯ ಅಧ್ಯಾಯದಲ್ಲಿ ತನ್ನ ಮರಣದ ನಂತರವೂ ಸಹ ತಮ್ಮ ನಂಬಿಕೆಯಲ್ಲಿ ಅವರನ್ನು ಕಾಪಾಡಿಕೊಳ್ಳಲು ಪೇತ್ರನು ತನ್ನ ಓದುಗರನ್ನು ಸಿದ್ಧಗೊಳಿಸುವುದನ್ನು ಮುಂದುವರೆಸುತ್ತಾನೆ. ಸತ್ಯ ಮತ್ತು ಸುಳ್ಳಿನ ನಡುವಿನ ವ್ಯತ್ಯಾಸವನ್ನು ಕಲಿಯಬೇಕೆಂದು ಅವರಿಗೆ ಸವಾಲಿಡುತ್ತಾನೆ. ಅವರನ್ನು ಮತ್ತು ಅವರ ಸಿದ್ಧಾಂತಗಳನ್ನು ಹಿಂಬಾಲಿಸಲು/ಪಾಲಿಸಲು ವಿಶ್ವಾಸಿಗಳನ್ನು ಶೋಧಿಸುವ ದುಬೋರ್ಧನೆ ಮತ್ತು ಸುಳ್ಳುಬೋಧಕರ ಕುರಿತೂ ಸಹ ಆತನು ತಿಳಿಸುತ್ತಾನೆ.

## ಓದಿರಿ

2 ಪೇತ್ರ 2:1–9

## ಪ್ರಶ್ನೆಗಳು

1. ವ. 1 ರಿಂದ ಸಭೆಯಲ್ಲಿ ಸುಳ್ಳುಬೋಧಕರ ಇರುವಿಕೆಯ ಬಗ್ಗೆ ನಾವು ಏನನ್ನು ಅರ್ಥೈಸಿಕೊಳ್ಳಬಹುದು?
2. ಪೇತ್ರನು ಸುಳ್ಳುಬೋಧಕರ 5 ಗುಣಲಕ್ಷಣಗಳನ್ನು ತಿಳಿಸುತ್ತಾನೆ (ವ.1–3). ಸಭೆಯಲ್ಲಿನ ಸುಳ್ಳುಬೋಧಕರುಗಳನ್ನು ಗುರುತಿಸಲು ಇವು ಸಹಾಯವಾಗುತ್ತವೆ. ಅವು ಯಾವುವು? ಸಾಧ್ಯವಾದಷ್ಟು ನಿಮ್ಮ ಪದಗಳನ್ನು ಉಪಯೋಗಿಸಿರಿ.
3. ಸುಳ್ಳುಬೋಧಕರಿಗೆ ದೇವರ ಸ್ವಭಾವವನ್ನು/ಮನೋಭಾವನೆಯ ಬಗ್ಗೆ ವಚನ 3 ರಿಂದ ನಾವು ಏನನ್ನು ಕಲಿಯುತ್ತೇವೆ?
4. *ದೇವದೂತರು ಪಾಪಮಾಡಿದಾಗ* ಎನ್ನುವುದು ಸತ್ಯವೇದದ ಯಾವ ಘಟನೆಯನ್ನು ಸೂಚಿಸುತ್ತದೆಂದು ನೀವು ಯೋಚಿಸುವಿರಿ (ವ.4)?
5. ಪಾಪಮಯ ದೇವದೂತರ ಕುರಿತು ಪ್ರಸ್ತಾಪಿಸುವುದರಲ್ಲಿ ಪೇತ್ರನ ಉದ್ದೇಶವೇನಾಗಿರಬಹುದು?
6. ನೋಹನು ಯಾವ ರೀತಿ ವರ್ಣಿಸಲ್ಪಟ್ಟಿದ್ದಾನೆ (ವ.5)?. ಈ ವರ್ಣನೆ/ವಿವರಣೆಯ ಬಗ್ಗೆ ಯಾವುದೇ ಗಮನರ್ಹವಾದ ಸಂಗತಿಯನ್ನು ಕಾಣುವಿರಾ? (ಹೋಲಿಸಿ, ಆದಿಕಾಂಡ 6:9–7:1)
7. ಲೋಟನ ಕುರಿತು ಪೇತ್ರನು ಯಾವ ಚಿತ್ರಣವನ್ನು ತೋರಿಸುತ್ತಾನೆ (ವ.6–8)?
8. ವಚನ 4–9 ರಲ್ಲಿ ಪೇತ್ರನು ತಾನು ಪ್ರಸ್ತಾಪಿಸಿದ ಮೂರು ಹಳೆ ಒಡಂಬಡಿಕೆಯ ಘಟನೆಗಳಿಂದ ಓದುಗರು ಏನನ್ನು ಕಲಿಯಬೇಕೆಂದು ಅವನು ಬಯಸುತ್ತಾನೆಂದು ನೀವು ಯೋಚಿಸುತ್ತೀರಿ?

## ಗ್ರಂಥಾಲಯ ಸಮಯದ ಸಲಹೆಗಳು




1. ಅಧ್ಯಯನ 12–16 ರಲ್ಲಿ ಇವರೆಗೂ ಮುಗಿಸದೆ ಇರುವ ಪ್ರಶ್ನೆಗಳಿಗೆ ಉತ್ತರಿಸಿರಿ.
2. ಇಲ್ಲಿಯವರೆಗೂ ನೀವು ಅಭ್ಯಾಸಿಸಿದ ಸಂಗತಿಗಳನ್ನು ವಿಶೇಷವಾಗಿ 11–16 ಮತ್ತು 1 ಪೇತ್ರ ಪರಿಚಯನ್ನು ವಿಮರ್ಶಿಸಿರಿ.
3. ನಿಮ್ಮ ನೋಟ್ಸ್ ಸ್ಪಷ್ಟ ಮತ್ತು ಸರಿಯಾಗಿರಲಿ.
4. ಪೌಲನು ತನ್ನ ಓದುಗರಿಗೆ ಕ್ರೈಸ್ತೀಯ ನಂಬಿಕೆಗೆ ಹೊಸ ಸಾಕ್ಷಿಗಳ, ಹೊಸ ಒಡಂಬಡಿಕೆಯ ಸಾಕ್ಷಿಗಳ ಮತ್ತು ಹಳೆ ಒಡಂಬಡಿಕೆಯ ಸಾಕ್ಷಿಗಳ ಏನೆಂದು ಬೋಧಿಸುತ್ತಾನೆಂಬುದನ್ನು ಸಭೆಯ ಸ್ನೇಹಿತರೊಬ್ಬರಿಗೆ ವಿವರಿಸುವಂತಹ ಒಂದು ಚಿಕ್ಕ ಪ್ರಬಂಧವನ್ನು ಬರೆಯಿರಿ.

5. ‘ನಿಮ್ಮ ಕರೆ ಮತ್ತು ಆಯ್ಕೆಯನ್ನು ದೃಢಪಡಿಸಿಕೊಳ್ಳಿರಿ’ ಎಂದು ಕರೆಯಲ್ಪಡುವ ಒಂದು ಸತ್ಯವೇದ ಅಧ್ಯಯವನ್ನು ಸಿದ್ಧಪಡಿಸಿ ಇದು ಪ್ರಶ್ನೆ 6 ಮತ್ತು 7 (ಅಧ್ಯಯನ 14 ರಲ್ಲಿನ) ರ ಉತ್ತರಗಳ ಮೇಲೆ ಆಧಾರಗೊಂಡಿರಬೇಕು.

# ಅಧ್ಯಯನ 17. ಸುಳ್ಳುಬೋಧಕರನ್ನು ಗುರುತಿಸಿರಿ, 2:10–22

## ಪರಿಚಯ

ಸಭೆಯೊಳಗೆ ಸೇರಿ ಮತ್ತು ಆತ್ಮಿಕ ಸ್ವಾತಂತ್ರ್ಯದ ಬಗ್ಗೆ ಸುಳ್ಳು ವಾಗ್ದಾನಗಳಿಂದ ವಿಶ್ವಾಸಿಗಳನ್ನು ದೇವರಿಂದ ದೂರ ನಡೆಸುವ ಸುಳ್ಳುಬೋಧಕರುಗಳನ್ನು ತನ್ನ ಓದುಗರು ಗುರುತಿಸಲು ಸಹಾಯವಾಗುವಂತೆ ಪೇತ್ರನು ವರ್ಣರಂಜಿತ ಚಿತ್ರಣ ಮತ್ತು ಕಠಿಣ ಪದಗಳನ್ನು ಉಪಯೋಗಿಸುತ್ತಾನೆ.

## ಓದಿರಿ

2 ಪೇತ್ರ 2:10–22

## ಪ್ರಶ್ನೆಗಳು

1. 11 ನೇ ವಚನದ ಮೊದಲ ಅರ್ಧ ಭಾಗದಲ್ಲಿ ಪೇತ್ರನು ಹೇಳುವ ಅಂಶವನ್ನು ವಿವರಿಸಿರಿ.
2. ಸುಳ್ಳುಬೋಧಕರನ್ನು ವರ್ಣಿಸಲು ಮತ್ತು ಅವರ ಗುಣಸ್ವಭಾವವನ್ನು ತಿಳಿಸಲು ಈ ವಾಕ್ಯಭಾಗದಲ್ಲಿ ಪೇತ್ರನು ಚಿತ್ರಣ (ಉಪಮೆ, ರೂಪಾಲಂಕಾರ ಮತ್ತು ಜ್ಞಾನೋಕ್ತಿಯ ಹೇಳಿಕೆಗಳನ್ನು) ಗಳನ್ನು ಉಪಯೋಗಿಸುತ್ತಾನೆ. ಇವೆಲ್ಲವುಗಳನ್ನು ಪಟ್ಟಿಮಾಡಿರಿ ಮತ್ತು ಅವುಗಳ ಅರ್ಥವೇನೆಂಬುದನ್ನು ವಿವರಿಸಿರಿ.
3. ನಾವು ಸುಳ್ಳುಬೋಧಕರನ್ನು ಎದುರಿಸುತ್ತಿದ್ದೇವೆಂಬುದಕ್ಕೆ ಯಾವ ಗುಣಲಕ್ಷಣಗಳು ನಮ್ಮನ್ನು ಎಚ್ಚರಿಸಬೇಕು (ವ.10–19)? ಪಟ್ಟಿಮಾಡಿರಿ.
4. ನಿಮ್ಮ ಹಿಂದಿನ ಪ್ರಶ್ನೆಯ ಉತ್ತರಕ್ಕೆ ಹೋಗಿರಿ, ಯಾಕೆ ಕೆಲವು ಜನರು ಈ ರೀತಿಯ ಗುಣಸ್ವಭಾವದ ಬೋಧಕರುಗಳೆಡೆಗೆ ಆಕರ್ಷಿತರಾಗಿರಬಹುದು? ನಿಮ್ಮ ಸಾರಾಂಶವನ್ನು ಬರೆಯಿರಿ.
5. 2:19 ರ ಸ್ವಾತಂತ್ರ್ಯ ಮತ್ತು ದಾಸತ್ವದೊಂದಿಗೆ 1:1–4 ರಲ್ಲಿ ಪ್ರಸ್ತಾಪಿಸಿದ ಕ್ರಿಸ್ತನ ಕಾರ್ಯಗಳನ್ನು ಹೋಲಿಸಿರಿ. ಯಾವ ವಿಧದಲ್ಲಿ ಕ್ರಿಸ್ತನು ಕೊಡುವ ವರವು, ಸುಳ್ಳು ಬೋಧಕರ ಕೊಡುವುದಕ್ಕಿಂತ ವಿಭಿನ್ನವಾಗಿರುತ್ತದೆ? ನಿಮ್ಮ ಸಾರಾಂಶಗಳನ್ನು ಬರೆಯಿರಿ.
6. ತಮ್ಮ ದೈವಶಾಸ್ತ್ರದ ಹಿನ್ನಲೆಯ ಆಧಾರದ ಮೇಲೆ, ಸತ್ಯವೇದ ಪಂಡಿತರು ವಚನ 20–22 ರಲ್ಲಿ ಸುಳ್ಳು ಬೋಧಕರ ವೃತ್ತಿಯ ಬಗ್ಗೆ ವಿಭಿನ್ನವಾಗಿ ಅನುವಾದಮಾಡುತ್ತಾರೆ. ಸಾಧ್ಯವಾಗುವಂತ ಎರಡು ತರ್ಜುಮೆಗಳಾವುವು? ನೀವು ಯಾವುದಕ್ಕೆ ಮನ್ನಣೆ ಕೊಡುವಿರಿ? ಯಾಕೆ?

# ಅಧ್ಯಯನ 18. ವಾಗ್ದಾನವನ್ನು ನೆನಪುಮಾಡಿಕೊಳ್ಳಿರಿ, 3:1–7

## ಪರಿಚಯ

ತನ್ನ 2ನೇ ಪತ್ರಿಕೆಯ ಮೂರನೇ ಅಧ್ಯಾಯದಿಂದ ಓದುಗರನ್ನು ಕ್ರಿಸ್ತನ ಬರೋಣಕ್ಕಾಗಿ ಸಿದ್ಧಗೊಳಿಸುವುದೇ ಪೇತ್ರನ ಉದ್ದೇಶವಾಗಿದೆ. ಪೇತ್ರನ ಅಂತ್ಯದ ಬಗ್ಗೆ ಮಾತನಾಡುತ್ತಾನೆ ಆದರೆ ಇದು ನಿರೀಕ್ಷೆಯೊಂದಿಗಿನ ಅಂತ್ಯವಾಗಿದೆ.

ದೇವರು ತನ್ನ ವಾಕ್ಯದಲ್ಲಿ ವಾಗ್ದಾನ ಮಾಡಿದಂತೆ ಈ ಜಗತ್ತು ಒಂದು ಸಮಯ, ಹೇಗೋ ಅಂತ್ಯವಾಗಿದೆ. ಕೆಲವು ಬಾರಿ ಆ ವಾಗ್ದಾನವು– ಒಂದು ರೀತಿಯ ಬೆದರಿಕೆಯಂತೆ ಕಾಣಿಸುತ್ತದೆ. ಉದಾ: ನಿರೀಕ್ಷೆಯಿಂದ ಮತ್ತು ನೆರವೇರದೇ ಇರುವ ಕನಸುಗಳಿಂದಲೇ ತುಂಬಿರುವ ಜೀವನಕ್ಕೆ ಒಂದು ಕ್ರೂರವಾದ ಅಂತ್ಯದಂತೆ ಕಾಣುತ್ತದೆ. ಆದರೆ– ಇನ್ನೊಂದು ಸಮಯದಲ್ಲಿ, ನಾವು ಕಷ್ಟಗಳನ್ನು ಬಾಧೆಗಳನ್ನು ಅನುಭವಿಸಿ, ನಮ್ಮ ದುರಾವಸ್ಥೆಗೆ ಯಾವುದೇ ಪರಿಹಾರ ಕಾಣದಿರುವಾಗ– ಆ ಅಂತ್ಯದ ವಾಗ್ದಾನವು ಓದುಗರಿಗೆ ಒಂದು ಆಹ್ವಾನವಾಗಿರುವಂತೆ ಅನಿಸುತ್ತದೆ (ಕಾಣುತ್ತದೆ).

## ಓದಿರಿ

2 ಪೇತ್ರ 3:1–7

## ಪ್ರಶ್ನೆಗಳು

1. ಎರಡು ಪತ್ರಿಕೆಗಳಿಂದ ತನ್ನ ಉದ್ದೇಶವನ್ನು ತಿಳಿಸುವುದರೊಂದಿಗೆ ಪೇತ್ರನು ಈ ವಾಕ್ಯಭಾಗವನ್ನು ಪ್ರಾರಂಭಿಸುತ್ತಾನೆ. ಆತನು ಹೇಳುವುದನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ವಿವರಿಸಿರಿ.
2. ಓದುಗರು ತಮ್ಮ ಸರಳ ಮನಸ್ಸನ್ನು ಯಾವುದರ ಮೇಲೆ ಆಧಾರವಾಗಿರುವುದಕ್ಕೆ ಪೇತ್ರನು ಬಯಸುತ್ತಾನೆ (ವ.2)? ಆತನು ಹೇಳುವುದರ ಅರ್ಥವೇನೆಂದು ನಿಮ್ಮ ಸ್ವಂತ ವಾಕ್ಯಗಳಲ್ಲಿ ವಿವರಿಸಿರಿ.
3. ಅಧ್ಯಾಯ 3 ರ ವಿಷಯಾಂಶಗಳನ್ನು ಕೆಲವು ವಾಕ್ಯಗಳಲ್ಲಿ ಸಾರಾಂಶಗೊಳಿಸಿರಿ (ಇಡೀ ಅಧ್ಯಾಯ). ನಿಮ್ಮ ಸ್ವಂತ ವಾಕ್ಯಗಳಲ್ಲಿ ವಿವರಿಸಿರಿ.
4. ವಚನ 3 ರಲ್ಲಿ ಪೇತ್ರನು "ಕಡೆ ದಿನಗಳಲಿ" ಎಂಬ ಹೇಳಿಕೆಯನ್ನು ಉಪಯೋಗಿಸುತ್ತಾನೆ. ಹೊಸ ಒಡಂಬಡಿಕೆಯಲ್ಲಿ ಈ ಹೇಳಿಕೆ ಯಾವದನ್ನು ಸೂಚಿಸುತ್ತದೆ?
5. ವಚನ. 4 "ಆತನ ಪ್ರತ್ಯಕ್ಷತೆಯ ವಿಧೇಯವಾದ ವಾಗ್ದಾನವು ಏನಾಯಿತು?" ಎಂದು ಕುಚೋದ್ಯಗಾರರು ಕೇಳುತ್ತಾರೆಂದು ಹೇಳುತ್ತದೆ. ಯೋಹಾನ 14:1–3 ಮತ್ತು ಅ.ಕೃತ್ಯ 1:6–11 ರಲ್ಲಿನ 2 ವಾಗ್ದಾನಗಳನ್ನು ಓದಿರಿ. ನಂತರ ಕೆಳಕಂಡ ಎರಡು ಪ್ರಶ್ನೆಗಳಿಗೆ ಉತ್ತರಿಸಿರಿ.
   a. ಒಂದು ವೇಳೆ ಯೇಸು ಕ್ರಿಸ್ತನ ಮರಣ, ಪುನರುತ್ಥಾನವಾದ 30 ವರ್ಷಗಳ ನಂತರ ನೀವು ಜೀವಿಸುವುದಾದರೆ ಆತನ ಬರೋಣದ ಬಗ್ಗೆ ನೀವು ಯಾವ ಪ್ರಶ್ನೆಯನ್ನು ಕೇಳುತ್ತಿರುವಿರಿ?

b. ಈಗ ಹೆಚ್ಚು ಕಡಿಮೆ ಎರಡು ಸಾವಿರ ವರ್ಷಗಳ ನಂತರ ಯಾವ ಪ್ರಶ್ನೆಯನ್ನು ಕೇಳುವಿರಿ?

6. ಒಂದು ಸಂಗತಿಯನ್ನು ಕುಚೋದ್ಯಗಾರರು ಬೇಕೆಂದೇ ಮರೆತುಬಿಡುತ್ತಾರೆಂದು ಪೇತ್ರನು ಹೇಳುತ್ತಾನೆ (ವ.5). ಅವರು ಮರೆಯುವ ಸಂಗತಿ ಏನೆಂಬುದನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ವಿವರಿಸಿರಿ.

7. ವಚನ 7 ರಿಂದ "ನ್ಯಾಯತೀರ್ಪಿನ ದಿನ"ದ ಬಗ್ಗೆ ನಾವೇನನ್ನು ಕಲಿಯುತ್ತೇವೆ? ಪೇತ್ರನು ಏನನ್ನು ಹೇಳುತ್ತಾನೆಂಬುದನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ವಿವರಿಸಿರಿ.

# ಅಧ್ಯಯನ 19. ಇದು ಕಳ್ಳನಂತೆ ಇರುವುದು, 3:8–10

## ಪರಿಚಯ

ಯಾಕೆ ಯೇಸು ಕ್ರಿಸ್ತನು ಇನ್ನೂ ಹಿಂತಿರುಗಿಲ್ಲವೆನ್ನುವುದಕ್ಕೆ ಪೇತ್ರನು ಕೀರ್ತನೆ 90:4 ನ್ನು ಉಪಯೋಗಿಸುತ್ತಾನೆ:

*"ಸಾವಿರ ವರ್ಷಗಳು ನಿನ್ನ ದೃಷ್ಟಿಯಲ್ಲಿ ಗತಿಸಿ ಹೋದ ನಿನ್ನಿನ*

*ದಿನದಂತೆಯೂ ರಾತ್ರಿಯ ಜಾವದಂತೆಯೂ ಅವೆ"*

ದೇವರ ಸಮಯದ ದೃಷ್ಠಿಕೋನವು ನಮಗಿಂತ ವಿಭಿನ್ನವಾಗಿದೆ. ಆದರೆ ದೇವರ ವ್ಯಕ್ತಿತ್ವವು ಸಹ ನಮಗಿಂತ ವಿಭಿನ್ನವಾಗಿದೆ. ಯಾವಾಗ ನಾವು ಈ ವ್ಯತ್ಯಾಸವನ್ನು ಗ್ರಹಿಸಕೊಳ್ಳುತ್ತೇವೋ ಆಗ ಯೇಸು ಕ್ರಿಸ್ತನು ಯಾಕೆ ಇನ್ನೂ ತಿರುಗಿ ಬಂದಿಲ್ಲವೆಂಬುದನ್ನು ಅರ್ಥೈಸಿಕೊಳ್ಳುತ್ತೇವೆ. ಆದರೆ ಕರ್ತನ ದಿನವು ಬಂದಾಗ ಅದು ಅನಿರೀಕ್ಷಿತವಾಗಿಯೂ ಮತ್ತು ಪಕ್ಕನೆಯೂ ಆಗುವುದು.

## ಓದಿರಿ

2 ಪೇತ್ರ 3:8–10

## ಪ್ರಶ್ನೆಗಳು

1. ತನ್ನ ಓದುಗರಿಗೆ ಪೇತ್ರನು ಯಾವುದನ್ನು ಮರೆಯಬೇಡಿರೆಂದು ಹೇಳುತ್ತಾನೆ? ನಿಮ್ಮ ಸ್ವಂತ ವಾಕ್ಯಗಳಲ್ಲಿ ವಿವರಿಸಿರಿ.
2. ಯೇಸು ಕ್ರಿಸ್ತನ ಬರೋಣವು ತಡವಾಗಿರುವುದಕ್ಕೆ ಪೇತ್ರನು ಯಾವ ಕಾರಣಗಳನ್ನು ಕೊಡುತ್ತಾನೆ?
3. ಎರಡು ಅಂಶಗಳಲ್ಲಿ ಕುಚೋದ್ಯಗಾರರು ತಪ್ಪಿದ್ದಾರೆ. ಆ ಅಂಶಗಳು ಯಾವುವು?
4. ಈ ವಾಕ್ಯಭಾಗದಲ್ಲಿ 2 ರೂಪಾಲಂಕಾರಗಳಿವೆ ಅವು ಯಾವುವು? ಮತ್ತು ಅವುಗಳನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ?
5. ವಚನ 10 ರಲ್ಲಿ ವಿಭಿನ್ನ ರೀತಿಯಲ್ಲಿ ಅರ್ಥೈಸಲ್ಪಟ್ಟ ಒಂದು ಗ್ರೀಕ್ ಶಬ್ದವನ್ನು ಪೇತ್ರನು ಉಪಯೋಗಿಸುತ್ತಾನೆ (ಇಂಗ್ಲೀಷನ NIVಯಲ್ಲಿ ಮೂಲ ವಸ್ತಗಳು ಎಂದಿದೆ. ಕನ್ನಡ ಭಾಷಾಂತರವನ್ನು ಹೋಲಿಸಿರಿ. NIBV"ಮೂಲವಸ್ತುಗಳು" ಎಂದು ಹೇಳುತ್ತದೆ, JVಯಲ್ಲಿ "ಸೂರ್ಯ, ಚಂದ್ರ, ನಕ್ಷತ್ರಗಳು" ಎಂದಿದೆ). ಕರ್ತನ ದಿನದ ಸನ್ನಿವೇಶದಲ್ಲಿ/ಹಿನ್ನಲೆಯಲ್ಲಿ ಪೇತ್ರನು ಯಾವುದನ್ನು ಸೂಚಿಸಿ ಹೇಳುತ್ತಿದ್ದಾನೆ? ನೈಸರ್ಗಿಕ/ಪ್ರಾಕೃತಿಕ ಮೂಲವಸ್ತುಗಳೋ? ಅಥವಾ ಪರಲೋಕದ ಜೀವಿಗಳೋ? ನಿಮ್ಮ ಆಯ್ಕೆಯನ್ನು ಪ್ರೇರಣೆಗೊಳಿಸಿರಿ.
6. ವಚನ 10 ರಿಂದ ಕರ್ತನ ದಿನದ ಬಗ್ಗೆ ನಾವು ಏನನ್ನು ಕಲಿಯುತ್ತೇವೆ? ನಿಮ್ಮ ಸ್ವಂತ ವಾಕ್ಯಗಳಲ್ಲಿ ವಿವರಿಸಿರಿ.

## ಗ್ರಂಥಾಲಯ ಸಮಯದ ಸಲಹೆಗಳು



1. ಅಧ್ಯಯನ 17–19 ರಿಂದ ಇದುವರೆಗೂ ನೀವು ಮುಗಿಸದೆ ಇರುವ ಪ್ರಶ್ನೆಗಳಿದ್ದರೆ ಅವುಗಳನ್ನು ಮುಗಿಸಿರಿ.
2. ನಿಮ್ಮ ನೋಟ್ಸ್‌ಗಳನ್ನು ಇದುವರೆಗೂ ಕುರಿತ ಸಂಗತಿಗಳನ್ನು ವಿಶೇಷವಾಗಿ 17–19 ರ ಅಧ್ಯಾಯಗಳನ್ನು ಪುನಃ ಪರಿಶೀಲಿಸಿರಿ.
3. ನಿಮ್ಮ ನೋಟ್ಸ್‌ಗಳು ಅಚ್ಚುಕಟ್ಟಾಗಿರಲಿ ಮತ್ತು ಸರಿಯಾಗಿರಲಿ.
4. ಸಭೆಯಲ್ಲಿ ಸುಳ್ಳುಬೋಧಕರನ್ನು ಹೇಗೆ ಗುರುತಿಸುವುದು ಎಂಬುದರ ಬಗ್ಗೆ ಪೇತ್ರನು ತನ್ನ ಓದುಗರಿಗೆ ಏನನ್ನು ಬೋಧಿಸುತ್ತಾನೆಂದು ನಿಮ್ಮ ಸಭೆಯ ಸ್ನೇಹಿತರಿಗೆ ವಿವರಿಸುವುದನ್ನು ಅರ್ಧ ಪುಟದಷ್ಟು ಬರೆಯಿರಿ. ನಿಮ್ಮ ಸ್ವಂತ ವಾಕ್ಯಗಳಲ್ಲಿ ವಿವರಿಸಿರಿ.ಸತ್ಯವೇದ ಮತ್ತು ನೋಟ್ಸ್‌ನ್ನು ನಕಲು ಮಾಡಬೇಡಿರಿ. ಅಧ್ಯಯನ 17 ರಿಂದ ಮಾಹಿತಿಯನ್ನು ತೆಗೆದುಕೊಳ್ಳಿರಿ.
5. ವಾಗ್ದಾನವನ್ನು ನೆನಪುಮಾಡಿಕೊಳ್ಳಿರಿ ಎಂಬುದಾಗಿ ಕರೆಯುವ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಮಾಡಿರಿ. ಇದು ಅಧ್ಯಯನ 18 ರ ಮೇಲೆ ಆಧಾರವಾಗಿರಲಿ ಮತ್ತು ಇದನ್ನು ದಕ್ಷಿಣ ಭಾರತದ ಸಭೆಯ ಆತ್ಮಿಕ ಪರಿಸ್ಥಿತಿಗಳಿಗೆ ಅಳವಡಿಸಿಕೊಳ್ಳಿರಿ.

# ಅಧ್ಯಯನ 20: ಕರ್ತನ ದಿನವನ್ನು ಮುನ್ನೋಡುವುದು, 3:11–18

## ಪರಿಚಯ

3 ನೇ ಆಧ್ಯಾಯದ ಮೊದಲ ಭಾಗದಲ್ಲಿ ಪೇತ್ರನು ಕುಚೋದ್ಯಗಾರ ಮತ್ತು ಸುಳ್ಳುಬೋಧಕರು ಏನನ್ನು ಹೇಳುತಾರೋ ಮತ್ತು ಯೇಸು ಕ್ರಿಸ್ತನು ಪರಲೋಕಕ್ಕೆ ಏರಿ ಹೋದಂದಿನಿಂದ ಅನೇಕ ವರ್ಷಗಳು ಕಳೆದು ಹೋದದ್ದರ ಹೊರತಾಗಿಯೂ ಕರ್ತನ ದಿನದ ನಿಶ್ಚಿತತೆಯನ್ನು ತನ್ನ ಓದುಗರಿಗೆ ನೆನಪಿಸುತ್ತಾನೆ.

ಯೇಸು ಕ್ರಿಸ್ತನು ಬರುತ್ತಾನೆಂಬ ಈ ಭರವಸೆ ಮತ್ತು ಆತನ ಪಕ್ಕನೇ ಮತ್ತು ಅನಿರೀಕ್ಷಿತ ಬರೋಣವು ಪ್ರಸಕ್ತ ಜಗತ್ತಿನಲ್ಲಿರುವ ವಿಶ್ವಾಸಿಗಳ ಮನೋಭಾವನೆಯಲ್ಲಿ ಬದಲಾವಣೆಯನ್ನುಂಟು ಮಾಡಬೇಕು ತನ್ನ ಪತ್ರಿಕೆಯ ಕಡೆಯ ಭಾಗವನ್ನು ಪೇತ್ರನು ಈ ಕುರಿತು ತನ್ನ ಓದುಗರಿಗೆ ನೆನಪಿಸಲು ಮೀಸಲಿಟ್ಟಿದ್ದಾನೆ. ಇದು ಈ ಜಗತ್ತಿನಲ್ಲಿ ನಾಶನಕ್ಕೆ ತಳ್ಳಲ್ಪಡುವ ಸಭೆಯ ಕುರಿತಾಗಿ ಆಗಿದೆ. ಇದು ಕರ್ತನ ದಿನವನ್ನು ಮತ್ತು ನೂತನ ಭೂಮ್ಯಾಕಾಶಗಳನ್ನು ಮತ್ತು ನೀತಿಯ ನಿವಾಸವನ್ನು ಮುನ್ನೋಡುತ್ತಿರುವ ಸಭೆಯ ಕುರಿತಾಗಿ ಆಗಿದೆ.

## ಓದಿರಿ

2 ಪೇತ್ರ 3:11–18

## ಪ್ರಶ್ನೆಗಳು

1. ಕಡೆಯ ದಿನದ ಕುಚೊದ್ಯಗಾರರು ಮಾಡುವ ನಾಲ್ಕು ತಪ್ಪುಗಳು ಯಾವವು (ವ.4–11)? ನಿಮ್ಮ ಸ್ವಂತ ವಾಕ್ಯಗಳಲ್ಲಿ ವಿವರಿಸಿರಿ.
2. 3 ನೇ ಅಧ್ಯಾಯದುದ್ದಕ್ಕೂ ಯಾವ ಪದಗಳು ಮತ್ತು ಹೇಳಿಕೆಗಳು ಕರ್ತನ ದಿನವನ್ನು ವರ್ಣಿಸಲು ನಮಗೆ ಸಹಾಯಕವಾಗುತ್ತವೆ? ಒಂದು ಪಟ್ಟಿಯನ್ನು ಮಾಡಿರಿ. ಇದು ಉದ್ದವಾಗಿರುತ್ತದೆ.
3. ವಚನ 11 ರಲ್ಲಿನ ಪ್ರಶ್ನೆಯನ್ನು ನೋಡಿರಿ, ನೀವು ಯಾವ ರೀತಿಯ ಜನರಾಗಬೇಕಲ್ಲ? ಈ ಅಧ್ಯಾಯದಲ್ಲಿ ನೀವು ಯಾವ ಉತ್ತರವನ್ನು ಈ ಪ್ರಶ್ನೆಗೆ ಕಂಡುಹಿಡಿಯುವಿರಿ (ವ. 11–18)? ಒಂದು ಪಟ್ಟಿಯನ್ನು ಮಾಡಿರಿ. ಅಲ್ಲದೇ ಪೇತ್ರನು ಹೇಳುವ ಅಂಶವನ್ನು ಉತ್ತರಿಸಲು ಪ್ರಯತ್ನಿಸಿರಿ.
4. ಪೇತ್ರನು ಪೌಲನ ಮತ್ತು ಆತನ ಪತ್ರಿಕೆಗಳ ಬಗ್ಗೆ ಏನೆಂದು ಹೇಳುವನೆಂಬುದನ್ನು ವಿವರಿಸಿರಿ (ವ. 15–16).
5. ಪೇತ್ರನು ತನ್ನ ಪತ್ರಿಕೆಯನ್ನು ಹೇಗೆ ಮುಗಿಸುತ್ತಾನೆ?

# ಅಧ್ಯಯನ 21. ಪೇತ್ರನು ಬರೆದ ಎರಡನೆಯ ಪತ್ರಿಕೆಯ ಕುರಿತು ಯೋಚಿಸಿರಿ

## ಪರಿಚಯ

2 ಪೇತ್ರವನ್ನು ಸಾರಾಂಶಗೊಳಿಸಲು ನಿಮಗೀಗ ಸಮಯ ಬಂದಿದೆ. ಇದು ಸಾಧ್ಯವಾಗಲು ಈ ಪತ್ರಿಕೆಯನ್ನು ಪೂರ್ತಿಯಾಗಿ ಮತ್ತೊಂದಾವರ್ತಿ ನೀವು ಓದಲೇಬೇಕು. ಇದು ನಿಮ್ಮನ್ನು ನಿರಾಶೆಗೊಳಿಸದಿರಲಿ. ಈ ವರೆಗೆ ವಿವರವಾಗಿ ಅಭ್ಯಾಸಿಸಿದ ವ್ಯಕ್ತಿಗತ ವಾಕ್ಯಭಾಗಗಳನ್ನು ಈಗ ಒಂದು ಹೊಸ ನೋಟದಿಂದ ಓದುವಿರಿ.

## ಓದಿರಿ

2 ಪೇತ್ರ 1–3, ಆದರೆ ಓದುವುದಕ್ಕಿಂತ ಮೊದಲು ಈ ಕೆಳಕಂಡ ಪ್ರಶ್ನೆಗಳನ್ನು ನೋಡಿರಿ ಮತ್ತು ಓದುವಾಗೆಲ್ಲ ಅದನ್ನು ನಿಮ್ಮ ಮನಸ್ಸಿನಲ್ಲಿಟ್ಟುಕೊಳ್ಳಿರಿ.

## ಪ್ರಶ್ನೆಗಳು

1. ಮುಂದಿನ ಪ್ರಶ್ನೆಗೆ ಉತ್ತರಿಸುವಾಗ 2 ಪೇತ್ರ ಪತ್ರಿಕೆಯಲ್ಲಿ ನೀವು ಮನಸ್ಸಿನಲ್ಲಿಟ್ಟುಕೊಳ್ಳಬೇಕಾದ ಕೆಲವು ಪ್ರಾಮುಖ್ಯ ಸಂಗತಿಗಳು ಇಲ್ಲಿವೆ.

   a. ಭಕ್ತಿಯುತ ಜೀವನ (1:3–11).

   b. ಪ್ರಾಮುಖ್ಯವಾದವುಗಳನ್ನು ಜ್ಞಾಪಕಮಾಡಿಕೊಳ್ಳಿರಿ (1:12–15).

   c. ಕ್ರೈಸ್ತೀಯ ಸಿದ್ಧಾಂತಕ್ಕೆ ಎರಡು ಸಾಕ್ಷಿಗಳು ಮತ್ತು ಪರಿಶುದ್ಧರಾಗಿ ಜೀವಿಸುವದು(1:16–21).

   d. ಸುಳ್ಳುಬೋಧಕರುಗಳು ಮತ್ತು ದೇವರ ನ್ಯಾಯತೀರ್ಪು (2:1–9).

   e. ಸುಳ್ಳುಬೋಧಕರ ಗುಣಲಕ್ಷಣಗಳು (2:10–22).

   f. ಕರ್ತನ ದಿನ (3:1-10).

   g. ನಾವು ಯಾವ ರೀತಿಯ ಜನರಾಗಿರಬೇಕೆಂಬುವುದು (3:11–18).

2. 2 ನೇ ಪೇತ್ರ ಪತ್ರಿಕೆಯಲ್ಲಿ ಪೇತ್ರನ ಸಂದೇಶವನ್ನು ನೀವು ಹೇಗೆ ಸಾರಾಂಶಗೊಳಿಸುವಿರಿ? ಅರ್ಧ ಪುಟದಷ್ಟು ಬರೆಯಿರಿ. ಕೇವಲ ಒಂದು ಪಟ್ಟಿಯನ್ನು ಮಾಡಬೇಡಿರಿ (ಮೇಲಿನಂತೆ). ನಿಮ್ಮ ಸ್ವಂತ ವಾಕ್ಯಗಳಲ್ಲಿ ವಿವರಿಸಿರಿ. ನಿಮ್ಮ ಸಭೆಯ ಸ್ನೇಹಿತರೊಬ್ಬರಿಗೆ ಸಹಾಯಕವಾಗುವಂತ ರೀತಿಯಲ್ಲಿ ವಾಕ್ಯಭಾಗವನ್ನು ರಚನೆಗೊಳಿಸಿರಿ.

# ಉತ್ತರಗಳು

# ಪೇತ್ರನು ಬರೆದ ಮೊದಲನೆಯ ಪತ್ರಿಕೆಯ ಪರಿಚಯ

## ಶಿಕ್ಷಕರಿಗೆ ಸಲಹೆಗಳು

1. ಈ ಪೀಠಿಕೆಯಲ್ಲಿ ಹೆಚ್ಚು ಸಮಯ ಕಳೆಯಬೇಡಿರಿ. ಮೊದಲ ಭಾಗದ ಅರ್ಧಭಾಗ ಇದಕ್ಕೆ ಸಾಕು. ಆದರೆ ಅತಿ ಅವಶ್ಯಕವಾದವುಗಳನ್ನು ಅರಗಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಸಾಕಷ್ಟು ಸಮಯ ಕೊಡಿರಿ.

2. ಎಲ್ಲಾ ವಿವರಗಳನ್ನು ವಿದ್ಯಾರ್ಥಿಗಳು ಕಂಠಪಾಠ ಮಾಡುವಂತೆ ಮಾಡಬೇಡಿರಿ. ಆದರೆ ಈ ಪುಸ್ತಕದ ಅಧ್ಯಯನಕ್ಕೆ ಒಂದು ಸಾಮಾನ್ಯ ಹಿನ್ನಲೆಯಾಗಿ ಕೆಲವು ಸಂಗತಿಗಳನ್ನು ಅವರು ಕಲಿತರೆ ಸಾಕು. ಕೋರ್ಸಿನ ಕೊನೆಯಲ್ಲಿ ಈ ಪತ್ರಿಕೆಯನ್ನು ತಿರುಗಿ ಓದಬಹುದು.

3. ನೀವು ಆಕಸ್ಮಿಕವಾಗಿ ವಿದ್ಯಾರ್ಥಿಗಳೊಂದಿಗೆ ಸ್ಪಂದಿಸುವಂತೆ ಈ ಪೀಠಿಕೆಯನ್ನು ಮುಗಿಸಲು ಪ್ರಯತ್ನಿಸಿರಿ. ಹಾಗೆಯೇ ಸಂಭಾಷಣೆಯ ರೀತಿಯಲ್ಲಿ ನಿಮ್ಮೊಂದಿಗೆ ವಿದ್ಯಾರ್ಥಿಗಳು ಉತ್ತರಗಳನ್ನು ಕಂಡುಕೊಳ್ಳಲು ಬಿಡಿರಿ. ಬರೀ ಉಪದೇಶ ಮಾಡಬೇಡಿರಿ ಅಥವಾ ಬೋಧಿಸಬೇಡಿರಿ.

4. ಗ್ರಂಥಾಲಯ ಸಮಯದಲ್ಲಿ ಇದೇ ಪೀಠಿಕೆ (ಪರಿಚಯ) ಭಾಗವನ್ನು ವಿದ್ಯಾರ್ಥಿಗಳು ಓದುವಂತೆ ಮಾಡುವುದರ ಮೂಲಕ ಅವರ ಕಲಿಕೆಯನ್ನು ನೀವು ಬಲಪಡಿಸಿರಿ.

## ಪ್ರಶ್ನೆಗಳಿಗೆ ಉತ್ತರಗಳು

1. 1 ಪೇತ್ರ ಪತ್ರಿಕೆಯನ್ನು ಬರೆಯುವಲ್ಲಿ ಸೀಲ (ಸಿಮೋನನು) ಪ್ರಾಮುಖ್ಯ ಪಾತ್ರವಹಿಸಿರಬಹುದು.

   a. ವಚನ 5:12 ರಲ್ಲಿ ಪೇತ್ರನು ಸಿಲ್ವಾನನ ಸಹಾಯದಿಂದ ನಾನು ನಿಮಗೆ ಬರೆದಿದ್ದೇನೆ ಎಂದು ಹೇಳುತ್ತಾನೆ.

   b. ಯೆಹೂದಿ ಬೆಸ್ತನಾದ ಪೇತ್ರನಂತವರಿಂದ ಬರೆಯಲ್ಪಟ್ಟಂತ ಈ ಪತ್ರಿಕೆಯ ಗ್ರೀಕ್ ಭಾಷೆಯು ಅತ್ಯುತ್ತಮವಾಗಿದೆ. ಬಹುಶಃ ಸೀಲನು ಅತ್ಯುನ್ನತ ಗ್ರೀಕ್ ಭಾಷಾನೈಪುಣ್ಯವುಳ್ಳ ಒಬ್ಬ ಚದುರಿಸಲ್ಪಟ್ಟ ಯೆಹೂದ್ಯನಾಗಿರಬಹುದು.

2. 1 ಪೇತ್ರ ಪತ್ರಿಕೆಯು ಕ್ರಿ.ಶ. 62 ರ ನಂತರ ರೋಮ್‌ದಿಂದ ಬರೆಯಲ್ಪಟ್ಟಿದೆ ಎಂದು ನಾವು ಊಹಿಸುತ್ತೇವೆ.

   a. ವಚನ 5:13 ರಲ್ಲಿ "ಬಾಬೇಲಿನಲ್ಲಿರುವ ಸಭೆಯು" ಇದು ಒಂದು ಸ್ಥಳಿಯ ಸಭೆಯನ್ನು ಸೂಚಿಸುತ್ತದೆ. 'ಬಾಬಿಲೋನ್' ಇದು ರೋಮ ಸಾಮ್ರಾಜ್ಯದ ರಾಜಧಾನಿಯಾಗಿದ್ದು ರೋಮ್‌ಗೆ ಒಂದು ಸಂಕೇತ ನಾಮವಾಗಿದೆ. ಇಲ್ಲಿಯೇ ಪೇತ್ರನು ಸೇವೆ ಮಾಡುತ್ತಿದ್ದು ಚಕ್ರವರ್ತಿಯಾದ 'ನಿರೋ'ನ ಹಿಂಸೆಯ ಸಮಯದಲ್ಲಿ ಸುಮಾರು ಕ್ರಿ.ಶ. 65 ರಲ್ಲಿ ರಕ್ತಸಾಕ್ಷಿಯಾದನು.

b. ಹೊಸ ಒಡಂಬಡಿಕೆಯ ಸಮಯದಲ್ಲಿ ಎರಡು ಭೌಗೋಳಿಕ 'ಬಾಬಿಲೋನ್'ಗಳಿದ್ದವು. ಒಂದು ಯೂಪ್ರಟೀಸ್ ನದಿಯ ಬಳಿಯಲ್ಲಿತ್ತು ಮತ್ತು ಇನ್ನೊಂದು ಐಗುಪ್ತದಲ್ಲಿತ್ತು. ಆದರೆ ಸಭಾ ಚರಿತ್ರಕಾರರು ತಿಳಿದಿರುವ ಪ್ರಕಾರ ಅಲ್ಲಿ ಯಾವುದೇ ಕ್ರೈಸ್ತ ಸಭೆಗಳಿರಲಿಲ್ಲ. ಇನ್ನೂ ಹೇಳಬೇಕೆಂದರೆ ಪೇತ್ರನು ಆ ಸ್ಥಳಗಳನ್ನು ಸಂಧಿಸಿರುವಂತೆ ಕಾಣುವುದಿಲ್ಲ.

c. ಕ್ರಿ.ಶ. 62 ರಲ್ಲಿ ಪೌಲನು ರೋಮ್‌ನಲ್ಲಿ ಸೆರೆಯಾಗಿದ್ದನೆಂದು ಅಪೋಸ್ತಲರ ಕೃತ್ಯಗಳು ಪುಸ್ತಕದಿಂದ ನಾವು ತಿಳಿದಿದ್ದೇವೆ. ಈ ಪತ್ರಿಕೆಯಲ್ಲಿ ಪೇತ್ರನು ಪೌಲನ ಹೆಸರನ್ನು ಪ್ರಸ್ತಾಪಿಸುವುದಿಲ್ಲ. ಇದು ಪೌಲನು ಆಗಲೇ ರೋಮ್‌ನ್ನು ಬಿಟ್ಟಿದ್ದನೆಂಬುದನ್ನು ಸೂಚಿಸುತ್ತದೆ. ಕೆಲವು ವರ್ಷಗಳ ನಂತರ ಪೌಲನು ರೋಮ್‌ಗೆ ಹಿಂತಿರುಗಿದನು. ಸಭಾ ಸಂಪ್ರದಾಯಗಳ ಪ್ರಕಾರ ಅಲ್ಲಿಯೇ ಆತನೂ ಸಹ ರಕ್ತಸಾಕ್ಷಿಯಾದನು.


3. 1 ಪೇತ್ರದ ಓದುಗರು ಹೆಚ್ಚು ಕಡಿಮೆ ಅನ್ಯ ಹಿನ್ನಲೆಯ ವಿಶ್ವಾಸಿಗಳು.

   a. ಪೇತ್ರನು ಅವರು ಮೊದಲು ವಿಭಿನ್ನವಾದ ಸಂಸ್ಕೃತಿಯ ಪದ್ದತಿಯ ಆಚರಣೆಗಳಲ್ಲಿ ಭಾಗಿಯಾದ ವಿಗ್ರಹಾರಾಧಕರಾಗಿದ್ದರೆಂದು ಅವರ ಹಳೆಯ ಜೀವನದ ಬಗ್ಗೆ ಸೂಚಿಸುತ್ತಾನೆ.

   b. 1:1 ರಲ್ಲಿ 'ಚದುರಿಹೋದ' ಹೇಳಿಕೆಯು ಚದುರಿದ ಯೆಹೂದ್ಯ ಎಂದು ಅರ್ಥೈಸಿಕೊಳ್ಳಬಾರದು. ಬದಲಾಗಿ ಈ ಲೋಕದಲ್ಲಿ ಸಭೆಯು ಚದುರಿಹೋದ ಪ್ರವಾಸಿ(ಅನ್ಯದೇಶಿ)ಯಾಗಿದ್ದು ಪರದೇಶದಲ್ಲಿ ಜೀವಿಸುತ್ತೇವೆಂಬುದನ್ನು ದೈವಸ್ಯೆದ್ಧಾಂತಿಕವಾಗಿ ವರ್ಣಿಸುವ ಒಂದು ಪೌಲನ ವಿಧವಾಗಿದೆ.

   c. ವಾಸ್ತವವೆಂದರೆ 1 ಪೇತ್ರ ಪತ್ರಿಕೆಯು– ಈ ಪತ್ರಿಕೆಯ ಓದುಗರು ಯೆಹೂದಿ ಹಿನ್ನಲೆಯವರಾಗಿದ್ದರೆಂದು ಹೇಳಲು ಆಗದಂತ ಅನೇಕ ಹಳೆ ಒಡಂಬಡಿಕೆಯ ವಚನಗಳನ್ನು ಒಳಗೊಂಡಿದೆ. ಬದಲಾಗಿ ಇದು ಪೇತ್ರ ಸ್ವಂತ ಯೆಹೂದಿ ಹಿನ್ನಲೆಯನ್ನು ಮತ್ತು ವಾಸ್ತವಾಂಶವೆಂದರೆ ಕ್ರೈಸ್ತೀಯ ನಂಬಿಕೆಯು ಹಳೆ ಒಡಂಬಡಿಕೆಯ ಮೂಲವನ್ನು ಹೊಂದಿದೆ ಎಂಬುದನ್ನು ಪ್ರತಿಬಿಂಬಿಸುತ್ತದೆ.

4. ಹೆಚ್ಚು ಕಡಿಮೆ ಅವರ ನಂಬಿಕೆಯಲ್ಲಿ ಕ್ರೈಸ್ತ ವಿಶ್ವಾಸಿಗಳನ್ನು ಬಲಪಡಿಸಲು ಪೌಲನು ಈ ಪತ್ರಿಕೆಯನ್ನು ಬರೆದಿರುವನು. ಈ ವಿಶ್ವಾಸಿಗಳು ರೋಮನ್ ಪ್ರಾಂತಗಳು ಅಂದರೆ ಇಂದಿನ ಟರ್ಕಿಯಲ್ಲಿ ವಾಸಿಸುತ್ತಿದ್ದು ವಿರೋಧ ಮತ್ತು ಹಿಂಸೆಯನ್ನು ಎದುರಿಸುತ್ತಿದ್ದರು.



*ರೋಮ್‌ನಲ್ಲಿನ ಸರ್ವದೇವ ಮಂದಿರ– ರೋಮ್‌ನ ಎಲ್ಲಾ ದೇವರುಗಳಿಗಾಗಿ ಪ್ರತಿಷ್ಠಾಪಿಸಲ್ಪಟ್ಟ ದೇವಾಲಯ. ಇದು ಕಲಾವಿದನ ಮರುಸ್ಥಾಪನೆಯ ಕಟ್ಟಡದ ಚಿತ್ರಣವಾಗಿದ್ದು ಇಟಲಿಯ ರೋಮ್ ನಗರದಲ್ಲಿ ಈಗಲೂ ಇದೊಂದು ಪ್ರವಾಸಿ ಆಕರ್ಷಣೆಯಾಗಿದೆ.*

# ಪೇತ್ರನು ಬರೆದ ಮೊದಲನೆಯ ಪತ್ರಿಕೆಯನ್ನು ಓದುವುದು

## ಶಿಕ್ಷಕರ ಗಮನಕ್ಕೆ

1. 1 ನೇ ಪೇತ್ರದ ಈ ಅಧ್ಯಯನದ ಈ ಮೊದಲ ಹೆಜ್ಜೆಯನ್ನು ನಿರ್ಲಕ್ಷಿಸಬೇಡಿರಿ. ಕೋರ್ಸಿನ ಮೊದಲ ಪಾಠವನ್ನು ವಿದ್ಯಾರ್ಥಿಗಳು ಕುಳಿತು ಇಡೀ ಪುಸ್ತಕವನ್ನು ಓದಲು ಉಪಯೋಗಿಸಿರಿ. ಅವರು 2 ಅಥವಾ 3 ಜನರ ಗುಂಪಿನಲ್ಲಿ ಕಾರ್ಯ ನಿರ್ವಹಿಸುವಂತೆ ಮಾಡಿರಿ. ಒಬ್ಬರ ನಂತರ ಒಬ್ಬರು ಓದಲಿ.

2. ಪ್ರಶ್ನೆಗಳಿಗೆ ಉತ್ತರವನ್ನು ಬೋಧಿಸಬೇಡಿರಿ. ಪ್ರಶ್ನೆಗಳ ಮುಖ್ಯ ಉದ್ದೇಶವು ವಿದ್ಯಾರ್ಥಿಗಳು ಗಮನ ಕೊಟ್ಟು ಓದಲು ಮತ್ತು ಅವರು ಏನನ್ನು ಓದಿದ್ದಾರೋ ಅದರಾ ಮೇಲೆ ಬೇಗನೆ ಪ್ರತಿಸ್ಪಂಧಿಸಲು ಆಗಿದೆ. ಅವರು ಪ್ರಶ್ನೆಗಳಿಗೆ ಉತ್ತರಿಸಲು ಪ್ರಯತ್ನಿಸಿದ್ದಾರೋ ಎಂಬುದನ್ನು ಪರಿಶೀಲಿಸಿರಿ.

3. ವಿದ್ಯಾರ್ಥಿಗಳು ಉತ್ತರಿಸಿದ ರೀತಿಯನ್ನು ಮೌಲ್ಯ ಮಾಪನಮಾಡಿರಿ. ಇದು ನಿಮಗೆ ವಿದ್ಯಾರ್ಥಿಗಳು ಅರ್ಥೈಸಿಕೊಳ್ಳುವುದರ ಹಂತದ ಒಂದು ಚಿತ್ರಣವನ್ನು ನಿಮಗೆ ಕೊಡುವುದು. ಆ ಚಿತ್ರಣವು ನಿಮಗೆ ವಿದ್ಯಾರ್ಥಿಗಳ ಅಗತ್ಯಗಳಿಗನುಸಾರವಾಗಿ ನಿಮ್ಮ ಬೋಧನೆಯನ್ನು ಮಾರ್ಪಡಿಸಿಕೊಳ್ಳಲು ಸಹಾಯಕವಾಗುವುದು.

4. ಪ್ರಶ್ನೆ 5 ರಲ್ಲಿ ವಿದ್ಯಾರ್ಥಿಗಳಿಂದ ಉದ್ಭವಿಸಿದ ವಿಷಯಗಳನ್ನು ಪಟ್ಟಿಮಾಡಿಕೊಳ್ಳಿರಿ. ಅಧ್ಯಯನಗಳೊಂದಿಗೆ ಇವುಗಳನ್ನು ಸಹ ಮುಗಿಸಲು ನೀವು ಅನುಕೂಲಮಾಡಿಕೊಳ್ಳಬೇಕು. ನಿಮಗೆ ಮರೆತ ಅದನ್ನು ನೆನಪಿಸಲು ವಿದ್ಯಾರ್ಥಿಗಳಿಗೆ ಹೇಳಿರಿ.

## ಪ್ರಶ್ನೆಗಳಿಗೆ ಟಿಪ್ಪಣಿಗಳು

1. 3–4 ಮುಖ್ಯ ಅಂಶಗಳನ್ನು ಪಟ್ಟಿಮಾಡಿರಿ.

   ಟಿಪ್ಪಣಿ: 1 ಪೇತ್ರದಲ್ಲಿನ ಕೆಲವು ಪ್ರಾಮುಖ್ಯ ಅಂಶಗಳು ಇಲ್ಲಿವೆ. ಅವುಗಳಲ್ಲಿ ಕೆಲವು ಒಂದಕ್ಕೊಂದು ಸಂಬಂಧ ಹೊಂದಿವೆ.

   a. ವಿಶ್ವಾಸಿಗಳ ಬಾಧೆಗಳು

   b. ಕ್ರೈಸ್ತೀಯ ನಿರೀಕ್ಷೆ

   c. ಈ ಲೋಕದಲ್ಲಿನ ಸಭೆ

   d. ಹಿಂಸೆ ಮತ್ತು ಬಾಧೆ ಸಮಯದಲ್ಲಿ ವಿಶ್ವಾಸಿಗಳು ಹೇಗೆ ಜೀವಿಸುವುದು

   e. ಪರಿಶುದ್ಧರಾಗಿ ಜೀವಿಸುವುದು

   f. ದೇವರ ಜನರಾಗಿ ಈ ಲೋಕದಲ್ಲಿ ಹೇಗೆ ಜೀವಿಸುವುದು

   g. ವಿಶ್ವಾಸಿಗಳ ಒಗ್ಗಟ್ಟು

2. ಹೆಚ್ಚಿನ ಜನರು 1 ಪೇತ್ರವು ತುಂಬಾ ಸವಾಲಿನ ಪುಸ್ತಕವೆಂದು ಹೇಳುವರು. ವೈಯಕ್ತಿಕವಾಗಿ ನಿಮಗಿರುವ 2–3 ಸವಾಲಗಳನ್ನು ಬರೆಯಿರಿ.

   ಟಿಪ್ಪಣಿ: ನಾನು ಕಂಡುಕೊಳ್ಳುವ ಕೆಲವು ಸವಾಲುಗಳು ಇಂತಿವೆ.

   a. ಕ್ರೈಸ್ತೀಯ ಬಾಧೆಯ ಬಗೆಗಿನ ಪೇತ್ರನ ಬೋಧನೆ.

   b. ಈ ಲೋಕದಲ್ಲಿ ಕ್ರೈಸ್ತರು ಜೀವಿಸುವುದರ ಬಗೆಗಿನ ಪೇತ್ರನ ಬೋಧನೆ.

   c. ಈ ವಿಶ್ವಾಸಿಗಳು ಈ ಲೋಕದಲ್ಲಿ ಚದುರಿಸಲ್ಪಟ್ಟ ಪ್ರವಾಸಿಗಳು ಎಂಬುದರ ಬಗೆಗಿನ ಪೇತ್ರನ ಬೋಧನೆ.

   d. ಸಮರ್ಪಣೆ ಮತ್ತು ದೀನತೆಯ ಮೇಲಣ ಪೇತ್ರನ ದೃಷ್ಟಿ.

3. ಅನೇಕ ಜನರು 1 ಪೇತ್ರವನ್ನು ಓದಲು ಬಹಳ ಕಷ್ಟಕರ ಎನ್ನುವರು. ನೀವು ಅನುಭವಿಸುವ ಕಷ್ಟಗಳು ಯಾವುವು?

   ಟಿಪ್ಪಣಿ: ನಾನು ಕಾಣುವ ಕೆಲವು ಕಷ್ಟಗಳು ಇಂತಿವೆ:


   a. ಪಠ್ಯವು ಬಹಳ ದಟ್ಟವಾಗಿದೆ. ಪೇತ್ರನು ಹೇಳುವ ಅನೇಕ ಅಂಶಗಳನ್ನು ವಿವರಿಸಲು ಇದು ಕಷ್ಟವಾಗಿಸುತ್ತದೆ.

   b. ಪೇತ್ರನು ಯಾವಾಗಲೂ ತನ್ನ ಅಂಶಗಳನ್ನು ವಿವರಿಸುವುದಿಲ್ಲ. ಇದು ಆತನು ಏನನ್ನು ಹೇಳಲು ಪ್ರಯತ್ನಿಸುವನೋ ಅದರ ಬಗ್ಗೆ ಅನಿಶ್ಚಿತತೆಯನ್ನು ಉಂಟುಮಾಡುತ್ತದೆ.

   c. ನಾನು ಹಿನ್ನಲೆಯ ಜ್ಞಾನದಲ್ಲಿ ಕೊರತೆಯುಳ್ಳವನಾಗಿದ್ದೇನೆಂದು ಕೆಲವೊಮ್ಮೆ ನಾನು ಗುರುತಿಸುವೆನು. ಹಾಗಾಗಿ ಪೇತ್ರನು ತನ್ನ ಓದುಗರಿಗೆ ಹೇಳುತ್ತಿದ್ದಾನೋ ಎನ್ನುವುದನ್ನು ಊಹಿಸುವುದನ್ನು ನಿಲ್ಲಿಸಿಬಿಡುತ್ತೇವೆ.

4. ಕೆಳಕಂಡ ಪದಗಳಿಂದ ಈ ಪುಸ್ತಕದ ನಾದ ಅಥವಾ ಭಾವವನ್ನು ನಾನು ವರ್ಣಿಸುವೆನು: ಸವಾಲಿನದು, ಆಳವಾದ ದೈವಶಾಸ್ತ್ರದಿಂದ ತುಂಬಿರುವುದು. ಗಂಭೀರ, ಆಧರಿಸುವಂಥದ್ದು, ಉತ್ತೇಜಿಸುವುದು, ನಿರೀಕ್ಷೆಯುಳ್ಳದ್ದು.

5. ನಿಮಗೆ ಅರಗಿಸಿಕೊಳ್ಳಲು ಕಷ್ಟಕರವಾದ ಅಥವಾ ಗಲಿಬಿಲಿಗೊಳಿಸುವ ಕೆಲವು ಹೇಳಿಕೆ ಅಥವಾ ಸಿದ್ಧಾಂತಗಳನ್ನು ನೀವು ಹಾದು ಬಂದಿರಬಹುದು. ಮತ್ತು ಇದನ್ನು ನೀವು ಸ್ಪಷ್ಟೀಕರಿಸಿಕೊಳ್ಳಲು ಬಯಸಬಹುದು. ಆ ಹೇಳಿಕೆ ಮತ್ತು ಸಿದ್ಧಾಂತಗಳ ಪಟ್ಟಿಮಾಡಿರಿ.



*ಕಲಾವಿದನ ಭಾವನೆಯಲ್ಲಿ ಬೆಸ್ತನಾದ ಪೇತ್ರನ ಚಿತ್ರಣ.*

# ಉತ್ತರಗಳು 1: ವಂದನೆಗಳು, 1:1–2

## ಶಿಕ್ಷಕರ ಗಮನಕ್ಕೆ

ಪ್ರಶ್ನೆ 5 ಕ್ಲಿಷ್ಟಕರವಾಗಿದೆ. ನಿಮ್ಮ ವಿದ್ಯಾರ್ಥಿಗಳು 'ಹಣೆಬರಹ' ಎಂಬ ಸಿದ್ಧಾಂತದಲ್ಲಿ ಕೊನೆಗೊಳ್ಳುವಂತೆ ಆಗದಂತೆ ನೋಡಿಕೊಳ್ಳಿರಿ. (ಇದರರ್ಥ ದೇವರು ಕೆಲವರನ್ನು ರಕ್ಷಣೆಗಾಗಿ ಮತ್ತು ಉಳಿದವರನ್ನು ನಾಶನಕ್ಕಾಗಿ ನೇಮಿಸಿದ್ದಾನೆಂಬುದು). ಈ ಪ್ರಶ್ನೆಯನ್ನು ಸಮತೋಲಿತ ವಿಧದಲ್ಲಿ ಪರಿಹರಿಸಲು ಸಿದ್ಧಪಡಿಸಿಕೊಳ್ಳಿರಿ.

## ಉತ್ತರಗಳು

1. ಎರಡು ವಿಭಿನ್ನ ಮೂಲಗಳಿಂದ ಪೇತ್ರನ ಬಗ್ಗೆ ನಾವು ಕಲಿಯಬಹುದು.

   a. ಹೊಸ ಒಡಂಬಡಿಕೆ:

   - ಆತನ ನಿಜವಾದ ಹೆಸರು ಸಿಮೋನನಾಗಿತ್ತು. ಯೇಸು ಆತನಿಗೆ ಹೆಚ್ಚುವರಿಯಾಗಿ ಅರಾಮಿಕದ 'ಕೇಫ' ಎಂಬ ಹೆಸರನ್ನು ಕೊಟ್ಟನು. ಅದರರ್ಥ– 'ಬಂಡೆ'. ಇದು ಗ್ರೀಕ್‌ನಲ್ಲಿ ಪೇತ್ರ ಎಂದಾಗುತ್ತದೆ. ಬಹುತೇಕವಾಗಿ ಸುವಾರ್ತೆಗಳಲ್ಲಿ ಆತನು 'ಸಿಮೋನ್ ಪೇತ್ರ' ಎಂದು ಕರೆಯಲ್ಪಟ್ಟಿದ್ದಾನೆ.
   - ಯೇಸು ಕ್ರಿಸ್ತನು ತನ್ನನ್ನು ಹಿಂಬಾಲಿಸಲು ಕರೆಯುವದಕ್ಕಿಂತ ಮೊದಲು ಈತನು ಬೆಸ್ತನಾಗಿದ್ದನು. ಹಾಗಾಗಿ ಆತನು ಮನುಷ್ಯರನ್ನು ಹಿಡಿಯುವ ಬೆಸ್ತನಾದನು.
   - ಆತನು ಯೇಸು ಕ್ರಿಸ್ತನ 12 ಮಂದಿ ಶಿಷ್ಯರಲ್ಲಿ ಒಬ್ಬನೂ ಮತ್ತು ಅಪೋಸ್ತಲರಲ್ಲಿ ಒಬ್ಬನೂ ಆಗಿದ್ದನು. ಅಷ್ಟೇ ಅಲ್ಲದೆ– ಯೇಸು ಕ್ರಿಸ್ತನ ಆಪ್ತ ಸ್ನೇಹಿತರಲ್ಲಿ ಒಬ್ಬನಾಗಿದ್ದನು.
   - ಈತನು ಯೇಸು ಕ್ರಿಸ್ತನು ಜೀವಿಸುವ ದೇವರ ಮಗನಾಗಿದ್ದನೆಂದು ಅರಿಕೆಮಾಡಿದನು (ಮತ್ತಾಯ 16:16). ಆದರೆ ಅದಾದ ಕೆಲವೇ ಸಮಯದಲ್ಲಿ– ಯೇಸು ಕ್ರಿಸ್ತನನ್ನು ಆತನು ಗುರಿಯನ್ನು ಮುಟ್ಟುವುದರಿಂದ ತಪ್ಪಿಸಲು ಪ್ರಯತ್ನಿಸಿದಾಗ ಯೇಸು ಕ್ರಿಸ್ತನಿಂದ ಗದರಿಸಲ್ಪಟ್ಟನು (ಮತ್ತಾಯ 16:23).
   - ಈತನು ರೂಪಾಂತರ ಬೆಟ್ಟದಲ್ಲಿ ಯೇಸು ಕ್ರಿಸ್ತನೊಂದಿಗಿದ್ದನು (ಮತ್ತಾಯ 17).
   - ಈತನು ಯೇಸು ಕ್ರಿಸ್ತನನ್ನು ಅಲ್ಲಗಳೆದನು (ಯೊಹಾನ 18), ಆದರೆ ನಂತರ ಕ್ಷಮಿಸಲ್ಪಟನು (ಯೊಹಾನ 21).
   - ಯೆರೂಸಲೇಮಿನಲ್ಲಿನ ಆದಿ ಸಭೆಯಲ್ಲಿ ನಾಯಕನಾಗಿದ್ದನು (ಅಪೋ 1).
   - ಈತನು ಒಬ್ಬ ಶ್ರೇಷ್ಟ ಭಾಷಣಕಾರನಾಗಿದ್ದನು ಮತ್ತು ಪ್ರಸಂಗಿಯಾಗಿದ್ದನು (ಅಪೋ 2).

- ಈತನು ಧೈರ್ಯವಂತನಾಗಿದ್ದು- ಹಿಂಸೆಯ ಸಮಯದಲ್ಲಿ ದೃಢವಾಗಿ ನಿಂತನು (ಅಪೋ 3–4).

- ಸಮಾರ್ಯದ ಉಜ್ಜೀವನದಲ್ಲಿ ಈತನು ಮೇಲ್ವಿಚಾರಕನಾಗಿದ್ದನು (ಅಪೋ 8).

- ತನ್ನ ಸೇವಾ ನಿಯಮಗಳ ನಿಮಿತ್ತ ತನ್ನ ಸಹ ನಾಯಕರುಗಳಿಂದ ಟೀಕಿಸಲ್ಪಟ್ಟನು (ಅಪೋ 10–11).

- ಈತನು ಅರಸನಾದ ಹೆರೋದ 1 ನೇ ಅಗ್ರಿಪ್ಪನಿಂದ ಸೆರೆಯಲ್ಲಿಡಲ್ಪಟ್ಟನು ಮತ್ತು ಸೆರೆಮನೆಯಿಂದ ಅದ್ಭುತಕರವಾಗಿ ಬಿಡುಗಡೆ ಹೊಂದಿದನು (ಅಪೋ 12).

- ಅನ್ಯರಿಗೆ ಪೌಲನ ಸೇವಾಕಾರ್ಯಗಳನ್ನು ಈತನು ಬೆಂಬಲಿಸಿದನು (ಅಪೋ 15). ಇದು ಕ್ರಿ.ಶ. 49 ರಲ್ಲಿ ನಡೆಯಿತು. ಆತನ ನಂತರದ ಕಾರ್ಯಚಟುವಟಿಕೆಗಳ ಬಗ್ಗೆ ಹೊಸ ಒಡಂಬಡಿಕೆಯಲ್ಲಿ ಯಾವುದೇ ದಾಖಲೆಗಳಿಲ್ಲ.

- ಈತನು ಪೌಲನಿಂದ ಆತನ ಎರಡು ಪತ್ರಿಕೆ- ಗಲಾತ್ಯದವರಿಗೆ ಮತ್ತು 1 ಕೊರಿಂಥದಲ್ಲಿ ಪ್ರಸ್ತಾಪಿಸಲ್ಪಟ್ಟಿದ್ದಾನೆ. (ಇದು ಅಂದಾಜು ಕ್ರಿ.ಶ. 55 ಆಸುಪಾಸಿನಲ್ಲಿ ಬರೆಯಲ್ಪಟ್ಟಿದೆ)

b. ಸಭಾ ಚರಿತ್ರೆ/ಇತಿಹಾಸ ಮತ್ತು ಸಂಪ್ರದಾಯ.

- ಪೌಲನ ಮೊದಲ ಸೆರೆವಾಸದ ತಕ್ಷಣವೇ ಈತನು ರೋಮ್‌ಗೆ ಬಂದನು (ಕ್ರಿ.ಶ. 60–62).

- ಯೇಸು ಕ್ರಿಸ್ತನ ಕುರಿತ ಈತನ ಬೋಧನೆಯು ಮಾರ್ಕನ ಸುವಾರ್ತೆಯಲ್ಲಿ ದಾಖಲಿಸಲ್ಪಟ್ಟಿದೆ.

- ಚಕ್ರವರ್ತಿ ನಿರೋನ ಕಾಲದಲ್ಲಿ ಮತ್ತು ನಗರದ ಹೆಚ್ಚಿನ ಭಾಗ ಬೆಂಕಿಯಿಂದ ಸುಡಲ್ಪಟ್ಟಾಗ ಈತನು ರೋಮದಲ್ಲಿದ್ದನು.

- ಬೆಂಕಿಯ ಮೂಲಕ ಪ್ರಾರಂಭವಾದ ಹಿಂಸೆಯ ಸಮಯದಲ್ಲಿಯೂ ಈತನು ರೋಮನಲ್ಲಿಯೇ ಇದ್ದನು. ಈ ಸಮಯದಲ್ಲಿಯೇ ಪೌಲನು ಮತ್ತು ಪೇತ್ರ ಇಬ್ಬರೂ ರಕ್ತಸಾಕ್ಷಿಗಳಾದರು. ಪೌಲನು ಶಿರಚ್ಛೇಧನ ಮಾಡಲ್ಪಟ್ಟನು ಮತ್ತು ಪೇತ್ರನು ತಲೆಕೆಳಗಾಗಿ ಶಿಲುಬೆಗೆ ಹಾಕಲ್ಪಟ್ಟನು. (ಯಾಕೆಂದರೆ ಈತನು ಯೇಸು ಕ್ರಿಸ್ತನು ಸತ್ತಂತೆ ಸಾಯಲು ಬಯಸದೆ ಇದ್ದ ನಿಮಿತ್ತ).

- ಕಲ್ಪಿತ ಗ್ರಂಥಗಳ 'ಪೇತ್ರನ ಕೃತ್ಯಗಳು' ಪ್ರಕಾರ ರಕ್ತಸಾಕ್ಷಿಯಾಗಿ ಹತನಾಗುವುದನ್ನು ತಪ್ಪಿಸಿಕೊಳ್ಳಲು ಈತನು ರೋಮನಿಂದ ಓಡಿಹೋದನು. ನಗರದ ಹೊರಗಣ ರಸ್ತೆಯಲ್ಲಿ ಪುನರುತ್ಥಾನ ಹೊಂದಿದ ಯೇಸುವನ್ನು ಸಂಧಿಸಿದನು. ಪೇತ್ರನು ಯೇಸುವಿಗೆ 'ಕ್ವೋ ವಾಡಿಸ್' ಇದು ಲ್ಯಾಟಿನ್‌ನಲ್ಲಿ 'ನೀನು ಎಲ್ಲಿಗೆ ಹೊರಟಿರುವೆ?' ಎಂಬುದಾಗಿದೆ. ಯೇಸು- ನಾನು ರೋಮಗೆ ಪುನಃ ಶಿಲುಬೆಗೇರಲು ಹೊರಟಿರುವೆ ಎಂದು ಉತ್ತರಿಸಿದನು. ಯಾವಾಗ ಪೇತ್ರನು ಈ ರೀತಿ ಕೇಳುತ್ತಾನೋ ಆಗ ಆತನು

ಧೈರ್ಯ ತಂದುಕೊಂಡು ರೋಮಿಗೆ ಹಿಂತಿರುಗಿ ಹೋಗಿ ತಾನು ರಕ್ತಸಾಕ್ಷಿಯಾಗುವವರೆಗೂ ಅಲ್ಲಿ ಸೇವೆಯನ್ನು ಮುಂದುವರಿಸಿದನು.

2. ಈ ವಾಕ್ಯಭಾಗದಿಂದ ಆತನು ತನ್ನನ್ನು ಯೇಸು ಕ್ರಿಸ್ತನ ಅಪೋಸ್ತಲನೆಂದು ಪರಿಗಣಿಸಿದೆಂದು ಪೇತ್ರನ ಬಗ್ಗೆ ನಾವು ಕಲಿಯುತ್ತೇವೆ. ಅಪೋಸ್ತಲ ಪದದ ಅರ್ಥ– 'ಸಂದೇಶಕ', 'ರಾಯಭಾರಿ' ಎಂದು. ಯೇಸು ಕ್ರಿಸ್ತನು ಸುವಾರ್ತೆಯನ್ನು ಸಾರಲು ಮತ್ತು ಆತನ ಸೇವೆಯನ್ನು ಮುಂದುವರಿಸಲು ಅಪೋಸ್ತಲರನ್ನು ನೇಮಿಸಿದನು.

3. ಈ ಎರಡು ವಚನಗಳು 3 ಸಂಗತಿಗಳನ್ನು ಒಳಗೊಂಡಿವೆ. ಅವೆಂದರೆ:

   a. ಗ್ರಂಥಕರ್ತ (ಪೇತ್ರನು)

   b. ಪತ್ರಿಕೆಯ ಸ್ವೀಕೃತರು (ಓದುಗರು)

   c. ಓದುಗ/ಸ್ವೀಕೃತರಿಗೆ ಪೇತ್ರನ ಆಶೀರ್ವಾದ

4. ತನ್ನ ಓದುಗರ ಪರಿಸ್ಥಿತಿಯನ್ನು ಪೇತ್ರನು ಈ ರೀತಿ ವರ್ಣಿಸುತ್ತಾನೆ:

   a. ಅವರು ಲೋಕದಲ್ಲಿ ಪ್ರವಾಸಿಗಳಾಗಿದ್ದು ರೋಮ್ ಸಾಮ್ರಾಜ್ಯದ 4 ಪ್ರಾಂತ್ಯಗಳುದ್ದಕ್ಕೂ ಚದುರಿಸಲ್ಪಟ್ಟಿದ್ದಾರೆ.

   b. ಅವರು ದೇವರಿಗೆ ಮೀಸಲಾದವರು. ದೇವರು ಅವರನ್ನು ಆರಿಸಿ ತೆಗೆದುಕೊಂಡನು. ಅವರು ಆತ್ಮನಿಂದ ಶುದ್ಧಿಕರಿಸಲ್ಪಟ್ಟವರು. ಅವರು ಯೇಸು ಕ್ರಿಸ್ತನ ಕರೆಗೆ ವಿಧೇಯರಾಗಿ ಅತನ ರಕ್ತದಿಂದ ತೊಳೆಯಲ್ಪಟ್ಟಿದ್ದಾರೆ.

5. ನಿಮ್ಮ ಸ್ವಂತ ಸಭೆಯ ಅನ್ಯೋನ್ಯತೆಯನ್ನು ಪೇತ್ರನ ವರ್ಣನೆಯಲ್ಲಿ ಗುರುತಿಸುವಿರಾ? (ಹಿಂದಿನ ಪ್ರಶ್ನೆಯ ಉತ್ತರವನ್ನು ನೋಡಿರಿ) ವಿವರಿಸಿರಿ.

   ಟಿಪ್ಪಣಿ: ನಾನೆಣಿಸುತ್ತೇನೆ, ಹೆಚ್ಚಿನ ಸತ್ಯವೇದ ನಂಬುವ ಸಭೆಗಳು ಎರಡನೇ ಅಂಶದಲ್ಲಿ ತಮ್ಮನ್ನು ಗುರುತಿಸಿಕೊಳ್ಳುವರು ಎಂಬುದಾಗಿ ಅವರು ದೇವರಿಗೆ ಮೀಸಲಾಗಿದ್ದಾರೆ. ವಿಶ್ವಾಸಿಗಳು ತಮ್ಮ ಹಳೆಯ ಪಾಪಮಯ ಜೀವನದಿಂದ ಒಂದು ನೂತನ ಜೀವನಕ್ಕೆ ಬಂದು ರೂಪಾಂತರವನ್ನು ಅನುಭವಿಸಿದ್ದಾರೆ. ಈ ರೂಪಾಂತರವು ಶಿಲುಬೆಯಲ್ಲಿ ಯೇಸು ಕ್ರಿಸ್ತನ ತ್ಯಾಗಮಯ ಸಾವಿನಲ್ಲಿ ಅವರು ನಂಬಿಕೆಯನ್ನಿಟ್ಟಾಗ ಮತ್ತು ಆತನನ್ನು ತಮ್ಮ ವೈಯಕ್ತಿಕ ರಕ್ಷಕನಾಗಿ ಅಂಗೀಕರಿಸಿದಾಗ ಸಂಭವಿಸಿದೆ. ಈ ರೂಪಾಂತರವು (ಪೇತ್ರನು ಇದನ್ನು ಪ್ರತಿಷ್ಠಾಪಿಸಲ್ಪಟ್ಟ/ಶುದ್ಧಿಕರಿಸಲ್ಪಟ್ಟ ಕಾರ್ಯ ಎಂದು ಕರೆಯುತ್ತಾನೆ) ಪವಿತ್ರಾತ್ಮನ ಕಾರ್ಯವಾಗಿದೆ.

   ಆದರೆ ಅನೇಕ ಸಭೆಗಳು ಮೊದಲ ಅಂಶದಲ್ಲಿ ತಮ್ಮನ್ನು ಗುರುತಿಸಿಕೊಳ್ಳುವುದಿಲ್ಲವೆಂದೂ ಸಹ ನಾನು ಯೋಚಿಸುತ್ತೇನೆ. ಅವರು ಈ ಲೋಕದಲ್ಲಿ ಪ್ರವಾಸಿಗಳಂತೆ ಎಣಿಸುವುದಿಲ್ಲ. ಅವರು ಸ್ಥಾಪಿಸಲ್ಪಟ್ಟವರು. ಅವರು ಆಸ್ತಿಯನ್ನು ಖರಿದಿಸಲು ಮತ್ತು ಕಟ್ಟಡಗಳನ್ನು ಕಟ್ಟಲು ಪ್ರಯತ್ನಿಸಿ, ಸಂಘ ಸಂಸ್ಥೆಗಳನ್ನು ಪ್ರಾರಂಭಿಸುವರು. ವಿಶ್ವಾಸಿಗಳು ತಮ್ಮ ನೆರೆಹೊರೆಯವರ ಅಕಾಂಕ್ಷೆಗಳನ್ನು ಅಪ್ಪಿಕೊಳ್ಳುವರು. ಅವರು ಒಳ್ಳೆಯ ವಿದ್ಯಾಭ್ಯಾಸ ಮತ್ತು ಉತ್ತಮ ಸಂಬಳವಿರುವ

ಉದ್ಯೋಗವನ್ನು ಬಯಸುವರು. ಅವರು ಹಣ ಮತ್ತು ಬಟ್ಟೆ, ದ್ವಿಚಕ್ರ ಮತ್ತು ನಾಲ್ಕು ಚಕ್ರಗಳ ವಾಹನಗಳನ್ನು ಆಸ್ತಿ ಮತ್ತು ಮನೆಗಳನ್ನು ಆಶಿಸುವರು.

6. ಈ ವಾಕ್ಯಭಾಗದಲ್ಲಿ ಕಂಡುಬರುವ 'ಆಯ್ಕೆ'ಯ ಸಿದ್ಧಾಂತವು ದೇವರು ಕೇವಲ ಕೆಲವು ಜನರನ್ನು ಮಾತ್ರ ರಕ್ಷಣೆ ಹೊಂದಲೆಂದು ನಿರ್ಧರಿಸಿದ್ದಾನೆ. ಯಾಕೆಂದರೆ ಆತನು ಎಲ್ಲರನ್ನು ರಕ್ಷಣೆಗಾಗಿ ಆರಿಸಿಕೊಂಡಿಲ್ಲ (ಆಯ್ಕೆ ಮಾಡಿಲ್ಲ) ಎಂಬುದಾಗಿ ಅರ್ಥವಲ್ಲ. ಇಲ್ಲಿ ಎಲ್ಲಾ ಜನರು ರಕ್ಷಣೆ ಹೊಂದಿ ಸತ್ಯದ ಜ್ಞಾನಕ್ಕೆ ಸೇರಬೇಕೆಂಬುದು ದೇವರ ಚಿತ್ತವಾಗಿದೆ (1 ತಿಮೋಥಿ 2:4). ಸತ್ಯ ಯಾವುದೆಂದರೆ ತನ್ನ ರಕ್ಷಣೆಯನ್ನು ಯೇಸು ಕ್ರಿಸ್ತನ ಮೂಲಕ ಸ್ವೀಕರಿಸಬೇಕೆಂದು ದೇವರು ಎಲ್ಲಾ ಜನರನ್ನು ಆರಿಸಿಕೊಂಡಿದ್ದಾನೆ. ಆದಿಯಿಂದಲೂ ಇದೇ ದೇವರ ಯೋಜನೆಯಾಗಿತ್ತು (ಅಥವಾ ದೇವರ ಆಯ್ಕೆ, ಹೋಲಿಸಿ 1:20). ಆದರೆ ದೇವರ ಆರಿಸಿಕೊಳ್ಳುವಿಕೆಯ ನಮ್ಮ ಸ್ವೀಕರಿಸುವಿಕೆಯ ಶರತ್ತಿಗೆ ಒಳಪಟ್ಟಿದೆ. ಶಿಲುಬೆಯ ಮೇಲೆ ಯೇಸು ಕ್ರಿಸ್ತನ ಪ್ರಾಯಶ್ಚಿತ ಮರಣದ ಮೂಲಕ ಆತನ ಈ ರಕ್ಷಣೆಯ ವರವನ್ನು ನಾವು ಸ್ವೀಕರಿಸುವವರೆಗೂ ನಮ್ಮ ಜೀವಿತಕ್ಕಾಗಿನ ದೇವರ ಯೋಜನೆ ಮತ್ತು ಚಿತ್ತ ನೆರವೇರಲು ಸಾಧ್ಯವಿಲ್ಲ.



## ಅವಲೋಕನ

ಪೇತ್ರನು ಅನೇಕ ಮಾಹಿತಿಗಳನ್ನು (ಆಳವಾದ ದೈವಶಾಸ್ತ್ರ ಸಹ) ಒಂದು ವಾಕ್ಯದಲ್ಲಿ ಸೇರಿಸಿಡುತ್ತಾನೆ. ಇದು ಸತ್ಯವೇದ ತಜ್ಞರಿಗೆ ಕ್ಲಿಷ್ಟಕರವೆನಿಸುತ್ತದೆ (ನೀವು ವಿಭಿನ್ನ ಭಾಷಾಂತರವನ್ನು ಹೋಲಿಸುವಾಗ ಇದನ್ನು ಕಾಣುವಿರಿ) ಮತ್ತು ಕೆಲವೊಮ್ಮೆ ಸತ್ಯವೇದದ ಓದುಗರಿಗೆ ಗಲಿಬಿಲಿಯನ್ನುಂಟುಮಾಡುತ್ತದೆ.

ಹಾಗಾಗಿ ಓದುಗರಾದ ನಾವು ಆತನ ಸಂದೇಶವನ್ನು ಸರಿಯಾಗಿ ಅರ್ಥೈಸಿಕೊಳ್ಳಲು ಪೇತ್ರನ ವಾಕ್ಯಗಳನ್ನು ಬಿಚ್ಚಬೇಕು. ಈ ವಾಕ್ಯಭಾಗದಲ್ಲಿ– ತ್ರೈಯೇಕ ದೇವರು ಸಭೆಯ ರಕ್ಷಣೆಗಾಗಿ ಕಾರ್ಯ ಮಾಡುತ್ತಿದ್ದಾನೆಂದು ಪೇತ್ರನು ತೋರಿಸುವ ಸಂಗತಿಯು ಸತ್ಯವಾದದ್ದಾಗಿದೆ.

ಎಲ್ಲಾ ಮನುಷ್ಯರ ರಕ್ಷಣೆಗಾಗಿ ತಂದೆಯಾದ ದೇವರ ಯೋಜನೆಯು ಆದಿಯಿಂದಲೇ ನಿರ್ಧರಿಸಲ್ಪಟ್ಟಿತ್ತು. ತನ್ನ ಯಾವೊಬ್ಬ ಮಕ್ಕಳು ಸಹ ನಾಶವಾಗುವುದು ತಂದೆಗೆ ಇಷ್ಟವಿಲ್ಲ. ಆತನು ನಮ್ಮೆಲ್ಲರನ್ನು ರಕ್ಷಣೆಗಾಗಿ ಆಯ್ಕೆಮಾಡಿದ್ದಾನೆ.

ಮಗನಾದ ಯೇಸು ಕ್ರಿಸ್ತನು ತಾನು ಶಿಲುಬೆಯ ಮೇಲೆ ಸತ್ತಾಗ ಚೆಲ್ಲಲ್ಪಟ್ಟ ರಕ್ತದ ಮೂಲಕ ನಮ್ಮೆಲ್ಲರನ್ನು ರಕ್ಷಣೆಯೆಡೆಗೆ ನಡೆಸುತ್ತಾನೆ. ಯಾವಾಗ ಆತನ ಕರೆಗೆ ವಿಧೇಯರಾಗಿ ಆತನನ್ನು ನಮ್ಮ ವೈಯಕ್ತಿಕ ರಕ್ಷಕನಾಗಿ ಅಂಗೀಕರಿಸಿದಾಗ ತಂದೆಯ ರಕ್ಷಣೆಗಾಗಿನ ಯೋಜನೆಯು ನೆರವೇರಲ್ಪಡುತ್ತದೆ.


ಯೇಸುಕ್ರಿಸ್ತನನ್ನು ನಾವು ನಮ್ಮ ಸ್ವಂತ ರಕ್ಷಕನಾಗಿ ಅಂಗೀಕರಿಸಿಕೊಳ್ಳುವಾಗ ಪವಿತ್ರಾತ್ಮನಾದ ದೇವರು ನಮ್ಮ ಜೀವನದಲ್ಲಿ ರೂಪಾಂತರವನ್ನುಂಟುಮಾಡುತ್ತಾನೆ.

ನಮ್ಮ ಹೃದಯಗಳು ಮಾರ್ಪಟ್ಟಾಗ ಮತ್ತು ನಮ್ಮ ಇದು ಹಳೆ ಪಾಪಮಯ ಜೀವನ ಯೇಸು ಕ್ರಿಸ್ತನ ರಕ್ತದ ಮೂಲಕ ತೊಳೆಯಲ್ಪಟ್ಟಾಗ ನಾವು ಅನುಭವಿಸುವ ಆತನ ಶುದ್ಧೀಕರಣ ಕಾರ್ಯವಾಗಿದೆ.

ಈ ಲೋಕದಲ್ಲಿ ಚದುರಿಸಲ್ಪಟ ಪ್ರವಾಸಿಗಳು ಎಂಬ ಅಂಶವನ್ನು ಒಳಗೊಂಡಿರುವ ಪೇತ್ರನ ಸಭೆಯ ಕುರಿತಾಗಿನ ವರ್ಣನೆಯು ಸಭಾ ಇತಿಹಾಸದುದ್ದಕ್ಕೂ ಸವಾಲಿನಿಂದ ಕೂಡಿದ್ದೇ ಆಗಿದೆ. ನಮ್ಮ

ಪೌರತ್ವವು ಪರಲೋಕದಲ್ಲಿ ಇದೆ ಎಂಬುದನ್ನು ನಾವು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕು (ಫಿಲಿಪ್ಪಿ 3:20).

ನಾವು ಈ ಲೋಕಕ್ಕೆ ಸಂಬಂಧ ಪಟ್ಟವರಲ್ಲಿ ಈ ಲೋಕದಲ್ಲಿ ನಾವು ಕೇವಲ ಪ್ರವಾಸಿಗಳಾಗಿದ್ದೇವೆ. ಇದನ್ನು ಬಿಡಲು ನಾವು ಯಾವಾಗಲೂ ಸಿದ್ಧರಿರಬೇಕು. ವ್ಯಕ್ತಿಗತವಾಗಿ ನಾವು ನಾಳೆ ಬದುಕುತ್ತೇವೆಂಬುದಕ್ಕೆ ನಮಗೆ ಯಾವುದೇ ಭರವಸೆಯಿಲ್ಲ. ಅಪಘಾತ ಅಥವಾ ಅನಾರೋಗ್ಯದ ರೂಪದಲ್ಲೇ ಆಪತ್ತು ಯಾವ ದಿನ ಬೇಕಾದರೂ ನಮ್ಮನ್ನು ಹೊಡೆದುರುಳಿಸಬಹುದು. ಈ ಜಗತ್ತಿನಿಂದ ನಮ್ಮ ನಿರ್ಗಮನಕ್ಕಾಗಿ ನಾವು ಯಾವಾಗಲೂ ಸಿದ್ಧರಿರಬೇಕು. ಕ್ರಿಸ್ತನ ದೇಹವಾಗಿ ಸಾರ್ವತ್ರಿಕ ಸಭೆಯಾಗಿ ಈ ಲೋಕದಲ್ಲಿನ ಜೀವನಕ್ಕಿಂತ ಮಿಗಿಲಾಗಿ ನೋಡಬೇಕು. ನಾವು ಪರಲೋಕದಿಂದ ನಮ್ಮ ರಕ್ಷಕನ, ಕರ್ತನಾದ ಯೇಸು ಕ್ರಿಸ್ತನ ಬರುವಿಕೆಗಾಗಿ ಕಾತುರದಿಂದ ನಿರೀಕ್ಷಿಸಬೇಕು (ಫಿಲಿಪ್ಪಿ 3:20)



*ಈ 3 ಚಿಹ್ನೆಗಳು ತ್ರೈಯೇಕತ್ವವನ್ನು– ಒಂದರಲ್ಲಿ ತಂದೆಯಾದ ದೇವರು, ಮಗನಾದ ದೇವರು ಮತ್ತು ಪವಿತ್ರಾತ್ಮನಾದ ದೇವರನ್ನು ಸೂಚಿಸಲು ಕ್ರೈಸ್ತ ಸಭೆಗಳಿಂದು ಉಪಯೋಗಿಸಲ್ಪಟ್ಟವು.*

*ತನ್ನ ಮೊದಲ ಪತ್ರಿಕೆಯ ಪ್ರಾರಂಭದಲ್ಲಿಯೇ ಪೇತ್ರನು ತನ್ನ ಓದುಗರಿಗೆ ಕೆಳಕಂಡ ಮಾತುಗಳಿಂದ ತ್ರೈಯೇಕ ದೇವರ ಸಭೆಗಾಗಿ ರಕ್ಷಣೆಯ ಕಾರ್ಯವನ್ನು ಮಾಡುತ್ತಿದ್ದಾನೆಂದು ತಿಳಿಸುತ್ತಾನೆ:'ಪೊಂತ, ಗಲಾತ್ಯ, ಕಪ್ಪದೋಕ್ಯ, ಆಸ್ಯ, ಬಿಥೂನ್ಯ, ಎಂಬ ಸೀಮೆಗಳಲ್ಲಿ ಚದುರಿರುವಂತ ಪ್ರವಾಸಿಗಳಾದ ದೇವಜನರಿಗೆ ಅಂದರೆ ಪವಿತ್ರಾತ್ಮನಿಂದ (ಪ್ರತಿಷ್ಠಿಸಲ್ಪಟ್ಟವರಾಗಿ ದೇವರಿಗೆ ವಿಧೇಯರಾಗುವುದಕ್ಕೂ, ಯೇಸು ಕ್ರಿಸ್ತನ ರಕ್ತದಿಂದ ಪ್ರೋಕ್ಷಿತರಾಗುವುದಕ್ಕೂ ತಂದೆಯಾದ ದೇವರ ಭವಿಷ್ಯದ ಜ್ಞಾನಾನುಸಾರವಾಗಿ ಆರಿಸಿಕೊಳ್ಳಲ್ಪಟ್ಟವರಿಗೆ' (1 ಪೇತ್ರ 1:1–2).*

# ಉತ್ತರಗಳು 2: ಜೀವಂತ ನಿರೀಕ್ಷೆ, 1:3–12

## ಶಿಕ್ಷಕರ ಗಮನಕ್ಕೆ

ವಚನ 9 ರಲ್ಲಿ *ಟೆಲೋಸ್* ಎಂಬ ಗ್ರೀಕ್ ಪದವನ್ನು ನಾವು ಕಾಣುತ್ತೇವೆ. ಇದು ಅನೇಕ ಅರ್ಥಗಳನ್ನು ಒಳಗೊಂಡಿದೆ (ಕೊನೆ/ಅಂತ್ಯ, ಫಲಿತಾಂಶ, ಹೊರಬರುವಿಕೆ, ಮುಗಿಸು, ಗುರಿ). ಇಂಗ್ಲೀಷನ ಎನ್ಐವಿ ಯು ಇದನ್ನು ಗುರಿ ಎಂದು ಭಾಷಾಂತರಿಸಿದೆ. ಕನ್ನಡದ ಎನ್ಐಬಿವಿ ಯು ಫಲ ಫಲಿತಾಂಶ ಮತ್ತು ಕನ್ನಡದ ಜೆವಿ ಯು ಅಂತ್ಯಫಲ (ಕೊನೆ ಫಲಿತಾಂಶ) ಎಂದು ಹೇಳುತ್ತವೆ.

ಪ್ರವಾದಿಗಳು ಮತ್ತು ಅವರ ಕೃಪೆಯ ಸಂದೇಶದ ಕುರಿತಾಗಿನ ಪೇತ್ರನ ಮಾತುಗಳು (ವ. 10–12) ಅನೇಕ ವಿಧಗಳಲ್ಲಿ / ರೀತಿಯಲ್ಲಿ ಅರ್ಥೈಸಲ್ಪಟ್ಟಿವೆ. ನನ್ನ 5 ಅಂಶಗಳು ಜೊಂಡರ್ವನ್ ಎನ್ಐವಿ ಸತ್ಯವೇದ ವ್ಯಾಖ್ಯಾನವನ್ನು ಆಧರಿಸಿದೆ.

## ಉತ್ತರಗಳು

1. ದೇವರು ನಮಗಾಗಿ ಮಾಡಿದ ಸಂಗತಿಗಳಿಗಾಗಿ ಪೇತ್ರನು ದೇವರನ್ನು ಕೊಂಡಾಡುತ್ತಾನೆ.
2. ಹಾಗಾದರೆ ಯೇಸು ನಮಗಾಗಿ ಏನನ್ನು ಮಾಡಿದ್ದಾನೆ.
    a. ಆತನು ನಮ್ಮನ್ನು ರಕ್ಷಿಸಿದ್ದಾನೆ (ನಮಗೊಂದು ಹೊಸ ಜನ್ಮವನ್ನು ಕೊಟ್ಟಿದ್ದಾನೆ).
    b. ಆತನು ಕ್ರಿಸ್ತನಲ್ಲಿ ನಮಗೊಂದು ಜೀವಂತ ನಿರೀಕ್ಷೆಯನ್ನು ಕೊಟ್ಟಿದ್ದಾನೆ. ಈ ನಿರೀಕ್ಷೆಯು ಜೀವಂತವಾಗಿದೆ, ಯಾಕೆಂದರೆ ಯೇಸು ಜೀವಿಸುತ್ತಿದ್ದಾನೆ.
    c. ತನ್ನ ನಿತ್ಯರಾಜ್ಯಕ್ಕಾಗಿ ಆತನು ನಮ್ಮನ್ನು ನಡೆಸಿದ್ದಾನೆ (ಎಂದಿಗೂ ನಾಶವಾಗದ, ಲಯವಾಗದ. ಕಳಂಕವಿಲ್ಲದ ಸ್ವಾಸ್ತ್ಯಕ್ಕಾಗಿ ಪರಲೋಕದಲ್ಲಿ ಇಡಲ್ಪಟ್ಟಿದೆ.
3. ಈ ವಾಕ್ಯಭಾಗದಿಂದ 'ಜೀವಂತ ನಿರೀಕ್ಷೆ'ಯ ಬಗ್ಗೆ 3 ಸಂಗತಿಗಳನ್ನು ನಾವು ತಿಳುಕೊಳ್ಳುತ್ತೇವೆ (ವ. 4–5).
    a. ಇದು ಯೇಸು ಕ್ರಿಸ್ತನ ಪುನರುತ್ಥಾನದ ಮೇಲೆ ಆಧಾರಗೊಂಡಿರುವ ನಿರೀಕ್ಷೆಯಾಗಿದೆ (ವ.3). ಹಾಗಾಗಿ ಇದು ಒಂದು ಐತಿಹಾಸಿಕ ವಾಸ್ತವಾಂಶ/ಸತ್ಯಾಂಶದ ಮೇಲೆ ಆಧಾರಗೊಂಡಿದೆ. ಇದು ಈ ಮೊದಲೇ ಲಂಗರು ಹಾಕಲ್ಪಟ್ಟಿದೆ: ಯೇಸುವು ಮರಣದಿಂದ ಎದ್ದಿದ್ದಾನೆ.
    b. ಇದು ಪ್ರಸ್ತುತದಲ್ಲಿ ಉಳಿದುಕೊಂಡಿರುವ ಒಂದು ನಿರೀಕ್ಷೆಯಾಗಿದೆ: ಯೇಸುವು ಜೀವಿಸುತ್ತಿದ್ದಾನೆ.
    c. ಇದು ಭವಿಷ್ಯದಲ್ಲಿ ಸಂಪೂರ್ಣವಾಗಲಿರುವ ಒಂದು ನಿರೀಕ್ಷೆಯಾಗಿದೆ: ಯೇಸುವು ತಿರುಗಿ ಬರುತ್ತಾನೆ.
4. ಈ ಲೋಕದಲ್ಲಿನ ವಿಶ್ವಾಸಿಗಳ ಜೀವನದ ಬಗ್ಗೆ ಪೇತ್ರನು 3 ಸಂಗತಿಗಳನ್ನು ಹೇಳುತ್ತಾನೆ (ವ. 5–6)

a. ಇದೊಂದು ಬಾಧೆಪಡುವ ಜೀವನವಾಗಿರಬಹುದು (ವ.5–6).

b. ಆದರೆ ಯೇಸು ಕ್ರಿಸ್ತನಲ್ಲಿ ನಾವು ನಂಬಿಕೆಯಿಟ್ಟಾಗ ಈ ಬಾಧೆಯಿಂದ ಬಿಡಿಸಲು ದೇವರು ಶಕ್ತನಾಗಿದ್ದಾನೆ (ವ.5).

c. ಹಾಗಾಗಿ ನಾವು ಹರ್ಷಿಸಬೇಕು (ವ.6)

5. ಯೇಸು ಕ್ರಿಸ್ತನ ಎರಡನೇ ಬರೋಣದಲ್ಲಿ ದೇವರ ರಕ್ಷಣೆಯ ಕಾರ್ಯವು ಪೂರ್ಣಗೊಂಡಾಗ ವಿಶ್ವಾಸಿಗಳ ಬಾಧೆಗಳಿಗೆ ಅಂತ್ಯ ಬರುತ್ತದೆ (ವ.5).

6. ವಿಶ್ವಾಸಿಗಳ ಬಾಧೆಯ ಎರಡು ಉದ್ದೇಶವನ್ನು ಪೇತ್ರನು ಉಲ್ಲೇಖಿಸುತ್ತ್ತಾನೆ (ವ.7).

   a. ಬಾಧೆಯು ವಿಶ್ವಾಸಿಗಳ ನಂಬಿಕೆಯನ್ನು ಪರೀಕ್ಷಿಸುತ್ತದೆ.

   b. ವಿಶ್ವಾಸಿಗಳ ಬಾಧೆಯು ಪರೀಕ್ಷೆಯ ಯಶಸ್ಸಿನ ನಡೆಯು ಯೇಸು ಕ್ರಿಸ್ತನ ಬರೋಣದಲ್ಲಿ ದೇವರಿಗೆ ಮಹಿಮೆಯನ್ನು ತರುತ್ತದೆ.

7. ವಚನ 7–9 ರಿಂದ ನಮ್ಮ ಕ್ರೈಸ್ತೀಯ ನಂಬಿಕೆಯಿಂದ ನಾವು 5 ಸಂಗತಿಗಳನ್ನು ಕಲಿಯಬಹುದು.

   a. ನಮ್ಮ ನಂಬಿಕೆಯು ಬಹು ಅಮೂಲ್ಯವಾದುದ್ದಾಗಿದೆ (ಬಂಗಾರಕ್ಕಿಂತಲೂ ಬೆಲೆಯುಳ್ಳದ್ದು ವ.7)

   b. ಲೋಕದಲ್ಲಿನ ಬಾಧೆಯು ನಮ್ಮ ನಂಬಿಕೆಯು ನೈಜವಾದದ್ದೆಂಬುದನ್ನು ಸ್ಥಾಪಿಸಿ ತೋರಿಸುತ್ತದೆ (ವ.7).

   c. ನಮ್ಮ ನಂಬಿಕೆಯ ಫಲಿತಾಂಶವು– ಕೀರ್ತಿ, ಪ್ರಭಾವ ಮತ್ತು ಮಾನಗಳಾಗಿವೆ (ವ.7). ಇದು ನಮಗಲ್ಲ ಆದರೆ ದೇವರಿಗೆ.

   d. ನಮ್ಮ ನಂಬಿಕೆಯು ಯೇಸು ಕ್ರಿಸ್ತನಲ್ಲಿದೆ (ವ.8).

   e. ನಮ್ಮ ನಂಬಿಕೆಯ ಗುರಿಯು ನಮ್ಮ ಆತ್ಮಗಳ ರಕ್ಷಣೆಯಾಗಿದೆ (ವ.9).

8. ವ. 10–12 ರಿಂದ ರಕ್ಷಣೆಯ ಬಗ್ಗೆ ಹಳೆಯ ಒಡಂಬಡಿಕೆಯ ಪ್ರವಾದನಾ ಮಾತಿನ ಬಗ್ಗೆ 5 ಮುಖ್ಯ ಅಂಶಗಳನ್ನು ಕಲಿಯುತ್ತೇವೆ.

   a. ಹಳೆ ಒಡಂಬಡಿಕೆಯ ಪ್ರವಾದಿಗಳು ನಿಜವಾಗಲೂ ಯೇಸು ಕ್ರಿಸ್ತನ ಮೂಲಕ ದೇವರ ರಕ್ಷಣ ಕಾರ್ಯದ ಬಗ್ಗೆ ಮಾತನಾಡಿದರು (ವ.10)

   b. ಆದರೆ ಈ ರಕ್ಷಣೆಯ ಸಮಯ ಮತ್ತು ಪರಿಸ್ಥಿತಿಗಳ ಬಗ್ಗೆ ಅವರು ಮಿತಿಯಾದ ತಿಳುವಳಿಕೆಯನ್ನು ಹೊಂದಿದ್ದರು (ವ.11).

   c. ತಮಗಾಗಿ ಅಲ್ಲ, ಆದರೆ ಭವಿಷ್ಯದ ಸಂತತಿಗಾಗಿ ತಾವು ಒಂದು ಕೃಪೆಯ ಮತ್ತು ರಕ್ಷಣೆಯ ಸಂದೇಶವನ್ನು ಹೊಂದಿರುವರೆಂಬುದನ್ನು ಅವರೂ ತಿಳಿದಿದ್ದರು (ವ.12)

d. ಯೇಸು ಕ್ರಿಸ್ತನ ಬಾಧೆ ಮತ್ತು ಪ್ರಭಾವದ ಬಗ್ಗೆ ಪವಿತ್ರಾತ್ಮನು (ಕ್ರಿಸ್ತನ ಆತ್ಮನು) ಅವರ ಮೂಲಕ ಮಾತನಾಡಿದನು (ವ.11).

e. ಹೊಸ ಒಡಂಬಡಿಕೆಯ ಬೋಧಕರುಗಳು, ಪ್ರಸಂಗಿಗಳು ಮತ್ತು ಬರಹಗಾರರು ಯೇಸು ಕ್ರಿಸ್ತನ ಕುರಿತಾಗಿ ಪ್ರಸಂಗಿಸಿದಾಗೆಲ್ಲಾ ಕೃಪೆ ಮತ್ತು ರಕ್ಷಣೆಯ ಬಗೆಗಿನ ಹಳೆ ಒಡಂಬಡಿಕೆಯ ಪ್ರವಾದನಾ ಮಾತನ್ನು ಖಾತರಿ ಪಡಿಸಿದ್ದಾರೆ (ಹಿಂದಿನ ಅಂಶಗಳನ್ನು ನೋಡಿರಿ) (ವ.12).



## ಅವಲೋಕನ

ಆಧುನಿಕ ವಿಶ್ವಾಸಿಗಳಾದ ನಾವು ನಮ್ಮ ನಿರೀಕ್ಷೆಯನ್ನು ಯಾವುದಕ್ಕೆ ನೆಟ್ಟಿದ್ದೇವೆ? ನಮ್ಮ ಸ್ವಂತ ತಲಾಂತು ಮತ್ತು ಸಂಪನ್ಮೂಲಗಳ ಮೇಲೆ ನಾವು ನಮ್ಮ ಭರವಸೆಯನ್ನು ಇಟ್ಟಿದ್ದೇವೋ? ಅಥವಾ ನಮ್ಮ ಕೌಟುಂಬಿಕ ಹಿನ್ನಲೆ ಮತ್ತು ನಮ್ಮ ಅರ್ಹತೆಗಳು ನಮಗೆ ಉನ್ನತ ಭವಿಷ್ಯದ ನಿರೀಕ್ಷೆಯನ್ನು ಕೊಡುತ್ತಾವೋ? ಈ ಭಾಗದಲ್ಲಿ– ನಮ್ಮ ಉನ್ನತ ಭವಿಷ್ಯಕ್ಕಾಗಿನ ನಿರೀಕ್ಷೆಯು ಕೇವಲ ಯೇಸು ಕ್ರಿಸ್ತನಲ್ಲಿ ಮಾತ್ರ ಆಧಾರಗೊಂಡಿದೆ ಎಂಬುದಾಗಿ ಪೇತ್ರನು ಸ್ಪಷ್ಟೀಕರಿಸುತ್ತಾನೆ.



ನಮ್ಮ ಜೀವನಕ್ಕಾಗಿ ಕೇವಲ ಒಂದು ನೈಜ ನಿತ್ಯ ಗುರಿ/ ಉದ್ದೇಶವಿರಲು ಸಾಧ್ಯ– ಅದು ನಮ್ಮ ಆತ್ಮಗಳಿಗಾಗಿನ ಕಡೆಯ ರಕ್ಷಣೆ. ಈ ರಕ್ಷಣೆಯು ಭವಿಷ್ಯದಲ್ಲಿ ನೆಲೆಗೊಂಡಿದೆ. ಇದು ಯೇಸು ಕ್ರಿಸ್ತನ ಪುನರಾಗಮನ ಮತ್ತು ದೇವರ ನಿತ್ಯರಾಜ್ಯದ ಪೂರ್ಣ ಮಹಿಮೆಯ ಪ್ರತ್ಯಕ್ಷತೆಯಲ್ಲಿ ನೆರವೇರುತ್ತದೆ. ಆದರೆ ಆ ಭವಿಷ್ಯದ ಘಟನೆಯು / ಸಂಗತಿಯು ಭೂತ ಮತ್ತು ವರ್ತಮಾನದಲ್ಲೂ ಒಳಗೊಂಡಿದೆ. ನಮ್ಮ ನಿರೀಕ್ಷೆಯು ಯೇಸು ಕ್ರಿಸ್ತನ ಈ ಲೋಕದ ಜೀವನ, ಶಿಲುಬೆಯ ಮೇಲಿನ ಬಾಧೆ, ಆತನ ಮರಣ ಮತ್ತು ಪುನರುತ್ಥಾನಗಳೆಂಬ ಐತಿಹಾಸಿಕ ಸತ್ಯಾಂಶ/ ವಾಸ್ತವಾಂಸಗಳಿಗೆ ಆಧಾರಗೊಂಡಿದೆ. ನಮ್ಮ ನಿರೀಕ್ಷೆಯು ಯೇಸು ಕ್ರಿಸ್ತನು ಇಂದು ಜೀವಿಸುತ್ತಿದ್ದಾನೆಂಬ ವಾಸ್ತವಾಂಶಕ್ಕೂ ಆಧಾರಗೊಂಡಿದೆ. ಯೇಸು ಕ್ರಿಸ್ತನು ನಮ್ಮ ಜೀವಿತದಲ್ಲಿ ಜೀವಿಸುತ್ತಿರುವುದರಿಂದ ನಮಗೊಂದು 'ಜೀವಂತ' ನಿರೀಕ್ಷೆಯಿದೆ. ಈ ಜೀವಂತ ನಿರೀಕ್ಷೆಯನ್ನು ನಾವು ಪಾಲಿಸಿದರೆ ನಾವು ನಮ್ಮ ಕರ್ತನೂ ರಕ್ಷಕನೂ ಆದ ಯೇಸು ಕ್ರಿಸ್ತನ ಮೇಲೆ ಆತುಕೊಳ್ಳುವುದಾದರೆ ಆಗ ನಾವು ಭವಿಷ್ಯವನ್ನು ಭರವಸದಿಂದ ಎದುರಿಸಬಹುದು.

ನಾವು ಬಾಧೆಯನ್ನು ಇಷ್ಟಪಡುವುದಿಲ್ಲ, ಮತ್ತು ಯಾಕೆ ದೇವರು ಈ ಲೋಕದಲ್ಲಿ ತನ್ನ ಜನರನ್ನು ಬಾಧೆ ಪಡುವುದಕ್ಕೆ ಅನುಮತಿಸುತ್ತಾನೆಂಬುದನ್ನು ಸಹ ನಾವು ಸುಲಭವಾಗಿ ಸ್ವೀಕರಿಸುವುದಿಲ್ಲ. ಪೇತ್ರನ ಪತ್ರಿಕೆಯ ಮೊದಲ ಓದುಗರು ಬಾಧೆಯನ್ನು ಅನುಭವಿಸುತ್ತಿದ್ದರು. ಸಭಾ ಇತಿಹಾಸದುದ್ದಕ್ಕೂ ಒಳ್ಳೆಯ ಮತ್ತು ನಂಬಿಗಸ್ತ ವಿಶ್ವಾಸಿಗಳು ಬಾಧೆಯನ್ನು ಅನುಭವಿಸಿದ್ದಾರೆ. ಈ ವಾಕ್ಯಭಾಗದಲ್ಲಿ ಪೇತ್ರನು ಕ್ರೈಸ್ತೀಯ ಬಾಧೆಯ ಕೆಲವು ಮಗ್ಗಲುಗಳನ್ನು ವಿವರಿಸುತ್ತಾನೆ ಮತ್ತು

ಕಡೆಯಲ್ಲಿ ಸಹ ತನ್ನ ಪತ್ರಿಕೆಯಲ್ಲಿ ಇದೇ ವಿಷಯಕ್ಕೆ ತಿರುಗಿ ಬರೆಯುತ್ತಾನೆ. ಈ ಒಂದು ಹಂತದಲ್ಲಿ 4 ಸಂಗತಿಗಳ ವಿಷಯದಲ್ಲಿ ನಮ್ಮನ್ನು ನೆನಪಿಸಲು ಬಯಸುತ್ತಾನೆ:

1. ನಮ್ಮ ಬಾಧೆಯು ಮಿತಿಯುಳ್ಳದ್ದಾಗಿದೆ. ಈ ಲೋಕದಲ್ಲಿ ಜೀವನವು ಮುಗಿದಾಗ ಇದೂ ಸಹ ಮುಗಿಯುತ್ತದೆ. ಮತ್ತೆ ಈ ಲೋಕದಲ್ಲಿ ಬರಲು ಯಾವುದೇ ಬಾಧೆಗಳಿರುವುದಿಲ್ಲ.

2. ನಮ್ಮ ಶಕ್ತಿಯನ್ನು ಮೀರಿ ಬಾಧೆಪದಲು ದೇವರು ಬಿಡುವುದಿಲ್ಲ. ಆತನು ತನ್ನ ಜನರಿಗೆ ನಂಬಿಗಸ್ಥನಾಗಿದ್ದಾನೆ ಮತ್ತು ನಮ್ಮನ್ನು ಆತನು ಪ್ರಸ್ತುತ ಬಾಧೆಗಳ ಮೂಲಕ ಒಯ್ದು ಮತ್ತು ತನ್ನ ಪ್ರಭಾವದ/ಮಹಿಮೆಯ ಹೊಸ ಭೂಪರಲೋಕಗಳಿಗೆ ನಮ್ಮನ್ನು ತರುತ್ತಾನೆ.

3. ಬಾಧೆಯು ಸಂಪೂರ್ಣವಾಗಿ ಅಷ್ಟು ಕೆಟ್ಟದಲ್ಲ. ಬೆಂಕಿಯು ಬಂಗಾರವನ್ನು ಶುದ್ಧೀಕರಿಸಿದಂತೆ ಬಾಧೆಯು ವಿಶ್ವಾಸಿಗಳನ್ನು ಶುದ್ಧೀಕರಿಸುತ್ತದೆ. ಬಾಧೆಯು ಬಲಪಡಿಸಬಲ್ಲದು ಮತ್ತು ದೇವರಿಗಾಗಿನ ಸೇವೆಯಲ್ಲಿ ಹೆಚ್ಚು ಪ್ರಯೋಜನಕಾರಿಯಾಗಿ ಮಾಡಬಲ್ಲದು.

4. ನಮ್ಮ ಬಾಧೆಯು ದೇವರಿಗೆ ಮಹಿಮೆಯನ್ನು ತರಬಲ್ಲದು. ನಾವು ನಮ್ಮ ಬಾಧೆಯನ್ನು ಕ್ರಿಸ್ತನನ್ನು ಅನುಕರಿಸುವಂತೆ ನಿಜವಾದ ಕ್ರೈಸ್ತೀಯ ದೀನತೆಯಿಂದ ಉಪಯೋಗಿಸಿದರೆ ದೇವರು ಮಹಿಮೆ ಹೊಂದುವನು. ಅಷ್ಟೇಅಲ್ಲದೇ ಲೋಕದಲ್ಲಿನ ಬಾಧೆಯು ನಡುವೆಯೂ ದೇವರಿಗಾಗಿನ ನಮ್ಮ ನಂಬಿಗಸ್ತಿಕೆಯು ನಮಗಾಗಿನ ಆತನ ನಂಬುಗಸ್ತಿಕೆಯನ್ನು ಋಜುಪಡಿಸುತ್ತದೆ. ಮತ್ತೂ ಇದರ ಫಲಿತಾಂಶಕ್ಕಾಗಿ ಯೇಸು ಕ್ರಿಸ್ತನ ಬರೋಣದಲ್ಲಿ ಆತನು ಮಹಿಮೆ ಹೊಂದುವನು.

ಹಳೆಯ ಒಡಂಬಡಿಕೆಯ ಪ್ರವಾದನಾ ನುಡಿಗಳ ಸಾಕ್ಷಿಯನ್ನು ನಾವು ಅಲಕ್ಷಿಸಬಾರದು. ಹಳೆಯ ಒಡಂಬಡಿಕೆಯ ನಿಸಂದೇಹವಾಗಿ ಯೇಸು ಕ್ರಿಸ್ತನ ಮೂಲಕ ಜನರಿಗೆ ರಕ್ಷಣೆಯನ್ನು ತರುವ ದೇವರ ಉನ್ನತವಾದ ಯೋಜನೆಯನ್ನು ಸೂಚಿಸುತ್ತದೆ. ಪವಿತ್ರಾತ್ಮನು ಗತಕಾಲದಲ್ಲಿ ಆಗಾಗ್ಗೆ ಪ್ರವಾದಿಗಳ ಮೂಲಕ ಮಾತನಾಡಿದನು – ಅನೇಕ ಬಾರಿ ಅವರಿಗೆ ಸ್ಪಷ್ಟವಾಗಿ ಅರ್ಥವಾಗುವ ರೀತಿಯಲ್ಲಿ ಮಾತನಾಡಲಿಲ್ಲ. ನಾವು ಹೊಸ ಒಡಂಬಡಿಕೆಯ ವಚನಗಳನ್ನು ಅಭ್ಯಾಸಿಸುವಾಗ ಅದನ್ನು ಸ್ಪಷ್ಟವಾಗಿ ಕಾಣಬಹುದು ಮತ್ತು ಯೇಸು ಕ್ರಿಸ್ತನು ಹಾಗೂ ಅಪೋಸ್ತಲರು ತನ್ನ ಜನನ, ಜೀವನ, ಮರಣ, ಪುನರುತ್ಥಾನ ಮತ್ತು ಸ್ವರ್ಗಾರೋಹಣಗಳ ಕುರಿತಾದ ತಮ್ಮ ಬೋಧನೆಗಳನ್ನು ಬೆಂಬಲಿಸಲು ಹಳೆ ಒಡಂಬಡಿಕೆಯ ವಚನಗಳನ್ನು ಉಲ್ಲೇಖಿಸಿದರು ಎಂಬುದನ್ನು ಕಾಣುತ್ತೇವೆ.

# ಉತ್ತರಗಳು 3: ಪರಿಶುದ್ಧರಾಗಿರ್ರಿ, 1:13–2:3

## ಶಿಕ್ಷಕರ ಗಮನಕ್ಕೆ

ಈ ಅಧ್ಯಾಯವು ನಮಗೆ ರಕ್ಷಣೆ ಮತ್ತು ಪರಿಶುದ್ಧರಾಗಿ ಜೀವಿಸುವುದರ ನಡುವಣ ಸಂಬಂಧವನ್ನು ಕಾಣಲು ಸಹಾಯಕವಾಗುತ್ತದೆ. ಅಲ್ಲದೆ ನಮ್ಮ ಆತ್ಮಿಕ ಅಭಿವೃದ್ಧಿಗಾಗಿ ದೇವರ ವಾಕ್ಯದ ಪ್ರಾಮುಖ್ಯತೆಯನ್ನು ಸಹ ತೋರಿಸುತ್ತದೆ.

ಆತ್ಮಿಕ ಕೂಟದ ಮೊದಲ ಭಾಗವು (ಈ ಪುಸ್ತಕದ ***ಆತ್ಮಿಕ ಕೂಟ*** ವಿಭಾಗವನ್ನು ನೋಡಿರಿ) ಯಾವ ರೀತಿಯ ಪರಿಶುದ್ಧ ಜೀವನವು ದಕ್ಷಿಣ ಭಾರತದ ಸನ್ನಿವೇಶದಲ್ಲಿ ನಿರೂಪಣೆಯಾಗಿರುತ್ತದೆ ಎಂಬ ವಿದ್ಯಾರ್ಥಿಗಳ ತಿಳುವಳಿಕೆಯನ್ನು ಆಳವಾಗಿಸುತ್ತದೆ.

## ಉತ್ತರಗಳು

1. “ಆದುದ್ದರಿಂದ” (ವ.13) ವು ಈ ಹಿಂದಿನ ವಾಕ್ಯಭಾಗವನ್ನು (ನಮ್ಮ ರಕ್ಷಣೆಯ ಕುರಿತಾಗಿ) ಈ ವಾಕ್ಯಭಾಗಕ್ಕೆ (ಕ್ರೈಸ್ತೀಯ ಜೀವಿತದ ಬಗ್ಗೆ) ಜೋಡಿಸುತ್ತದೆ. ಪೇತ್ರನು ಹೇಳುವ ಅಂಶವು ದೇವರ ರಕ್ಷಣೆಯನ್ನು ಹೊಂದಿದ ನಾವುಗಳು ನಮ್ಮ ಬದಲಾದ ಜೀವನದ ಮೂಲಕ ಇದರ ಆಧಾರವನ್ನು ತೋರಿಸಬೇಕೆಂಬುದಾಗಿದೆ. ವಿಶ್ವಾಸಿಗಳ ಜೀವನವು ಆತ್ಮನಿಯಮ, ವಿಧೇಯತೆ ಮತ್ತು ಪರಿಶುದ್ಧತೆಯ ಸ್ವಭಾವಗಳಿಂದ ಕೂಡಿರಬೇಕು.
2. ಈ ವಾಕ್ಯಭಾಗದಲ್ಲಿ ಪೇತ್ರನು ಅನೇಕ ಅಜ್ಞಾರ್ಥಕ / ಪ್ರಚೋದನಗಳನ್ನು ಉಪಯೋಗಿಸುತ್ತಾನೆ. ಈ ಕ್ರಿಯಾಪದ ರೂಪವು ಆಜ್ಞೆಗಳನ್ನು, ನಿರ್ದೇಶನ ಮತ್ತು ಪ್ರಚೋಧನೆಗಳನ್ನು ಕೊಡಲು ಉಪಯೋಗಿಸಲ್ಪಟ್ಟಿದೆ. ಇಂಗ್ಲೀಷನ ಎನ್ಐವಿ ಭಾಷಾಂತರವು ವ.13–16 ರಲ್ಲಿ 5 ಪ್ರಚೋಧಕಗಳ / ಆಜ್ಞಾರ್ಥಕಗಳನ್ನು ಹೊಂದಿದೆ. ನಿಮ್ಮ ಕನ್ನಡ ಸತ್ಯವೇದದಲ್ಲಿ ನೀವು ಎಷ್ಟನ್ನು ಕಾಣುವಿರಿ?
3. ವ.13–16 ರಲ್ಲಿನ ಪೇತ್ರನ ಆಜ್ಞೆ ಮತ್ತು ಹಿತವಚನ/ಎಚ್ಚರಿಕೆಗಳ ಪಟ್ಟಿ ಇಲ್ಲಿದೆ:

   a. ನೀವು ಮನಸ್ಸಿನ ನಡುವನ್ನು ಕಟ್ಟಿಕೊಳ್ಳಿರಿ: ಇದರರ್ಥವು ನಿಮ್ಮ ರಕ್ಷಣೆಯ ಪರಿಣಾಮಾರ್ಥವಾಗಿ ಏನಾದರೂ ಮಾಡಲು ನೀವು ಸಿದ್ಧರಿರಬೇಕೆಂಬುದಾಗಿದೆ.

   b. ಸ್ವಸ್ಥಚಿತ್ತರಾಗಿರಿ: ಇದರರ್ಥವು ನೀವು ತುಂಬಾ ದುಡುಕಬಾರದು ಇಲ್ಲವಾದರೆ ಆವೇಶದಿಂದ ಕಾರ್ಯಮಾಡಬಾರದು. ಬದಲಾಗಿ ನೀವು ಸ್ಪಷ್ಟವಾದ ಮನಸ್ಸನ್ನು ಹೊಂದಿರಬೇಕು. ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ನೀವು ಸ್ವಸ್ಥವಾದ ತೀರ್ಪನ್ನು ಹೊಂದಿರಬೇಕು.

   c. ಯೇಸು ಕ್ರಿಸ್ತನು ಪ್ರತ್ಯಕ್ಷನಾಗುವಾಗ ನಿಮಗೆ ದೊರಕುವ ಭಾಗ್ಯದ ಮೇಲೆ ನಿಮ್ಮ ನಿರೀಕ್ಷೆಯನ್ನು ಸಂಪೂರ್ಣವಾಗಿ ಇಡಿರಿ: ಇದರರ್ಥವು ನೀವು ನಿಮ್ಮ ದೃಷ್ಟಿಯನ್ನು ಯೇಸು ಕ್ರಿಸ್ತನ ಮೇಲೆ ಮತ್ತು ಆತನ ಬರೋಣದ ಮೇಲೆ ಇಡಬೇಕು. ನಿಮ್ಮ ನಿರೀಕ್ಷೆ (ಮತ್ತು ಭರವಸೆ) ಲೋಕದ ಸಂಗತಿಗಳಲ್ಲಿ ಅಲ್ಲ, ಆದರೆ ಯೇಸು ಕ್ರಿಸ್ತನಲ್ಲಿ ಮತ್ತು ಆತನ ಎರಡನೇ ಬರೋಣದಲ್ಲಿಡಬೇಕಾಗಿದೆ.

d. ನೀವು ಅಜ್ಞಾನಿಗಳಾಗಿದ್ದಾಗ ನಿಮಗಿದ್ದ ದುರಾಶೆಗಳನ್ನು ಅನುಸರಿಸಿ ನಡೆಯುವವರಾಗಿರಬಾರದು: ಇದರರ್ಥವು ಕ್ರೈಸ್ತ ವಿಶ್ವಾಸಿಗಳಾದ ನಿಮ್ಮ ಜೀವನವು ನೀವು ಯೇಸು ಕ್ರಿಸ್ತನಡೆಗೆ ತಿರುಗಿಕೊಳ್ಳುವುದಕ್ಕಿಂತ ಮುಂಚೆ ಜೀವಿಸಿದ್ದಕ್ಕಿಂತ ವಿಭಿನ್ನವಾಗಿರಬೇಕು ಎಂಬುದಾಗಿದೆ.

e. ನಿಮ್ಮ ಎಲ್ಲಾ ನಡವಳಿಕೆಯಲ್ಲಿ ಪರಿಶುದ್ಧರಾಗಿರಿ: ಇದರರ್ಥವು– ಲೋಕದಲ್ಲಿನ ಅಪ್ರಯೋಜಕ ವಿಗ್ರಹಗಳಿಂದ ದೇವರು ವಿಭಿನ್ನವಾಗಿರುವಂತೆ ನೀವೂ ಸಹ ನಿಮ್ಮ ಸುತ್ತಣ ಪಾಪಗಳಿಂದ ವಿಭಿನ್ನವಾಗಿರಬೇಕು. ನೀವೀಗ ಒಬ್ಬ ಪರಿಶುದ್ಧ ದೇವರನ್ನು ಸೇವಿಸಲು ಪ್ರತ್ಯೇಕಿಸಲ್ಪಟ್ಟಿರುವಿರಿ. ಈ ಪರಿಶುದ್ಧತೆಯು ಎಲ್ಲವನ್ನು ಅಂದರೆ ನಿಮ್ಮ ವ್ಯಕ್ತಿತ್ವ ಮತ್ತು ಕ್ರಿಯೆಗಳ ಮೇಲೆ ಪ್ರಭಾವಬೀರುತ್ತದೆ.

4. ಈ ಲೋಕದಲ್ಲಿ ವಿಶ್ವಾಸಿಗಳು ತಮ್ಮ ಪ್ರವಾಸಕಾಲವನ್ನು ಭಯಭಕ್ತಿಯಿಂದ ಜೀವಿಸಬೇಕೆಂಬುದಕ್ಕೆ ಪೇತ್ರನು ಎರಡು ಕಾರಣಗಳನ್ನು ಕೊಡುತ್ತಾನೆ (ವ.17–19).

   a. ಯಾಕೆಂದರೆ ನಮ್ಮ ಕ್ರಿಯೆಗಳು ಭೇದವಿಲ್ಲದೆ ತೀರ್ಪುಕೊಡುವ ಒಬ್ಬ ದೇವರಿಗೆ (ನಮ್ಮ ತಂದೆಯೇ ಎಂದು ನಾವು ಕರೆಯುವ) ನಾವು ಸೇರಿದವರಾಗಿದ್ದೇವೆ.

   b. ಯಾಕೆಂದರೆ ನಾವು ನಮ್ಮ ಹಿರಿಯವರಿಂದ ಕಲಿತ ವ್ಯರ್ಥ ನಡವಳಿಕೆಯಿಂದ ರಕ್ಷಿಸಲ್ಪಟ್ಟಿದ್ದೇವೆ (ಬಿಡುಗಡೆ ಹೊಂದಿದ್ದೇವೆ).

5. ವ. 18–21 ರಿಂದ ಯೇಸು ಕ್ರಿಸ್ತನ ಬಗ್ಗೆ ನಾವು 5 ಸಂಗತಿಗಳನ್ನು ಕಲಿಯುತ್ತೇವೆ.

   a. ಯೇಸು ಕ್ರಿಸ್ತನು ನಮ್ಮ ಹಳೆಯ ಪಾಪಮಯ ಜೀವನದಿಂದ ನಮ್ಮನ್ನು ಬಿಡುಗಡೆಗೊಳಿಸಿದ ಯಜ್ಞದ ಕುರಿಯಾಗಿದ್ದಾನೆ.

   b. ದೇವರು ಈ ಬಿಡುಗಡೆಯ ಯೋಜನೆಗಾಗಿ ಯೇಸು ಕ್ರಿಸ್ತನನ್ನು ಜಗದುತ್ಪತ್ತಿಗೆ ಮೊದಲೇ ನೇಮಿಸಿದನು.

   c. ಆದರೆ ಯೇಸು ಕ್ರಿಸ್ತನು ಹೊಂದಿದ ಈ ಯೋಜನೆಯು ಮರೆಯಾಗಿಡಲ್ಪಟ್ಟಿತ್ತು. ಈ ಅಂತ್ಯ ದಿನಗಳಲ್ಲಿ ಆತನು ಪ್ರತ್ಯಕ್ಷನಾದನು (ಪ್ರಕಟಿಸಲ್ಪಟ್ಟನು).

   d. ದೇವರು ಯೇಸು ಕ್ರಿಸ್ತನನ್ನು ಮರಣದಿಂದ ಎಬ್ಬಿಸಿ ಪ್ರಭಾವವನ್ನು ಕೊಟ್ಟನು.

   e. ದೇವರಲ್ಲಿನ ನಮ್ಮ ನಂಬಿಕೆ ಮತ್ತು ನಿರೀಕ್ಷೆಯು ಯೇಸು ಕ್ರಿಸ್ತನ ಮೂಲಕವಾಗಿಯೇ ಇದೆ.

6. ನಾವು ನಮ್ಮ ಸಹೋದರರಿಗಾಗಿ ಯಥಾರ್ಥವಾದ ಪ್ರೀತಿಯನ್ನು ಹೊಂದಿರಲು ಪೇತ್ರನು ಒಂದೇ ಪ್ರಾಮುಖ್ಯ ಕಾರಣವನ್ನು ಕೊಡುತ್ತಾನೆ (ವ.22–23). ಇದು ನಮ್ಮ ರಕ್ಷಣೆಯ ಪರಿಣಾಮವಾಗಿದೆ. ನಮ್ಮ ರಕ್ಷಣೆಯ ನಿಮಿತ್ತ ನಮ್ಮ ಸಹ ವಿಶ್ವಾಸಿಗಳಿಗಾಗಿ ನಾವು ಆಳವಾದ ಪ್ರೀತಿಯನ್ನು ಹೊಂದಿದ್ದೇವೆ. ಈ ರಕ್ಷಣೆಗಾಗಿ ಪೇತ್ರನು ಎರಡು ಹೇಳಿಕೆಗಳನ್ನು ಉಪಯೋಗಿಸುತ್ತಾನೆ: ಮೊದಲನೆಯದಾಗಿ, ನೀವು ನಿತ್ಯೋಪದೇಶಕ್ಕೆ ವಿಧೇಯರಾಗಿದ್ದು ನಿಮ್ಮ ಆತ್ಮಗಳನ್ನು ಶುದ್ಧಮಾಡಿಕೊಂಡಿದ್ದೀರಿ (ವ.22). ಎರಡನೆಯದಾಗಿ, ನೀವು ಪುನರ್ಜನ್ಮ ಹೊಂದಿದಿರಿ... ಸದಾ ಜೀವವುಳ್ಳ ವಾಕ್ಯದ ಮೂಲಕವಾಗಿ (ವ.23).

7. ವಚನ 24–25 ರಲ್ಲಿ ಪೇತ್ರನು ಯೆಶಾಯ 40:6–8 ನ್ನು ತನ್ನ ವಾದವನ್ನು ಬೆಂಬಲಿಸಲು ಬಳಸುತ್ತಾನೆ. ಈ ಹೇಳಿಕೆಯು ವಚನ 23 ರಲ್ಲಿ ದೇವರ ವಾಕ್ಯವು ನಾಶವಾಗದೇ ಇರುವಂತದ್ದಲ್ಲ ದೇವರು ತನ್ನ ವಾಕ್ಯಕ್ಕೆ ನಂಬಿಗಸ್ಥನಾಗಿದ್ದಾನೆ ಎಂಬ ಪೇತ್ರನ ವಾದವನ್ನು ಬೆಂಬಲಿಸುತ್ತದೆ.

8. ಮತ್ತೆ ಪೇತ್ರನು ಆದಕಾರಣ ಎಂಬ ಪದವನ್ನು 2:1 ರಲ್ಲಿ ಬಳಸುತ್ತಾನೆ.. (1:3 ಮತ್ತು 2:1 ರಲ್ಲಿನ ಗ್ರೀಕ್ ಪದಗಳು ಆದಕಾರಣ ಎಂಬ ಪದವು ಪೇತ್ರನ ಈ ಹಿಂದಿನ ದೇವರ ವಾಕ್ಯದ ಬಗೆಗಿನ ಬೋಧನೆಯನ್ನು (1:23) ಆತನ ಎಚ್ಚರಿಕೆಯೊಂದಿಗೆ (2:1–2) ಆತನ ಓದುಗರು ಆತ್ಮಿಕವಾಗಿ ಬೆಳೆಯುವುದಕ್ಕಾಗಿ ಸಂಬಂಧವನ್ನು ಕಲ್ಪಿಸುತ್ತದೆ. ಯಾಕೆಂದರೆ ಅವರು ದೇವರ ವಾಕ್ಯವನ್ನು ಸ್ವೀಕರಿಸಿ ಹೊಸದಾಗಿ ಹುಟ್ಟಿದ್ದಾರೆ, ಈಗ ಅವರು ತಮ್ಮ ರಕ್ಷಣೆಯಲ್ಲಿ ಬೆಳೆಯಬೇಕು.

9. ಆತ್ಮಿಕ ಬೆಳವಣಿಗೆಯನ್ನು ವಿವರಿಸಲು ಪೇತ್ರನು ಬಳಸುವ ಉಪಮೆ/ಹೋಲಿಕೆಯನ್ನು (ವ.2) ಈ ಕೆಳಕಂಡಂತೆ ವಿವರಿಸಬಹುದು:

   ಆತ್ಮಿಕ ಬೆಳವಣಿಗೆಯು ಒಂದು ಮಗುವಿನ ಬೆಳವಣಿಗೆಯೊಂದಿಗೆ ಹೋಲಿಸಲಾಗಿದೆ. ಶಿಶುಗಳು ಹಾಲನ್ನು ಬಯಸುತ್ತವೆ. ಅದೇ ರೀತಿಯಲ್ಲಿ ಹೊಸದಾಗಿ ಹುಟ್ಟಿದ ವಿಶ್ವಾಸಿಗಳು ಪಾರಮಾರ್ಥಿಕ/ಶುದ್ಧವಾದ ಆತ್ಮಿಕ ಹಾಲನ್ನು ಬಯಸಬೇಕು. ಇದು ದೇವರ ವಾಕ್ಯವನ್ನು ಸೂಚಿಸುತ್ತದೆ.

   ಇದು ದೇವರು ತನ್ನ ವಾಕ್ಯದ ಮೂಲಕ ನಮ್ಮನ್ನು ಬೆಳೆಯುವಂತೆ ಮಾಡುತ್ತಾನೆಂಬುದನ್ನು ತೋರಿಸುತ್ತದೆ. ಆತ್ಮಿಕ ಹಾಲಿಗಾಗಿ ತವಕ ಪಡಲು ಹೊಸ ವಿಶ್ವಾಸಿಗಳಿಗಾಗಿ ಪೇತ್ರನು ಇನ್ನೊಂದು ಕಾರಣವನ್ನು ಕೊಡುತ್ತಾನೆ: ದೇವರು ಒಳ್ಳೆಯವನು ಹಾಗಾಗಿ ಹೊಸ ವಿಶ್ವಾಸಿಗಳು ದೇವರನ್ನು ಅನುಭವದಿಂದ ತಿಳಿದುಕೊಳ್ಳಲು ಬಯಸುತ್ತಾನೆ.



## ಅವಲೋಕನ

ಈ ವಾಕ್ಯಭಾಗದಲ್ಲಿ ಪೇತ್ರನು ತಿಳಿಸುವ 4 ಅಂಶಗಳ ಮೇಲೆ ಸಂಕ್ಷಿಪ್ತವಾಗಿ ಪರಾಮರ್ಶಿಸಲು ನಾನು ಬಯಸುತ್ತೇನೆ. ರಕ್ಷಣೆಯು ಪರಿಶುದ್ಧ ಜೀವನವನ್ನು ಹೊರತರುತ್ತದೆ. ಇನ್ನೊಂದು ಮಾತಿನಲ್ಲಿ ಹೇಳುವುದಾರೆ, ದೇವರ ರಕ್ಷಣೆಯನ್ನು ನಾವು ಅನುಭವಿಸುತ್ತಿದ್ದರೆ (ವರೆಗೂ) ದೇವರ ವಾಕ್ಯದ ನಿಜವಾದ ಅರ್ಥದಲ್ಲಿ ಯಾವುದೇ "ಪರಿಶುದ್ಧರಾಗಿ ಜೀವಿಸುವುದು" ಇರಲು ಸಾಧ್ಯವಿಲ್ಲ. ಈವಿ ರಕ್ಷಣೆಯನ್ನು ವರ್ಣಿಸಲು ಪೇತ್ರನು ಅನೇಕ ಬಗೆಯ ಹೇಳಿಕೆಗಳನ್ನು ಉಪಯೋಗಿಸುತ್ತಾನೆ: ಪವಿತ್ರಾತ್ಮನಿಂದ ಪ್ರತೀಷ್ಟಿಸಲ್ಪಡುವ ಕಾರ್ಯ (1:2), ಯೇಸು ಕ್ರಿಸ್ತನ ರಕ್ತದಿಂದ ಪ್ರೋಕ್ಷಿತರಾಗುವದು (1:3), ನಮಗಾಗಿ ದೇವರ ಕೃಪೆ (1:10), ನಮ್ಮ ಹಿರಿಯರು ಕಲಿಸಿಕೊಟ್ಟ ವ್ಯರ್ಥವಾದ ನಡವಳಿಕೆಯಿಂದ ಬಿಡುಗಡೆ (1:18), ದೇವರ ಸತ್ಯಕ್ಕೆ ವಿಧೇಯರಾಗುವುದರಿಂದ ನಮ್ಮನ್ನು ಶುದ್ಧೀಕರಿಸಿಕೊಳ್ಳುವುದು (1:22), ನಾಶವಾಗದೇ ಇರುವ ಬೀಜದಿಂದ ಹೊಸದಾಗಿ ಹುಟ್ಟುವುದು (1:23).

ದೇವರ ರಕ್ಷಣೆಯ ಯೋಜನೆಯ ಸಮಯದ ದೃಷ್ಟಿಕೋನವು ಮನಸ್ಸನ್ನು ದಿಗ್ಭ್ರಮೆಗೊಳಿಸುವಂಥದ್ದು. ಈ ಜಗದುತ್ಪತ್ತಿಗೆ ಮೊದಲೇ ನಮ್ಮ ರಕ್ಷಣೆಗಾಗಿ ಯೇಸು ಕ್ರಿಸ್ತನು

ಗೊತ್ತುಮಾಡಲ್ಪಟ್ಟಿದ್ದನು (1:20). ಇದರರ್ಥ ಮನುಷ್ಯನು ಸೃಷ್ಟಿಸಲ್ಪಡುವುದಕ್ಕಿಂತ ಮುಂಚೆ ಮತ್ತು ಮನುಷ್ಯನು ಪಾಪದಲ್ಲಿ ಬೀಳುವುದಕ್ಕಿಂತ ಮೊದಲೇ ದೇವರು ನಮ್ಮ ರಕ್ಷಣೆಗಾಗಿ ಯೋಜನೆಯನ್ನು ಇಟ್ಟಿದ್ದನು. ರಕ್ಷಣೆಗಾಗಿ ದೇವರು ನಮ್ಮನ್ನು ಆರಿಸಿಕೊಂಡಿದ್ದಾನೆ (1:20). ಇದನ್ನು ಪೌಲನು ಈ ರೀತಿಯಾಗಿ ಹೇಳುತ್ತಾನೆ "ಹೀಗಿರಲಾಗಿ ನೀವು ದೇವರ ವಾಕ್ಯವನ್ನು ನಮ್ಮಿಂದ ಕೇಳಿದಾಗ ಅದನ್ನು ಮನುಷ್ಯರ ವಾಕ್ಯವೆಂದೆಣಿಸದೆ ದೇವರ ವಾಕ್ಯವೆಂದೇ ತಿಳಿದು ಅಂಗೀಕರಿಸಿದ್ಧಕ್ಕಾಗಿ ನಾವಂತೂ ಎಡಬಿಡದೆ ದೇವರಿಗೆ ಕೃತಜ್ಞತಾ ಸ್ತುತಿ ಮಾಡುತ್ತೇವೆ. ಅದು ನಿಜವಾಗಿ ದೇವರ ವಾಕ್ಯವೇ" (1 ಥೆಸ 2:13). 1:17 ರಲ್ಲಿ ಈ ಲೋಕದಲ್ಲಿ ಕ್ರೈಸ್ತವಿಶ್ವಾಸಿಗಳ ಜೀವನವನ್ನು ವರ್ಣಿಸುವಾಗ ವಚನ 1 ರಿಂದ ಪೇತ್ರನು ತನ್ನ ಆಲೋಚನೆಯನ್ನು ಹೊರತರುತ್ತಾನೆ. ವಚನ 1 ರಲ್ಲಿನ ಒಂದು ಗ್ರೀಕ್ ಪದವು "ತಾತ್ಕಾಲಿಕ ನಿವಾಸಸ್ಥಾನ" ಎಂದು ಅರ್ಥೈಸಲ್ಪಡುತ್ತದೆ. ಮತ್ತು ಅದಕ್ಕೆ ಸಮಾನವಾದ ಪದ ವಚನ 17 ರಲ್ಲಿ ಪ್ರವಾಸಿಗಳ ನಡುವಿನ ವಾಸ ಎಂದು ಅರ್ಥೈಸಲ್ಪಡುತ್ತದೆ. ನಾವು ಈ ಸತ್ಯವನ್ನು ನೆನಪಿಸಿಕೊಳ್ಳಬೇಕು: ದೇವರ ಜನರು ಈ ಲೋಕದಲ್ಲಿ ಕೇವಲ ತಾತ್ಕಾಲಿಕ ನಿವಾಸಿಗಳಾಗಿದ್ದಾರೆ. ನಾವು ಪ್ರವಾಸಿಗಳ ನಡುವೆ ವಾಸಿಸುವವರಾಗಿದ್ದೇವೆ. ನಾವು ಈ ರೀತಿ ಮಾಡುವಾಗ ನಮ್ಮ ಜೀವನವು ಎರಡು ಭಾವನೆಗಳನ್ನು ಪ್ರತಿಬಿಂಬಿಸಬೇಕು.

ಮೊದಲನೆಯದು, ನಾವು ದೇವರಿಗೆ ಭಯಭಕ್ತಿಯುಳ್ಳವರಾಗಿರಬೇಕು (1:17). ನಾವು ದೇವರಿಗೆ ಹೆದರಬೇಕೆಂದು ಇದರರ್ಥವಲ್ಲ. ನಮ್ಮನ್ನು ಬಿಡುಗಡೆಗೊಳಿಸುವುದಕ್ಕಾಗಿ ತನ್ನ ಮಗನನ್ನು ಕಳುಹಿಸಿ ಕೊಟ್ಟು ನಮ್ಮ ಮೇಲೆ ತನ್ನ ಕೃಪೆ ಮತ್ತು ಪ್ರೀತಿಯನ್ನು ತೋರ್ಪಡಿಸಿದನು. ಪರಲೋಕದ ತಂದೆಯಾಗಿ ಆತನನ್ನು ನಾವು ಗೌರವಿಸುತ್ತೇವೆ ಮತ್ತು ಸನ್ಮಾನಿಸುತ್ತೇವೆ.

ಎರಡನೆಯದಾಗಿ, ನಮ್ಮ ಕರ್ತನೂ ಮತ್ತು ರಕ್ಷಕನೂ ಆದ ಯೇಸು ಕ್ರಿಸ್ತನ ಮಹಿಮೆಯ ಬರೋಣಕ್ಕಾಗಿ ನಮ್ಮ ಆತ್ಮಗಳ ಅಂತಿಮ ರಕ್ಷಣೆಗೆ (1:8–9) ಮತ್ತು ನಮಗಾಗಿ ದೇವರು ಯೋಜಿಸಿದ ನೂತನ ಭೂಮ್ಯಾಕಾಶಗಳಿಗಾಗಿ (ಳೆಡೆಗೆ) ಹರ್ಷ ಮತ್ತು ನಿರೀಕ್ಷೆಯಿಂದ ನಾವು ಮುನ್ನೋಡುವಾಗ ನಮ್ಮ ಹೃದಯಗಳು ಬಯಕೆ/ತವಕದಿಂದ ತುಂಬಿರಬೇಕು.

ಯೇಸು ಕ್ರಿಸ್ತನನ್ನು ನಮ್ಮ ವೈಯಕ್ತಿಕ ರಕ್ಷಕನನ್ನಾಗಿ ಅಂಗೀಕರಿಸುವಾಗ ನಮ್ಮನ್ನು ಶುದ್ಧೀಕರಣಗೋಳಿಸುವ (ಪ್ರತಿಷ್ಠಾಪನೆಗೊಳ್ಳುವ) ಪವಿತ್ರಾತ್ಮನ ಕಾರ್ಯವು (1:2) ನಮ್ಮ ಕ್ರೈಸ್ತೀಯ ಜೀವನದಲ್ಲಿ ಕೇವಲ ಪ್ರಾರಂಭದ, ಶಿಶು/ಮಗುವಿನ ಹಂತವಾಗಿದೆ. ನಾವು ನಮ್ಮ ರಕ್ಷಣೆಯಲ್ಲಿ (2:3), ಪರಿಶುದ್ಧತೆಯಲ್ಲಿ ಬೆಳೆಯಬೇಕೆಂದು ದೇವರು ಬಯಸುತ್ತಾನೆ. ಇದಕ್ಕಾಗಿ ನಮಗೆ ಪಾರಮಾರ್ಥಿಕವಾದ ಹಾಲು ಬೇಕಾಗಿದೆ (2:2). ದೇವರ ವಾಕ್ಯದಿಂದ ನಾವು ಉಣಿಸಲ್ಪಡಬೇಕು.

# ಉತ್ತರಗಳು 4: ದೇವರಿಗೆ ಸೇರಿದ ಜನಾಂಗ, 2:4–10

## ಶಿಕ್ಷಕರ ಗಮನಕ್ಕೆ

ವಿದ್ಯಾರ್ಥಿಗಳು (ಮತ್ತು ನೀವು) ಈ ಅಧ್ಯಯನವನ್ನು ಕ್ಲಿಷ್ಟಕರವೆಂದು ಕಾಣಬಹುದು. ಇದಕ್ಕಾಗಿ ಹೆಚ್ಚುಕಡಿಮೆ 33 ಕಾರಣಗಳಿವೆ:

1. ಅನೇಕ ಚಿತ್ರಣಗಳು (ಉಪಮೆ/ಹೋಲಿಕೆ ಮತ್ತು ರೂಪಾಲಂಕಾರಗಳು). ಪ್ರಶ್ನೆಗಳು 1, 2, 3, 4, 5, 6, 7 ಮತ್ತು 8 ಎಲ್ಲವೂ ಚಿತ್ರಣಗಳನ್ನು ಹೊಂದಿವೆ.
2. ಶ್ರೀಮಂತ ಹಳೆಒಡಂಬಡಿಕೆಯ ಹಿನ್ನಲೆ. ಪ್ರಶ್ನೆಗಳು 1, 2, 5 ಮತ್ತು 8 ಎಲ್ಲವೂ ಈ ಹಿನ್ನಲೆ ಕುರಿತಾಗಿವೆ.
3. ಹಳೆಒಡಂಬಡಿಕೆಯ ಮೂರು ಹೇಳಿಕೆಗಳು ಉಪಯೋಗಿಸಲ್ಪಟ್ಟ ರೀತಿ. ಪ್ರಶ್ನೆ 5 ಈ ಕುರಿತು ತಿಳಿಸುತ್ತದೆ.

ಹಾಗಾಗಿ ನನ್ನಲ್ಲಿ ನಿಮಗಾಗಿ ಎರಡು ಮುಖ್ಯ ಸಲಹೆಗಳಿವೆ:

1. ವಿದ್ಯಾರ್ಥಿಗಳೊಂದಿಗೆ ನೀವು ಕಾರ್ಯಮಾಡುವ ಮೊದಲು ಉತ್ತರಗಳಿಗೆ ಸಿದ್ಧರಾಗಿರಿ. ಎಲ್ಲಾ ಪ್ರಶ್ನೆಗಳನ್ನು ನೋಡಿರಿ ಮತ್ತು ವಿದ್ಯಾರ್ಥಿಗಳು ಎದುರಿಸುವ ಮೊದಲು ಎಲ್ಲಾ ವಾಕ್ಯಭಾಗಗಳನ್ನು ನೋಡಿಕೊಳ್ಳಿರಿ.
2. ಈ ಅಧ್ಯಯನದಲ್ಲಿ ವೇಗವಾಗಿ ಹೋಗಬೇಡಿರಿ. ವಚನಗಳನ್ನು ನೋಡಲು ಮತ್ತು ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳಲು ವಿದ್ಯಾರ್ಥಿಗಳಿಗೆ ಸಾಕಷ್ಟು ಸಮಯ ಕೊಡಿರಿ. ಅವರು ನಿಮ್ಮನ್ನು ಪದೇ ಪದೇ ವಿವರಣೆ ಮತ್ತು ಸ್ಪಷ್ಟನೆಗಳನ್ನು ಕೇಳುವಾಗ ತಾಳ್ಮೆಯಿಂದಿರಿ.

## ಉತ್ತರಗಳು

1. ವಚನ 4 ರಲ್ಲಿ ಯೇಸು ಕ್ರಿಸ್ತನ ಬಗ್ಗೆ ನಾವು ಈ ಸಂಗತಿಗಳನ್ನು ಕಲಿಯುತ್ತೇವೆ.

    a. ಪೇತ್ರನು ಆತನನ್ನು ಜೀವವುಳ್ಳ ಕಲ್ಲು ಎಂದು ಕರೆಯುತ್ತಾನೆ. ಮುಂದಿನ ಮತ್ತು 5 ನೇ ಪ್ರಶ್ನೆಯಲ್ಲಿ ನಾವು ಈ ರೂಪಾಲಂಕಾರಕ್ಕೆ ತಿರುಗಿ ಬರುತ್ತೇವೆ (ಯೆಶಾಯ 28:16 ರ ಮೇಲೆ ಇದು ಆಧಾರಗೊಂಡಿದೆ).

    b. ಆತನು ಮನುಷ್ಯರಿಂದ ಲೆಕ್ಕಿಸಲ್ಪಟ್ಟನು (ಕೀರ್ತನೆ 118:22 ರ ಮೇಲಿನ ಪ್ರಸ್ತಾಪ, ಪ್ರಶ್ನೆ 5 ನ್ನು ಸಹ ನೋಡಿರಿ).

    c. ಆತನು ದೇವರಿಂದ ಆರಿಸಲ್ಪಟ್ಟನು ಮತ್ತು ಅಮೂಲ್ಯವಾದವನಾಗಿದ್ದಾನೆ (ಯೆಶಾಯ 28:16 ರ ಒಂದು ಹೇಳಿಕೆ, ಪ್ರಶ್ನೆ 5 ನ್ನು ಸಹ ನೋಡಿರಿ).

2. ಜೀವವುಳ್ಳ ಕಲ್ಲು ಎಂಬ ರೂಪಾಲಂಕಾರವನ್ನು (ವ.4) ನಾನು ಈ ರೀತಿ ಅರ್ಥೈಸಿಕೊಳ್ಳುತ್ತೇನೆ: ಪೇತ್ರನು 'ಕಲ್ಲು' ಎಂಬ ರೂಪಾಲಂಕಾರವನ್ನು ಹಳೆಯ ಒಡಂಬಡಿಕೆಯ 3 ವಾಕ್ಯಭಾಗಗಳಿಂದ ತೆಗೆದುಕೊಂಡಿದ್ದಾನೆ. (ಪ್ರಶ್ನೆ 5 ರಲ್ಲಿ ಇದರ ಬಗ್ಗೆ ನೋಡಿರಿ). ಮತ್ತೆ ಯೇಸು ಕ್ರಿಸ್ತನು

ಪುನರುತ್ಥಾನ ಹೊಂದಿದವನು ಮತ್ತು ಕ್ರಿಯಾತ್ಮಕವುಳ್ಳವನೆಂಬುದನ್ನು ತನ್ನ ಓದುಗರಿಗೆ ನೆನಪಿಸಲು 'ಜೀವವುಳ್ಳ' ಎಂಬ ಪದವನ್ನು ಸೇರಿಸುತ್ತಾನೆ. ಆದರೆ 'ಜೀವವುಳ್ಳ' ಎಂಬುದು ನಮಗೆ 'ಜೀವಕರವಾದ ನೀರು' (ಯೊಹಾನ 4:10–14) ಮತ್ತು 'ಜೀವವುಳ್ಳ ರೊಟ್ಟಿ' (ಯೊಹಾನ 6:5) ಎಂಬ ಹೇಳಿಕೆಯನ್ನು ನೆನಪಿಸುತ್ತದೆ. ಯೇಸು ಕ್ರಿಸ್ತನು ತನ್ನ ಕುರಿತಾಗಿಯೇ ಈ ಹೇಳಿಕೆಯನ್ನು ಉಪಯೋಗಿಸುವಾಗ ಆತನು ಜೀವ ಮತ್ತು ನಿತ್ಯಜೀವ ಕೊಡುವನೆಂಬುದು ಆತನ ಸಂದೇಶವಾಗಿತ್ತು.

3. ಆತ್ಮ ಸಂಬಂಧವಾದ ಮಂದಿರ (ವ.5) ಎಂಬ ಅಲಂಕಾರಿಕ ಹೇಳಿಕೆಯನ್ನು ನಾನು ಈ ರೀತಿಯಲ್ಲಿ ಅರ್ಥೈಸಿಕೊಳ್ಳುತ್ತೇನೆ:

   a. 'ಮಂದಿರ/ಮನೆ' ಎಂಬ ಪದವನ್ನು ಒಂದು ರಾಷ್ಟ್ರದ ಬಗ್ಗೆ ಅಥವಾ ಒಂದು ಜನರ ಗುಂಪಿನ ಬಗ್ಗೆ ಹಳೆಒಡಂಬಡಿಕೆಯಲ್ಲಿ ಪದೇ ಪದೇ ಬಳಸಲಾಗಿದೆ. ಉದಾಹರಣೆಗೆ: ಇಸ್ರಾಯೇಲಿನ ಮನೆತನ (ಯೆಹೋಶುವ 21:45, ಕೀರ್ತನೆ 98:3, ಯೆಶಾಯ 16:5). ಹಾಗಾಗಿ ಪೇತ್ರನು ತನ್ನ ಪತ್ರಿಕೆಯ ಓದುಗರಿಗೆ ಅವರೆಲ್ಲರೂ ಒಟ್ಟಾಗಿ ಒಂದು ರಾಷ್ಟ್ರ ಅಥವಾ ಒಂದು ಕುಟುಂಬಕ್ಕೆ ಸೇರಿದವರಾಗಿದ್ದಾರೆ ಎಂದು ಹೇಳುತ್ತಾನೆ.

   b. ನಂತರ ಪೇತ್ರನು 2 ಸಂಗತಿಗಳನ್ನು ಗುರುತಿಸಲು 'ಆತ್ಮ ಸಂಬಂಧವಾದ' ಎಂಬುದಾಗಿ ಬಳಸುತ್ತಾನೆ.ಮೊದಲನೆಯದು, ಆತನು ಒಂದು ನಿಜವಾದ ಕಟ್ಟಡದ ಬಗ್ಗೆ ಮಾತನಾಡುತ್ತಿಲ್ಲ, ಆದರೆ ಅಲಂಕಾರಿಕ ಮಂದಿರ/ಮನೆ– ಒಂದು ಜನಾಂಗದ ಬಗ್ಗೆ ಮಾತನಾಡುತ್ತಾನೆ.ಎರಡನೆಯದು, ಈ ಜನರು (ಪೇತ್ರನು ಬರೆಯುತ್ತಿರುವ ಓದುಗರು) 'ಆತ್ಮಿಕರು/ಆತ್ಮ ಸಂಬಂಧಿಗಳು' ಯಾಕೆಂದರೆ– ಪವಿತ್ರಾತ್ಮನು ಅವರಲ್ಲಿ ವಾಸಿಸುತ್ತಾನೆ. 'ಮಂದಿರ' (ಸಭೆಯಲ್ಲಿ)ದಲ್ಲಿ ವಾಸಿಸುವ ಪ್ರತಿ ಕಲ್ಲು (ವಿಶ್ವಾಸಿ) ಪವಿತ್ರಾತ್ಮನಿಂದ ಜೀವವುಳ್ಳದ್ದಾಗಿ ಮಾಡಲ್ಪಟ್ಟಿದೆ.

4. ವಚನ 5 ರಿಂದ ಯೇಸು ಕ್ರಿಸ್ತನು ಆತ್ಮಿಕ ಮಂದಿರದ ಮಹಾಯಾಜಕನು ಮತ್ತು ವಿಶ್ವಾಸಿಗಳು ನೆರವೇರಿಸುವ ಯಾಜಕ ವರ್ಗ (4–5) ಎಂಬುದನ್ನು ಅರ್ಥೈಸಿಕೊಳ್ಳಬಹುದು, ಆತನ ಮೂಲಕವಾಗಿಯೇ ಆತ್ಮಿಕ ಯಜ್ಞಗಳನ್ನು ದೇವರಿಗೆ ಅರ್ಪಿಸಬಹುದಾಗಿದೆ.

5. ಯೆಶಾಯ 28:16 (ವ.6), ಕೀರ್ತನೆ 118:22 (ವ.7), ಮತ್ತು ಯೆಶಾಯ 8:14 (ವ.8) ರಿಂದ ಯೇಸು ಕ್ರಿಸ್ತನ ಬಗ್ಗೆ ತನ್ನ ಬೋಧನೆಯನ್ನು ಬೆಂಬಲಿಸಲು ಪೇತ್ರನ ಹೇಳಿಕೆಯನ್ನು ಉಪಯೋಗಿಸುತ್ತಾನೆ:

   a. ಯೆಶಾಯ 28:16– ಈ ವಚನದಲ್ಲಿ ತಾನು ಯಾರಾಗಿದ್ದೇನೆಂಬುದನ್ನು ದೇವರು ಇಸ್ರಾಯೇಲರಿಗೆ ವಿವರಿಸುತ್ತಾನೆ. ಆತನು ಮಾನ್ಯಮಾಡಲ್ಪಟ್ಟವನು ಮತ್ತು ಆತನ ಮೇಲೆ ನಂಬಿಕೆಯಿಡಬಹುದು. ಇಸ್ರಾಯೇಲ ಜನರು ಆತನ ಮೇಲೆ ಕಟ್ಟಲ್ಪಡಬಹುದಾದಂತಹ ಬಂಡೆ ಆತನಾಗಿದ್ದಾನೆ. ಪೇತ್ರನು ಈ ವಚನವನ್ನು ಯೇಸು ಕ್ರಿಸ್ತನಿಗೆ ಅಳವಡಿಸುತ್ತಾನೆ. ಯೇಸು ಕ್ರಿಸ್ತನು ಜೀವವುಳ್ಳ ಬಂಡೆಯಾಗಿದ್ದು ಆತನ ಮೇಲೆ ಸಭೆಯು ಕಟ್ಟಲ್ಪಟ್ಟಿದೆ. ಆತನ ಮೇಲೆ ಭರವಸೆ ಇಡುವವನು ಎಂದಿಗೂ ಆಶಾಭಂಗಪಡುವುದಿಲ್ಲ.

b. ಕೀರ್ತನೆ 118:22– ವೈರಿಗಳಿಂದಾದ ಬಿಡುಗಡೆಗಾಗಿ ಕೃತಜ್ಞತೆಯನ್ನು ಸಲ್ಲಿಸುವ ಸ್ತೋತ್ರಗೀತೆಯಾಗಿದೆ. ವಚನ 1–21 ಬಹುಶಃ ದಾವೀದನ ಕಾಲದ ಒಬ್ಬ ಅರಸನಿಂದ ಹೇಳಲ್ಪಟ್ಟಿದೆ. ವಚನ 22–27 ಬಹುಶಃ ಜನರಿಂದ ಹೇಳಲ್ಪಟ್ಟಿದೆ. ಈ ತಿಳುವಳಿಕೆಯು ಸರಿಯಾದದ್ದಾದರೆ– ಮನೆಕಟ್ಟುವವರು ಬೇಡವೆಂದು ತಳ್ಳಿಬಿಟ್ಟ ಕಲ್ಲು ಮುಖ್ಯವಾದ ಮೂಲೆಗಲ್ಲಾಯಿತು, ಇದು ವೈರಿಗಳಿಂದ ತಿರಸ್ಕರಿಸಲ್ಪಟ್ಟ ಅರಸನು ದೇವರಿಂದ ತಿರುಗಿ ಆ ಸ್ಥಾನಕ್ಕೇರಿಸಲ್ಪಟ್ಟನೆಂಬುದನ್ನು ಸೂಚಿಸುತ್ತದೆ.ಯೇಸು ಕ್ರಿಸ್ತನು ಯೆಹೂದಿ ನಾಯಕರಿಂದ ತನಗಾಗುವ ತಿರಸ್ಕಾರದ ಕುರಿತಾಗಿ ಇದನ್ನು ಸ್ವತಃ ತನಗೆ ಅಳವಡಿಸಿಕೊಳ್ಳುತ್ತಾನೆ (ಮತ್ತಾಯ 21:42). ಇದೇ ರೀತಿಯಲ್ಲಿ ಮಹಮಂಡಲಿಯ ಮುಂದೆ ಇದನ್ನು ಪೇತ್ರನು ಯೇಸು ಕ್ರಿಸ್ತನಿಗೆ ಹೋಲಿಸುತ್ತಾನೆ (ಅ.ಕೃ 4:11). ಇಲ್ಲಿ 1 ಪೇತ್ರದಲ್ಲಿ ಆತನು ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವವರು (ಯಾರಿಗೆ ಆತನು ಅಮೂಲ್ಯನು ವ.7) ಮತ್ತು ಯಾರು ಆತನನ್ನು ತಿರಸ್ಕರಿಸುವರು (ಮುಂದಿನ ಪ್ರಶ್ನೆ ಬೋಧಿಸುವ) ನಡುವಿನ ತಾರತಮ್ಯವನ್ನು ಸಹ ಒತ್ತಿ ಹೇಳುತ್ತಾನೆ.

c. ಯೆಶಾಯ 8:14– ಈ ವಚನವು ಇಸ್ರಾಯೇಲರಿಗೆ ದೇವರಿಂದ ಬಂದ ಸಂದೇಶದ ಒಂದು ಭಾಗವಾಗಿದೆ. ಮನುಷ್ಯರನ್ನು ಕದಲುವಂತೆ ಮತ್ತು ಎಡವಿ ಬೀಳುವಂತೆ ಮಾಡುವ ಕಲ್ಲು ಸರ್ವಶಕ್ತನಾದ ದೇವರಾಗಿದ್ದಾನೆ. ಆತನಲ್ಲಿ ನಂಬಿಕೆಯಿಡದವರಿಗೆ ಎಡುವುವ ಕಲ್ಲಾಗಿರುವ ಯೇಸು ಕ್ರಿಸ್ತನಿಗೆ ಪೇತ್ರನು ಈ ಹೇಳಿಕೆಯನ್ನು ಅಳವಡಿಸುತ್ತಾನೆ.

6. ನಂಬಿಕೆಯಲ್ಲಿ ಬರುವುದರಿಂದ (ಜೀವವುಳ್ಳ ಕಲ್ಲಿನ ಬಳಿ)ಒಬ್ಬ ವ್ಯಕ್ತಿಯು ಆತ್ಮಿಕ ಮಂದಿರದ ಭಾಗ ಮತ್ತು ಪವಿತ್ರ ಯಾಜಕವರ್ಗವಾಗಬಹುದು (ವ.4,7). ಅಲ್ಲಿಂದ ಆತನು ಕ್ರಿಸ್ತನಲ್ಲಿ ಐಕ್ಯವಾಗಿ ಜೀವವುಳ್ಳ ಮೂಲೆಗಲ್ಲಿಗೆ ಸೇರುವ ಜೀವವುಳ್ಳ ಕಲ್ಲಾಗುವನು.

7. ದೇವ ಜನರ ಸೇವಾಕಾರ್ಯವನ್ನು ಪೇತ್ರನು ಈ ರೀತಿ ವರ್ಣಿಸುತ್ತಾನೆ:

a. ಅವರು ಯೇಸು ಕ್ರಿಸ್ತನ ಮೂಲಕ ದೇವರಿಗೆ ಆತ್ಮಿಕ ಯಜ್ಞಗಳನ್ನು ಅರ್ಪಿಸುವರು (ವ.5). ಪೇತ್ರನು ತಾನು ಹೇಳುವುದೇನೆಂಬುದನ್ನು ವಿವರಿಸುವುದಿಲ್ಲ. ಆದರೆ ಆತನ ಮಾತುಗಳು ಪೌಲನನ್ನು ನೆನಪಿಸುತ್ತವೆ. ಆದದರಿಂದ ಸಹೋದರರೇ, ನಿಮ್ಮನ್ನು ಬೇಡಿಕೊಳ್ಳುವುದೇನೆಂದರೆ, ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ, ಮೆಚ್ಚಿಗೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸಿರಿ (ರೋಮಾ12:1).

b. ಅವರಲ್ಲಿ ದೇವರು ಮಾಡಿದ ಕಾರ್ಯಕ್ಕಾಗಿ ಅವರು ದೇವರ ಗುಣಾತಿಶಯಗಳನ್ನು ಪ್ರಚುರಪಡಿಸುವರು (ವ.9).

8. ಸಭೆಯು ಹಳೆಯ ಒಡಂಬಡಿಕೆಯ ಹಿನ್ನಲೆಯನ್ನು ಹೊಂದಿದೆ ಎಂಬುದನ್ನು ಹೆಚ್ಚಿನ ಹೇಳಿಕೆಗಳು ವರ್ಣಿಸುತ್ತವೆ. ಕೆಳಕಂಡ ವಾಕ್ಯಭಾಗಗಳನ್ನು ನೋಡಿರಿ ಮತ್ತು ನಿಮ್ಮ ಸಲಹೆ/ಟಿಪ್ಪಣೆಗಳನ್ನು ಕೊಡಿರಿ:

a. *ಆದುಕೊಂಡ ಜನಾಂಗ* (ವ.9): ಯೆಶಾಯ 43:10, 20, 44:1–3. ಹಳೆ ಒಡಂಬಡಿಕೆಯ ಕಾಲದಲ್ಲಿ ಇಸ್ರಾಯೇಲ್ ದೇವರು ಆದುಕೊಂಡ ಜನಾಂಗವೆಂದು ಕರೆಯಲ್ಪಟ್ಟಂತೆಯೇ

ಹೊಸ ಒಡಂಬಡಿಕೆಯಲ್ಲಿ ಸಭೆಯು (ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವವರು) ದೇವರು ಆದುಕೊಂಡ ಜನಾಂಗ ಎಂದು ಕರೆಯಲ್ಪಟ್ಟಿದ್ದಾರೆ (ಹೋಲಿಸಿ, ಎಫೆಸ 1:4).

b. *ರಾಜವಂಶಸ್ತರಾದ ಯಾಜಕರು* (ವ.9): ವಿಮೋ 9:6, ಹಳೆ ಒಡಂಬಡಿಕೆಯಲ್ಲಿ ದೇವರು ಇಸ್ರಾಯೇಲರನ್ನು ತನಗಾಗಿಯೇ ಪ್ರತ್ಯೇಕಿಸಲ್ಪಡುವುದಕ್ಕಾಗಿ ಮತ್ತು ಸೇವಿಸುವುದಕ್ಕಾಗಿ ಕರೆದನು. (ಯೆಶಾಯ 61:6 ನ್ನು ಹೋಲಿಸಿರಿ) "ಯಾಜಕತ್ವ" ಎಂಬ ಶೀರ್ಷಿಕೆಯನ್ನು ಸಭೆಗೆ ಹೋಲಿಸುವಾಗ ಪೇತ್ರನು ಹಳೆಯ ಒಡಂಬಡಿಕೆಯ ಯಾಜಕ ಧರ್ಮ ಸೇವೆಗಳನ್ನು (ಕಾರ್ಯ) ಮನಸ್ಸಿನಲ್ಲಿಟ್ಟುಕೊಂಡಿದ್ದನು. 1. ದೇವರ ಮತ್ತು ಅವರ ಪ್ರಧಾನ ಯಾಜಕನಾದ ಯೇಸು ಕ್ರಿಸ್ತನ ಪರಿಶುದ್ಧತೆಯನ್ನು ಪ್ರತಿಬಿಂಬಿಸಲು (1:15, ಇಬ್ರಿ 7:6, 10:10 ರೊಂದಿಗೆ ಹೋಲಿಸಿ); 2. ಆತ್ಮಿಕ ಯಜ್ಞಗಳನ್ನು ಸಮರ್ಪಿಸಲು; 3. ದೇವರ ಮುಂದೆ ಇತರಿಗಾಗಿ ಬೇಡಿಕೊಳ್ಳಲು; 4. ಜನರ ಮುಂದೆ ದೇವರನ್ನು ಪ್ರತಿನಿಧಿಸಲು.

c. *ಮೀಸಲಾದ ಜನಾಂಗ* (ವ.9): ವಿಮೋ 19:6, ಧರ್ಮೋ 28:8. ಹಳೆ ಒಡಂಬಡಿಕೆಯಲ್ಲಿ ದೇವರು ಇಸ್ರಾಯೇಲರನ್ನು ತನ್ನ ಪರಿಶುದ್ಧ ಜನರು, ಪರಿಶುದ್ಧ ಜನಾಂಗವೆಂದು ಕರೆದನು. ಅವರು ತಮ್ಮ ಸುತ್ತಣ ಜನಾಂಗ/ರಾಷ್ಟ್ರಗಳಿಂದ ಪ್ರತ್ಯೇಕಿಸಲ್ಪಟ್ಟವರಾಗಿದ್ದರು. ಅವರು ದೇವರಿಗೆ, ತಮ್ಮ ಒಡಂಬಡಿಕೆಯ ದೇವರಿಗೆ ಮೀಸಲಾದವರು, ಮತ್ತು ಆತನೊಂದಿಗೆ ಒಂದು ಸೌಭಾಗ್ಯದ ಸಂಬಂಧವನ್ನು ಅನುಭವಿಸಿದರು. ಇಲ್ಲಿ ಪೇತ್ರನು ಈ ಒಂದು ವಿಷಯವನ್ನು ಸಭೆಗೆ ಅಳವಡಿಸುತ್ತಾನೆ.

d. *ದೇವರ ಸ್ವಕೀಯ ಪ್ರಜೆ* (ವ.9): ವಿಮೋ 19:5. ಇಸ್ರಾಯೇಲರು ದೇವರ ಸ್ವಕೀಯ ಜನರಾಗಿರುವಂತೆ, ಹೊಸ ಒಡಂಬಡಿಕೆಯ ಸಭೆಯು ದೇವರಿಗೆ ಸಂಬಂಧಪಟ್ಟಿದ್ದಾಗಿದೆ. 'ಯಾಜಕರುಗಳ ರಾಷ್ಟ್ರವನ್ನಾಗಿ ಮಾಡಲ್ಪಟ್ಟವರು ಕೇವಲ ಮರುಸ್ಥಾಪಿಸಲ್ಪಟ್ಟ ಇಸ್ರಾಯೇಲ ಅಲ್ಲ, ಆದರೆ ರಾಷ್ಟ್ರಗಳಿಂದ ಕ್ರಿಸ್ತನು ಒಟ್ಟುಗೂಡಿಸುವ ವಿಶ್ವಾಸಿಗಳಾಗಿದ್ದಾರೆ'. (ಕ್ಲೋವ್‌ನಿ, 1 ಪೇತ್ರದ ಸಂದೇಶ, ಬಿ.ಎಸ್.ಟಿ ಸರಣಿ)

e. *ಕತ್ತಲೆಯಿಂದ ಬೆಳಕಿಗೆ ಕರೆಯಲ್ಪಟ್ಟವರು* (ವ.9): ಯೆಶಾಯ 9:2, ಹೋಲಿಸಿ ಅ.ಕೃ 26:18. ಇಲ್ಲಿ ದಮಸ್ಕದ ರಸ್ತೆಯಲ್ಲಿ ಪೌಲನಿಗೆ ಅನ್ಯಜನರ ಕಣ್ಣುಗಳನ್ನು ಕತ್ತಲೆಯಿಂದ ಬೆಳಕಿನಕಡೆಗೆ ತೆರೆಯಲು ಆದೇಶಿಸುತ್ತಾನೆ. ಕತ್ತಲೆಯು ದೇವರಿಂದ ದೂರಾಗುವಿಕೆ, ಹತಾಶೆ ಮತ್ತು ನಿರೀಕ್ಷೆಯಿಲ್ಲದಿರುವಿಕೆಯ ಪರವಾಗಿ ನಿಲ್ಲುತ್ತದೆ. ಬೆಳಕು ದೇವರೊಂದಿಗೆ ಅನ್ಯೋನ್ಯತೆ ಮತ್ತು ರಕ್ಷಣೆಯ ಪರವಾಗಿ ನಿಲ್ಲುತ್ತದೆ. ಮತ್ತಾಯನು ಯೆಶಾಯ 9:1–2 ನ್ನು ಯೇಸು ಕ್ರಿಸ್ತನ ಕುರಿತಾಗಿ ಒಂದು ಪ್ರವಾದನೆಯಾಗಿ ಉಪಯೋಗಿಸುತ್ತಾನೆ.

f. *ಮೊದಲು ಪ್ರಜೆಯಾಗಿರದ ಜನರು* (ವ.10): ಯೆಶಾಯ 19:23–25. ಈ ಒಂದು ಅಮೋಘ ಪ್ರವಾದನೆಯಲ್ಲಿ ದೇವರು ಐಗುಪ್ತವನ್ನು 'ನನ್ನ ಜನರು' ಅಶೂರ್ಯವನ್ನು 'ನನ್ನ ಕೈ ಕೆಲಸ' ಮತ್ತು ಇಸ್ರಾಯೇಲನ್ನು 'ನನ್ನ ಸ್ವಾಸ್ಥ್ಯ' ಎಂದೂ ಕರೆಯುತ್ತಾನೆ. ಐಗುಪ್ತ ಮತ್ತು ಅಶೂರ್ಯರು ಹಳೆ ಒಡಂಬಡಿಕೆ ಕಾಲದಲ್ಲಿನ ಎಲ್ಲಾ ವೈರಿ ರಾಷ್ಟ್ರಗಳನ್ನು ಪ್ರತಿನಿಧಿಸುವವರಾಗಿದ್ದು ಇಸ್ರಾಯೇಲರಂತೆ ದೇವರ ಜನರಿಗೆ ಸೇರಿದವರಾಗಿದ್ದಾರೆ. ಈ ಪ್ರವಾದನೆಯು ಮುಂದಿನ ಸಭೆಗೆ, ಕ್ರಿಸ್ತನಲ್ಲಿ ಆರಿಸಲ್ಪಟ್ಟ ಜನರು ಮತ್ತು ಎಲ್ಲಾ ರಾಷ್ಟ್ರಗಳಿಂದ ಜೀವವುಳ್ಳ ಕಲ್ಲುಗಳಾಗಿ ಕಟ್ಟಲ್ಪಡುವವರನ್ನು ಸೂಚಿಸುತ್ತದೆ.

g. *ವಾತ್ಸಲ್ಯ (ಕರುಣೆ) ಹೊಂದಿದ ಜನರು* (ವ.10): ಮೀಕ 7:20, ಯೆಶಾಯ 63:9. ಹಳೆ ಒಡಂಬಡಿಕೆಯ ಸಮಯದಲ್ಲಿ ಇಸ್ರಾಯೇಲ್ ದೇವರ ವಾತ್ಸಲ್ಯವನ್ನು ವಿಶೇಷವಾದ ರೀತಿಯಲ್ಲಿ ಅನುಭವಿಸಿದ ರಾಷ್ಟ್ರವಾಗಿತ್ತು. ಇಲ್ಲಿ ಪೇತ್ರನು ಈಗ ಯೇಸು ಕ್ರಿಸ್ತನಲ್ಲಿ ದೇವರ ವಾತ್ಸಲ್ಯ/ಕರುಣೆಯು ಈ ಹಿಂದೆ ದೇವರ ವಾತ್ಸಲ್ಯದಲ್ಲಿ ಪಾಲು ಹೊಂದದ ಇಸ್ರಾಯೇಲರಿಗೂ ಸಹ ವಿಸ್ತರಿಸಿದೆ ಎಂದು ಹೇಳುತಾನೆ.

9. ಹಿಂದಿನ ಪ್ರಶ್ನೆಯನ್ನು ಉತ್ತರಿಸಿದ ನಂತರ ನಾನು ಈ ಎರಡು ಮುಖ್ಯ ಮುಕ್ತಾಯಕ್ಕೆ ಬಂದಿದ್ದೇನೆ:

a. ಹೊಸ ಒಡಂಬಡಿಕೆಯು (ನಮ್ಮ ಅಧ್ಯಯನದಲ್ಲಿನ ಪೇತ್ರ ಮತ್ತು ಈ ಪತ್ರಿಕೆಗಳಲ್ಲಿನ ಪೌಲನು ಸಹ) 'ದೇವರ ಜನರು' ಎಂಬುದು ಯೆಹೂದ್ಯರು ಮತ್ತು ಅನ್ಯರು ಎರಡನ್ನೂ ಒಳಗೊಂಡಿದೆ ಎಂದು ಸ್ಪಷ್ಟವಾಗಿ ಅರ್ಥೈಸಲ್ಪಡುತ್ತದೆ. ಅದು ಆದಿಯಿಂದಲೂ ದೇವರ ಯೋಜನೆಯಾಗಿತ್ತು, (ಪ್ರವಾದಿಯಾದ ಯೆಶಾಯ ಮತ್ತು ಕೆಲವು ಕೀರ್ತನೆಗಾರರು ಸಹ ಈ ಸತ್ಯವನ್ನು ಹೊರಪಡಿಸುತ್ತಾರೆ. ಆದರೆ ವಿಶಾಲಾರ್ಥದಲ್ಲಿ ನೋಡುವುದಾದರೆ ಹಳೆಯ ಒಡಂಬಡಿಕೆಯ ವಾಕ್ಯಭಾಗಗಳು 'ದೇವರ ಜನರು' ಯಾಕೋಬನ ಸಂತತಿಯಾದ ಇಸ್ರಾಯೇಲರನ್ನಷ್ಟೆ ಸೀಮಿತವಾಗಿ ನಿಲ್ಲಿಸುತ್ತವೆ.

b. ಕೇವಲ ದೇವರ ವಾತ್ಸಲ್ಯ/ಕರುಣೆ ಮತ್ತು ಯೇಸು ಕ್ರಿಸ್ತನಲ್ಲಿನ ಕೃಪೆಯ ನಿಮಿತ್ತ ವಿಶ್ವಾಸಿಗಳು 'ದೇವರ ಜನರಲ್ಲಿ' ಸೇರಿದವರಾಗಿದ್ದಾರೆ. ಇದು ಕೇವಲ ಮನುಷ್ಯ ಸಂತತಿಯು ಒಬ್ಬ ಮನುಷ್ಯನನ್ನು ದೇವರ ಜನರಿಗೆ ಸೇರಿದವನನ್ನಾಗಿ ಮಾಡುವುದಿಲ್ಲ, ಆದರೆ ಇದು ಯೇಸು ಕ್ರಿಸ್ತನಲ್ಲಿನ ನಂಬಿಕೆಯಾಗಿದೆ.



## ಅವಲೋಕನ

ದೇವರ ಜನರೆಂಬುದು– ಯೇಸು ಕ್ರಿಸ್ತನಲ್ಲಿ ನಂಬಿಕೆಯಿಟ್ಟವರು ಮತ್ತು ತಮ್ಮ ಜೀವಿತವನ್ನು ಆತನ ಮೇಲೆ ಕಟ್ಟಲ್ಪಟ್ಟವರನ್ನು ಒಳಗೊಂಡಿರುತ್ತದೆ. ಆತನು ನಮ್ಮ ರಕ್ಷಣ ಬಂಡೆಯಾಗಿದ್ದಾನೆ. ಆತನು ಜೀವವುಳ್ಳ ಕಲ್ಲಾಗಿದ್ದಾನೆ. ನಾವು ಸ್ವಾಸ್ತ್ಯ ಅಥವಾ ಕುಟುಂಬ ಹಿನ್ನಲೆ ಏನೇ ಆಗಿರಬಹುದು, ಆದರೆ ಪವಿತ್ರಾತ್ಮನ ಕಾರ್ಯದ ಮೂಲಕ ನಾವು ಜೀವಂತರಾಗಿ ಮಾಡಲ್ಪಡುತ್ತೇವೆ. ನಾವು ಜೀವವುಳ್ಳ ಕಲ್ಲುಗಳಾಗಿ ಮಾರ್ಪಡುತ್ತೇವೆ, ಸಭೆಗೆ, ಆತ್ಮಿಕ ಮಂದಿರಕ್ಕೆ ಕಟ್ಟಲ್ಪಡುತ್ತೇವೆ. ನಾವು ರಾಜವಂಶಸ್ಥರಾದ ಯಾಜಕರೂ ಪರಿಶುದ್ಧ ಜನಾಂಗವೂ ದೇವರ ಸ್ವಕೀಯ ಪ್ರಜೆಯೂ ಆಗುತ್ತೇವೆ. ನಾವು ಕತ್ತಲೆಯಿಂದ ಬೆಳಕಿನೆಡೆಗೆ ಕರೆಯಲ್ಪಟ್ಟವರಾಗಿದ್ದೇವೆ. ಆ ನಿಮಿತ್ತ ಆತನ ವಾತ್ಸಲ್ಯವನ್ನು ಮತ್ತು ಕ್ರಿಸ್ತನಲ್ಲಿ ಕೃಪೆಯನ್ನು ಹೊಂದಿದ್ದೇವೆ. ಆದರೆ ನಾವು ಯೇಸುವನ್ನು ತಿರಸ್ಕರಿಸಿದರೆ ಆತನು ನಮಗೆ ಮುಗ್ಗರಿಸುವ ಬಂಡೆಯಾಗುತ್ತಾನೆ ಮತ್ತು ಆತನ ಮೇಲೆ ಕಟ್ಟಲ್ಪಡಬೇಕಾದ ನಾವು ಬೀಳುವವರಾಗುತ್ತೇವೆ.

ಈ ಅಧ್ಯಯನದಲ್ಲಿ ಹೊಸ ಒಡಂಬಡಿಕೆಯಲ್ಲಿ ದೇವರ ಜನರು (ಸಭೆ) ಹೇಗೆ ಅನ್ಯರು ಮತ್ತು ಯೆಹೂದ್ಯರನ್ನು ಒಳಗೊಂಡಿರುತ್ತದೆಂಬುದನ್ನು ತೋರಿಸಲು ಹೇಗೆ ಪೇತ್ರನು ಹಳೆಯ ಒಡಂಬಡಿಕೆಯ ಇಸ್ರಾಯೇಲರ ಬಗೆಗಿನ ವಾಕ್ಯಭಾಗಗಳನ್ನು ಉಪಯೋಗಿಸುತ್ತಾನೆಂದು ನಾವು ಕಾಣುತ್ತೇವೆ. ಇಲ್ಲಿ

ನಮ್ಮ ಕುಟುಂಬದ ಸ್ವಾಸ್ತ್ಯ ಅಥವಾ ಸಂತತಿ ಪ್ರಾಮುಖ್ಯವಲ್ಲ– ಆದರೆ ಸಭೆಯ ಮೂಲೆಗಲ್ಲಾದ ಯೇಸು ಕ್ರಿಸ್ತನೊಂದಿಗೆ ಹೇಗೆ ವ್ಯವಹರಿಸುತ್ತೇವೆಂಬುದು ಪ್ರಾಮುಖ್ಯ ಸಂಗತಿಯಾಗಿದೆ. ಇಷ್ಟೇ ಅಲ್ಲದೇ ದೇವರ ಬಗೆಗಿನ ಹಳೆ ಒಡಂಬಡಿಕೆಯ ವಾಕ್ಯಭಾಗಗಳನ್ನು ಹೀಗೆ ಪೇತ್ರನು ಯೇಸು ಕ್ರಿಸ್ತನಿಗೆ ಹೋಲಿಸುತ್ತಾನೆಂಬ ಅನೇಕ ಉದಾಹರಣೆಗಳನ್ನು ನಾವು ಕಂಡಿದ್ದೇವೆ. ಹೊಸ ಒಡಂಬಡಿಕೆಯ ಸಿದ್ಧಾಂತ ಸ್ಪಷ್ಟವಾಗಿದೆ; ಯೇಸು ಕ್ರಿಸ್ತನೇ ದೇವರಾಗಿದ್ದಾನೆ.

# ಉತ್ತರಗಳು 5. ಹೊಸ ಜೀವನ ಶೈಲಿ, ಭಾಗ 1, 2:11–20

## ಶಿಕ್ಷಕರ ಗಮನಕ್ಕೆ

ಈ ಭಾಗದಲ್ಲಿ ಪೇತ್ರನು ತನ್ನ ಮೊದಲ ಓದುಗರು ಹಾದುಹೋದ ಅನೇಕ ಪ್ರಾಯೋಗಿಕ ಸಂಗತಿಗಳ ಬಗ್ಗೆ ವ್ಯವಹರಿಸುತ್ತಾನೆ. ಗುಲಾಮತನ ಸಂಗತಿಯು ಈ ದಿನ ನಮಗೆ ಅಷ್ಟು ಗಮನಾರ್ಹ ಸಂಗತಿಯಲ್ಲ. ಆದರೆ ಶಿಕ್ಷಕರಾಗಿ ನಿಮ್ಮ ಪಾತ್ರವು– ಪೇತ್ರನ ಪ್ರಬೋಧನೆ/ಎಚ್ಚರಿಕೆಗಳ ಹಿಂದಿನ ಸತ್ಯವೇದದ ನಿಯಮಗಳನ್ನು ವಿದ್ಯಾರ್ಥಿಗಳು ತಿಳಿದುಕೊಳ್ಳುವಂತೆ ಮಾಡುವುದಾಗಿದೆ.

ಆತ್ಮಿಕ ಕೂಟದ ಎರಡನೆಯ ಭಾಗವು ದಕ್ಷಿಣ ಭಾರತದ ಹಿನ್ನಲೆಯಲ್ಲಿ ಹೊಸ ಜೀವನ ಶೈಲಿಯು ಯಾವ ರೀತಿ ಜೀವಿಸುವುದಾಗಿದೆಂಬುದನ್ನು ವಿದ್ಯಾರ್ಥಿಗಳ ತಿಳುವಳಿಕೆಯನ್ನು ಹರಿತಗೊಳಿಸುತ್ತದೆ.

## ಉತ್ತರಗಳು

1. ಈ ರೀತಿಯಲ್ಲಿ ಪೇತ್ರನು ವಿಶ್ವಾಸಿಗಳ ಜೀವನವನ್ನು ವರ್ಣಿಸುತ್ತಾನೆ (ವ.11–12):

   a. ವಿಶ್ವಾಸಿಗಳು ಈ ಲೋಕದಲ್ಲಿ ಪ್ರವಾಸಿಗಳು, ಪರದೇಶಿಗಳೂ ಆಗಿದ್ದಾರೆ. ಇದರರ್ಥ ಅವರು ಯಾವಾಗಲೂ ಈ ಲೋಕಕ್ಕೆ ಸಂಬಂಧಪಟ್ಟವರಲ್ಲವೆಂಬುದಾಗಿದೆ. ಬದಲಾಗಿ ಅವರು ದೇವರ ರಾಜ್ಯಕ್ಕೆ ಸಂಬಂಧಪಟ್ಟವರಾಗಿದ್ದಾರೆ.

   b. ವಿಶ್ವಾಸಿಗಳು ಯುದ್ಧವಲಯ/ರಂಗದಲ್ಲಿ ಜೀವಿಸುತ್ತಾರೆ. ಅವರು ಈ ಲೋಕದ ದುಷ್ಟಶಕ್ತಿಗಳಿಂದಲೂ ಮತ್ತು ಅದರ ಹಿಂದಿನ ಪಾಪಮಯವಾದ ಸ್ವಭಾವಗಳಿಂದಲೂ ಹೋರಾಟಕ್ಕೆ ಒಳಗಾಗುವವರಾಗಿದ್ದಾರೆ. ಹಾಗಾಗಿ ವಿಶ್ವಾಸಿಗಳು (ನಿರಂತರವಾಗಿ) ಈ ಪಾಪಮಯ ವಾದ ಲೋಕದ ಮೌಲ್ಯ ಮತ್ತು ಜೀವನ ಶೈಲಿ ಹಾಗೂ ದೇವರ ರಾಜ್ಯದ ಮೌಲ್ಯ ಮತ್ತು ಜೀವನ ಶೈಲಿಗಳ ನಡುವಿನ ನಿರಂತರವಾದ ಹೋರಾಟದ ನಡುವೆ ಜೀವಿಸುವವರಾಗಿದ್ದಾರೆ.

   c. ವಿಶ್ವಾಸಿಗಳು ಯೋಗ್ಯ/ಒಳ್ಳೆಯ ನಡಾವಳಿಕೆಯು ಅವರ ಸುತ್ತಲಿನ ಜನರಿಗೋಸ್ಕರ ಸಾಕ್ಷಿ/ಮಾದರಿಯಾಗಿದೆ. ವಿಶೇಷವಾಗಿ ಅಕ್ರೈಸ್ತರಿಗೆ. ತಪ್ಪನ್ನು ಮಾಡಿದರೆಂದು ವಿಶ್ವಾಸಿಗಳು ಸುಳ್ಳಾಗಿ ನಿಂಧಿಸಲ್ಪಟ್ಟಾಗಲೂ ಇದು ಉಂಟಾಗುತ್ತದೆ.

   d. ವಿಶ್ವಾಸಿಗಳ ನಡವಳಿಕೆಯ ಜೀವನವನ್ನು ನಿಂಧಿಸುವವರು ದೇವರನ್ನು ಕೊಂಡಾಡುವಂತೆ ಸಹ ಕಾರಣವಾಗಬಹುದು. ವಿಶ್ವಾಸಿಗಳ ಸತ್ಕ್ರಿಯೆಗಳು ದೇವರ ಬಗ್ಗೆ ಸಾಕ್ಷಿಕರಿಸುವಾಗ ಈ ರೀತಿ ನಿಂಧಿಸಲ್ಪಡುತ್ತದೆ.

2. ವಚನ 12–18 ರಲ್ಲಿ ಅನೇಕ ಆಜ್ಞಾರ್ಥಕಗಳನ್ನು ಉಪಯೋಗಿಸುತ್ತಾನೆ. ಇಂಗ್ಲೀಷ್‌ನ ಎನ್‌ಐವಿ ಭಾಷಾಂತರದಲ್ಲಿ 10 ಆಜ್ಞಾರ್ಥಗಳಿವೆ. ಕನ್ನಡ ಭಾಷಾಂತರದಲ್ಲಿ ನೀವು ಎಷ್ಟನ್ನು ಕಾಣುವಿರಿ? ಹಾಗಾಗಿ ಈ ವಾಕ್ಯಭಾಗವು ಆಜ್ಞೆ ಮತ್ತು ಉತ್ತೇಜನಗಳೆರಡನ್ನು ಒಳಗೊಂಡಿದೆ.

3. ‘ಎಲ್ಲರನ್ನು ಸನ್ಮಾನಿಸಿರಿ’ (ವ.17) ಎಂಬ ಹೇಳಿಕೆಯೊಂದಿಗೆ ಪೇತ್ರನು ತಮ್ಮ ಸುತ್ತಣ ಜನರೊಂದಿಗೆ ವಿಶ್ವಾಸಿಗಳು ಹೇಗೆ ವ್ಯವಹರಿಸಬೇಕೆಂಬುದನ್ನು ಪೇತ್ರನು ಸಾರಾಂಶಗೊಳಿಸುತ್ತಾನೆ. ಹಾಗೆಯೇ ಇದನ್ನು ಯಾವರೀತಿಯಲ್ಲಿ ಮಾಡಬೇಕೆಂದು 3 ಉದಾಹರಣೆಗಳನ್ನು ಕೊಡುತ್ತಾನೆ.

   a. ನಾವು ನಮ್ಮ ಸಹೋದರರನ್ನು, ಸಹ ವಿಶ್ವಾಸಿಗಳನ್ನು ಪ್ರೀತಿಸಬೇಕು

   b. ನಾವು ದೇವರಿಗೆ ಭಯಪಡಬೇಕು. ದೇವರಿಗೆ ಭಯ ಪಡುವುದರ ಅರ್ಥ– ಆತನನ್ನು ಪ್ರೀತಿಸುವುದು, ಗೌರವಿಸುವುದು, ವಿಧೇಯರಾಗುವುದು ಮತ್ತು ಸನ್ಮಾನಿಸುವುದು.

   c. ನಾವು ಅರಸನನ್ನು ಸನ್ಮಾನಿಸಬೇಕು. ಇದು ಕೇವಲ ಅರಸನನ್ನು ಸೂಚಿಸುತ್ತಿಲ್ಲ. ಆದರೆ ಮನುಷ್ಯರು ನೇಮಿಸಿರುವ ಎಲ್ಲಾ ಅಧಿಕಾರಗಳನ್ನು (ವ.13) ಸನ್ಮಾನಿಸುವುದಾಗಿದೆ.

4. ಈ ವಚನಗಳಲ್ಲಿ ಸಾರಾಂಶಕ್ಕಿಂತ ಮೊದಲು (ಹಿಂದಿನ ಪ್ರಶ್ನೆ ನೋಡಿರಿ) ಪ್ರತಿಯೊಬ್ಬರನ್ನು ಯಾಕೆ ಸನ್ಮಾನಿಸಬೇಕೆಂದು ಪೇತ್ರನು 3 ಮುಖ್ಯ ಕಾರಣಗಳನ್ನು ಕೊಡುತ್ತಾನೆ (ವ.13–16) ಅವೆಂದರೆ:–

   a. ಇದನ್ನು ನಾವು ದೇವರ ನಿಮಿತ್ತ ಮಾಡಬೇಕು (ವ.13). ಈ ರೀತಿ ಮಾಡುವುದರಿಂದ ನಾವು ನಮ್ಮ ದೇವರೂ ಕರ್ತನೂ ರಕ್ಷಕನೂ ಆಗಿರುವ ಯೇಸುವನ್ನು ಸನ್ಮಾನಿಸುತ್ತೇವೆ. ಅಷ್ಟೇ ಅಲ್ಲದೆ ನಾವು ದೇವರ ರಾಜ್ಯದ ನಿಯಮಗಳನ್ನು ಪಾಲಿಸುತ್ತೇವೆ.

   b. ನಾವು ಒಳ್ಳೆಯದನ್ನು ಮಾಡುವುದು ದೇವರ ಚಿತ್ತವಾಗಿದೆ (ವ.15). ವ.17 ರಲ್ಲಿ ಕೊಡಲ್ಪಟ್ಟ ಉದಾಹರಣೆಯನ್ನು ಸೇರಿಸಿ ನಾವು ಒಳ್ಳೆಯದನ್ನು ಮಾಡಬೇಕೆಂದು ದೇವರು ಬಯಸುತ್ತಾನೆ. (ಇತರ ವಿಶ್ವಾಸಿಗಳಿಗೆ, ದೇವರಿಗೆ ಮತ್ತು ಲೋಕದ ಅಧಿಕಾರಗಳಿಗೆ).

   c. ನಾವು ದೇವರ ಸೇವಕ/ದಾಸರಂತೆ ಜೀವಿಸಬೇಕು (ವ.16–17). ಈ ರೀತಿಯಲ್ಲಿ ತನ್ನ ಜನರು ತಮ್ಮ ಸುತ್ತಣ ಜನರೊಂದಿಗೆ ವ್ಯವಹರಿಸಬೇಕೆಂದು ದೇವರು ಬಯಸುತ್ತಾನೆ.

5. ವಚನ 16 ರಲ್ಲಿ ಪೇತ್ರನು ಸ್ವಾತಂತ್ರ್ಯದ ಬಗ್ಗೆ ಬರೆಯುತ್ತಾನೆ. ಈ ವಚನದ ಅರ್ಥವೇನೆಂದು ತಿಳಿದುಕೊಳ್ಳುವ ಕೀಲಿಕೈಯನ್ನು ‘ದೇವರಿಗೆ ಭಯಪಡಿರಿ’ ಎಂಬ ಹೇಳಿಕೆಯಲ್ಲಿ ಕಾಣಬಹುದು (ವ.17). ದೇವರಿಗೆ ಭಯಪಡುವ ಒಂದು ವಿಧವು ಆತನ ದಾಸರಂತೆ ಜೀವಿಸುವುದು, ಆತನ ಚಿತ್ತವನ್ನು ನೆರವೇರಿಸುವುದು. ಆತನಡಿಯಲ್ಲಿ ನಮಗೆ ಸ್ವಾತಂತ್ರ್ಯವುಂಟು. ಆದರೆ ಇದು ಕೆಟ್ಟದ್ದನ್ನು ಮಾಡುವುದಕ್ಕೆ ಇರುವ ಸ್ವಾತಂತ್ರ್ಯವಲ್ಲ, ಬದಲಾಗಿ ಇದು ಒಳ್ಳೆಯದನ್ನು ಮಾಡಲು, ಆತನು ಮತ್ತು ಇತರ ಸಹೋದರರಿಗೂ ಸೇವೆಮಾಡುವ ಸ್ವಾತಂತ್ರ್ಯವಾಗಿದೆ.

6. ದೇವರ ರಾಜ್ಯದ ನಿಯಮಗಳನ್ನು ಪ್ರತಿಬಿಂಬಿಸಲು ದೇವರಿಗೆ ಭಯಪಡುವ ಸೇವಕರು ಹೇಗೆ ವರ್ತಿಸಬೇಕೆಂಬ ಹಿನ್ನಲೆಯಲ್ಲಿ ‘ಅನ್ಯಾಯವಾಗಿ ಭಾಧೆಪಡುವ ಕಷ್ಟ’ (ವ.19) ಎಂಬ ಮಾತನ್ನು ಪೇತ್ರನು ಉಪಯೋಗಿಸುತ್ತಾನೆ. ಅವರ ಯಜಮಾನನು ಕಠುರ ಮತ್ತು ಅನ್ಯಾಯಗಾರರಾದರೂ ಮತ್ತು ತಮ್ಮನ್ನು ಅನ್ಯಾಯವಾಗಿ ಬಾಧೆಪಡುವುದಕ್ಕೆ ಕಾರಣರಾದರೂ ಸೇವಕ/ದಾಸ ವಿಶ್ವಾಸಿಗಳು ತಮ್ಮ ಯಜಮಾನರಿಗೆ ಪೂರ್ಣ ಗೌರವದಿಂದ ತಮ್ಮನ್ನು ಒಪ್ಪಿಸಿಕೊಡಬೇಕು. ಇದು ದೇವರ ಮುಂದೆ ಶ್ಲಾಘ್ಯವಾಗಿದೆ ಮತ್ತು ಆತನನ್ನು ಮೆಚ್ಚಿಸುತ್ತದೆ.

7. ವಚನ 20 ರಲ್ಲಿ ವಿಶ್ವಾಸಿಗಳು ಎರಡು ವಿದಧ ಬಾಧೆಗಳನ್ನು ಅವುಭವಿಸಬಹುದೆಂಬುದು ಪೇತ್ರನ ಅಂಶವಾಗಿದೆ:

a. ಅವರು ತಪ್ಪು ಮಾಡಿದ್ದಕ್ಕಾಗಿ ಗುದ್ದು ತಿನ್ನುವುದು ಮತ್ತು ಶಿಕ್ಷೆಗೊಳಗಾಗುವುದು. ಈ ರೀತಿಯ ಬಾಧೆಯು ನಾಚಿಕೆಗೇಡು ಮತ್ತು ಇದರಿಂದ ಹೆಮ್ಮೆಪಡುವ ಅವಶ್ಯವಿಲ್ಲ.

b. ಒಳ್ಳೆಯದನ್ನು ಮಾಡಿದ್ದಕ್ಕಾಗಿ ಬಾಧೆಪಡುವುದು. ಈ ರೀತಿಯ ಬಾಧೆಯು ದೇವರ ಮುಂದೆ ಶ್ಲಾಘ್ಯವಾಗಿದೆ. ಇದು ದೇವರನ್ನು ಮೆಚ್ಚಿಸುತ್ತದೆ.

8. ವ.18 ನ್ನು ಗುಲಾಮತನ/ದಾಸತ್ವವನ್ನು ಬೆಂಬಲಿಸಲು ಉಪಯೋಗಿಸಲ್ಪಡಬಹುದೆಂದು ನಾನು ನೆನಸುವುದಿಲ್ಲ. ಗುಲಾಮತನವು ಒಳ್ಳೇಯದೋ ಕೆಟ್ಟದ್ದೋ ಎಂದು ಪೇತ್ರನು ಚರ್ಚಿಸುವುದಿಲ್ಲ. ಗುಲಾಮರಾಗಿದ್ದು ಈಗ ವಿಶ್ವಾಸಿಗಳಾದವರು ಗುಲಾಮತನವು ದೈನಂದಿನ ಜೀವನದ ಭಾಗವಾಗಿರುವ ಸಮಾಜದಲ್ಲಿ ಹೇಗೆ ನಡಕೊಳ್ಳಬೇಕೆಂದು ಆತನು ಹೇಳುತ್ತಾನೆ. ರೋಮ್‌ನ 3 ರಲ್ಲಿ ಒಂದಂಶ ಸಂಖ್ಯೆಯು ಗುಲಾಮ/ದಾಸರನ್ನು ಒಳಗೊಂಡಿದೆ. ಹಾಗಾಗಿ ಸಭೆಯ ಸದಸ್ಯತ್ವದಲ್ಲಿ ಗುಲಾಮರು ಬಹುಸಂಖ್ಯೆಯಲ್ಲಿದ್ದಿರಬಹುದು. ಈ ಗುಲಾಮ ವಿಶ್ವಾಸಿಗಳು ದೇವರ ರಾಜ್ಯದ ನಿಯಮಗಳಲ್ಲಿ ಪ್ರತಿಬಿಂಬಿಸಲು ಹೇಗೆ ನಡಕೊಳ್ಳಬೇಕೆಂದು ಪೇತ್ರನು ಬಯಸಿದನು.



## ಅವಲೋಕನ

ಈ ಲೋಕದಲ್ಲಿ ವಿಶ್ವಾಸಿಗಳು ಪರದೇಶಿಗಳಾಗಿದ್ದಾರೆಂದು (ಹೋಲಿಸಿ 1:1, 17) ಪೇತ್ರನು ಹೇಳುವುದು ಇದು ಮೂರನೇ ಭಾರಿಯಾಗಿದೆ. ಹಾಗಾಗಿ ಆತನಿಗೆ ಇದೊಂದು ಸಭೆಯ ಅತೀ ಪ್ರಾಮುಖ್ಯ ಸಂಗತಿಯಾಗಿರಬೇಕು. ನನ್ನ ವೈಯಕ್ತಿಕ ಅನುಭವದಲ್ಲಿ ಈ ಆಲೋಚನೆಯು ಆಧುನಿಕ ಸೇವಕರುಗಳ ಪ್ರಸಂಗಗಳಲ್ಲಿ ಮತ್ತು ಸತ್ಯವೇದ ಅಧ್ಯಯನಗಳಿಂದ ಮಾತ್ರ ಪ್ರಭಾವಬೀರಿದೆ. ಇದಕ್ಕೆ ಕಾರಣ ಅವರು ಹೆಚ್ಚಾಗಿ ಅವರ ಹಿಂದಿನಂತೆಯೇ ಕ್ರೈಸ್ತೀಯ ಜೀವಿತದ ಈ ದೃಷ್ಟಿಕೋನವು ಅವರಿಗೆ ಹಿಡಿಸುವುದಿಲ್ಲ. ಬದಲಾಗಿ ಅವರು ಈ ಲೋಕದಲ್ಲಿರುವುದೆಂದರೆ ಮನೆಯಲ್ಲಿ ವಿಶ್ರಾಂತವಾಗಿರುವವರಂತೆ ಭಾವಿಸುತ್ತಾರೆ. ಆದರೆ ನಾನು ಅವರಿಗೊಂದು ಪ್ರಶ್ನೆಯನ್ನು ಹಾಕಲು ಬಯಸುತ್ತೇನೆ– ದೇವರಿಗೆ ಮತ್ತು ಆತನ ಪರಿಶುದ್ಧತೆಯ ನಿಯಮಗಳಿಗೆ ಬೆನ್ನು ತಿರುಗಿಸಿದ ಮತ್ತು ಬಿದ್ದುಹೋದ ಈ ಲೋಕದಲ್ಲಿ ನೆಲೆಗೊಳ್ಳಲು ಮತ್ತು ಮನೆಯಲ್ಲಿರುವಂತೆ ಭಾವಿಸಲು ದೇವರು ಪರಿಶುದ್ಧರಾಗಿರುವುದರಿಂದ ಪರಿಶುದ್ಧರಾಗಿರಬೇಕಾದ ಜನರಿಗೆ ನೆರವಾಗಲು ಇದೊಂದು ಸಹಾಯಕೊಡುವಂತಿದೆಯೋ?

ಕರ್ತನ ನಿಮಿತ್ತ ಎಂಬುದೊಂದು ಪರಿಶುದ್ಧ ಜೀವಿತಕ್ಕೆ ಉತ್ತಮವಾದ ನಿಯಮವಾಗಿದೆ. ಮನುಷ್ಯನ ಪತನವಾದಂದಿನಿಂದ ಮನುಷ್ಯರು ಸ್ವಾರ್ಥ ಕೇಂದ್ರಿತ ಸ್ವಾಭಿಮಾನಿಗಳಾಗಿದ್ದು ಮತ್ತು ತಮ್ಮ ಸ್ವಂತಕ್ಕಾಗಿ ಮತ್ತು ತಮ್ಮ ಸ್ವಾರ್ಥ ಆಶೆಗಳನ್ನು ಮೆಚ್ಚಿಸಲು, ಬದುಕುವುದಕ್ಕಾಗಿ ಹೋರಾಡುತ್ತಿದ್ದಾರೆ. ಆದರೆ– ದೇವರನ್ನು ನಾವು ಕೇಂದ್ರದಲ್ಲಿಟ್ಟರೆ, ಯೇಸುವಿನಂತೆ ನಾವು 'ನನ್ನ ಚಿತ್ತವಲ್ಲ, ನಿನ್ನ ಚಿತ್ತದಂತೆಯೇ ಆಗಲಿ' (ಲೂಕ 22:42) ಎಂದು ಹೇಳಬಹುದು. ಆಗ ನಾವೇನು ಮಾಡಿದರೂ ದೇವರ ಮುಂದೆ ಶ್ಲಾಘ್ಯವಾಗುತ್ತದೆ ಮತ್ತು ದೇವರ ರಾಜ್ಯದ ನಿಯಮಗಳನ್ನು ಪ್ರತಿಬಿಂಬಿಸುತ್ತದೆ.

ಈ ಭಾಗದಲ್ಲಿ– ಕೆಟ್ಟತನವನ್ನು ಮರೆಮಾಡುವುದಕ್ಕೆ ನಿಮ್ಮ ಸ್ವಾತಂತ್ರ್ಯವನ್ನು ಉಪಯೊಗಿಸಿಕೊಳ್ಳಬೇಡಿರಿ (ವ.2:16) ಎಂದು ಬರೆಯುವಾಗ ಕ್ರೈಸ್ತೀಯ ಸ್ವಾತಂತ್ರ್ಯವನ್ನು ಸಹ ಪೇತ್ರನು ಸ್ಪರ್ಷಿಸುತ್ತಾನೆ. ಗಲಾತ್ಯದವರಿಗೆ ಬರೆಯುವ ತನ್ನ ಪತ್ರಿಕೆಯಲ್ಲಿ ಪೌಲನು ಸಹ ಅದೇ

ರೀತಿಯ ಹೇಳಿಕೆಯನ್ನು ಬಳಸುತ್ತಾನೆ: 'ಸಹೋದರರೇ, ನೀವು ಸ್ವತಂತ್ರರಾಗಿರಬೇಕೆಂದು ದೇವರು ನಿಮ್ಮನ್ನು ಕರೆದನು, ಆದರೆ ನಿಮಗಿರುವ ಸ್ವಾತಂತ್ರವನ್ನು ಶರೀರಾಧೀನ ಸ್ವಭಾವಕ್ಕೆ ಆಸ್ಪದವಾಗಿ ಬಳಸದೆ ಪ್ರೀತಿಯಿಂದ ಒಬ್ಬರಿಗೊಬ್ಬರು ಸೇವೆಮಾಡಿರಿ' (ಗಲಾತ್ಯ 5:1). ಹಾಗಾಗಿ ನಾವು ಸ್ವಾತಂತ್ರರಾಗಿದ್ದೇವೆ. ಆದರೆ– ಇದೊಂದು ದೇವರ ಚಿತ್ತದಡಿಯಲ್ಲಿನ ಸ್ವಾತಂತ್ರವಾಗಿದೆ. ದೇವರ ರಾಜ್ಯದ ನಿಯಮಗಳನ್ನು ಪ್ರತಿಬಿಂಬಿಸುವುದಕ್ಕಾಗಿನ ಸ್ವಾತಂತ್ರವಾಗಿದೆ. ಇದು ಒಳ್ಳೆಯದನ್ನು ಮಾಡಲು ಇರುವ ಸ್ವಾತಂತ್ರ್ಯವಾಗಿದೆಯೇ ಹೊರತು ಕೆಟ್ಟತನದಲ್ಲಿ ಭಾಗಿಯಾಗಲು ಇರುವುದಿಲ್ಲ.



*'ಸ್ವಾತಂತ್ರರಂತೆ ನಡೆದುಕೊಳ್ಳಿರಿ ಆದರೆ ಕೆಟ್ಟತನವನ್ನು ಮರೆಮಾಡುವುದಕ್ಕೆ ನಿಮ್ಮ ಸ್ವಾತಂತ್ರವನ್ನು ಉಪಯೋಗಿಸಬೇಡಿರಿ' (1 ಪೇತ್ರ 2:16).*

# ಉತ್ತರಗಳು 6: ಹೊಸ ಜೀವನ ಶೈಲಿ, ಭಾಗ 2, 2:21–3:7

## ಶಿಕ್ಷಕರ ಗಮನಕ್ಕೆ

ಈ ಭಾಗವು ಎರಡು ಚರ್ಚಾಸ್ಪದ ಕ್ರೈಸ್ತೀಯ ನೀತಿಶಾಸ್ತ್ರಗಳನ್ನು ಒಳಗೊಳ್ಳುತ್ತದೆ.

1. ಸ್ತ್ರೀಯರ ಆಭರಣ: ಕೆಲವು ಕ್ರೈಸ್ತೀಯ ಪಂಗಡಗಳಲ್ಲಿ ಮಹಿಳೆಯರು ಸಭೆಯಲ್ಲಿ ಆಭರಣವನ್ನು ಧರಿಸುವುದನ್ನು ಬಹಳವಾಗಿ ವಿರೋಧಿಸಿ ಪ್ರಸಂಗಿಸುವುದಾಗಿದೆ. ಹಾಗಾಗಿ ಈ ವಿಷಯವನ್ನು ನೀವು ಸೂಕ್ಷ್ಮವಾಗಿ ನಿಭಾಯಿಸುವುದು ಅತೀ ಪ್ರಾಮುಖ್ಯವಾಗಿದೆ. 'ಆತ್ಮಿಕ ಸೌಂದರ್ಯ' ಎಲ್ಲಿಂದ ಬರುತ್ತದೆಂಬ ಪೇತ್ರನ ಅಂಶದ ಬಗ್ಗೆ ವಿದ್ಯಾರ್ಥಿಗಳು ತಿಳಿದುಕೊಳ್ಳುವಂತೆ ನೀವು ಅವರಿಗೆ ಸಹಕರಿಸಬೇಕು. ನಿಜವಾದ ಸೌಂದರ್ಯವು ಒಳಗಣ ಸಂಗತಿಯಾಗಿದೆ. ಪೇತ್ರನ ಸನ್ನಿವೇಶಕ್ಕೆ ಜಡೆಹೆಣೆದುಕೊಳ್ಳುವುದು, ಬಂಗಾರ, ಒಡವೆ ಮತ್ತು ಬೆಲೆಬಾಳುವ ವಸ್ತ್ರಗಳ ವಿರುದ್ಧವಾದ ಒಂದು ನಿರ್ಬಂಧವನ್ನು ಓದುವುದು ಅಸಾಧ್ಯವೆನಿಸುತ್ತದೆ.

2. ಕ್ರೈಸ್ತೀಯ ವಿವಾಹದಲ್ಲಿ ಗಂಡ ಮತ್ತು ಹೆಂಡತಿಯ ನಡುವಣ ಸಂಬಂಧ: ದುಃಖಕರವೆಂದರೆ– ಅನೇಕ ಕ್ರೈಸ್ತೀಯ ಗಂಡಂದಿರಿಂದ ಪೇತ್ರನ ಮಾತುಗಳು ತಪ್ಪಾಗಿ ತರ್ಜುಮೆ ಮಾಡಲ್ಪಟ್ಟಿವೆ ಮತ್ತು ತಪ್ಪಾಗಿ ಉಪಯೋಗಿಸಲ್ಪಟ್ಟಿವೆ. ಗಂಡಂದಿರು ತಮ್ಮ ಹೆಂಡತಿಯರನ್ನು ಅತಿಯಾಗಿ ಸಹಿಸಿಕೊಳ್ಳುವವರಂತೆ ನೋಡಿಕೊಳ್ಳುವುದನ್ನು ಅನುಮತಿಸಲಿಲ್ಲ. ಇಲ್ಲಿ, ಯೇಸು ಕ್ರಿಸ್ತನು ಮಾಡಿದ ರೀತಿಯಲ್ಲಿಯೇ ಅವರು ತಮ್ಮ ಹೆಂಡತಿಯರೊಂದಿಗೆ ವ್ಯವಹರಿಸಬೇಕು. ಅವರು ಆತನ ಹೆಜ್ಜೆ ಜಾಡನ್ನು ಪಾಲಿಸಬೇಕು (2:21), ಆತನು ಅವರಿಗಾಗಿ ಬಾಧೆ ಅನುಭವಿಸಿದನು ಮತ್ತು ಅವರಿಗಾಗಿಯೇ ಸತ್ತನು. ಹಾಗಾಗಿ ಅವರ ಶಿಕ್ಷಕರಾಗಿ ಪೇತ್ರನು ಯಾವ ಸನ್ನಿವೇಶದಲ್ಲಿ ಬರೆಯುತ್ತಿದ್ದಾನೆಂಬುದನ್ನು ಅರಿತುಕೊಳ್ಳುವಂತೆ ನಿಮ್ಮ ವಿದ್ಯಾರ್ಥಿಗಳಿಗೆ ಸಹಕರಿಸಬೇಕು. 'ಸ್ತ್ರೀಯರೇ, ನಿಮ್ಮ ಗಂಡಂದಿರಿಗೆ ಅಧೀನರಾಗಿರಿ' (3:1). ಪ್ರಶ್ನೆ 7 ರ ಉತ್ತರವನ್ನು ಸರಿಯಾಗಿ ಅಭ್ಯಾಸಿಸುವುದರಿಂದ ನಿಮ್ಮನ್ನು ಸರಿಯಾಗಿ ಸಿದ್ಧಪಡಿಸಿಕೊಳ್ಳಿರಿ. ಹೊಸ ಒಡಂಬಡಿಕೆಯ ಪತ್ರಿಕೆಗಳನ್ನು ನಾವು ಓದುವಾಗ (ಪೌಲನ ಮತ್ತು ಪೇತ್ರನ) ಸಾಂಸ್ಕೃತಿಕ ಸನ್ನಿವೇಶದ ಬಗ್ಗೆ ನಾವು ಎಚ್ಚರಿಕೆಯಿಂದಿರಬೇಕು. ಪತ್ರಿಕೆಗಳು ಸಾಂದರ್ಭಿಕ ವ್ಯಾಖ್ಯಾನಗಳಿಂದಾಗಿವೆ.

ಆತ್ಮಿಕ ಕೂಟದ ಎರಡನೇ ವಿಭಾಗವು ದಕ್ಷಿಣ ಭಾರತದ ಹಿನ್ನಲೆಯಲ್ಲಿ ಹೇಗೆ ಹೊಸ ಜೀವನಶೈಲಿಯಲ್ಲಿ ಜೀವಿಸಬಹುದೆಂಬ ವಿದ್ಯಾರ್ಥಿಗಳ ತಿಳುವಳಿಕೆಯನ್ನು ಅಳವಡಿಸುತ್ತಾರೆ.

## ಉತ್ತರಗಳು

1. ಈ ವಾಕ್ಯಭಾಗವು 'ಇದಕ್ಕಾಗಿಯೇ ನೀವು ಕರೆಯಲ್ಪಟ್ಟಿರಿ' (ವ.21) ಎಂಬ ಮಾತುಗಳೊಂದಿಗೆ ಪ್ರಾರಂಭವಾಗುತ್ತದೆ. ಈ ಹೇಳಿಕೆಯು ಹಿಂದಿನ ವಾಕ್ಯಭಾಗದಲ್ಲಿನ ಅನ್ಯಾಯವಾಗಿ ಬಾಧೆಪಡುವುದನ್ನು (ವ.19) ಸೂಚಿಸುತ್ತದೆಂಬುದನ್ನು ಇದರ ಸಂದರ್ಭವು ಸ್ಪಷ್ಟಪಡಿಸುತ್ತದೆ. ನಾನು ಇದನ್ನು ಒಂದು ಉಸಿರುಗಟ್ಟಿಸುವ ಹೇಳಿಕೆಯಾಗಿ ಕಾಣುತ್ತೇನೆ. ಆದರೆ ಪೇತ್ರನು ವಿಶ್ವಾಸಿಗಳು ಅನ್ಯಾಯವಾಗಿ ತಪ್ಪುಮಾಡದೆ ಬಾಧೆಯನ್ನು ಅನುಭವಿಸಲು ಕರೆಯಲ್ಪಟ್ಟಿದ್ದಾರೆಂದು ಬರೆಯುತ್ತಾನೆ.

2. ಪೇತ್ರನು ಈ 'ಅನ್ಯಾಯವಾಗಿ ಬಾಧೆಪಡುವ' ಸನ್ನಿವೇಶದಲ್ಲಿ ಯೇಸು ಕ್ರಿಸ್ತನ ಉದಾಹರಣೆಯನ್ನು ತರುತ್ತಾನೆ. ಅನ್ಯಾಯವಾಗಿ ಬಾಧೆಪಡುವ ವ್ಯಕ್ತಿಗೆ ಯೇಸು ಕ್ರಿಸ್ತನೇ ಸರ್ವಶ್ರೇಷ್ಟ ಮಾದರಿಯಾಗಿದ್ದಾನೆ. ಹಾಗಾಗಿ ವಿಶ್ವಾಸಿಗಳಾದ ನಾವು ಅನ್ಯಾಯವಾಗಿ ಕಾರಣವಿಲ್ಲದೆ ಬಾಧೆಪಡುವಾಗ ನಾವು ಆತನ ಹೆಜ್ಜೆ ಜಾಡನ್ನು ಹಿಂಬಾಲಿಸುವವರಾಗಿದ್ದೇವೆ. ನಾವು ಯೇಸು ಕ್ರಿಸ್ತನಂತೆಯೇ ಆಗಿದ್ದೇವೆ.

3. ಯೇಸುಕ್ರಿಸ್ತನಂತೆಯೇ, ಆತನ ಹಿಂಬಾಲಕರೂ (ಸಭೆ) ಅನ್ಯಾಯವಾದ ಬಾಧೆಯನ್ನು ಅನುಭವಿಸಲೇಬೇಕಾಗಿದೆ (ವ. 19). ಇದಕ್ಕೆ ಕಾರಣ ನಾವು ಬಿದ್ದುಹೋದ ಲೋಕದಲ್ಲಿ ಜೀವಿಸುತ್ತಿದ್ದೇವೆ. ನ್ಯಾಯವು ಕಲುಷಿತವಾದ ಜಗತ್ತು ಇದಾಗಿದೆ. ಪರಿಣಾಮವಾಗಿ ಆತನು ಪಾಪಮಾಡದಿದ್ದರೂ ಮತ್ತು ಆತನ ಬಾಯಲ್ಲಿ ಯಾವುದೇ ತಪ್ಪು ಕಾಣದಿದ್ದರೂ (ವ.22, ಯೆಶಾಯ 53:9 ನ್ನು ಬಳಸಿದ್ದು) ಯೇಸು ಕ್ರಿಸ್ತನು ಬಾಧೆಯನ್ನು ಅನುಭವಿಸಬೇಕಾಯಿತು. ಯಾಕೆ ದುಷ್ಟ ಮತ್ತು ಕೆಟ್ಟ ಜನರು ಯಾವಾಗಲೂ ದೇವರಲ್ಲಿ ಭಯಭಕ್ತಿಯುಳ್ಳ, ಯಥಾರ್ಥ ಮತ್ತು ಉಪಕಾರ ಮನೋಭಾವದ ವಿಶ್ವಾಸಿಗಳನ್ನು ಹಿಂಸಿಸುತ್ತಾರೆಂಬುದಕ್ಕೆ ಕಾರಣವಾಗಿದೆ.

4. 'ನ್ಯಾಯವಾಗಿ ತೀರ್ಪುಮಾಡುವಾತನಿಗೆ ತನ್ನ ಕಾರ್ಯವನ್ನು ಒಪ್ಪಿಸಿದನು' (ವ.23). ಈ ಹೇಳಿಕೆಯಲ್ಲಿ 'ಆತನಿಗೆ' ದೇವರನ್ನು ಸೂಚಿಸುತ್ತದೆ. ಈ ವಚನದಲ್ಲಿ ಪೇತ್ರನು 'ಅವರನ್ನು' (ಯೇಸು ಕ್ರಿಸ್ತನನ್ನು ನಿಂಧಿಸಿ ಕೊನಗೆ ಶಿಲುಬೆಯಲ್ಲಿ ಕೊಲ್ಲಲು ತಂದ ಜನರನ್ನು) ಯೇಸುವನ್ನು ಮರಣದಿಂದ ಎಬ್ಬಿಸಿದ ನೀತಿವಂತ ತೀರ್ಪುಗಾರನಾದ ದೇವರೊಂದಿಗೆ ತದ್ವಿರುದ್ಧವಾಗಿ ಉಪಯೋಗಿಸುತ್ತಾನೆ. ಪಾಪಿಗಳು ದೇವರ ನ್ಯಾಯದಿಂದ/ನೀತಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.

5. ಈ ಒಂದು ಭಾಗದಲ್ಲಿ (ವ.21–25) ವಿಶ್ವಾಸಿಗಳು ದೇವರ ರಾಜ್ಯದ ನಡವಳಿಕೆಯಂಥ ಒಂದು ಹೊಸ ಜೀವನಶೈಲಿ/ನಡವಳಿಕೆಯನ್ನು ಅನುಸರಿಸಬೇಕೆಂದು ಪ್ರೇರೇಪಿಸಲು ಯೇಸು ಕ್ರಿಸ್ತನ ಮಾದರಿಯನ್ನು ಉಪಯೋಗಿಸುತ್ತಾನೆ. ಈ ವಚನಗಳಲ್ಲಿ ಯೇಸು ಕ್ರಿಸ್ತನ ಬಗ್ಗೆ ನಾವು 3 ಸಂಗತಿಗಳನ್ನು ಕಲಿಯುತ್ತೇವೆ:

   a. ಯೇಸು ಕ್ರಿಸ್ತನು ಇತರರಿಗಾಗಿ ಬಾಧೆಪಡಲು ಕರೆಯಲ್ಪಟ್ಟನು (ವ.21). ಅನ್ಯಾಯವಾದ ನೋವನ್ನು ಆತನು ಸಹಿಸಿಕೊಂಡನು (22–23). ಈ ರೀತಿ ಮಾಡುವುದರ ಮೂಲಕ ಆತನು ನಮಗೊಂದು ಮಾದರಿಯಾದನು (ವ.21).

   b. ಯೇಸು ಕ್ರಿಸ್ತನು ನಮ್ಮ ಪಾಪಗಳನ್ನು ಹೊತ್ತುಕೊಂಡನು. ಆತನು ಶಿಲುಬೆಯಲ್ಲಿ ಸಾಯುವುದರ ಮೂಲಕ ನಮ್ಮ ರಕ್ಷಕನಾದನು (ವ.24).

   c. ಆತನ ರಕ್ಷಣೆಯು ನಾವು ನೀತಿವಂತಿಕೆಯ ಜೀವಿತವನ್ನು ಜೀವಿಸುವಂತೆ ಸಾಧ್ಯವಾಗಿಸುತ್ತದೆ (ವ.24). ಈಗ ನಾವು ಆತನಿಗೆ ಸೇರಿದವರಾಗಿದ್ದೇವೆ. ಆತನು ನಮ್ಮ ಆತ್ಮಗಳನ್ನು ಕಾಯುವ ಕುರುಬನೂ ಅಧ್ಯಕ್ಷನೂ ಆಗಿದ್ದಾನೆ (ವ.25).

6. ವಚನ 1–7 ರಲ್ಲಿ 'ಅದೇ ರೀತಿಯಾಗಿ' ಎಂಬ ಹೇಳಿಕೆಯನ್ನು ಎರಡು ಬಾರಿ ಉಪಯೋಗಿಸುತ್ತಾನೆ. ಇದು ಕ್ರಿಸ್ತನನ್ನು ಸೂಚಿಸುತ್ತದೆ. ವಿಶ್ವಾಸಿಗಳು– ಹೆಂಡತಿಯರು ಮತ್ತು ಗಂಡಂದಿರು ಸಹ– ಕ್ರಿಸ್ತನು ನಮ್ಮನ್ನು ನೋಡಿಕೊಳ್ಳುವಂತೆ ಒಬ್ಬರನ್ನೊಬ್ಬರು

ನೋಡಿಕೊಳ್ಳಬೇಕು. ಕೌಟಂಬಿಕ ಸಂಬಂಧದ ಬಗೆಗಿನ ಪ್ರಬೋಧನೆಯಲ್ಲಿ ಇದು ಒಂದು ಪ್ರಮುಖ ಅಂಶವಾಗಿದೆ.

7. 'ಸ್ತ್ರೀಯರೇ, ನಿಮ್ಮ ಗಂಡಂದಿರಿಗೆ ಅಧೀನರಾಗಿರಿ' (ವ.1) ಮತ್ತು 'ಪುರುಷರು ತಮ್ಮ ಹೆಂಡತಿಯರೊಂದಿಗೆ ವಿವೇಕದಿಂದ ಒಗೆತನ ಮಾಡಬೇಕು' (ವ.7). ಇವುಗಳ ನಡುವಿನ ವ್ಯತ್ಯಾಸವು ಈ ಎರಡು ಸಂಗತಿಗಳಾಗಿವೆ. ಯೇಸು ಕ್ರಿಸ್ತನು ಯಾವರೀತಿ ನಮ್ಮನ್ನು ನೋಡಿಕೊಳ್ಳುತ್ತಾನೆ ಎಂಬುದನ್ನು ಸೂಚಿಸುವ ಅದೇ ರೀತಿಯಾಗಿ (ವ.1,7) ಎಂಬ ಹೇಳಿಕೆಯಿಂದ ಅರ್ಹತೆ ಹೊಂದಿವೆಯೆಂದು ನಾವು ಅರ್ಥೈಸಿಕೊಳ್ಳುವಾಗ ಇದು ಗಲಿಬಿಲಿಯಾಗುತ್ತದೆ. ಆದರೆ ವ್ಯತ್ಯಾಸವನ್ನು ವಿವರಿಸಲು ಇದೊಂದು ಉತ್ತಮ ವಿಧವಾಗಿದೆ.

ವ್ಯತ್ಯಾಸವು ಸಾಂಸ್ಕೃತಿಕವಾಗಿದೆ ಹೊರತು ದೈವಶಾಸ್ತ್ರವಲ್ಲ. ಪೌಲನು 'ಸಭೆಯಲ್ಲಿ ಮನುಷ್ಯ ಜೀವಿಗಳ ಸಿದ್ಧಾಂತ'ವನ್ನು ಸ್ಪಷ್ಟವಾದ ರೀತಿಯಲ್ಲಿ ನಮಗೆ ಕೊಟ್ಟಿದ್ದಾನೆ. ಕ್ರಿಸ್ತನಲ್ಲಿ ಎಲ್ಲರೂ ಒಂದೇ ಆಗಿದ್ದಾರೆ. ಹಾಗಾಗಿ ದೈವಶಾಸ್ತ್ರನುಸಾರವಾಗಿ– ಯೆಹೂದ್ಯನೂ ಗ್ರೀಕನೂ ಎಂದೂ, ಆಳು ಒಡೆಯ ಎಂದೂ, ಗಂಡು ಹೆಣ್ಣು ಎಂದೂ ಬೇದವಿಲ್ಲ (ಗಲಾತ್ಯ 3:28). ಇದರರ್ಥ ದೇವರ ರಾಜ್ಯದಲ್ಲಿ ಗಂಡ–ಹೆಂಡತಿಯರಿಬ್ಬರೂ ಸಮಾನರಾಗಿದ್ದಾರೆ. ಅವರಿಬ್ಬರೂ ಒಬ್ಬರಿಗೊಬ್ಬರು ಅಧೀನರಾಗಿರಬೇಕು. ಅವರ ಮಾದರಿಯು ಹೆಂಡತಿಗೆ ಮತ್ತು ಗಂಡನಿಗೆ ಸಹ ಅವರಿಗಾಗಿ ಜೀವಕೊಟ್ಟ ಯೇಸು ಕ್ರಿಸ್ತನಾಗಿದ್ದಾನೆ.

ಆದರೆ– ಸಾಂಸ್ಕೃತಿಕವಾಗಿ ಸ್ತ್ರೀ ಮತ್ತು ಪುರುಷರ ನಡುವಿನ ವ್ಯತ್ಯಾಸಗಳು ಸ್ಪಷ್ಟವಾಗಿವೆ. ಆದಿಸಭೆಯ ಅವಧಿಯಲ್ಲಿ ಯೆಹೂದಿ ಸಮಾಜದಲ್ಲಿ ಹೆಂಡತಿಯರು ತಮ್ಮ ಗಂಡಂದಿರರಿಗೆ ಅಧೀನರಾಗಿರಬೇಕಾಗಿತ್ತು ಮತ್ತು ಗ್ರೀಕ್–ರೋಮನ್ ಜಗತ್ತಿನಲ್ಲಿ ಹೆಂಡತಿಯರು ದಾಸಿ/ ಗುಲಾಮರಂತೆ ನೋಡಿಕೊಳ್ಳಲ್ಪಡುತ್ತಿದ್ದರು.

ಹಾಗಾಗಿ ಈ ವಾಕ್ಯಭಾಗದಲ್ಲಿ ಪೇತ್ರನು ಬೋಧಿಸುವುದೇನೆಂದರೆ– ಆ ದಿನದಲ್ಲಿ ಸಭೆಯಲ್ಲಿನ ಮದುವೆಯಾದ ಸ್ತ್ರೀಯರು–ಕ್ರಿಸ್ತನ ಹಿಂಬಾಲಕರಂತೆ– ತಮ್ಮ ಗಂಡಂದಿರಿಗೆ ಅಧೀನರಾಗಿರಬೇಕು ಎಂಬುದಾಗಿ. ಹಾಗಾಗಿ ಹೆಂಡತಿಯು ಗಂಡನಿಗೆ ಅಧೀನರಾಗುವುದು ಪೇತ್ರನು ಈ ಹಿಂದಿನ ಅಧ್ಯಾಯದಲ್ಲಿ ತಿಳಿಸಿದ ಮುಖ್ಯವಾದ ನಿಯಮಕ್ಕೆ ಒಂದು ಮಾದರಿಯಾಗುತ್ತದೆ. ಮನುಷ್ಯನು ನೇಮಿಸಿದ ಯಾವ ಅಧಿಕಾರಕ್ಕಾದರೂ ಕರ್ತನ ನಿಮಿತ್ತ ಅಧೀನರಾಗಿರಿ (2:13). ಕ್ರೈಸ್ತ ಸೇವಕರು ತಮ್ಮ ಯಜಮಾನರಿಗೆ ಪೂರ್ಣ ಭಯದಿಂದ ಅಧೀರಾಗಬೇಕು (2:18). ಯಾಕೆಂದರೆ ದಾಸತ್ವವು ಗ್ರೀಕ್–ರೋಮನ್ ಸಾಮ್ರಾಜ್ಯದಲ್ಲಿ ಒಂದು ಕಟ್ಟಳೆಯಾಗಿತ್ತು. ಅದರಂತೆಯೇ ಕ್ರೈಸ್ತೀಯ ಹೆಂಡತಿಯರು ತಮ್ಮ ಗಂಡಂದಿರಿಗೆ ಅಧೀನರಾಗಿರಬೇಕು (3:1). ಯಾಕೆಂದರೆ ಆ ರೀತಿಯಲ್ಲಿ ಮದುವೆಯ ಕಟ್ಟಳೆಯು ಅಂದಿನ ಯೆಹೂದ್ಯ ಮತ್ತು ಗ್ರೀಕ್–ರೋಮನ್ ಸಾಮ್ರಾಜ್ಯದಲ್ಲಿ ಸಾಗುತ್ತಿತ್ತು.

8. ಪೇತ್ರನು ಹೊರಗಣ ಶೃಂಗಾರಗಳಾದ ಜಡೆಹೆಣೆದುಕೊಳ್ಳುವುದು ಮತ್ತು ಬಂಗಾರದ ಒಡವೆಗಳನ್ನು ಹಾಕಿಕೊಳ್ಳುವುದು ಮತ್ತು ಬೆಲೆಬಾಳುವ ವಸ್ತ್ರಗಳನ್ನು ಧರಿಸುವುದು ಇವುಗಳನ್ನು ವ. 3–4 ರಲ್ಲಿ ತನ್ನ ವಾದವನ್ನು ಬೆಂಬಲಿಸಲು ಉಪಯೋಗಿಸುತ್ತಾನೆ. ಪೇತ್ರನು ಹೇಳುವ ಅಂಶವು– ಜಡೆಹೆಣೆದುಕೊಳ್ಳುವುದು, ಬಂಗಾರದ ಒಡವೆ ಮತ್ತು ಬೆಲೆಬಾಳುವ ವಸ್ತ್ರಗಳನ್ನು ಹಾಕಿಕೊಳ್ಳುವುದರ ವಿರೋಧವಾಗಿ ಬೋಧಿಸುವುದಿಲ್ಲ, ಆದರೆ ಆತನು ಕ್ರೈಸ್ತ ಹೆಂಡತಿಯರ ಸ್ವಭಾವ/ನಡೆತೆಯ ಬಗ್ಗೆ ಒಂದು ಅಂಶವನ್ನು ತಿಳಿಸಲು ಬಯಸುತ್ತಾನೆ; ಒಳಗಣ, ಆತ್ಮಿಕ

ಸ್ವಭಾವದ ಗುಣಮಟ್ಟವು ಹೊರಗಣ ಶೃಂಗಾರ/ತೋರಿಕೆಗಿಂತ ಪ್ರಾಮುಖ್ಯವಾದದ್ದಾಗಿದೆ. ಸ್ತ್ರೀಯು ಸುಂದರವಾಗಿ ಕಾಣಲು ಬಯಸುತ್ತಾಳೆ. ಅವರು ತಮ್ಮ ಕೂದಲನ್ನು ನೀಟಾಗಿಡಲು, ಬೆಲೆಬಾಳುವ ಆಭರಣ ಧರಿಸಲು ಮತ್ತು ಸುಂದರವಾದ ಬಟ್ಟೆಗಳನ್ನು ಹಾಕಿಕೊಳ್ಳಲು ಇಷ್ಟಪಡುತ್ತಾರೆ. ಆದರೆ ವಿಶ್ವಾಸಿಗೆ ದೀನ ಮತ್ತು ಶಾಂತವಾದ ಮನಸ್ಸು, ಹೊರಗಣ ಶೃಂಗಾರಕ್ಕಿಂತ ಅತೀ ಪ್ರಾಮುಖ್ಯವಾದದ್ದಾಗಿದೆ. "ಯೆಹೋವನು ಮನುಷ್ಯರಂತೆ ಹೊರಗಿನ ತೋರಿಕೆಯನ್ನು ನೋಡದೆ ಹೃದಯವನ್ನು ನೋಡುವವನಾಗಿದ್ದಾನೆ" (1ಸಮು 16:7)

9. ಮದುವೆಯಲ್ಲಿ ಹೆಂಡತಿಯರು ಬಲಹೀನಳೆಂದು (ವ.7) ಪೇತ್ರನು ಕರೆದಿರುವುದಕ್ಕೆ 2 ಮುಖ್ಯ ಕಾರಣಗಳಿವೆ:

   a. ಬಹುತೇಕ ಸ್ತ್ರೀಯರು ಶಾರೀರಿಕವಾಗಿ ಪುರುಷರಿಗಿಂತ ಬಲಹೀನರಾಗಿದ್ದಾರೆ. ಹಾಗಾಗಿ ಗಂಡನುತನ್ನ ಶಾರೀರಿಕ ಬಲವನ್ನು ಹೆಂಡತಿಯ ಮೇಲೆ ಬಲಪ್ರಯೋಗಕ್ಕಾಗಿ ಬಳಸದಿರುವುದು ಪ್ರಾಮುಖ್ಯವಾಗಿದೆ: ಅಂದರೆ, ಹೆಂಡತಿಯ ಸಾಮಾನ್ಯವಾದ ನಡವಳಿಕೆಯನ್ನು ಆತನು ಇಷ್ಟಪಡದಿದ್ದಾಗ ಅಥವಾ ಆಕೆಯ ಕೈರುಚಿಯನ್ನು ಆತನು ಇಷ್ಟಪಡದಿದ್ದಾಗ ಆಕೆಯನ್ನು ಹೊಡೆಯುವುದು; ಅಥವಾ ಆಕೆಗೆ ಮನಸ್ಸಿಲ್ಲದಿದ್ದಾಗಲೂ ಬಲವಂತವಾಗಿ ಆಕೆಯ ಮೇಲೆ ಲೈಂಗಿಕವಾಗಿ ಎರಗುವುದು.. ಇತ್ಯಾದಿ.

   b. ಗ್ರೀಕ್–ರೋಮನ್ ಸಾಮ್ರಾಜ್ಯದಲ್ಲಿ ಜೀವನದ ಹೆಚ್ಚಿನ ಕ್ಷೇತ್ರಗಳಲ್ಲಿ ಸ್ತ್ರೀಯರು ಪುರುಷರಿಗಿಂತ ಅತೀ ಕಡಿಮೆ ಸ್ಥಾನಮಾನ ಹೊಂದಿದ್ದರು. ಅವರಿಗೆ ಯಾವುದೇ ಹೆಚ್ಚಿನ ಶಿಕ್ಷಣವಿರುತ್ತಿದ್ದಿಲ್ಲ. ಅವರಿಗೆ ಯಾವುದೇ ರಾಜಕೀಯ ಕಛೇರಿಯಲ್ಲಿ ಸ್ಥಾನವಿರಲಿಲ್ಲ. ಅವರಿಗೆ ಸೀಮಿತವಾದ ಕಾನೂನು, ಸ್ಥಾನಗಳಿದ್ದವು. ಅವರು ಆರ್ಥಿಕವಾಗಿ ತಮ್ಮ ಗಂಡಂದಿರನ್ನೇ ಅವಲಂಬಿಸಬೇಕಾಗಿತ್ತು. ಅವರ ಕಾರ್ಯ ಚಟುವಟಿಕೆಗಳು ಮುಖ್ಯವಾಗಿ ಮನೆಗೆಲಸಕ್ಕೆ ಮಾತ್ರ ಸೀಮಿತವಾಗಿದ್ದವು. ಕೆಲವೇ ಸ್ತ್ರೀಯರು ಮಾತ್ರ ವ್ಯವಹಾರ, ವ್ಯಾಪಾರದಲ್ಲಿ ಭಾಗಿಯಾಗಿದ್ದರು. ಮನೆ ಮತ್ತು ಮಕ್ಕಳೆಲ್ಲರೂ ಪುರುಷರ ನಿಯಂತ್ರಣದಲ್ಲಿರುತ್ತಿದ್ದರು.

ಆದರೆ– ಪೇತ್ರನು ಆತ್ಮಿಕ ದೃಷ್ಟಿಯಲ್ಲಿ ಹೆಂಡತಿಯರು ಗಂಡಂದಿರಿಗಿಂತ ಬಲಹೀನರೆಂದು ಪರಿಗಣಿಸಿದನೆಂದು ನಾವು ಯೋಚಿಸಬಾರದು. ಗಂಡಂದಿರಿಗೆ ತಮ್ಮ ಉತ್ತಮ ಶಿಕ್ಷಣದಿಂದ ಹಳೆ ಒಡಂಬಡಿಕೆಯ ವಾಕ್ಯಭಾಗಗಳ ಬಗ್ಗೆ ಉತ್ತಮವಾದ ಜ್ಞಾನವನ್ನು ಹೊಂದಿದ್ದರು. ಆದರೆ ದೇವರ ರಾಜ್ಯದಲ್ಲಿ ಪುರುಷ ಮತ್ತು ಸ್ತ್ರೀಯರ ಆತ್ಮಿಕತೆಯ ಮೌಲ್ಯವು ಸಮವಾಗಿದೆ.

10. *ಅವರು ಜೀವವರಕ್ಕೆ ನಿಮ್ಮೊಂದಿಗೆ ಬಾಧ್ಯರಾಗಿದ್ದಾರೆ* (ವ.7), ಹೇಳಿಕೆಯು ಕೌಟಂಬಿಕ ಜೀವನದ ಹಿನ್ನಲೆಯಲ್ಲಿ ಬರುತ್ತದೆ. 'ಮದುವೆಯಲ್ಲಿ ಸಹಭಾಗಿಗಳು' ಎಂಬುದರ ಬಗ್ಗೆ ಪೇತ್ರನು ಬರೆಯುತ್ತಿದ್ದಾನೆ. ಹಾಗಾಗಿ ಇದು– ಮಕ್ಕಳ ಮೂಲಕ ಕೊನೆಗೊಳ್ಳುವ ಗಂಡ–ಹೆಂಡತಿಯರ ನಡುವಿನ ದಾಂಪತ್ಯ ಸಂಬಂಧವನ್ನು ಸೂಚಿಸುತ್ತದೆ. ಮಗು ಹುಟ್ಟುವ ಕ್ರಿಯೆಯು ಎರಡೂ ಸಹಕಾರಿಗಳನ್ನು ಒಳಗೊಂಡಿರುತ್ತದೆ. ಹಾಗಾಗಿ ಇದರಲ್ಲಿ ಗಂಡ–ಹೆಂಡತಿಯರಿಬ್ಬರೂ ಸಮಾನವಾಗಿರುತ್ತಾರೆ.

11. ಪೇತ್ರನು ಗಂಡಂದಿರು ತಮ್ಮ ಹೆಂಡತಿಯರೊಂದಿಗೆಗೌರವಪೂರ್ವಕವಾಗಿವರ್ತಿಸದಿದ್ದಾಗ ಆಗುವ ಒಂದು ಪರಿಣಾಮವನ್ನು ಹೀಗೆ ತಿಳಿಸುತ್ತಾನೆ:ಕ್ರಿಸ್ತನ ಗುಣಸ್ವಾಭವಕ್ಕೆ ಹೋಲದ ಗಂಡಂದಿರ

ನಡವಳಿಕೆಯು ಅವರ ಪ್ರಾರ್ಥನಾ ಜೀವಿತದ ಬಲವನ್ನು ಕುಂಟಿಸುತ್ತದೆ (ವ.7). ಗಂಡಂದಿರು ತಮ್ಮನ್ನು ಪರೀಕ್ಷಿಸಿಕೊಳ್ಳಲಿ!



## ಅವಲೋಕನ

ಈ ಅಧ್ಯಾಯವು ಅನೇಕ ಭಾರವಾದ ಸಂಗತಿಗಳನ್ನು ಹೊರತಂದಿದೆ ಮತ್ತು ಕೆಲವು ವಿಷಯಗಳನ್ನು ಸಭೆಯು ವಿವಾದಾತ್ಮಕವೆಂದು ಪರಿಗಣಿಸಿದೆ ಮತ್ತು ಈಗಲೂ ಪರಿಗಣಿಸುತ್ತಿದೆ: ಬಂಗಾರದ ಒಡವೆ ಮತ್ತು ಪುರುಷರ ದಬ್ಬಾಳಿಕೆ. ಆದರೆ ಕ್ರಿಸ್ತನಂತೆ ಇರುವುದರ ಬಗ್ಗೆ ಯಾವುದೇ ವಿವಾದಗಳಿಲ್ಲ. ಕ್ರಿಸ್ತನಂತೆ ಆಗುವುದು ಈ ವಾಕ್ಯಭಾಗದಲ್ಲಿ ಮುಖ್ಯ ವಿಷಯಾಂಶವಾಗಿದೆ. ಯಾವುದೇ ಕಾರಣವಿಲ್ಲದೆ ನಾವು ಬಾಧೆಪಡಲು ಆಪೇಕ್ಷಿಸಬಹುದು, ಯಾಕೆಂದರೆ ಅನ್ಯಾಯವಾಗಿ ಬಾಧೆಪಡುವ ನೋವನ್ನು ಯೇಸುವು ಹೊತ್ತುಕೊಂಡಿದ್ದಾನೆ (2:19). ಕ್ರೈಸ್ತ ಹೆಂಡತಿಯರು ತಮ್ಮ ಗಂಡಂದಿರಿಗೆ ಅಧೀನರಾಗಿರಬೇಕು (3:1), ಯಾಕೆಂದರೆ ಯೇಸು ಕ್ರಿಸ್ತನು ತನ್ನನ್ನು ದೂಷಿಸುವವರಿಂದ ಬಾಧೆಗೊಳಗಾದಾಗ ಮತ್ತು ದೂಷಿಸಲ್ಪಟ್ಟಾಗ ಬೈಯುವವರನ್ನು ಪ್ರತಿಯಾಗಿ ಬೈಯಲಿಲ್ಲ ಮತ್ತು ಬೆದರಿಸಲಿಲ್ಲ (2:23). ಗಂಡಂದಿರು ತಮ್ಮ ಹೆಂಡತಿಯರೊಂದಿಗೆ ವಿವೇಕದಿಂದ ಒಗೆತನ ಮಾಡಬೇಕು (3:7). ಯಾಕೆಂದರೆ ಯೇಸು ಕ್ರಿಸ್ತನು ಅವರ ಪಾಪಗಳನ್ನು ತಾನೇ ತನ್ನ ದೇಹದಲ್ಲಿ ಹೊತ್ತುಕೊಂಡು ಮರಣದ ಕಂಬವನ್ನು ಏರಿದನು ಮತ್ತು ತನ್ನ ಬಾಸುಂಡೆಗಳಿಂದ ಅವರನ್ನು ಗುಣಪಡಿಸಿದನು (2:14).

ಹೌದು, ವಿಶ್ವಾಸಿಗಳು ಕ್ರಿಸ್ತನಂತಿರಬೇಕು. ಆತನೇ ನಮಗೊಂದು ದೊಡ್ಡ ಮಾದರಿ. ಆತನು ನಮ್ಮನ್ನು ಸಂಧಿಸುವ ಮೊದಲು ನಾವು ದಾರಿತಪ್ಪಿ ತೊಳಲುವ ಕುರಿಗಳಂತಿದ್ದೆವು (2:25). ನಾವು ಗರ್ವಿಷ್ಟರೂ ಸ್ವಾರ್ಥಿಗಳೂ ಆಗಿದ್ದೆವು. ನಾವು ಗೌರವ ತೋರಿಸದವರೂ ಕುರುಡರೂ ಲಕ್ಷಕ್ಕೆ ತಾರದವರೂ ಮತ್ತು ಮೂರ್ಖರೂ ಆಗಿದ್ದೆವು. ನಮ್ಮ ಪಾಪಮಯ ಜೀವನವು ನಮ್ಮನ್ನು ನ್ಯಾಯತೀರ್ಪು ಮತ್ತು ಮರಣದ ಮಾರ್ಗದಲ್ಲಿ ಕೊಂಡೊಯ್ಯುತ್ತಿತ್ತು. ಆದರೆ ಮಹಾಕುರುಬನು ನಮ್ಮನ್ನು ಕಂಡುಕೊಂಡನು. ಆತನು ನಮ್ಮ ಪಾಪಗಳನ್ನು ಶಿಲುಬೆ ಮೇಲೆ ಹೊತ್ತುಕೊಂಡನು. ನಮಗೆ ಜೀವಕೊಡುವುದಕ್ಕಾಗಿ ಆತನು ಸತ್ತನು ಮತ್ತು ನಾವು ಈಗ ಪಾಪದ ಪಾಲಿಗೆ ಸತ್ತು ನೀತಿಯ ಪಾಲಿಗೆ ಜೀವಿಸುವವರಾಗಿದ್ದೇವೆ (2:24). ನಾವು ನಮ್ಮ ಆತ್ಮಗಳನ್ನು ಕಾಯುವ ಕುರುಬನೂ ಮತ್ತು ಅಧ್ಯಕ್ಷನೂ ಆಗಿರುವಾತನಿಗೆ ಸೇರಿದವರಾಗಿದ್ದೇವೆ (2:25).



# ಉತ್ತರಗಳು 7. ನ್ಯಾಯವಾದದಕ್ಕಾಗಿ ಬಾಧೆಪಡುವುದು, 3:8–22

## ಶಿಕ್ಷಕರ ಗಮನಕ್ಕೆ

ಸತ್ಯವೇದದ ಭಾಷಾಂತರಗಳ ನಡುವಿನ ಹೋಲಿಕೆಯು ವಚನ 18–19 ರಲ್ಲಿ ಕಂಡುಬರುವ ಕೆಲವು ಗ್ರೀಕ್ ಹೇಳಿಕೆಗಳನ್ನು ಅರ್ಥೈಸಿಕೊಳ್ಳುವಲ್ಲಿ ಸತ್ಯವೇದದ ಪಂಡಿತರು ಕಷ್ಟಪಟ್ಟರೆಂದು ಪ್ರಕಟಿಸುತ್ತದೆ.

1. ವಚನ 18: ಇಂಗ್ಲೀಷ್ ಎನ್.ಐ.ವಿ ಭಾಷಾಂತರವು "ಆತ್ಮದಿಂದ" ಎಂದಿದೆ (ಪವಿತ್ರಾತ್ಮನನ್ನು ಸೂಚಿಸಿ). ಉಳಿದ ಇಂಗ್ಲೀಷ್ ಭಾಷಾಂತರಗಳು (ಎನ್.ಎ.ಎಸ್.ಬಿ, ಇ.ಎಸ್.ವಿ) "ಆತ್ಮ ಸಂಬಂಧದಲ್ಲಿ" ಎಂದಿದೆ. ಸಂದರ್ಭಕ್ಕನುಸಾರವಾಗಿ ಎರಡನೆಯದು ಉತ್ತಮವಾಗಿದೆ. ಇದಕ್ಕೂ ಮುನ್ನ ಇದೇ ವಚನದಲ್ಲಿ 'ಯೇಸು ಕ್ರಿಸ್ತನು ಶರೀರ ಸಂಬಂಧದಲ್ಲಿ ಕೊಲ್ಲಲ್ಪಟ್ಟನು' ಎಂದಿದೆ. ಹಾಗಾಗಿ ಯೇಸು ಕ್ರಿಸ್ತನು'ಆತ್ಮ ಸಂಬಂಧದಲ್ಲಿ ಬದುಕುವವನಾದನು' ಎನ್ನುವಂತದ್ದು ಇದಕ್ಕೆ ಸಮಾನಾಂತರವಾದ ಹೇಳಿಕೆಯಾಗುತ್ತದೆ. ಕನ್ನಡದ ಭಾಷಾಂತರಗಳು ಆತ್ಮನಿಂದ (ಎನ್.ಐ.ಬಿ.ವಿ) ಎಂದೂ ಮತ್ತು 'ಆತ್ಮಸಂಬಂಧದಲ್ಲಿ' (ಜೆ.ವಿ.) ಎಂದಿದೆ. ಎನ್‌ಐಬಿವಿ ಮೊದಲ ಪರ್ಯಾಯವನ್ನು ಪ್ರತಿಬಿಂಬಿಸಿದರೆ ಜೆ.ವಿ.ಯು ಎರಡನೆಯ ಮತ್ತು ಅತ್ಯುತ್ತಮ ಪರ್ಯಾಯವನ್ನು ಪ್ರತಿಬಿಂಬಿಸುತ್ತದೆ.
2. ವಚನ19 ರಲ್ಲಿ ನಮ್ಮ ಹಿಂದಿನ ಅಂಶದ ಅರ್ಥೈಸಿಕೊಳ್ಳುವಿಕೆಯು ಈ ವಚನದ ಭಾಷಾಂತರದ ಮೇಲೆ ಪರಿಣಾಮ ಬೀರುತ್ತದೆ. ಇಂಗ್ಲೀಷಿನ ಎನ್‌ಐವಿ 'ಆತ್ಮನ ಮೂಲಕ' (ಪವಿತ್ರಾತ್ಮನನ್ನು ಸೂಚಿಸಿ) ಎನ್‌ಎಎಸ್‌ಬಿ ಮತ್ತು ಇಎಸ್‌ವಿ 'ಅವುಗಳಲ್ಲಿ' (ಯೇಸು ಕ್ರಿಸ್ತನ ಪುನರುತ್ಥಾನದ ಸ್ಥಿತಿ) ಎಂದಿದೆ. ಜೆವಿ ಯು 'ಆತ್ಮರೂಪವಾಗಿ' ಎಂದು ಭಾಷಾಂತರಿಸಿದ ಹೇಳಿಕೆಯನ್ನು ಎನ್‌ಐಬಿವಿ ಯು ದೂರವಿರಿಸುತ್ತದೆ. ಎನ್‌ಐವಿ ಸತ್ಯವೇದ ವ್ಯಾಖ್ಯಾನ (ಜೋಡರ್ವನ್) ಪ್ರಯೋಜನಕಾರಿಯಾದದ್ದನ್ನು ನಾನು ಕಂಡುಕೊಂಡೆನು; ಅತೀ ಸಂತುಷ್ಟಿಕರವಾದ ದೃಷ್ಟಿಕೋನವು ಹೀಗೆ ಭಾಷಾಂತರಿಸುವುದಾಗಿದೆ: ಮತ್ತು ಆ ಸ್ಥಿತಿಯಲ್ಲಿ ಇದರರ್ಥ ಆತನ ಸ್ವರ್ಗಾರೋಹಣ (ನೋಡಿ ವ.22, ಇಲ್ಲಿ ಕ್ರಿಸ್ತನ ಸ್ವರ್ಗಾರೋಹಣಕ್ಕೆ ಅದೇ ರೀತಿಯ ಕ್ರಿಯಾಪದ ರೂಪವನ್ನು ಬಳಸಲಾಗಿದೆ). ಸೆರೆಯಲ್ಲಿದ್ದ ಆತ್ಮಗಳಿಗೆ ಸುವಾರ್ತೆಯನ್ನು ಸಾರಿದನು.

ಇನ್ನೊಂದು ಸಮಸ್ಯೆಯೇನೆಂದರೆ– ಯೇಸು ಕ್ರಿಸ್ತನು ಸೆರೆಯಲ್ಲಿದ್ದ ಆತ್ಮಗಳ ಬಳಿಗೆ, ಅಂದರೆ ಪೂರ್ವಕಾಲದಲ್ಲಿ ನೋಹನು ನಾವೆಯನ್ನು ಕಟ್ಟಿಸುತ್ತಿರಲು ದೇವರು ದೀರ್ಘಶಾಂತಿಯಿಂದ ಕಾದಿದ್ದಾಗ ಆತನಿಗೆ ಅವಿಧೇಯರಾಗಿದ್ದವರ ಬಳಿಗೆ ಹೇಗೆ ಸುವಾರ್ತೆಯನ್ನು ಸಾರಿದನು ಎಂಬ ಹೇಳಿಕೆಯನ್ನು ಹೇಳುವುದು (ವ.19–20). ಈ ಬಗ್ಗೆ ಸತ್ಯವೇದ ಪಂಡಿತರು 2 ಮುಖ್ಯ ದೃಷ್ಟಿಕೋನವನ್ನು ಹೊಂದಿದ್ದಾರೆ.

1) ಸೆರೆಯಲ್ಲಿದ್ದ ಆತ್ಮಗಳು– ಅವಿಧೇಯ ಆತ್ಮಗಳನ್ನು ಸೂಚಿಸುತ್ತವೆ (ದೇವದೂತರು, ಅಧಿಕಾರ, ಮಹತ್ವಗಳು ವ.22).
2) ಸೆರೆಯಲ್ಲಿನ ಆತ್ಮಗಳು ನೋಹನ ಸಂತತಿಯ ಪಾಪಿಗಳಾಗಿರುತ್ತಾರೆ (ಅವರು ಜಲಪ್ರಳಯದಲ್ಲಿ ನಾಶವಾದರು ಮತ್ತು ಈಗ ಸೆರೆಯಲ್ಲಿದ್ದಾರೆ). ದೇವರು ನೀತಿವಂತನಾಗಿದ್ದನು ಮತ್ತು ನೋಹನ

ಸಂತತಿಗೆ ಪಶ್ಚಾತ್ತಾಪ ಬೇಕಿರುವುದರಿಂದ ನಾವೆಯು ಕಟ್ಟಲ್ಪಡುತ್ತಿರುವಾಗ ನೋಹನು ಅವರಿಗೆ ಸುವಾರ್ತೆಯನ್ನು ಸಾರಿದನು ಎಂದು ಯೇಸು ಕ್ರಿಸ್ತನ ಪುನರುತ್ಥಾನವು ನಿರೂಪಿಸುತ್ತದೆ. (ಕ್ಲೋವ್‌ನೀ, 1 ಪೇತ್ರನ ಸಂದೇಶ).

ವೈಯಕ್ತಿಕವಾಗಿ ನಾನು 2ನೇ ದೃಷ್ಟಿಕೋನವನ್ನು ಇಷ್ಟಪಡುತ್ತೇನೆ. ಇದು ಮೊದಲನೇಯ ದೃಷ್ಟಿಕೋನಕ್ಕಿಂತ ಹೆಚ್ಚಿನ ಅರ್ಥವು ಕೊಡುತ್ತದೆ.

## ಉತ್ತರಗಳು

1. ವಚನ 8 ರಲ್ಲಿ ಕ್ರೈಸ್ತೀಯ ನಡವಳಿಕೆ/ ಜೀವನಶೈಲಿಯ ಸಾರಾಂಶದಲ್ಲಿ (ಒಬ್ಬ ಸತ್ಯವೇದ ಪಂಡಿತರು ಇದನ್ನು 'ಆಶೀರ್ವದಿತ ಜೀವನ' ಎಂದು ಕರೆಯುತ್ತಾರೆ) ಪೇತ್ರನು ಈ ಜೀವನಶೈಲಿಯ 5 ಗುಣಲಕ್ಷಣಗಳನ್ನು ಪ್ರಸ್ತಾಪಿಸುತ್ತಾನೆ:

   a. ಏಕಮನಸ್ಸುಳ್ಳವರಾಗಿರುವುದು: ಗ್ರೀಕ್‌ನಲ್ಲಿ ಸಹ 'ಒಂದೇ ಮನಸ್ಸುಳ್ಳವರಾಗಿರುವುದು' ಎಂದು ಭಾಷಾಂತರಿಸಬಹುದು. ಇದರರ್ಥ ಆತ್ಮದಲ್ಲಿ ಐಕ್ಯರಾಗಿರುವುದು, ಸಾಮರಸ್ಯದ ಐಕ್ಯತೆಯಲ್ಲಿ ಜೀವಿಸುವುದು.

   b. ಸುಖದುಃಖಗಳಲ್ಲಿ ಭಾಗಿಯಾಗುವುದು. ಇದರರ್ಥ ಇನ್ನೊಬ್ಬರೊಂದಿಗೆ ಬಾಧೆ ಅನುಭವಿಸುವುದು, ಒಬ್ಬರಿಗೊಬ್ಬರು ಕರುಣೆ ತೋರಿಸುವುದು.

   c. ಅಣ್ಣತಮ್ಮಂದಿರಂತೆ/ಸಹೋದರರಂತೆ ಪ್ರೀತಿಸುವುದು: ಹೋಲಿಸಿ 2:17. ವಿಶ್ವಾಸಿಗಳ ಸಹೋದರತ್ವದ ಪ್ರೀತಿ.

   d. ಕರುಣೆಯುಳ್ಳವರಾಗಿರುವುದು: ವಿಶ್ವಾಸಿಗಳು ಸೌಮ್ಯ ಮತ್ತು ಮೃದು ಹೃದಯದವರಾಗಿರಬೇಕು.

   e. ದೀನಭಾವವುಳ್ಳವರಾಗಿರುವುದು: ವಿಶ್ವಾಸಿಗಳು ಆತ್ಮದಲ್ಲಿ ದೀನರೂ ಆಗಿರಬೇಕು.

2. ಜನರು ನಮ್ಮೊಂದಿಗೆ ಕೆಟ್ಟದಾಗಿ ವರ್ತಿಸಿ ಮತ್ತು ನಮ್ಮನ್ನು ಅವಮಾನಿಸುವಾಗ ವಿಶ್ವಾಸಿಗಳಾದ ನಾವು ಹೀಗೆ ಮಾಡಬೇಕು (ವ.9): ಅವರನ್ನು ನಾವು ಆಶೀರ್ವದಿಸಬೇಕು. ಬಿದ್ದುಹೋದ ಮನುಷ್ಯನ ಸ್ವಭಾವವು ಅವರಿಗೆ ದುಷ್ಟತನಕ್ಕೆ ದುಷ್ಟತನವನ್ನೂ ಮತ್ತು ಅವಮಾನಕ್ಕೆ ಅವಮಾನವನ್ನೂ ಹಿಂತಿರುಗಿಸಲು ಬಯಸಬಹುದು. ಆದರೆ ವಿಶ್ವಾಸಿಗಳಾದ ನಾವು ಆ ಮಾರ್ಗವನ್ನು ಹಿಡಿಯುವಂತಿಲ್ಲ.

3. ನಿಮ್ಮ ಸ್ವಂತ ಸಭೆಯಲ್ಲಿನ ಜೀವಿತದೊಂದಿಗೆ ಪೇತ್ರನ ಪ್ರಬೋಧನೆಗಳನ್ನು ಹೋಲಿಸಿರಿ (ಇದು ಪೇತ್ರನು ಹೇಗಿರಬೇಕೆಂದು ಯೋಚಿಸುವ ಒಂದು ಸಂಕ್ಷಿಪ್ತ ಚಿತ್ರಣವನ್ನು ಕೊಡುತ್ತದೆ, ವ.8–9). ಪ್ರಾಮುಖ್ಯ ಅಂಶಗಳನ್ನು ಬರೆಯಿರಿ.

   ಟಿಪ್ಪಣಿಗಳು: ನಾನು ಎಣಿಸುತ್ತೇನೆ, ಹೆಚ್ಚಿನ ಸಭೆಗಳಲ್ಲಿ ಮೇಲಿನ ಪ್ರಶ್ನೆ ಒಂದರಲ್ಲಿ ತಿಳಿಸಲ್ಪಟ್ಟ 5 ಗುಣಸ್ವಭಾವಗಳನ್ನು ನಾವು ಕಾಣಬಹುದು. ಅದು ಉತ್ತಮವಾದದ್ದು. ಆದರೆ ದುಃಖಕರ ಸಂಗತಿಯೆಂದರೆ– ಅನೇಕ ಸಂಘರ್ಷ, ಗರ್ವ ಮತ್ತು ಸಿಟ್ಟು, ಅಧಿಕಾರದ ಹೋರಾಟ, ಅನೇಕ

ಪಂಗಡಗಳು, ಬಹಳ ವಿರೋಧತೆ ಮತ್ತು ಹೊಟ್ಟೆಕಿಚ್ಚು, ಅನೇಕ ಸ್ವಾರ್ಥತೆ ಮತ್ತು ಇತರರಿಗಾಗಿನ ಕಾಳಜಿಯ ಕೊರತೆಯನ್ನು ಸಹ ನಾವು ಕಾಣುತ್ತೇವೆ. ಇದು ಬಹಳ ಕೆಟ್ಟದ್ದಾಗಿದೆ. ಯೇಸು ಕೇಂದ್ರವಾಗಿರುವ ಸಭೆಯಲ್ಲಿ 'ಆಶೀರ್ವಾದದ ಜೀವನ' ಎಂಬ ಗುಣಸ್ವಭಾವದ ಚಿತ್ರಣವನ್ನು ಇದು ತೋರಿಸುವುದಿಲ್ಲ.

ದುಃಖಕರವೆಂದರೆ, ಇನ್ನು ಅನೇಕ ವಿಶ್ವಾಸಿಗಳ ಮನಸ್ಸು ಪರಿಶುದ್ದಾತ್ಮನಿಂದ ಪರಿವರ್ತನೆ ಆಗದಿರುವುದನ್ನು ನಾವು ಕಾಣಬಹುದು. ಹಾಗಾಗಿ ಜನರು ಚಾಡಿಕೋರರೂ, ಇತರರನ್ನು ಕ್ಷಮಿಸದಿರುವವರೂ ಮತ್ತು ಪ್ರತಿಕಾರ ತೆಗೆದುಕೊಳ್ಳುವವರೂ ಆಗಿರುತ್ತಾರೆ (ಮೇಲಿನ 2ನೇ ಪ್ರಶ್ನೆಯನ್ನು ನೋಡಿರಿ).

4. ತನ್ನ ಹಿಂದಿನ ವಚನಗಳ ಬೋಧನೆಯನ್ನು ಬೆಂಬಲಿಸಲು ಪೇತ್ರನು ಕೀರ್ತನೆ 34:12–16 (ವ.10–12) ನ್ನು ಉಪಯೋಗಿಸುತ್ತಾನೆ. ಇದು ಗ್ರೀಕ್‌ನಲ್ಲಿ ಸ್ಪಷ್ಟವಾಗಿದೆ.

5. ನ್ಯಾಯವಾದುದಕ್ಕಾಗಿ ಬಾಧೆಪಡುವುದನ್ನು ಪೇತ್ರನು ಈ ರೀತಿ ಅರ್ಥೈಸಿಕೊಳ್ಳುತ್ತಾನೆ: ನ್ಯಾಯವಾದದ್ದಕ್ಕಾಗಿ ವಿಶ್ವಾಸಿಗಳು ಬಾಧೆಪಡುವುದಾದರೆ ಅವರು ತಮ್ಮನ್ನು ಧನ್ಯರೆಂದು ಪರಿಗಣಿಸಬೇಕು.

6. ಕ್ರಿಸ್ತನನ್ನು ಕರ್ತನೆಂದು ನಮ್ಮ ಹೃದಯಗಳಲ್ಲಿ ಪ್ರತಿಷ್ಠೆಪಡಿಸಬೇಕೆಂದು ಪೇತ್ರನು ಹೇಳುತ್ತಾನೆ (ವ.15). ಕ್ರಿಸ್ತನನ್ನು ನಮ್ಮ ಹೃದಯಗಳಲ್ಲಿ ಕರ್ತನೆಂದು ಪ್ರತಿಷ್ಠೆಪಡಿಸುವಾಗ ನಾವು ಸಾಕ್ಷಿಕೊಡುವವರಾಗುತ್ತೇವೆ. ಜನರು ನಮಗೆ ಪ್ರಶ್ನೆಗಳನ್ನು ಕೇಳುವರು ಮತ್ತು ನಾವು ಅವರ ಪ್ರಶ್ನೆಗಳನ್ನು ಉತ್ತರಿಸುವಾಗ ನಮ್ಮ ಕ್ರೈಸ್ತೀಯ ನಿರೀಕ್ಷೆಗೆ ಕಾರಣವನ್ನು ಕೊಡುವುದರ ಮೂಲಕ ನಮ್ಮ ನಂಬಿಕೆಯನ್ನು ಅವರಿಗೆ ಪ್ರಸ್ತುತಪಡಿಸುತ್ತೇವೆ.

7. ವಚನ15 ನಮ್ಮ ತುಟಿಗಳಿಂದ ಸಾಕ್ಷಿಕರಿಸುವುದರ ಬಗ್ಗೆ ಹೇಳುತ್ತದೆ. ಮುಂದಿನ ವಚನಗಳು (16–17) ನಮ್ಮ ಜೀವಿತಗಳಿಂದ ಸಾಕ್ಷಿಕರಿಸುವುದರ ಬಗ್ಗೆ ಮಾತನಾಡುತ್ತದೆ. ನಮ್ಮ ಸುತ್ತಲಿನ ಹಗೆ ಮತ್ತು ನಿಂದೆಯಿಂದ ಬಾಧೆಗೊಳಗಾಗುವಾಗ ನಮ್ಮಲ್ಲಿನ ಶುದ್ಧ ಮನಸಾಕ್ಷಿ ಮತ್ತು ಕ್ರಿಸ್ತನಲ್ಲಿನ ನಮ್ಮ ಒಳ್ಳೆ ನಡತೆಯಿಂದ ನಮ್ಮ ಕ್ರಿಸ್ತನಂತಹ ಸ್ವಭಾವವು ನಮಗಾಗಿ ಸಾಕ್ಷಿಕೊಡುತ್ತದೆ.

8. 'ಯೇಸು ಕ್ರಿಸ್ತನ ಬಾಧೆಯ ವಿಷಯವು' ಎಂಬ ಹೇಳಿಕೆಯು ವ.18–22 ರಲ್ಲಿ ಪೇತ್ರನ ವಾದಕ್ಕೆ ಒಂದು ಸಾರಾಂಶವಾಗುತ್ತದೆ. ಯೇಸು ಕ್ರಿಸ್ತನ ಬಾಧೆ, ಮರಣ ಮತ್ತು ಪುನರುತ್ಥಾನದ ಮೂಲಕ ಏನನ್ನು ಸಾಧಿಸಲಾಯಿತೆಂಬುದರ ಬಗ್ಗೆ ಪೇತ್ರನು 3 ಅಂಶಗಳನ್ನು ನೀಡುತ್ತಾನೆ:

   a. ನಾವು ದೇವರ ಬಳಿಗೆ ಸೇರಿಸಲ್ಪಟ್ಟೆವು (ವ.18). ಯೇಸು ಕ್ರಿಸ್ತನ ಮರಣ ಮತ್ತು ಪುನರುತ್ಥಾನದ ಫಲಿತಾಂಶವಾಗಿ ನಾವು ರಕ್ಷಿಸಲ್ಪಟ್ಟೆವು (ವ.21).

   b. ನೋಹನ ದಿನಗಳಲ್ಲಿನ ದೇವರ ನೀತಿಯು ಸರಿಯಾಗಿದೆಯೆಂದು ಸಾಧಿಸಲ್ಪಟ್ಟಿದೆ. ಇದಕ್ಕೆ ನ್ಯಾಯತೀರಿಸಲಾಗಿದೆ (ವ.19–20). ತಾನು ನಾವೆಯನ್ನು ಕಟ್ಟುತ್ತಿರುವಾಗ ತನ್ನ ಸುತ್ತಲಿನ ಜನರಿಗೆ ನೋಹನು ದೇವರ ನೀತಿವಂತಿಕೆಯ ಬಗ್ಗೆ ಸಾರಿದನು. ಆದರೆ ಜನರು ಅವನನ್ನು ನಂಬಲಿಲ್ಲ. ಹಾಗಾಗಿ ದೇವರು ಜಲಪ್ರಳಯವನ್ನು ಕಳುಹಿಸಿದನು ಮತ್ತು ನೋಹನು ಹಾಗೂ ಅವನ ಕುಟುಂಬವು ಮಾತ್ರ ರಕ್ಷಿಸಲ್ಪಟ್ಟಿತು. ಆ ಜಲಪ್ರಳಯದಲ್ಲಿ ಕೊಲ್ಲಲ್ಪಟ್ಟ

ಜನರೇ ಈಗ ಸೆರೆಯಲ್ಲಿರುವ ಆತ್ಮಗಳಾಗಿವೆ. ಯೇಸು ಕ್ರಿಸ್ತನ ಮರಣ ಮತ್ತು ಪುನರುತ್ಥಾನವು ದೇವರ ನೀತಿವಂತಿಕೆಯ ಬಗ್ಗೆ ಅವರಿಗೊಂದು ಸಂದೇಶವಾಯಿತು.

c. ಯೇಸು ಕ್ರಿಸ್ತನ ಪುನರುತ್ಥಾನ, ಸ್ವರ್ಗಾರೋಹಣ ಮತ್ತು ಮಹಿಮಾಪದವಿಯ ಪರಿಣಾಮಾರ್ಥವಾಗಿ ದೇವದೂತರೂ ಅಧಿಕಾರಿಗಳೂ ಮತ್ತು ಮಹತ್ವಗಳೂ ಆತನಿಗೆ ಸ್ವಾಧೀನವಾಗುವಂತೆ ಅಗಿದೆ (ವ.21–22). ಸೈತಾನನು ಮತ್ತು ಆತನ ಎಲ್ಲಾ ಸೈನ್ಯವೂ ಸಹ ಯೇಸು ಕ್ರಿಸ್ತನಿಂದ ಸೋಲಿಸಲ್ಪಟ್ಟಿದೆ.

9. ಈ ವಾಕ್ಯಭಾಗದಲ್ಲಿ ಹಳೆ ಒಡಂಬಡಿಕೆಯ ಸಂಕೇತ ಮತ್ತು ಹೊಸ ಒಡಂಬಡಿಕೆಯಲ್ಲಿ ಇದರ ಪ್ರತಿಸಂಕೇತ/ಪ್ರತಿಬಿಂಬದ ಒಂದು ಉದಾಹರಣೆಯನ್ನು ನಾವು ಕಾಣುತ್ತೇವೆ:

a. ಸಂಕೇತವು ಒಬ್ಬ ವ್ಯಕ್ತಿ, ಸಂಸ್ಥೆ ಅಥವಾ ಹಳೆ ಒಡಂಬಡಿಕೆಯಲ್ಲಿನ ಒಂದು ಘಟನೆಯಾಗಿದ್ದು ಅದು ಪ್ರಧಾನಾರ್ಥವಾಗಿ ಹೊಸ ಒಡಂಬಡಿಕೆಯ ಅತೀ ಪ್ರಾಮುಖ್ಯ ಸತ್ಯ, ಪ್ರತಿಸಂಕೇತ/ಪ್ರತಿಬಿಂಬದೆಡೆಗೆ ಸೂಚಿಸುತ್ತದೆ. ಇಲ್ಲಿ ನೋಹ ಮತ್ತು ಆತನ ಕುಟುಂಬವನ್ನು ಜಲಪ್ರಳಯದ ಸಮಯದಲ್ಲಿ ರಕ್ಷಿಸಿದ ನೀರು ಹಳೆ ಒಡಂಬಡಿಕೆಯ ಒಂದು ಸಂಕೇತವಾಗಿದೆ. ನೀರಿನ ದೀಕ್ಷಾಸ್ನಾನವು ಹೊಸ ಒಡಂಬಡಿಕೆಯ ಒಂದು ಪ್ರತಿಸಂಕೇತವಾಗಿದೆ.

b. ನೋಹನನ್ನು ವಿಮೋಚಿಸಿದ ದೇವರು ನಮ್ಮನ್ನು ವಿಮೋಚಿಸುತ್ತಾನೆ. ನೋಹನ ರಕ್ಷಣೆಯು ನಮ್ಮ ಅಂತಿಮ ರಕ್ಷಣೆಯನ್ನು ಸೂಚಿಸುತ್ತದೆ. ಆದರೆ ದೀಕ್ಷಾಸ್ನಾನದ ನೀರು ನಮ್ಮನ್ನು ರಕ್ಷಿಸುವುದಿಲ್ಲ, ನಮ್ಮ ದೀಕ್ಷಾಸ್ನಾನದ ಸಮಯದಲ್ಲಿ ನಾವು ಅರಿಕೆಮಾಡಿದ ನಮ್ಮ ನಂಬಿಕೆಯ ನಿಮಿತ್ತ ನಾವು ರಕ್ಷಿಸಲ್ಪಟ್ಟಿದ್ದೇವೆ (ವ.21).

10. ನಮ್ಮ ಜಗತ್ತು ಅನ್ಯಾಯದಿಂದ ಕೂಡಿದೆ. ನಿಮ್ಮ ಕೆಲವೊಂದು ಹಿಂದಿನ ಮತ್ತು ಪ್ರಸ್ತುತ ಬಾಧೆಗಳನ್ನು ಪರಾಮರ್ಶಿಸಿರಿ. ಈ ವಾಕ್ಯಭಾಗದಲ್ಲಿ ವರ್ಣಿಸಲ್ಪಟ್ಟ ಕ್ರಿಸ್ತನ ಚಿತ್ರಣವು ನಿಮಗೆ ಹೇಗೆ ನಿರೀಕ್ಷೆಯನ್ನು ತರಬಲ್ಲದು?

ಟಿಪ್ಪಣಿಗಳು: ಮನುಷ್ಯರಾಗಿ ನಾವು ಅನುಭವಿಸುವ ಅನೇಕ ಸಂಗತಿಗಳು ಅನ್ಯಾಯಯುತವಾಗಿವೆ (ವಿಶ್ವಾಸಿಗಳು ಮತ್ತು ಅವಿಶ್ವಾಸಿಗಳು) ನಾವು ಕಾರಣರಾಗದ ಅಪಘಾತಗಳು, ನಮ್ಮ ದುಷ್ಚಟ ಅಥವಾ ಕೆಟ್ಟ ಜೀವನಶೈಲಿಯಿಂದ ಆಗದ ಅನಾರೋಗ್ಯ, ನಾವು ಅದಕ್ಕೆ ಯೋಗ್ಯರಲ್ಲದಿದ್ದರೂ ಥಕ್ಕನೇ ಆಗುವ ನಿರುದ್ಯೋಗ, ನಮ್ಮ ಶ್ರಮ ಮತ್ತು ಯಥಾರ್ಥವಾದ ಸ್ಥಿರತೆಯ ಹೊರತಾಗಿಯೂ ಪರೀಕ್ಷೆಯಲ್ಲಿನ ಅನುತ್ತೀರ್ಣತೆ, ಪ್ರವಾಹಗಳು, ಭೂಕಂಪ, ಸುನಾಮಿ ಮತ್ತು ಇನ್ನಿತರ ದುರಂತಗಳು, ಹೌದು ಈ ಪಟ್ಟಿಯನ್ನು ಇನ್ನೂ ಉದ್ದವಾಗಿ ಮಾಡಬಹುದು, ಈ ರೀತಿಯ ಪರಿಸ್ಥಿತಿಗಳಲ್ಲಿ ವಿಶ್ವಾಸಿಗಳಾದ ನಾವು ಹೇಗೆ ವರ್ತಿಸುತ್ತೇವೆಂಬುದು ನಮ್ಮ ಕ್ರೈಸ್ತೀಯ ಸಾಕ್ಷಿಗೆ ಅತೀ ಪ್ರಾಮುಖ್ಯವಾಗಿದೆ. ದೇವರಲ್ಲಿ ಭರವಸೆಯಿಟ್ಟ ಜನರಂತೆ ನಾವು ವರ್ತಿಸುತ್ತೇವೋ? ಈ ಲೋಕದಲ್ಲಿ ಪರದೇಶಿಗಳೂ ಪ್ರವಾಸಿಗಳೂ ಆಗಿದ್ದು, ನೂತನ ಭೂಮ್ಯಾಕಾಶಗಳಿಗಾಗಿ ಮುನ್ನೋಡುತ್ತಿರುವ ಜನರಂತೆ ನಾವು ವರ್ತಿಸುತ್ತೇವೋ? ನಮ್ಮನ್ನು ಕೇಂದ್ರದಲ್ಲಿಟ್ಟುಕೊಂಡು ಮತ್ತು ನಮ್ಮ ಸ್ವಂತ ಪರಿಸ್ಥಿತಿಗಳ ಬಗ್ಗೆ ದೂರುವುದರ ಬದಲಾಗಿ, ನಮ್ಮೊಂದಿಗೆ ಬಾಧೆಗಳನ್ನು ಅನುಭವಿಸುವ ನಮ್ಮ ಸ್ನೇಹಿತರು ಮತ್ತು ನೆರೆಯವರ ವೇದನೆ ಮತ್ತು ಕಷ್ಟಗಳನ್ನು ನಾವು ಕಾಣುತ್ತೇವೋ?

ಇತರೆ ಸಮಯಗಳಲ್ಲಿ ಈ ಲೋಕದಲ್ಲಿ ದುಷ್ಟಜನರ ನಿಮಿತ್ತ ನಾವು ಬಾಧೆಪಡುತ್ತೇವೆ. ನೆರೆಯವರು ನಮ್ಮ ಬಗ್ಗೆ ಚಾಡಿ ಹೇಳುತ್ತಾರೆ ಮತ್ತು ಸುಳ್ಳನ್ನು ನುಡಿಯುತ್ತಾರೆ. ಆಡಳಿತಾಧಿಕಾರಿಗಳು ನಮ್ಮಿಂದ ಲಂಚವನ್ನು ಅಪೇಕ್ಷಿಸುತ್ತಾರೆ. ರಾಜಕಾರಣಿಗಳು ನಮ್ಮಲ್ಲಿ ತಮ್ಮ ಕೈಚಳಕವನ್ನು ತೋರಿಸುತ್ತಾರೆ. ಶಿಕ್ಷಕರು ಮತ್ತು ಉದ್ಯೋಗಿಗಳು ನಮಗೆ ಪಕ್ಷಪಾತ ತೋರುತ್ತಾರೆ. ಕುಟುಂಬದವರು ಮತ್ತು ಸ್ನೇಹಿತರು ನಮ್ಮ ಬಗ್ಗೆ ಹೊಟ್ಟೆಕಿಚ್ಚುಪಡುತ್ತಾರೆ. ಸಂಗಾತಿಗಳು ಮತ್ತು ಮಕ್ಕಳು ಅಪನಂಬಿಗಸ್ಥರಾಗುತ್ತಾರೆ. ಕಳ್ಳರು ನಮ್ಮಿಂದ ಕದ್ದುಕೊಳ್ಳುತ್ತಾರೆ. ದರೋಡೆಕೋರರು ನಮ್ಮನ್ನು ದರೋಡೆ ಮಾಡುತ್ತಾರೆ. ಕುಡುಕರು ಬೆದರಿಕೆ ಹಾಕುತ್ತಾರೆ ಮತ್ತು ದೂಷಿಸುತ್ತಾರೆ. ಈ ಪಟ್ಟಿಯನ್ನು ಸಹ ಇನ್ನೂ ಉದ್ದವಾಗಿ ಮಾಡಬಹುದು. ವಿಶ್ವಾಸಿಗಳಾದ ನಾವು ಸಾಮಾನ್ಯ ದಿನಮಾನಗಳಲ್ಲಿ ನಮ್ಮನ್ನು ಹಾದುಹೋಗುವ ದುಷ್ಟ, ಭ್ರಷ್ಟ ಮತ್ತು ಬಲಹೀನ ಜನರನ್ನು ಹೇಗೆ ನೋಡಿಕೊಳ್ಳುತ್ತೇವೆ ಎಂಬುದು ನಮ್ಮ ಕ್ರೈಸ್ತೀಯ ಸಾಕ್ಷಿಗೆ ಅತೀ ಪ್ರಾಮುಖ್ಯವಾಗಿದೆ. ನಾವು ಪ್ರತಿಕಾರ ತೆಗೆದುಕೊಳ್ಳುತ್ತೇವಾ? ಹಿಂತಿರುಗಿ ಕಚ್ಚುತ್ತೇವಾ? ನಾವು ಭ್ರಷ್ಟ ಮತ್ತು ದುಷ್ಟ ಆಚಾರಗಳಿಗೆ ನೊಂದು ಬಿಟ್ಟುಬಿಡುತ್ತೇವಾ? ಅಥವಾ ನಾವು ಈ ಬಾಧೆಗಳನ್ನು ಪೌಲನು ಆತ್ಮೀಯ ಫಲಗಳೆಂದು ಕರೆಯುವ ಪ್ರೀತಿ, ಸಂತೋಷ, ಸಮಾಧಾನ, ದೀರ್ಘಶಾಂತಿ, ದಯೆ, ಉಪಕಾರ, ನಂಬಿಕೆ, ಸಾಧುತ್ವ, ಶಮೆದಮೆ (ಗಲಾತ್ಯ 5:22–23) ಇವುಗಳೊಂದಿಗೆ ಎದುರಿಸುತ್ತೇವಾ?



## ಅವಲೋಕನ

ಇದನ್ನು ನಾನು ಒಂದು ಸವಾಲಿನಿಂದ ಕೂಡಿದ ಅಧ್ಯಾಯವನ್ನಾಗಿ ಕಾಣುತ್ತೇನೆ. ಇಂದಿನ ಸಭೆಯ ಸಂದೇಶವು ಹೊಸದಾಗಿ ಹುಟ್ಟಿದ ವಿಶ್ವಾಸಿಗಳಂತೆ ತನ್ನ ಮೊದಲ ಓದುಗರು ಜೀವಿಸಬೇಕೆಂದು ಹೇಗೆ ಪೇತ್ರನು ಬಯಸಿದನೆಂಬುದರ ಸಾರಾಂಶವಾಗಿದೆ; ಅನ್ಯಾಯ ಮತ್ತು ಯೋಗ್ಯವಲ್ಲದ ಬಾಧೆಗಳ ನಡುವೆ ಕರುಣೆ ಮತ್ತು ಸಹೋದರ ಪ್ರೀತಿಯಿಂದ ಕೂಡಿದ ಉಪಕಾರ ಮತ್ತು ದೀನ ಮನೋಭಾವದ ಜೀವನ. ಇದು ಆದರ್ಶವಾದ ರಾಜ್ಯ ಮತ್ತು ಭೂಮಿಯಲ್ಲಿ ಸ್ವರ್ಗವೆಂಬಂತೆ ಅನಿಸುತ್ತದೆ. ಆದರೆ ಸಭೆಯು ಈ ರೀತಿಯಾಗಿ ಇರಲೇಬೇಕಾಗಿದೆ. ಆದರ್ಶ ರಾಜ್ಯವಾಗಿ ಅಲ್ಲ, ಆದರೆ ಭೂಮಿಯಲ್ಲಿನ ಸ್ವರ್ಗದಂತೆಅಥವಾ ನೂತನ ಭೂಮಿ ಮತ್ತು ನೂತನಾಕಾಶದ ಪೂರ್ವಾನುಭವ, ದೇವರ ರಾಜ್ಯದ ಸರ್ವಸಂಪೂರ್ಣತೆಯ ಪೂರ್ವಾನುಭವವಂತಾದರೂ ಇರಬೇಕು.

ಖಂಡಿತವಾಗಿಯೂ ಯೇಸು ಕ್ರಿಸ್ತನಿಲ್ಲದೆ ಈ ರೀತಿಯ ಜೀವನಶೈಲಿ/ನಡವಳಿಕೆಯು ಅಸಾಧ್ಯವಾಗಿದೆ. ಯೋಗ್ಯವಲ್ಲದ ಬಾಧೆಯನ್ನು ಅನುಭವಿಸುವುದರಲ್ಲಿ ಆತನೇ ನಮಗೆ ಮಾದರಿಯಾಗಿದ್ದಾನೆಂಬುದು ಸತ್ಯವಾದದ್ದಾಗಿದೆ. ಆದರೆ ಅದನ್ನು ನಾನು ಇಲ್ಲಿ ಯೋಚಿಸುತ್ತಿಲ್ಲ. ಇಲ್ಲಿ ಯೇಸು ಕ್ರಿಸ್ತನು ಕೇವಲ ಒಂದು ಮಾದರಿಗಿಂತಲೂ ಹೆಚ್ಚಿನವನಾಗಿದ್ದಾನೆ. ಆತನು ನಮ್ಮ ರಕ್ಷಕನಾಗಿದ್ದಾನೆ. ಅನೀತಿವಂತರಿಗೋಸ್ಕರ ಪ್ರಾಣಕೊಟ್ಟು ನಮ್ಮನ್ನು ದೇವರ ಬಳಿಗೆ ಸೇರಿಸುವುದಕ್ಕಾಗಿ ಒಂದೇ ಸಾರಿ ಪಾಪ ನಿವಾರಣೆಗೋಸ್ಕರ ಬಾಧೆಪಟ್ಟು ಸತ್ತನು (3:18). ಆತನ ಮರಣ ಮತ್ತು ಪುನರುತ್ಥಾನದ ನಿಮಿತ್ತ ನಮ್ಮ ಸುತ್ತಲು ಕಾಣುವ ಜೀವನಕ್ಕಿಂತ ವಿಭಿನ್ನವಾದ ಜೀವನ, ದೇವರ ರಾಜ್ಯದ ನಿಯಮಗಳನ್ನು ಪ್ರತಿಬಿಂಬಿಸುವ ಜೀವನ, ರೂಪಾಂತರಿಸಲ್ಪಟ್ಟ ಜೀವನವನ್ನು ಜೀವಿಸಲು ನಮಗೆ ಸಾಧ್ಯವಾಗುತ್ತದೆ.

ದೀಕ್ಷಾಸ್ನಾನವು ಈ ರಕ್ಷಣೆ ಮತ್ತು ಹೊಸ ಜೀವನದ ಸಂಕೇತವಾಗಿದೆ. ಪೌಲನು ಇದನ್ನು ಈ ರೀತಿಯಲ್ಲಿ ತಿಳಿಸುತ್ತಾನೆ: "ಕ್ರಿಸ್ತಯೇಸುವಿನಲ್ಲಿ ಸೇರುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವರಾದ ನಾವೆಲ್ಲರೂ ಆತನ ಮರಣದಲ್ಲಿ ಪಾಲುಗಾರರಾಗುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ? ಹೀಗಿರಲಾಗಿ ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟಿದ್ದೇವೆ. ಆದುದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವು ಕೂಡ ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು" (ರೋಮಾ 6:3–4).

# ಉತ್ತರಗಳು 8: ದೇವರ ಚಿತ್ತಕ್ಕಾಗಿ ಜೀವಿಸುವುದು, 4:1–11

## ಶಿಕ್ಷಕರ ಗಮನಕ್ಕೆ

ಈ ವಾಕ್ಯಭಾಗದಲ್ಲಿ ಪುನಃ ನಾವು ಸತ್ಯವೇದ ಪಂಡಿತರಿಗೆ ಅರ್ಥೈಸಿಕೊಳ್ಳಲು ಕ್ಲೀಷ್ಟಕರವೆನಿಸುವ ಹೇಳಿಕೆಗಳ ಉದಾಹರಣೆಗಳನ್ನು ಕಾಣಬಹುದು (ಪ್ರಶ್ನೆಗಳು 1 ಮತ್ತು 3 ನ್ನು ನೋಡಿರಿ). ವಿದ್ಯಾರ್ಥಿಗಳು ನನ್ನ ಉತ್ತರಗಳನ್ನು ಪರಿಶೀಲಿಸಲು ನೀವು ಅವರಿಗೆ ಸಾಕಷ್ಟುಸಮಯವನ್ನು ಕೊಡಿರಿ. ಅವರು ನನ್ನೊಂದಿಗೆ ಒಪ್ಪಬಹುದು ಅಥವಾ ಒಪ್ಪದಿರಬಹುದು. ಪ್ರಾಮುಖ್ಯವಾದ ಸಂಗತಿಯೆಂದರೆ– ಆಯ್ಕೆಗಳನ್ನು ಮೌಲ್ಯಮಾಪನ ಮಾಡಲು ಮತ್ತು ಅವರ ಸ್ವಂತ ತರ್ಜುಮೆಗೆ ಬರುವಲ್ಲಿ ಅವರಿಗೆ ಸಹಕರಿಸಿರಿ. ಹಾಗಾಗಿ ನಿಮ್ಮನ್ನು ನೀವೇ ಅತ್ಯುತ್ತಮವಾಗಿ ಸಿದ್ಧಪಡಿಸಿಕೊಳ್ಳಿರಿ.

ಆತ್ಮಿಕ ಕೂಟದ 3 ನೇ ವಿಭಾಗವು (ಈ ಪ್ರಸ್ತಾಪದಲ್ಲಿ ಆತ್ಮಿಕ ಕೂಟ ವಿಭಾಗವನ್ನು ನೋಡಿರಿ) ಯಾವುದು ದಕ್ಷಿಣ ಭಾರತದ ಹಿನ್ನಲೆಯಲ್ಲಿ ದೇವರ ಚಿತ್ತಕ್ಕಾಗಿ ಬದುಕುವುದು ಅವಶ್ಯವಾಗಿದೆಯೆಂಬ ವಿದ್ಯಾರ್ಥಿಗಳ ತಿಳುವಳಿಕೆಯನ್ನು ತೀಕ್ಷ್ಣಗೊಳಿಸುವುದು. ಅವರಲ್ಲಿ ಈಗ ಸಮಯ ಕಳೆಯಬೇಡಿರಿ (ನೋಡಿ ಪ್ರಶ್ನೆಗಳು 5 ಮತ್ತು 6). ನೀವು ನಿಮ್ಮ ಅಧ್ಯಯನವನ್ನು ಮೂಲ ಓದುಗರ ಸನ್ನಿವೇಶಕ್ಕೆ ಸೀಮಿತಗೊಳಿಸಿ ಅಷ್ಟೇ ಸಾಕು.

ಈ ವಾಕ್ಯಭಾಗದ ಮೊದಲ ಭಾಗದಲ್ಲಿ, ಪೇತ್ರನು *ಸಾರ್ಕ್* ಎಂಬ ಗ್ರೀಕ್ ಪದವನ್ನು ನಾಲ್ಕು ಬಾರಿ ಉಪಯೋಗಿಸುತ್ತಾನೆ (ವ.1 ಎರಡು ಬಾರಿ, 2 ಮತ್ತು 6). ಇಂಗ್ಲೀಷಿನ ಎನ್ಐವಿ ಭಾಷಾಂತರವು ಇದನ್ನು (ವ.1, 6) ಮತ್ತು 'ಮನುಷ್ಯರ ಅಭಿಲಾಷೆಯಂತೆ' (ವ.2) ಎಂದು ಹೇಳುತ್ತದೆ. ಕನ್ನಡದ ಎನ್ಐಬಿವಿಯು 1 ನೇ ವಚನದಲ್ಲಿ ಮೊದಲು 'ದೇಹ' ಎಂದಿದೆ, ಆದರೆ ಉಳಿದ ಭಾಗದಲ್ಲಿ 'ಶರೀರ' ಎಂದಿದೆ (ಕನ್ನಡದ ಜೆ.ವಿ. ಅನುವಾದದಲ್ಲಿ ಏನಿದೆ?). ಎಲ್ಲಾ ನಾಲ್ಕು ಸಂಗತಿಗಳಲ್ಲಿ ಪೇತ್ರನು *ಸಾರ್ಕ್*ನ್ನು 'ಮನುಷ್ಯರ ಅಸ್ತಿತ್ವ' ಅಥವಾ 'ಈ ಲೋಕದಲ್ಲಿ ಜೀವಂತವಾಗಿರುವುದು' ಎಂಬುದಕ್ಕೆ ಆಧಾರವಾಗಿ ಉಪಯೋಗಿಸುವಂತೆ ಕಾಣುತ್ತದೆ. ಪೇತ್ರನು *ಸಾರ್ಕ್* ವಿಧವನ್ನು 3 ವಿಭಿನ್ನ ಅರ್ಥಗಳೊಂದಿಗೆ ಉಪಯೋಗಿಸುತ್ತಾನೆ. 1) ಶರೀರ ಅಥವಾ ಮಾಂಸಖಂಡ (ಮನುಷ್ಯ ಅಥವಾ ಪ್ರಾಣಿಯ ದೇಹದ ಮಾಂಸದ ಭಾಗ). 2) ದೇಹ (ಮನುಷ್ಯನ ಸ್ವಾಭಾವಿಕ/ನೈಸರ್ಗಿಕ ದೇಹ). 3) ಪಾಪದ ಸ್ವಭಾವ (ಪಾಪ ಸ್ವಭಾವ/ಮನುಷ್ಯರ ಅಭಿಲಾಷೆಗಳ ಕೃತ್ಯಗಳು).

## ಉತ್ತರಗಳು

1. ಗ್ರೀಕ್ ಪಠ್ಯವು 'ಆದುದ್ದರಿಂದ' ಎಂಬುದರೊದಿಗೆ ಪ್ರಾರಂಭವಾಗುತ್ತದೆ (ಇಂಗ್ಲೀಷಿನ ಎನ್ಐವಿ ಯಲ್ಲಿದ್ದಂತೆ). ಈ ಪದವು ಕನ್ನಡದ ಎನ್ಐಬಿವಿ ಮತ್ತು ಜೆವಿ ಯಲ್ಲಿ ಭಾಷಾಂತರಿಸಲ್ಪಟ್ಟಿಲ್ಲ. 'ಆದುದ್ದರಿಂದ' ಪದವು ಏನನ್ನು ಸೂಚಿಸುತ್ತದೆಂಬುದನ್ನು ಸತ್ಯವೇದ ಪಂಡಿತರು ಒಪ್ಪುವುದಿಲ್ಲ. ಇದಕ್ಕೆ ಎರಡು ಸಾಧ್ಯತೆಗಳಿವೆ:

   a. ಇದು 3:8 ರಲ್ಲಿ ಯೇಸು ಕ್ರಿಸ್ತನ ಮರಣವನ್ನು ತಿಳಿಸಿದ್ದನ್ನು ಸೂಚಿಸುತ್ತದೆ. ನಾವು ಕ್ರಿಸ್ತನ ಸ್ವಭಾವವನ್ನು ಧರಿಸಿಕೊಳ್ಳಬೇಕು. ಯಾಕೆಂದರೆ, ಆತನು ನಮಗಾಗಿಯೇ ಸತ್ತನು. ಹೆಚ್ಚಿನ ಸತ್ಯವೇದ ಪಂಡಿತರು ಈ ದೃಷ್ಟಿಕೋನ ಹೊಂದಿದ್ದಾರೆ. ಆದರೆ 'ಆದುದ್ದರಿಂದ'ಪದವನ್ನು

ಅರ್ಥೈಸಿಕೊಳ್ಳಲು (4:1 ರಲ್ಲಿ) ಇದೊಂದು ಉತ್ತಮವಾದ ಮಾರ್ಗವೆಂದು ನಾನು ಎಣಿಸುವುದಿಲ್ಲ. ಯಾಕಿಲ್ಲ? ಯಾಕೆಂದರೆ, ಕ್ರಿಸ್ತನ ಬಾಧೆಯನ್ನು (ಆತನ ಮರಣವನ್ನು ಸಹ ಸೇರಿ) ವಿಶೇಷವಾಗಿ ಈ ವಚನದಲ್ಲಿ ಉಲ್ಲೇಖಿಸಲಾಗಿದೆ. ಹಾಗಾಗಿ 'ಆದುದ್ದರಿಂದ' ಪದವು ಬೇರೆಯೊಂದಕ್ಕೆ ಸೂಚನೆಯಾಗಿದೆ.

b. ಇದು ಹಿಂದಿನ ವಚನದಲ್ಲಿನ ದೀಕ್ಷಾಸ್ನಾನದ (3:21–22) ಕುರಿತಾಗಿದೆ. ಇದು ಕ್ರಿಸ್ತನ ಪುನರುತ್ಥಾನದಿಂದ ನಮ್ಮನ್ನು ರಕ್ಷಿಸುತ್ತದೆ. ದೀಕ್ಷಾಸ್ನಾನವು ಆತನ ಮರಣ ಮತ್ತು ಪುನರುತ್ಥಾನದಲ್ಲಿ ಕ್ರಿಸ್ತನೊಂದಿಗೆ ನಮ್ಮ ಐಕ್ಯತೆಯನ್ನು ಗುರುತಿಸುತ್ತದೆ. ನಮ್ಮನ್ನು ಪಾಪದಿಂದ ಪ್ರತ್ಯೇಕಿಸುವುದು ಇದು ಮರಣಕ್ಕಿಂತ ಕಡಿಮೆಯಲ್ಲ. (ಕ್ಲೋವ್‌ನೀ, 1 ಪೇತ್ರದ ಸಂದೇಶ) ರೋಮಾ.ದಲ್ಲಿ ದೀಕ್ಷಾಸ್ನಾನದ ಕುರಿತಾಗಿನ ಪೌಲನ ಬೋಧನೆಯನ್ನು ಹೋಲಿಸಿರಿ! "ಇದಲ್ಲದೆ ನಾವು ಕ್ರಿಸ್ತನೊಡನೆ ಸತ್ತ ಪಕ್ಷದಲ್ಲಿ ಆತನೊಡನೆ ಜೀವಿಸುವೆವೆಂದು ನಂಬುತ್ತೇವೆ. ಯಾಕೆಂದರೆ ಕ್ರಿಸ್ತನು ಸತ್ತ ಮೇಲೆ ಜೀವಿತನಾಗಿ ಎದ್ದು ಬಂದದರಿಂದ ಆತನು ಇನ್ನು ಮುಂದೆ ಸಾಯತಕ್ಕವನಲ್ಲ, ಮರಣವು ಇನ್ನೂ ಆತನನ್ನು ಆಳುವುದಿಲ್ಲವೆಂದು ನಮಗೆ ತಿಳಿದಿದೆ. ಆತನು ಸತ್ತದ್ದು ಒಂದೇ ಸಾರಿ, ಅದು ಪಾಪದ ಪಾಲಿಗೆ, ಆತನು ಜೀವಿಸುವುದು ದೇವರಿಗಾಗಿಯೇ. ಅದೆ ಪ್ರಕಾರ ನೀವು ಸಹ ನಿಮ್ಮನ್ನು ಕ್ರಿಸ್ತಯೇಸುವಿನ ಐಕ್ಯದಿಂದ ಪಾಪದ ಪಾಲಿಗೆ ಸತ್ತವರೂ, ದೇವರಿಗಾಗಿ ಜೀವಿಸುವವರೂ ಎಂದು ಎಣಿಸಿಕೊಳ್ಳಿರಿ. ಹೀಗಿರುವುದರಿಂದ ಸಾಯತಕ್ಕ ನಿಮ್ಮ ದೇಹದ ಮೇಲೆ ಪಾಪವನ್ನು ಆಳಗೊಡಿಸಿ ನೀವು ದೇಹದ ದುರಾಶೆಗಳಿಗೆ ಒಳಪಡಬೇಡಿರಿ" (ರೋಮಾ 6:8–12).

2. ಅನ್ಯರ ಜೀವನವನ್ನು ಪೇತ್ರನು ಕೆಳಕಂಡ ಪದಗಳಿಂದ (ಶೈಲಿಯಿಂದ) ವರ್ಣಿಸುತ್ತಾನೆ:

   a. ಬಂಡುತನ: ಈ ಪದವು ಜಾರತ್ವವನ್ನು ಮತ್ತು ವಿಪರೀತವಾಗಿ ಶಾರೀರಿಕ ಸುಖದಲ್ಲಿ ಭಾಗಿಯಾಗುವುದನ್ನು ಸೂಚಿಸುತ್ತದೆ.

   b. ದುರಾಶೆ (ಶರೀರದಾಶೆ): ಮನುಷ್ಯನ ಆಶೆಯು ಅನೈತಿಕ ಮತ್ತು ಪಾಪಮಯವಾದ ಹಿನ್ನಲೆಯಲ್ಲಿ ಈ ಪದವನ್ನು ಬಳಸಲಾಗಿದೆ.

   c. ಕುಡುಕುತನ: ಈ ಪದವನ್ನು ಅತೀಯಾಗಿ ಮದ್ಯಪಾನವನ್ನು (ದ್ರಾಕ್ಷಾರಸವನ್ನು)ಮಾಡುವ ಜನರ ಬಗ್ಗೆ ಬಳಸಲಾಗಿದೆ.

   d. ದುಂದೌತಣ: ಈ ಪದವು ವಿಲಾಸಕೂಟ, ಶಬ್ದಮಯವಾದ ಸಮಾರಂಭಗಳು, ವಿಶೇಷವಾಗಿ ಬಹಳಷ್ಟು ಪ್ರಮಾಣದ ಮದ್ಯಪಾನವನ್ನು ಸೇವಿಸುವುದರಲ್ಲಿ ಭಾಗಿಯಾಗುವುದರ ಬಗ್ಗೆ ತಿಳಿಸುತ್ತದೆ.

   e. ಮದ್ಯಪಾನಗೋಷ್ಟಿ: ಈ ಪದವು ಬಹಳ ಪ್ರಮಾಣದ ದ್ರಾಕ್ಷಾರಸವನ್ನು ಸೇವಿಸುವ ಮತ್ತು ದೊಡ್ಡ ಗದ್ದಲದಲ್ಲಿ ಇತರ ಜನರೊಂದಿಗೆ ಖುಷಿಪಡುವ ಜನರ ಬಗ್ಗೆ ತಿಳಿಸುತ್ತದೆ.

   f. ಅಸಹ್ಯವಾದ ವಿಗ್ರಹಾರಾಧನೆ: ಈ ಹೇಳಿಕೆಯಲ್ಲಿ ಪೇತ್ರನು ವಿಗ್ರಹಾರಾಧನೆಗೆ– ಅಸಹ್ಯವಾದ ಎಂಬ ಗುಣವಾಚಕ/ವಿಶೇಷಣವನ್ನು ಸೇರಿಸುತ್ತಾನೆ. ಮೂಲತಃ ಇದರರ್ಥ 'ಧರ್ಮಶಾಸ್ತ್ರಕ್ಕೆ ವಿರುದ್ಧವಾಗಿ' (ಹೋಲಿಸಿ, ಅಪೋ 10:28, ಇಲ್ಲಿ ಕೊರ್ನೇಲ್ಯನ

ಮನೆಯನ್ನು ಸಂಧಿಸುವ ಬಗ್ಗೆ ಇದೇ ಪದ ಬಳಸುತ್ತಾನೆ). ಹೆಚ್ಚುವರಿಯಾಗಿ 'ಅಸಹ್ಯವಾದ' ಮತ್ತು 'ಜಿಗುಪ್ಸೆ ಹುಟ್ಟಿಸುವ' ಅರ್ಥವನ್ನು ಕೊಡುತ್ತದೆ.

g. ಪಟಿಂಗತನ: ಗ್ರೀಕ್ ಪದದ ಮೂಲ ಅರ್ಥ 'ವಾಸಿಯಾಗದ' ಎಂದು. ಈ ಪದವು ತಪ್ಪಿಹೋದ ಮಗನು ಭಾಗಿಯಾದಂತಹ ಪಾಪಮಯವಾದ ಪಟಿಂಗತನದ ಜೀವನವನ್ನು ಸೂಚಿಸುತ್ತದೆ (ಲೂಕ 15:13).

3. "ಸತ್ತಿರುವವರ" ಬಗ್ಗೆ ಹೇಗೆ ಅರ್ಥೈಸಿಕೊಳ್ಳಬೇಕೆಂಬುದನ್ನು ಸತ್ಯವೇದ ಪಂಡಿತರು ಒಪ್ಪುವುದಿಲ್ಲ (ವ.6). ಆದರೆ ಈ ವಾಕ್ಯಭಾಗದ ಹಿನ್ನಲೆಯಲ್ಲಿ 'ಸತ್ತಿರುವವರು'– ಇದು ಪೇತ್ರನು ತನ್ನ ಪತ್ರಿಕೆಯನ್ನು ಬರೆಯುವ ವೇಳೆ ರೋಮನ್ನಿನ ರಾಜ್ಯಗಳಲ್ಲಿ ಈಗಾಗಲೇ ಸತ್ತಿರುವ ವಿಶ್ವಾಸಿಗಳನ್ನು ಸೂಚಿಸುತ್ತಾರೆಂದು ಕ್ಲೋವ್‌ನೀಯೊಂದಿಗೆ ನಾನು ಒಪ್ಪುತ್ತೇನೆ. ಹಾಗಾಗಿ ಆತನು 'ಈಗ ಅವರು ಸತ್ತಿದ್ದಾರೆ' ಎಂಬ ಹೇಳಿಕೆಯೊಂದಿಗೆ ತಿಳಿಸುತ್ತಾನೆ. (ಇದನ್ನು ಸ್ಪಷ್ಟಪಡಿಸಲು ಇಂಗ್ಲೀಷಿನ ಎನ್‌ಐವಿ ಭಾಷಾಂತರವು 'ಈಗ' ಎಂಬ ಪದವನ್ನು ಸೇರಿಸುತ್ತದೆ).

ಹೊಸ ಒಡಂಬಡಿಕೆಯ ಸಮಯದಲ್ಲಿ ವಾಸ್ತವಾಂಶವೆಂದರೆ– ಕೆಲವು ವಿಶ್ವಾಸಿಗಳು ಸತ್ತರೆ ಸಭೆಯಲ್ಲಿ ಅದೊಂದು ನಿಜವಾದ ಸಂಗತಿಯಾಗಿರುತ್ತದೆಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಯೇಸು ಕ್ರಿಸ್ತನು ತಮ್ಮ ಸ್ವಂತ ಜೀವಿತಾವಧಿಯಲ್ಲಿಯೇ ತಿರುಗಿ ಬರಬೇಕೆಂದು ಅವರು ಅಪೇಕ್ಷಿಸುತ್ತಿದ್ದರು. ಹಾಗಾದರೆ ವಿಶ್ವಾಸಿಗಳು ಯಾಕೆ ಸಾಯುತ್ತಾರೆ? ಈ ವಿಷಯದ ಬಗ್ಗೆ ಪೌಲನು 1 ಥೆಸಲೋನಿಕ 4:13–18 ರಲ್ಲಿ ತಿಳಿಸುತ್ತಾನೆ.

ನಮ್ಮ ವಾಕ್ಯಭಾಗದಲ್ಲಿ ಪೇತ್ರನ ವಾದವು ಈ ರೀತಿಯಾಗಿ ಹೇಳುತ್ತದೆ. ದೇವರು ಸತ್ತವರಿಗೂ ಜೀವಿಸುವವರಿಗೂ ನ್ಯಾಯತೀರಿಸುತ್ತಾನೆ. ವಾಸ್ತವಾಂಶವೆಂದರೆ– ಕೆಲವು ವಿಶ್ವಾಸಿಗಳು ಈಗಾಗಲೇ ಸತ್ತಿರುವವರು ದೇವರಿಂದ ತೀರ್ಪನ್ನು ಹೊಂದಿದರೆಂಬುದನ್ನು ಸೂಚಿಸುತ್ತದೆ. (ಅವರು ಮನುಷ್ಯ ಜಾತಿಗೆ ಬರುವ ಮರಣವೆಂಬ ತೀರ್ಪನ್ನು ಶರೀರಿಗಳಾಗಿದ್ದಾಗ ಹೊಂದಿದರು). ಅವರು ಮರಣದಿಂದ ಜೀವದಲ್ಲಿ ಪಾಲುಗಾರರಾಗಿದ್ದಾರೆ. ಅವರು ಯೇಸು ಕ್ರಿಸ್ತನಲ್ಲಿ ವ್ಯರ್ಥವಾಗಿ ನಂಬಿಕೆಯಿಡಲಿಲ್ಲ. ಆದರೆ ಮನುಷ್ಯರ ದುಷ್ಟ ಅಭಿಲಾಷೆಗಳಿಗಾಗಿ ಜೀವಿಸುವವರು ಯೇಸು ಕ್ರಿಸ್ತನ ಕುರಿತಾದ ಸುವಾರ್ತೆಯನ್ನು ಅಂಗೀಕರಿಸದೇ ಇರುವುದರಿಂದ ಅವರು ನ್ಯಾಯತೀರ್ಪನ್ನು ಹೊಂದುವರು.

4. ವಚನ 7–11 ರಲ್ಲಿನ ಪೇತ್ರನ ಪ್ರಬೋಧನೆಯ ಹಿನ್ನಲೆಯು ನ್ಯಾಯತೀರ್ಪಾಗಿದೆ. ವಿಶ್ವಾಸಿಗಳಾದ ನಾವು ಕರ್ತನ ದಿನದ ನೆರಳಿನಲ್ಲಿ ಜೀವಿಸುತ್ತಿದ್ದೇವೆ. ಎಲ್ಲವುಗಳ ಅಂತ್ಯ ಹತ್ತಿರವಾಗಿದೆ. ಹಾಗಾಗಿ ನಾವೆಲ್ಲರೂ ನಮ್ಮ ಜೀವಿತವನ್ನು ಯೇಸು ಕ್ರಿಸ್ತನ ಎರಡನೇ ಬರೋಣದ ನಿರೀಕ್ಷೆಯಲ್ಲಿ ಜವಾಬ್ದಾರಿಯಿಂದ ಜೀವಿಸಬೇಕಾಗಿದೆ.

5. ಪೇತ್ರನು ವರ್ಣಿಸಿರುವ 'ಹಳೆಯ ಜೀವನ' (2–4) ವನ್ನು ವಿಶ್ವಾಸಿಗಳು ಯಾವರೀತಿಯ ಜೀವನವನ್ನು ಜೀವಿಸಬೇಕೆಂದು ಪೇತ್ರನು ಬಯಸುವುದರೊಂದಿಗೆ (7–11) ಹೋಲಿಸಿರುವ ಒಂದು ಪಟ್ಟಿ ಕೆಳಕಂಡಂತಿದೆ. ನೀವು ಇದನ್ನು ವಿಭಾಗ ಮಾಡಬಹುದು.

| ಹಳೆಯ ಜೀವನ | ಕ್ರಿಸ್ತನಲ್ಲಿ ನೂತನ ಜೀವನ |
|---|---|
| ಮನುಷ್ಯನ ಅಭಿಲಾಷೆಗಳನ್ನು ಮೆಚ್ಚಿಸಲು ಜೀವಿಸಿದ ಜೀವನ | ದೇವರ ಚಿತ್ತಕ್ಕಾಗಿ ಬದುಕಿದ ಜೀವನ |
| ಬಂಡುತನ | ಯೇಸು ಕ್ರಿಸ್ತನ ಬರೋಣದ ನಿರೀಕ್ಷೆಯಲ್ಲಿ ಜೀವಿಸುವುದು |
| ದುರಾಶೆ (ಶರೀರದಾಶೆ) | ಸ್ವಸ್ಥ ಚಿತ್ತರಾಗಿರುವುದು |
| ಕುಡುಕುತನ | ಆತ್ಮಸಂಯಮ |
| ದುಂದೌತಣ | ಪ್ರಾರ್ಥನಾಭರಿತರಾಗಿರುವುದು |
| ಮದ್ಯಪಾನಗೋಷ್ಟಿ | ಸಹೋದರರ ಪ್ರೀತಿ |
| ಅಸಹ್ಯವಾದ ವಿಗ್ರಹಾರಾಧನೆ | ನಂಬಿಗಸ್ತರಾಗಿ ದೇವರ ವರಗಳನ್ನು ಉಪಯೋಗಿಸುವುದು |
| ಪಟಿಂಗತನ | ದೇವರ ಬಲವನ್ನು ಆತುಕೊಳ್ಳುವುದು, ಸ್ತುತಿ ಆರಾಧನ ಬದುಕನ್ನು ಜೀವಿಸುವುದು |

6. ಆದಿಸಭೆಯಲ್ಲಿ ಸೇವೆಮಾಡಿದ ಎರಡು ಬಗೆಯ ನಾಯಕತ್ವದ ಬಗ್ಗೆ ಪೇತ್ರನು ಮಾತನಾಡುತ್ತಾನೆ (ವ. 10–11). ಅವೆರಡೂ ಸಹ 'ದೇವರ ಕೃಪೆಯನ್ನು ವಿಭಿನ್ನ ರೀತಿಯಲ್ಲಿ ಉಪಯೋಗಿಸುವುದು' ಎಂಬ ಹೇಳಿಕೆಯಿಂದ ವಿವರಿಸಲಾಗಿದೆ. (ಅಥವಾ ಇಂಗ್ಲೀಷಿನ ಇನ್ನೊಂದು ಭಾಷಾಂತರದಲ್ಲಿನ ಪದಗಳಂತೆ– ವಿವಿಧ ಕೃಪೆಯ ವಿಷಯದಲ್ಲಿ ಒಳ್ಳೆಯ ಮನೆವಾರ್ತೆಯವರಾಗಿದ್ದು ಎಂದು).

   a. ಮಾತನಾಡುವ/ಬೋಧಿಸುವ ವರ: ಇದು ಪ್ರಸ್ತುತ ಸಭೆಗಳಲ್ಲಿನ ಪ್ರಸಂಗಿಸುವುದು ಮತ್ತು ಬೋಧನೆಯ ಸೇವೆಯ ಕುರಿತಾಗಿದೆ.

   b. ಸೇವೆಮಾಡುವ ವರ: ಇದು ನಮ್ಮ ಪ್ರಸ್ತುತ ದಿನಮಾನಗಳಲ್ಲಿ ಸಭೆಗಳಲ್ಲಿನ ವಿಭಿನ್ನ ಬಗೆಯ ಪ್ರಾಯೋಗಿಕ ಮತ್ತು ಸಾಮಾಜಿಕ ಸೇವಾಕಾರ್ಯಗಳನ್ನು ಸೂಚಿಸುತ್ತದೆ.

7. ನಮ್ಮ ಕ್ರೈಸ್ತೀಯ ಸೇವೆ/ ಮನೆವಾರ್ತೆ ಕೆಲಸದ ಒಂದು ಉದ್ದೇಶವು (ವ.11) ಯೇಸು ಕ್ರಿಸ್ತನ ಮೂಲಕ ದೇವರಿಗೆ ಸ್ತೋತ್ರ ಉಂಟಾಗುವುದು ಎಂದು ಪೇತ್ರನು ಹೇಳುತ್ತಾನೆ. ನಾವು ಈ ರೀತಿ ಮಾಡುತ್ತೇವೆ– ನಮ್ಮ ಜೀವನದಲ್ಲಿ ದೇವರ ವರಗಳನ್ನು ಗುರುತಿಸುವುದರಿಂದ ನಾವು ದೇವರನ್ನು ಸ್ತುತಿಸುತ್ತೇವೆ.



## ಅವಲೋಕನ

ಪೇತ್ರನು ತನ್ನ ಓದುಗರ ಮುಂದೆ ಅವರ ಹಳೆಯ ಪಾಪಮಯವಾದ ಜೀವಿತದ ನಕರಾತ್ಮಕ ಚಿತ್ರಣವನ್ನು ಚಿತ್ರಿಸುತ್ತಾನೆ. ಅವರು ಯೇಸು ಕ್ರಿಸ್ತನನ್ನು ಸಂಧಿಸುವುದಕ್ಕಿಂತ ಮೊದಲು ಯಾವ ರೀತಿ ಜೀವಿಸದರೆಂಬುದನ್ನು ಅವರಿಗೆ ಜ್ಞಾಪಿಸುವ ಉದ್ದೇಶದಿಂದ ಆತನು ಆ ರೀತಿ ಮಾಡುತ್ತಾನೆ. ಆದರೆ ಆತನು ಈಗ ದೇವರು ತನ್ನ ಮಕ್ಕಳಿಂದ ಅಪೇಕ್ಷಿಸುವ ಜೀವಿತದೊಂದಿಗೆ, ಆ ಹಳೆಯ ಪಾಪಮಯವಾದ ಮತ್ತು ಭಕ್ತಿಯಿಲ್ಲದ ಜೀವಿತಕ್ಕೆ ತದ್ವಿರುದ್ಧತೆಯನ್ನು ಆತನು ಬಯಸುತ್ತಾನೆ. ಹಳೆಯ ನಡವಳಿಕೆಯ ಸ್ಥಾನವನ್ನು ಹೊಸ ನಡವಳಿಕೆಯು ಆಕ್ರಮಿಸಿದೆ. ನಮ್ಮ ಬಗ್ಗೆ ಏನು? ಸ್ನೇಹಿತರು ಮತ್ತು ನೆರೆಹೊರೆಯವರು ನಮ್ಮನ್ನು ನೋಡಿದಾಗ ಮತ್ತು ನಾವು ಹಾದುಹೋಗುವ ಪ್ರತಿನಿತ್ಯದ ಅಸಂಖ್ಯಾತ ಪರಿಸ್ಥಿತಿಗಳಲ್ಲಿ ನಾವು ಹೇಗೆ ವರ್ತಿಸುತ್ತೇವೆಂಬುದನ್ನು ಅವರು ಕಾಣುವಾಗ ಹಳೆಯ ಮತ್ತು ಹೊಸದರ ನಡುವೆ ಅವರು ಯಾವುದೇ ಒಂದು ವ್ಯತ್ಯಾಸವನ್ನು ಕಾಣುತ್ತಾರೋ? ನಾವು ಎಂದಿಗೂ ಮನುಷ್ಯರ ಅಭಿಲಾಷೆಗಳಿಗಾಗಿ ಜೀವಿಸದೆ, ದೇವರ ಚಿತ್ತಕ್ಕಾಗಿ ಜೀವಿಸುವವರೆಂಬುದನ್ನು ಅವರು ಕಾಣುತ್ತಾರಾ (4:2)?

ಮತ್ತೆ ಪೇತ್ರನು ಈ ಲೋಕದಲ್ಲಿ ಮನುಷ್ಯನ ಜೀವನದ ದೃಷ್ಟಿಕೋನವನ್ನು ನಮಗೆ ನೆನಪಿಸುತ್ತಾನೆ. "ಎಲ್ಲವುಗಳ ಅಂತ್ಯವು ಹತ್ತಿರವಾಗಿದೆ" (4:7). ಯೇಸು ಕ್ರಿಸ್ತನು ಬೇಗನೆ ತಿರುಗಿ ಬರುತ್ತಾನೆ. ಈ ಸತ್ಯವು ವಿಶ್ವಾಸಿಗಳಾದ ನಮಗೆ ವ್ಯತ್ಯಾಸವನ್ನುಂಟುಮಾಡುತ್ತದೆ. ನಾವು ಹಿಂದೆ ನೋಡುವವರಲ್ಲ. ಇಲ್ಲ, ನಾವು ಒಂದು ಉನ್ನತವಾದ ಭವಿಷ್ಯವನ್ನು ಎದುರಿಸುವವರಾಗಿದ್ದೇವೆ. ಆದರೆ– ನಾವು ಆ ಭವಿಷ್ಯಕ್ಕಾಗಿ ನಮ್ಮ ಕರ್ತನ ಬರುವಿಕೆಗಾಗಿ ಕಾಯುವಾಗ ನಾವು ಭಯಭಕ್ತಿಯಿಂದ ಜೀವಿಸುವವರಾಗಿರಬೇಕು. ಪೇತ್ರನು ತನ್ನ ಓದುಗರನ್ನು ಮತ್ತು ನಮ್ಮನ್ನು– ಈ ಹೊಸ ಮತ್ತು ಭಕ್ತಿಯುತ ಜೀವನದ ಕೆಲವು ಪ್ರಾಮುಖ್ಯ ಸಂಗತಿಗಳನ್ನು ನಮಗೆ ಜ್ಞಾಪಿಸುತ್ತಾನೆ: ಜಿತೇಂದ್ರಿಯರಾಗಿರುವುದು, ಸ್ವಸ್ಥಚಿತ್ತರಾಗಿರುವುದು, ಪ್ರಾರ್ಥನಾಭರಿತರಾಗಿರುವುದು, ಸಹೋದರ ಪ್ರೀತಿ, ಉದಾರವಾದ ಅತಿಥಿ ಸತ್ಕಾರ, ದೇವರು ನಮಗೆ ಕೊಟ್ಟ ಕೃಪಾವರಗಳನ್ನು ನಂಬಿಗಸ್ತಿಕೆಯಿಂದ ಉಪಯೋಗಿಸುವುದು, ದೇವರನ್ನು ಅವಲಂಭಿಸುವುದು ಮತ್ತು ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ಮೂಲಕ ದೇವರಿಗೆ ಸ್ತೋತ್ರವನ್ನುಂಟುಮಾಡುವುದು (4:7–11).



*ದಕ್ಷಿಣ ಭಾರತದಲ್ಲಿ ಅತಿಥಿ ಸತ್ಕಾರವನ್ನು ಮಾಡುವ ಒಂದು ಸಾಮಾನ್ಯ ಬಗೆಯು ಒಬ್ಬ ವ್ಯಕ್ತಿಯನ್ನು ಒಂದು ಉತ್ತಮವಾದ ಭೋಜನಕ್ಕೆ ಆಹ್ವಾನಿಸುವುದಾಗಿದೆ. ಪೇತ್ರನು ಬರೆಯುತ್ತಾನೆ; 'ಗುಣಗುಟ್ಟದೆ ಒಬ್ಬರಿಗೊಬ್ಬರು ಅತಿಥಿ ಸತ್ಕಾರ ಮಾಡಿರಿ' (1 ಪೇತ್ರ 4:9).*

# ಉತ್ತರಗಳು 9: ಬಾಧೆಪಡುತ್ತಿರುವ ಸಭೆ, 4:12–19

## ಶಿಕ್ಷಕರ ಗಮನಕ್ಕೆ

ಸತ್ಯವೇದದಲ್ಲಿ ಕೇವಲ ಮೂರೇ ಬಾರಿ 'ಕ್ರೈಸ್ತನು' ಎಂಬ ಪದವು ಕಂಡುಬರುತ್ತದೆ. ಅವುಗಳಲ್ಲಿ ಒಂದನ್ನು ನಾವುಈ ವಾಕ್ಯಭಾಗದಲ್ಲಿ (ವ.16) ಕಾಣಬಹುದು. ಉಳಿದವುಗಳನ್ನು ಅ.ಕೃ. 11:26ಮತ್ತು 26:28 ರಲ್ಲಿ ಕಾಣಬಹುದು. ಕನ್ನಡದ ಜೆ.ವಿ.ಯು 'ಕ್ರೈಸ್ತನಾಗಿ' ಎಂದು ಹೊಂದಿರುವಲ್ಲಿ, ಕನ್ನಡದ ಎನ್ಐಬಿವಿಯು ಈ ಪದ ಉಪಯೋಗಿಸುವುದನ್ನು ನಿರಾಕರಿಸುವುದನ್ನು ಗಮನಿಸುವಾಗ ಇದು ಆಸಕ್ತಿಕರವಾಗಿದೆ.

ಬಹುತೇಕ ವಿದ್ಯಾರ್ಥಿಗಳಿಗೆ ಪ್ರಶ್ನೆ 4 ಕಠಿಣವಾಗಿ ತೋರಬಹುದು. ಹಾಗಾಗಿ ಅವರಿಗೆ ನಿಮ್ಮ ಸಹಾಯ ಬೇಕಾಗಿದೆ. ಇದರರ್ಥ ತರಗತಿಗೆ ನೀವು ಪೂರ್ಣ ಸಿದ್ಧತೆಯೊಂದಿಗೆ ಬರಬೇಕು.

ಕೆಲವು ವಿದ್ಯಾರ್ಥಿಗಳಿಗೆ ಪ್ರಶ್ನೆ 5 ಗಲಿಬಿಲಿಯನ್ನುಂಟುಮಾಡಬಹುದು. ಇದಕ್ಕೆ ಒಂದು ಕಾರಣ ಪೇತ್ರನು ಗ್ರೀಕ್ ಪಠ್ಯದ ಸೆಪ್ಟುವಾಜಿಂಟ್‌ನಲ್ಲಿನ ಜ್ಞಾನೋಕ್ತಿ 11:31 ನ್ನು ಉಪಯೋಗಿಸುತ್ತಾನೆ ಮತ್ತು ನಾವು ನಮ್ಮ ಸತ್ಯವೇದಗಳಲ್ಲಿ ಕಾಣುವುದಕ್ಕಿಂತ ಸ್ವಲ್ಪ ವಿಭಿನ್ನವಾಗಿದೆ. ಹೆಚ್ಚುವರಿಯಾಗಿ ಪೇತ್ರನ ಪಠ್ಯವು ಒಂದು ಉಪಾಯ/ಯುಕ್ತಿಯನ್ನು ಒಳಗೊಂಡಿದೆ. (ಕನ್ನಡದ ಎರಡೂ ಭಾಷಾಂತರಗಳಲ್ಲಿ 'ಕಷ್ಟವಾದರೆ' ಎಂದಿದೆ). 'ನೀತಿವಂತನೇ ರಕ್ಷಣೆ ಹೊಂದುವುದು ಕಷ್ಟವಾದರೆ' (ವ.18). ಇದರರ್ಥ ರಕ್ಷಿಸಲ್ಪಡಬೇಕಾದರೆ ವಿಶ್ವಾಸಿಗಳು ಶ್ರಮಪಡಬೇಕೆಂದು ಅರ್ಥವಲ್ಲ. ಅದು ದುರ್ಬೋಧನೆಯಾಗುವುದು! ಯಾಕೆ? ಯಾಕೆಂದರೆ– ನಾವೆಲ್ಲರೂ ಕೃಪೆಯಿಂದ ರಕ್ಷಣೆಯನ್ನು ಹೊಂದಿದ್ದೇವೆ ವಿನಃ ಒಳ್ಳೆಯ ಕ್ರಿಯೆಗಳಿಂದಲ್ಲ (''ದೇವರು ನಮ್ಮಲ್ಲಿ ಸುಕೃತ್ಯಗಳನ್ನು ನೋಡಿದ್ದರಿಂದಲ್ಲ, ತನ್ನ ಸಂಕಲ್ಪವನ್ನು ಅನುಸರಿಸಿ ಕೃಪೆಯಿಂದಲೇ ನಮ್ಮನ್ನು ರಕ್ಷಿಸಿ ಪರಿಶುದ್ಧರಾಗುವುದಕ್ಕೆ ಕರೆದನು'' 2 ತಿಮೋಥಿ 1:9–10) ಎಂದು ಹೊಸ ಒಡಂಬಡಿಕೆಯು ಬೋಧಿಸುತ್ತದೆ. ಹಾಗಾಗಿ ಇದು 'ಕಷ್ಟಕರ'ವನ್ನು 'ಕಷ್ಟದಿಂದ' ಅಥವಾ 'ಕಷ್ಟಗಳ ಮೂಲಕ' ಎಂದೂ ಅರ್ಥೈಸಿಕೊಳಬೇಕು. ಆತ್ಮಿಕ ಕೂಟದ 4 ಭಾಗವು ದಕ್ಷಿಣ ಭಾರತದ ಹಿನ್ನಲೆಯಲ್ಲಿ ಸಭೆಗಾಗಿನ ಯಾವ ರೀತಿಯ ಬಾಧೆಯು ಪರಂಪರೆಯಾಗಿರುವುದೆಂಬ ವಿದ್ಯಾರ್ಥಿಗಳ ತಿಳುವಳಿಕೆಯನ್ನು ತೀಕ್ಷ್ಣಗೊಳಿಸುತ್ತದೆ.

## ಉತ್ತರಗಳು

1. ಈ ವಾಕ್ಯಭಾಗದ ಪ್ರಕಾರ– ಕ್ರೈಸ್ತರು ಬಾಧೆಪಡಲು ಸರಿಯಾದ ಮತ್ತು ತಪ್ಪಾದ ಮಾರ್ಗ/ವಿಧಗಳಿವೆ:

   a. ತಾನು ಕ್ರಿಸ್ತನಿಗೆ ಸೇರಿದ್ದರ ಪರಿಣಾಮವಾಗಿ ಒಬ್ಬ ಕ್ರೈಸ್ತನು ಬಾಧೆಪಟ್ಟರೆ ಅದು ಸರಿಯಾದ ವಿಧವಾಗಿದೆ.

   b. ಆದರೆ ಒಬ್ಬ ಕ್ರೈಸ್ತನು ಅನೀತಿ ಮತ್ತು ಪಾಪಮಯವಾದ ನಡವಳಿಕೆಯಿಂದ ಬಾಧೆಪಡುವುದಾದರೆ ಅದು ತಪ್ಪಾದ ವಿಧವಾಗಿದೆ.

2. ಒಬ್ಬ ವಿಶ್ವಾಸಿಯು ತಾನು ಕ್ರಿಸ್ತನಿಗಾಗಿ ಬಾಧೆಪಡುವಾಗ ಹೇಗೆ ಪ್ರತಿಕ್ರಿಯಿಸಬೇಕು? ಈ ಪಕ್ಷದಲ್ಲಿ ಪೇತ್ರನು ಹೇಳುವ ಎಲ್ಲಾ 7 ಅಂಶಗಳು ಇಲ್ಲಿವೆ:

   a. ಆತನು ಆಶ್ಚರ್ಯಪಡಬಾರದು, ಯಾಕೆಂದರೆ – ಕ್ರಿಸ್ತನಿಗಾಗಿ ಬಾಧೆಪಡುವುದು ಈ ಲೋಕದಲ್ಲಿ ನಾವು ಅಪೇಕ್ಷಿಸತಕ್ಕದ್ದಾಗಿದೆ (ವ.12).

   b. ಆತನ ಬಾಧೆಯು ತಾನು ಕ್ರಿಸ್ತನಿಗೆ ಸೇರಿದವನೆಂಬುದನ್ನು ತೋರಿಸುವುದರಿಂದ ಆತನು ಸಂತೋಷಿಸಬೇಕು (ವ.13).

   c. ಕ್ರಿಸ್ತನಲ್ಲಿನ ತನ್ನ ನಂಬಿಕೆಯ ಫಲಿತಾಂಶವಾಗಿ ನಿಂದಿಸಲ್ಪಟ್ಟದ್ದಕ್ಕೆ ತಾನು ಧನ್ಯನೆಂದು ಪರಿಗಣಿಸಬೇಕು (ವ.14).

   d. ಆತನು ಕ್ರೈಸ್ತನಾಗಿ ಬಾಧೆಪಟ್ಟರೆ ಅದಕ್ಕಾಗಿ ನಾಚಿಕೆಪಡಬಾರದು.

   e. ಆತನು ಕ್ರೈಸ್ತನೆಂಬ ಹೆಸರನ್ನು ಹೊಂದಿರುವ ನಿಮಿತ್ತ ದೇವರನ್ನು ಸ್ತುತಿಸಬೇಕು (ವ.16).

   f. ತನ್ನನ್ನು ದೇವರಿಗೆ ಸಮರ್ಪಿಸುವುದರ ಮೂಲಕ ಆತನು ದೇವರ ನಂಬಿಗಸ್ತಿಕೆಯಲ್ಲಿ ಭರವಸವಿಡಬೇಕು (ವ.19).

   g. ಆತನು ಒಳ್ಳೆಯದನ್ನು ಮಾಡುವುದನ್ನು ಮುಂದುವರಿಸಬೇಕು (ವ.19).

3. ವಚನ 13 ರಲ್ಲಿ ನಾವು 2 ಹಂತದ ಹರ್ಷ/ಸಂತೋಷವನ್ನು ಕಾಣುತ್ತೇವೆ.

   a. ಈ ಜಗತ್ತಿನಲ್ಲಿ ನಾವು ಕ್ರಿಸ್ತನಿಗಾಗಿ ಬಾಧೆಪಟ್ಟದ್ದಕ್ಕಾಗಿ ಮೊದಲ ಹಂತದ ಸಂತೋಷವನ್ನು ಅನುಭವಿಸುತ್ತೇವೆ.

   b. ಆತನ ಎರಡನೆಯ ಬರೋಣದಲ್ಲಿ ನಾವು ಇನ್ನೂ ಉನ್ನತ ಮಟ್ಟದ ಸಂತೋಷವನ್ನು ಅನುಭವಿಸುತ್ತೇವೆ.

4. 17 ನೇ ವಚನದ ಮೊದಲ ಅರ್ಧಭಾಗವು 'ನ್ಯಾಯವಿಚಾರಣೆಯ ಸಮಯ ಬಂದಿದೆ, ಆ ವಿಚಾರಣೆಯು ದೇವರ ಮನೆಯಲ್ಲಿಯೇ ಪ್ರಾರಂಭವಾಯಿತಲ್ಲಾ' ಎಂಬ ಹೇಳಿಕೆಯೊಂದಿಗೆ ಪ್ರಾರಂಭವಾಗುತ್ತದೆ. ಇದು ಕ್ರೈಸ್ತರ ಬಾಧೆಗಳನ್ನು ಸೂಚಿಸುತ್ತದೆ. ತನ್ನ ಮೊದಲ ಸೇವಾಪ್ರಯಾಣದ ಸಮಯದಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟ ಸಭೆಗಳಿಗೆ ಉತ್ತೇಜನವನ್ನು ಮಾಡುವಾಗ ಪೌಲನು ಸಹ ಇದೇ ರೀತಿಯ ಹೇಳಿಕೆಯನ್ನು ಮಾಡುತ್ತಾನೆ: 'ನಾವು ಬಹುಸಂಕಟಗಳನ್ನು ತಾಳಿ ದೇವರ ರಾಜ್ಯದೊಳಗೆ ಸೇರಬೇಕಾಗಿದೆ' (ಅ.ಕೃ. 14:22). ನಮಗೆ ಅಂಗೀಕರಿಸಲು ಇದೊಂದು ಕಷ್ಟಕರವಾದ ಸಂಗತಿಯಾಗಿದೆ, ಆದರೆ ಇದರ ಹಿನ್ನಲೆಯನ್ನು ಹಳೆಯ ಒಡಂಬಡಿಕೆಯ ಪ್ರವಾದಿಗಳ ಸಂದೇಶದಲ್ಲಿ ಕಾಣಬಹುದು. ನೋಡಿರಿ, ಯೆಹೆಜ್ಕೇಲ 9:6, ಜೆಕರ್ಯ 13:7–9, ಮತ್ತು ಮಲಾಕಿ 3:1–5. ಈ ಹಳೆ ಒಡಂಬಡಿಕೆಯ ಪ್ರವಾದನೆಗಳ ಹಿನ್ನಲೆಯಲ್ಲಿ ಪೇತ್ರನ ಹೇಳಿಕೆಯನ್ನು ಈ ರೀತಿಯಾಗಿ ನಾನು ವಿವರಿಸಬಲ್ಲೆನು:

a. ಯೆಹೆಜ್ಕೇಲ 9 ನೇ ಅಧ್ಯಾಯವು ಯೆರೂಸಲೇಮಿನಲ್ಲಿನ ವಿಗ್ರಹಾರಾಧಕರ ಮೇಲಿನ ದೇವರ ನ್ಯಾಯತೀರ್ಪಿನ ಕುರಿತಾದ ಪ್ರವಾದನೆಯಾಗಿದೆ. ವಚನ 4 ರಲ್ಲಿ ದೇವರಿಗೆ ನಂಬಿಗಸ್ತರಾಗಿ ನಡೆಯುವವರ ಹಣೆಯ ಮೇಲೆ ಗುರುತು ಹಾಕುವುದನ್ನು ನಾವು ಕಾಣಬಹುದು. ವಿಗ್ರಹಾರಾಧಕರು ಸಂಹಾರವಾದ ಮೇಲೆ ಅವರು 'ರಕ್ಷಿಸಲ್ಪಟ್ಟ ಉಳಿದ ಜನರಾಗಿರುತ್ತಾರೆ'. ಸಂಹಾರವು ದೇವಾಲಯದಲ್ಲಿಯೇ (ದೇವರ ಪವಿತ್ರಾಲಯದಲ್ಲಿ)ಪ್ರಾರಂಭವಾಗುತ್ತದೆ. ಪೇತ್ರನು ತನ್ನ ಓದುಗರಿಗೆ ಯೆಹೆಜ್ಕೇಲನ ಪ್ರವಾದನೆಯಲ್ಲಿನ ಎರಡು ಮುಖ್ಯ ಅಂಶಗಳನ್ನು ನೆನಪಿಸುತ್ತಾನೆಂದುನಾನೆಣಿಸುತ್ತೇನೆ.1. ದೇವರ ನ್ಯಾಯತೀರ್ಪಿನಲ್ಲಿ ದೇವಾಲಯದಲ್ಲಿನ ಜನರು ಸಹ ರಕ್ಷಿಸಲ್ಪಡಲಾರರು.2. ಆದರೆ ದೇವರಿಗೆ ನಂಬಿಗಸ್ತರಾಗಿ ನಡಕೊಂಡವರು ರಕ್ಷಣೆಗಾಗಿ ಗುರುತು ಹಾಕಲ್ಪಟ್ಟವರು ದೇವರ ನ್ಯಾಯತೀರ್ಪಿನ ದಿನದಲ್ಲಿ ಉಳುಕೊಳ್ಳುವರು.

b. ಜೆಕರ್ಯ 13:7–9 ರಲ್ಲಿನ ಪ್ರವಾದನೆಯು "ಕುರುಬನನ್ನು ಹೊಡೆಯುವುದು, ಕುರಿಗಳು ಚದುರಿಸಲ್ಪಡುವವು" ಎಂಬ ಶಿರೋನಾಮೆಯನ್ನು ಹೊಂದಿದೆ. ಇದು ಮೆಸ್ಸೀಯನದು ಮತ್ತು ಭಾಗಶಃವಾಗಿ ಸುವಾರ್ತೆಯಲ್ಲಿ ಯೇಸು ಕ್ರಿಸ್ತನಿಂದ ಉಪಯೋಗಿಸಲ್ಪಟ್ಟಿದೆಯೆಂದು ಹೊಸ ಒಡಂಬಡಿಕೆಯು ಅರ್ಥೈಸಿಕೊಳ್ಳುತ್ತದೆ (ಕುರುಬನು –ಯೇಸು ಕ್ರಿಸ್ತನು ಮತ್ತು ಗೆತ್ಸೆಮನೆಯಲ್ಲಿ ಆತನನ್ನು ಬಿಟ್ಟುಹೋದ ಕುರಿಗಳು – ಆತನ ಶಿಷ್ಯರುಗಳು). ನಾನೆಣಿಸುತ್ತೇನೆ, ಜೆಕರ್ಯನ ಪ್ರವಾದನೆಯ ಮೂಲಕ ಪೇತ್ರನು ತನ್ನ ಓದುಗರಿಗೆ 3 ಮುಖ್ಯ ಅಂಶಗಳನ್ನು ಮನವರಿಕೆಮಾಡುತ್ತಾನೆ. 1. ದೇಶದ/ಸ್ಥಳದ ಮೇಲೆ ಶಿಕ್ಷೆಯು ಬಂದಾಗ ಬಾಧೆಯಿಂದ ದೇವರ ಕುರುಬರ ಕುರಿಗಳು (ಕ್ರೈಸ್ತವಿಶ್ವಾಸಿಗಳು) ಹರಡಿಕೊಳ್ಳುವರು. 2. ವಿಶ್ವಾಸಿಗಳ ಬಾಧೆಗೆ ಒಂದು ಉದ್ದೇಶವಿದೆ; ಇದು ಅವರನ್ನು ಶುದ್ಧೀಕರಿಸುತ್ತದೆ ಮತ್ತು ಪರೀಕ್ಷಿಸುತ್ತದೆ. (ಈ ಮೊದಲು 1:7 ರಲ್ಲಿ ಪೇತ್ರನು ಈ ಅಂಶ ತಿಳಿಸುತ್ತಾನೆ).3. ಕರ್ತನ ನಾಮವನ್ನು ಕೂಗಿಕೊಳ್ಳುವವರು (ವಿಶ್ವಾಸಿಗಳು) ನಾಶವಾಗುವುದಿಲ್ಲ. ಅವರು ದೇವರ ಜನರು ಮತ್ತು ಕರ್ತನು ಅವರ ದೇವರೆಂದು ಅವರು ಅರಿತಿದ್ದಾರೆ.

c. ಮಲಾಕಿ 3:1–5 ಹೊಸ ಒಡಂಬಡಿಕೆಯಲ್ಲಿ ಮೆಸ್ಸೀಯನದು ಎಂದು ತರ್ಜುಮೆ ಮಾಡಲ್ಪಟ್ಟಿದೆ. ಸಂದೇಶಕನು ಯೇಸು ಕ್ರಿಸ್ತನಿಗಾಗಿ ದಾರಿಯನ್ನು ಸಿದ್ಧಮಾಡಿದ ಸ್ನಾನಿಕನಾದ ಯೋಹಾನನಾಗಿದ್ದಾನೆ. ಮಲಾಕಿಯ ಪ್ರವಾದನೆಗೆ ಪೇತ್ರನು ಎರಡು 'ಬರೋಣ'ವನ್ನು ಓದಿರಬಹುದೆಂದು ನಾನೆಣಿಸುತ್ತೇನೆ.ಸ್ನಾನಿಕನಾದ ಯೋಹಾನನಿಂದ ತಿಳಿಸಲ್ಪಟ್ಟ ಯೇಸು ಕ್ರಿಸ್ತನ ಮೊದಲ ಬರೋಣ. ಕರ್ತನ ದಿನ, ದೇವರ ನ್ಯಾಯತೀರ್ಪಿನ ದಿನದೊಂದಿಗೆ ಸಂಭವಿಸಲಿರುವ ಕ್ರಿಸ್ತನ ಎರಡನೇ ಬರೋಣ. ಈ ಎರಡನೇ ಬರೋಣವು 'ಹೆರಿಗೆ' ನೋವಿನೊಂದಿಗೆ ಪ್ರಾರಂಭವಾಗುತ್ತದೆ. (ಮತ್ತಾಯ 24:8 ಮತ್ತು 13:8 ರಲ್ಲಿ ಯೇಸು ಕ್ರಿಸ್ತನ ನುಡಿಗಳೊಂದಿಗೆ ಹೋಲಿಸಿರಿ). ಅದು ವಿಶ್ವಾಸಿಗಳನ್ನು ಶುದ್ಧೀಕರಿಸುವ ಸಮಯವಾಗಿರುತ್ತದೆ. (ಹಿಂದಿನ ಭಾಗದೊಂದಿಗೆ ಹೋಲಿಸಿ). ಖಂಡಿತವಾಗಿಯೂ ವಿಶ್ವಾಸಿಗಳಿಗೆ ಅವರ ಪಾಪಗಳಿಗಾಗಿ ದೇವರ ಶಿಕ್ಷೆಯಂತೆ 'ಹೆರಿಗೆ ಬೇನೆ' ಇರುತ್ತದೆಂದು ಪೇತ್ರನು ಅರ್ಥೈಸಿಕೊಳ್ಳಲಿಲ್ಲ. ಶಿಲುಬೆಯ ಮೇಲೆ ನಮ್ಮ ಪಾಪಗಳನ್ನು ಹೊತ್ತ ಯೇಸು ಕ್ರಿಸ್ತನ ಮೇಲೆ ಈಗಾಗಲೇ ಆ ಶಿಕ್ಷೆ ಬಿದ್ದಿದೆ.

5. ಮುಂದಿನ ವಚನಗಳಲ್ಲಿ (ವ.18), ಪೇತ್ರನು ಹಿಂದಿನ ವಚನಗಳಲ್ಲಿ ಪರಿಚಯಿಸಲ್ಪಟ್ಟ 'ಬಾಧೆ ಪಡುತ್ತಿರುವ ಸಭಾ ಸಿದ್ಧಾಂತ'ವನ್ನು ಬೆಂಬಲಿಸಲು ಜ್ಞಾನೋಕ್ತಿ 11:31 ನ್ನು (ಗ್ರೀಕ್‌ನ ಸೆಪ್ಟುವಾಜಿಂಟ್ ಆವೃತ್ತಿ) ಉಪಯೋಗಿಸುತ್ತಾನೆ. ವಿಶ್ವಾಸಿಗಳು ತಮ್ಮ ಅಂತಿಮ ರಕ್ಷಣೆಯ ದಿನವು ಬರುವುದಕ್ಕಿಂತ ಮುಂಚೆ ಅವರನ್ನು ಬಲಪಡಿಸಲು ಆತನು ಈ ರೀತಿ ಮಾಡುತ್ತಾನೆ. ಅವರು ಖಂಡಿತವಾಗಿಯೂ ರಕ್ಷಿಸಲ್ಪಡುವರು.

6. ವಚನ 19 ರಲ್ಲಿ ಮಾತ್ರ ಹೊಸ ಒಡಂಬಡಿಕೆಯಲ್ಲಿ ದೇವರನ್ನು ಸೃಷ್ಟಿಕರ್ತನು ಎಂದು ಕರೆಯಲಾಗಿದೆ. ಇದು ಈ ಜಗತ್ತಿನ ಬಾಧೆಪಡುತ್ತಿರುವ ವಿಶ್ವಾಸಿಗಳಿಗೆ ಅತೀ ಪ್ರಾಮುಖ್ಯವಾದ ಸಂಗತಿಯಾಗಿದೆ. ಪೇತ್ರನು ತನ್ನ ಓದುಗರಿಗೆ ದೇವರು ಯಾರಾಗಿದ್ದಾನೆಂದು ಜ್ಞಾಪಿಸುತ್ತಾನೆ. ಆತನು ಭೂಮಿ ಮತ್ತು ಆಕಾಶಗಳ ಸೃಷ್ಟಿಕರ್ತನು. ಆತನು ನಮ್ಮ ತಲೆಯ ಮೇಲಿನ ಕೂದಲನ್ನು ಸಹ ಲೆಕ್ಕಮಾಡಿದ್ದಾನೆ. ಆತನು ನಮ್ಮನ್ನು ಕಾಯುತ್ತಾನೆ ಮತ್ತು ನಮಗಾಗಿ ಚಿಂತಿಸುತ್ತಾನೆ. ಇದಕ್ಕೆ ಪ್ರತಿಯಾಗಿ ಆತನು ನಾವು ಕಷ್ಟ ಮತ್ತು ಬಾಧೆಗಳ ಸಮಯದಲ್ಲೂ ಸಹ ನಮ್ಮನ್ನು ಆತನಿಗೆ ಸಮರ್ಪಿಸಬೇಕೆಂದು ಬಯಸುತ್ತಾನೆ. ಈ ಭೂಮಿ ಮೇಲೆ ನಮಗಾಗಿ ಆತನು ಒಂದು ಉದ್ದೇಶವನ್ನು ಇಟ್ಟುಕೊಂಡಿದ್ದಾನೆ ಮತ್ತು ಕಷ್ಟಗಳು ಹಾಗೂ ಬಾಧೆಗಳ ಸಮಯದಲ್ಲಿಯೂ ಸಹ ನಾವು ಆ ಉದ್ದೇಶವನ್ನು ನೆರವೇರಿಸಬೇಕೆಂದು ಆತನು ಅಪೇಕ್ಷಿಸುತ್ತಾನೆ.

7. ತನ್ನ ನಂಬಿಕೆಯ ನಿಮಿತ್ತ ಬಾಧೆಪಡುತ್ತಿರುವ ವಿಶ್ವಾಸಿಗೆ ಈ ರೀತಿಯಲ್ಲಿ 19 ನೇ ವಚನವು ಆದರಣೆ ಮತ್ತು ಸವಾಲು ಇವೆರಡೂ ಆಗಬಲ್ಲದು:

   a. ಆದರಣೆ: ದೇವರು ನಮ್ಮ ಬಗ್ಗೆ ಚಿಂತಿಸುತ್ತಾನೆ.

   b. ಮೊದಲು ಸವಾಲು: ದೇವರು ನಾವು ಬಾಧೆಪಡಲು ಅನುಮತಿಸುತ್ತಾನೆ.

   c. ಎರಡನೇ ಸವಾಲು: ನಾವು ಬಾಧೆಗಳ ನಡುವೆಯೂ ಸಹ ಸೇವೆಯನ್ನು ಹೊತ್ತುಕೊಂಡು ಮುನ್ನಡೆಯಬೇಕೆಂದು ಅಪೇಕ್ಷಿಸುತ್ತಾನೆ.



## ಅವಲೋಕನ

ಪೇತ್ರನ 'ಬಾಧೆಪಡುವ ಸಭೆಯ ಸಿದ್ಧಾಂತ'ವು ಅನೇಕ ವಿಧದಲ್ಲಿ ನಮಗೆ ಸವಾಲನ್ನು ಹಾಕುತ್ತದೆ ಮತ್ತು ಆತನು ಈ ವಾಕ್ಯಭಾಗದಲ್ಲಿ ಹೋರಾಡುವ ಕೆಲವು ಸಂಗತಿಗಳನ್ನು ಸಂಕ್ಷಿಪ್ತವಾಗಿ ವಿಮರ್ಶಿಸಲು ನಾನು ಬಯಸುತ್ತೇನೆ. ನಮ್ಮ ಕ್ರೈಸ್ತ ನಂಬಿಕೆಯ ಫಲಿತಾಂಶವಾಗಿ ನಾವು ಬಾಧೆಪಡುವಾಗ ನಮಗೆ ಪ್ರತಿಕ್ರಿಯಿಸಲು ಅನೇಕ ಮಾರ್ಗಗಳಿವೆ. ನಮ್ಮಲ್ಲಿ ಅನೇಕರು ಈ ಬಗ್ಗೆ– ಪ್ರಾರ್ಥಿಸುವಾಗ ದೇವರ ಬಳಿಯೋ ಮತ್ತು ಸಭೆಯ ಆರಾಧನೆಯ ಸಾಕ್ಷಿಯ ಸಮಯದಲ್ಲಿ ಸಹ ವಿಶ್ವಾಸಿಯು ಮುಂದೆಯೋ ನಾವು ದೂರಬಹುದು. ಕೆಲವರು ನಂಬಿಕೆಯನ್ನು ಬಿಡಬಹುದು, ಅಥವಾ ಕಡೇ ಪಕ್ಷ ಮೌನಿಗಳಾಗುವರು ಮತ್ತು ಕರ್ತನೂ ರಕ್ಷಕನೂ ಎಂದು ನಿರ್ಣಾಯಕವಾಗಿ ಅರಿಕೆ ಮಾಡದಿರಬಹುದು. ನಮ್ಮಲ್ಲಿ ಕೆಲವರು ಮಾತ್ರ ಹರ್ಷಿಸಬಹುದು. ಆದಿ ಯೆರೂಸಲೇಮ್ ಸಭೆಯಲ್ಲಿ 'ಅಪೋಸ್ತಲರು ಹಿರಿಸಭೆಯ ಮುಂದೆ ತರಲ್ಪಟ್ಟರು ಯಾಕೆಂದರೆ ಮೊದಲು ಸುವಾರ್ತೆ ಸಾರಬಾರದೆಂದು ನಿರ್ಬಂಧ ಹೊಂದಿದ್ದರಿಂದ ಅವರು ಅಗ್ರಹಿಸಿದರು. ಕಡೆಯದಾಗಿ ಅವರು ಹೊಡೆಸಿ ಮತ್ತು ಯೇಸು ಕ್ರಿಸ್ತನ ಹೆಸರನ್ನು ಎತ್ತಬಾರದೆಂದು ಅಪ್ಪಣೆಕೊಟ್ಟು ಕಡೆಗೆ ಅವರನ್ನು ಬಿಟ್ಟುಬಿಟ್ಟರು.

ಅಪೊಸ್ತಲರು ತಾವು ಆ ಹೆಸರಿನ ನಿಮಿತ್ತವಾಗಿ ಅವಮಾನ ಪಡುವುದಕ್ಕೆ ಯೋಗ್ಯರೆನಿಕೊಂಡೆವೆಂದು ಸಂತೋಷಿಸುತ್ತಾ ಹಿರಿಸಭೆಯ ಎದುರಿನಿಂದ ಹೊರಟುಹೋಗಿ' (ಅ.ಕೃ. 5:40–41). ಪೇತ್ರನು ಅವರಲ್ಲಿ ಒಬ್ಬ ಅಪೊಸ್ತಲನು ಮತ್ತು ಈಗ 30 ಕ್ಕೂ ಹೆಚ್ಚು ವರ್ಷಗಳ ತರುವಾಯ ಆಸ್ಯ ಸೀಮೆಯಲ್ಲಿನ ಹಿಂಸೆಗೊಳಗಾದ ಮತ್ತು ಬಾಧೆಪಡುತ್ತಿರುವ ಸಭೆಗಳಿಗೆ ಪತ್ರಿಕೆಯನ್ನು ಬರೆಯುತ್ತಿದ್ದಾನೆ. ಸಂಗತಿಗಳ ಮೇಲೆ ಆತನು ತನ್ನ ನಿಲುವನ್ನು ಬದಲಿಸಲಿಲ್ಲ. ಇಲ್ಲ, ಕ್ರಿಸ್ತನ ಬಾಧೆಗಳಲ್ಲಿ ಎಷ್ಟರಮಟ್ಟಿಗೆ ಪಾಲುಗಾರರಾಗಿದ್ದಿರೋ ಅಷ್ಟರಮಟ್ಟಿಗೆ ಸಂತೋಷವುಳ್ಳವರಾಗಿರಿ, ಎಂದು ವಿಶ್ವಾಸಿಗಳನ್ನು ಆತನು ಉತ್ತೇಜಿಸುತ್ತಾನೆ (4:13). ಬಾಧೆಗಳ ನಡುವೆಯೂ ಸಂತೋಷಪಡುವುದಕ್ಕೆ ಒಬ್ಬ ವಿಶ್ವಾಸಿಗಾಗಿ ಸತ್ಯವೇದದ ಮನೋಭಾವನೆ ಏನಾಗಿದೆಯೆಂದರೆ– ಅದು ಸುವಾರ್ತೆಗಾಗಿ ಮತ್ತು ಯೇಸು ಕ್ರಿಸ್ತನಿಗಾಗಿ ಬಾಧೆಪಡುವುದಾಗಿದೆ.

ಆದರೆ ಆತನ ಹೆಸರಿಗಾಗಿ ನಾವು ಬಾಧೆಪಡದಿದ್ದರೆ ಏನಾಗುತ್ತದೆ? ಈ ಸನ್ನಿವೇಶವನ್ನು ಕಲ್ಪಿಸಿಕೊಳ್ಳಿ; ಒಂದು ಕ್ರೈಸ್ತ ವಿಶ್ವಾಸಿಗಳ ಅನ್ಯೋನ್ಯತೆಯು ವಿಗ್ರಹರಾಧಕರು, ಸರ್ಕಾರಿ ಸೇವಕರು, ಪ್ರಭಾವಿ ರಾಜಕಾರಣಿಗಳು, ಹಣಹೂಡಿಕೆದಾರರು, ಗೂಂಡಗಳು, ಕಳ್ಳರು ಮತ್ತು ಕುಡುಕರ ನಡುವೆ ಇರುವುದು, ಮತ್ತು ವಿಶ್ವಾಸಿಗಳು ತಮ್ಮ ನಂಬಿಕೆಗಾಗಿ ಯಾವುದೇ ಬಾಧೆಯನ್ನು ಅನುಭವಿಸುವುದಿಲ್ಲ. ಈ ರೀತಿ ಸನ್ನಿವೇಶ ಸಾಧ್ಯವೋ? ತುಂಬಾ ವಿರಳವಾಗಿ ವಿಶ್ವಾಸಿಗಳು ನಿಜವಾಗಲೂ ಸುವಾರ್ತೆಯನ್ನು ಸಾರಿ ಮತ್ತು ಭಕ್ತಿಯುತ ಜೀವನ ಜೀವಿಸುವುದಾದರೆ. ಹಾಗಾಗಿ ಯಾವಾಗ ಒಂದು ಸಭೆಯು ಈ ಲೋಕದಲ್ಲಿ ಬಾಧೆಯನ್ನು ಅನುಭವಿಸುವುದಿಲ್ಲವೋ, ಏನೋ ತಪ್ಪಾಗಿರಬಹುದೆಂದೆನಿಸುತ್ತದೆ. ಆ ರೀತಿಯ ಸಭೆಯು ತನ್ನನ್ನು ಪರಿಕ್ಷಿಸಿಕೊಂಡು ಸಹಾಯಕ್ಕೆ ದೇವರೆಡೆಗೆ ತಿರುಗಿಕೊಳ್ಳಬೇಕಾಗಿದೆ. ನಿಜವಾಗಲೂ ನಾವು ನಮ್ಮ ಸಮಾಜದಲ್ಲಿ ಯೇಸು ಕ್ರಿಸ್ತನ ಬಗ್ಗೆ ಸುವಾರ್ತೆಯನ್ನು ಸಾರುತ್ತೇವಾ? ನಮ್ಮ ಜೀವನವು ನಿಜವಾಗಲೂ ದೇವರ ರಾಜ್ಯದ ನಿಯಮಗಳಿಗನುಸಾರವಾಗಿದೆಯಾ? ದೇವರೇ, ನಮ್ಮ ಮೇಲೆ ಕರುಣೆ ತೋರಿಸು.

ನಮ್ಮ ಕ್ರೈಸ್ತೀಯ ಹೆಸರಿಗಾಗಿ ನಾವು ನಾಚಿಕೆಪಡುತ್ತೇವಾ? ಅಥವಾ ಯೇಸು ಕ್ರಿಸ್ತನ ಹೆಸರನ್ನು ನಾವು ಹೊಂದಿರುವುದಕ್ಕಾಗಿ ಹೆಮ್ಮೆ ಪಡುತ್ತೇವಾ? ಕ್ರೈಸ್ತ ವಿಶ್ವಾಸಿಗಳ ಜನಸಂಖ್ಯೆಯು ಅತ್ಯಂತ ಕಡಿಮೆಯಿರುವ ಒಂದು ಸಮಾಜದಲ್ಲಿ ಜೀವಿಸುವಾಗ ನಾವು ಜನರೊಂದಿಗೆ ಹೆಚ್ಚು ಬೆರೆಯದಂತಹ ಶೋಧನೆಯಾಗುತ್ತದೆ ಅಥವಾ ಅಂಥಹ ಒಂದು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿರುವುದು ನಾಚಿಕೆಯೆನಿಸುತ್ತದೆ. ಆದರೆ ಕ್ರಿಸ್ತನ ನಾಮವನ್ನು ಹೊಂದಿರುವುದರಿಂದ ನಾವು ಸಂತೋಷಿಸಬೇಕು. ಆ ಹೆಸರನ್ನು ಹೊಂದಿರುವುದರಿಂದ ನಾವು ದೇವರನ್ನು ಕೊಂಡಾಡಬೇಕು (4:16).

ಈ ಭಾಗದ ಕಡೆಯ ವಚನವು (ವ.19), ಬಾಧೆಪಡುವ ವಿಶ್ವಾಸಿಗಳಿಗಾಗಿ ಪೇತ್ರನು ಎರಡು ಅತ್ಯುತ್ತಮ ಸಲಹೆಯ ತುಣುಕುಗಳನ್ನು ಇಟ್ಟುಕೊಂಡಿದ್ದಾನೆ:

1. ಇಂಥ ಕಷ್ಟಕರವಾದ ಪರಿಸ್ಥಿತಿಗಳಲ್ಲಿಯೂ ಸಹ ನಾವು ದೇವರನ್ನು ಆತುಕೊಳ್ಳಬೇಕು. ನಾವು ಇನ್ನ್ಯಾರ ಕಡೆಗೆ ನೋಡಲು ಸಾಧ್ಯ? ದೇವರಿಗಿಂತ ಹೆಚ್ಚಾಗಿ ನಮ್ಮ ಪರಿಸ್ಥಿತಿಗಳನ್ನು ಮತ್ತು ನಮ್ಮ ಅವಶ್ಯಕತೆಗಳನ್ನು ಯಾರು ತಿಳಿದಿದ್ದಾರೆ? ನಮ್ಮ ಬಾಧೆಗಳಲ್ಲಿ ನಮ್ಮನ್ನು ಯಾರು ಹೊರಬಲ್ಲರು? ಬೇರೆ ಯಾರು ನಮ್ಮನ್ನು ಶುದ್ಧೀಕರಿಸಿ ಮತ್ತು ಆತನ ಕೈಗಳಲ್ಲಿ ಇನ್ನೂ ಉಪಯುಕ್ತವಾಗಿ ಮಾಡಬಲ್ಲರು?

2. ಬಾಧೆ ಮತ್ತು ಕಷ್ಟಗಳು ನಮ್ಮನ್ನು ದೇವರ ಯೋಜನೆಯಿಂದ ಹಳಿತಪ್ಪಿಸಲು ನಾವು ಅನುಮತಿಸಬಾರದು. ಒಳ್ಳೆಯದನ್ನು ಮಾಡುವುದನ್ನು ನಾವು ಮುಂದುವರಿಸಬೇಕು. ನಾವು ನಮ್ಮ

ಸೇವೆಯನ್ನು ಮುಂದುವರಿಸಬೇಕು. ನಾವು ಬೋಧಿಸುವುದನ್ನು, ಪ್ರಸಂಗಿಸುವುದನ್ನು ಮತ್ತು ಸೇವೆಮಾಡುವುದನ್ನು ಮುಂದುವರಿಸಬೇಕು. ನಾವು ಸುವಾರ್ತೆಯನ್ನು ಸಾರುತ್ತಲೇ ಇರಬೇಕು.

# ಉತ್ತರಗಳು 10. ದೀನತೆಯನ್ನು ಧರಿಸಿಕೊಳ್ಳಿರಿ, 5:1–11

## ಶಿಕ್ಷಕರ ಗಮನಕ್ಕೆ

ಈ ವಾಕ್ಯಭಾಗದ ರಚನೆಯನ್ನು ಅರ್ಥೈಸಿಕೊಳ್ಳಲು ಇದು ಉತ್ತಮವಾದ ವಿಧ/ಮಾರ್ಗವಾಗಿದೆ.

ವ. 1–4 ಸಭೆಯ ಹಿರಿಯ/ನಾಯಕರಿಗೆ

ವ. 5–6 ಸಭೆಯ ನಾಯಕರಲ್ಲದ ವಿಶ್ವಾಸಿಗಳಿಗೆ (ಅಂದರೆ ವ 5 ರಲ್ಲಿನ "ಯೌವ್ವನಸ್ಥರೇ" ಎಂಬುವುದು ವಚನ 1 ರಲ್ಲಿನ 'ನಿಮ್ಮ ಮಧ್ಯದಲ್ಲಿನ ಹಿರಿಯರು' ಎಂಬುದಕ್ಕೆ ವಿರುದ್ಧವಾಗಿ ಹೋಲಿಸಲಾಗಿದೆ. ಹಾಗಾಗಿ ಇದು ಯೌವ್ವನಸ್ಥರಿಗಷ್ಟೇ ಸೀಮಿತವಾದುದ್ದಲ್ಲ)

ವ 7–11 ಇಡೀ ಸಭೆಗೆ

ಆತ್ಮಿಕ ಕೂಟದ 5 ನೇ ವಿಭಾಗವು (**ಆತ್ಮಿಕ ಕೂಟ** ಎಂಬ ಭಾಗವನ್ನು ನೋಡಿರಿ) ದಕ್ಷಿಣ ಭಾರತದ ಹಿನ್ನಲೆಯಲ್ಲಿ ಸಭೆಯೊಳಗಿನ ಸಂಬಂಧಗಳ ಬಗ್ಗೆ ವಿದ್ಯಾರ್ಥಿಗಳ ತಿಳುವಳಿಕೆಯನ್ನು ಆಳಗೊಳಿಸುತ್ತದೆ.

## ಉತ್ತರಗಳು

1. ಈ ವಾಕ್ಯಭಾಗದ ಮೊದಲ ಭಾಗದಲ್ಲಿ (ವ.1–4), ಪೇತ್ರನು ಸಭೆಯ ನಾಯಕರು ಮತ್ತು ಹಿರಿಯರನ್ನು ಉದ್ದೇಶಿಸುತ್ತಾನೆ. ಆದಿಸಭೆಯಲ್ಲಿ ಸಾಂಘಿಕ/ಸಾಮುದಾಯಕವಾದ ಸಭಾ ನಾಯಕತ್ವವಿತ್ತು ಎಂಬುದನ್ನು ಗಮನದಲ್ಲಿಟ್ಟುಕೊಳ್ಳಿರಿ. ನಮ್ಮ ಆಧುನಿಕ ಏಕವ್ಯಕ್ತಿ ಪ್ರದರ್ಶನದ ಸೇವಕರನ್ನು ಹಳೆ ಒಡಂಬಡಿಕೆಯಲ್ಲಿ ನಾವು ಕಾಣುವುದಿಲ್ಲ.
2. ವಚನ 1–4 ರಲ್ಲಿ ತನ್ನನ್ನು ವರ್ಣಿಸಲು ಪೇತ್ರನು ಮೂರು ಹೇಳಿಕೆಗಳನ್ನು ಉಪಯೋಗಿಸುತ್ತಾನೆ.

    a. ಪೇತ್ರನು ತನ್ನನ್ನು ಜೊತೆ ಹಿರಿಯನು ಎಂದು ಕರೆದುಕೊಳ್ಳುತ್ತಾನೆ. ಆದಿಸಭೆಯಲ್ಲಿ ಆತನೊಬ್ಬ ನಾಯಕ, ಹಿರಿಯನಾಗಿದ್ದನು. 'ಜೊತೆ' ಎಂಬ ಪದವನ್ನು ಸೇರಿಸುವುದರ ಮೂಲಕ ಆತನು ತನ್ನ ದೀನತೆಯನ್ನು ತೋರ್ಪಡಿಸಿಕೊಳ್ಳುತ್ತಾನೆ. ಆತನು ಕೇವಲ ತನ್ನ ಓದುಗರ ನಾಯಕತ್ವದ ಸ್ಥಾನವನ್ನು ಹಂಚಿಕೊಳುವುದಲ್ಲದೆ ತನ್ನನ್ನು ಅವರ ಮಟ್ಟದಲ್ಲಿ ಇರಿಸಿಕೊಳ್ಳುತ್ತಾನೆ.

    b. ಪೇತ್ರನು ತನ್ನನ್ನು ಕ್ರಿಸ್ತನ ಬಾಧೆಗಳನ್ನು ಕಣ್ಣಾರೆ ಕಂಡವನೆಂದು ಕರೆದುಕೊಳ್ಳುತ್ತಾನೆ. ಇದು ಆತನು ಕೇವಲ ಹಿರಿಯನಾಗಿರದೆ, ಅಪೋಸ್ತಲನೂ ಆಗಿದ್ದನೆಂದು ತೋರಿಸುತ್ತದೆ. 'ಕರ್ತನ ಅಪೋಸ್ತಲ'ನ ಅರ್ಹತೆಯನ್ನು ಆತನು ಪೂರೈಸುತ್ತಾನೆ. ಈತನು ಕ್ರಿಸ್ತನೊಂದಿಗಿದ್ದನು ಮತ್ತು ಆತನ ಪುನರುತ್ಥಾನವನ್ನು ಕಣ್ಣಾರೆ ಕಂಡು ಸಾಕ್ಷಿಕರಿಸಿದನು.

    c. ಇನ್ನು ಮುಂದೆ ಪ್ರತ್ಯಕ್ಷವಾಗಲಿರುವ ಪ್ರಭಾವದಲ್ಲಿ ಪಾಲುಗಾರನು ಎಂದು ಕಡೆಯದಾಗಿ ಪೇತ್ರನು ಸೇರಿಸುತ್ತಾನೆ. ಹಾಗಾಗಿ ವಿಶ್ವ ಸೀಮೆಯಲ್ಲಿನ ಸಭೆಯ ಹಿರಿಯರೊಂದಿಗೆ ಆತನು ಹೊಂದಿರುವ, ಮುಂದಿನ ನಿರೀಕ್ಷೆಯ ಬಗ್ಗೆ ಸೂಚಿಸುತ್ತಾನೆ. ಅವರೊಂದಿಗೆ ಆತನು ಕ್ರಿಸ್ತನ ಬರೋಣದ ಪ್ರಭಾವದಲ್ಲಿ ಪಾಲುಗಾರನಾಗುವನು.

3. ಆತನು ಬರೆಯುವಾಗ ನಾಯಕರಿಗೆ ಕುರುಬರಾಗಿರಿ ಎಂಬ ಹಳೆ ಒಡಂಬಡಿಕೆಯ ರೂಪಾಲಂಕಾರವನ್ನು ಬಳಸುತ್ತಾನೆ. (ವ.2 ಕನ್ನಡದ ಎರಡು ಭಾಷಾಂತರಗಳಲ್ಲಿ ಸಹ 'ಕುರುಬರಾಗಿರಿ' ಎಂಬುದಾಗಿ ಇಲ್ಲ, ಆದರೆ 'ಕಾಯಿರಿ', 'ಕಾಳಜಿವಹಿಸಿರಿ' ಎಂದಿದೆ). ವಚನ 2 ರಲ್ಲಿ ಪೇತ್ರನು ಕುರುಬ ಮತ್ತು ಅವರ ಮಂದೆಯ ನಡುವಿನ ಸಂಬಂಧದ ಬಗ್ಗೆ ಎರಡು ಸಂಗತಿಗಳನ್ನು ಹೇಳುತ್ತಾನೆ:

   a. ಮಂದೆಯು (ಸಭೆಯ ಸದಸ್ಯರು) ಕುರುಬರ ಕಾಳಜಿಯಲ್ಲಿರುತ್ತದೆ.

   b. ಕುರುಬರು (ಸಭೆಯ ನಾಯಕರುಗಳು) ಮಂದೆ (ವಿಶ್ವಾಸಿಗಳ) ಯನ್ನುಕಾಯುವವರಾಗಿ ಕಾರ್ಯ ನಿರ್ವಹಿಸುವರು.

4. ಸಭೆಯ ನಾಯಕರು ಹೇಗಿರಬೇಕೆಂದು (ವ.2–3) ಪೇತ್ರನು ಕೆಳಕಂಡಂತೆ ವಿವರಿಸುತ್ತಾನೆ. (ನೀವು ಅದನ್ನು ವಿಭಿನ್ನವಾಗಿ ಮಾಡಬಹುದು).

| **ಅವರು ಹೀಗಿರಬೇಕು** | **ಅವರು ಹೀಗಿರಬಾರದು** |
|---|---|
| ಸಿದ್ಧಮನಸ್ಸಿನಿಂದ ಮೇಲ್ವಿಚಾರಣೆಮಾಡಬೇಕು | ಅವರು ಹಣದಾಸೆಯುಳ್ಳವರಗಿರಬಾರದು |
| ಅವರುಇಷ್ಟಪೂರ್ವಕವಾಗಿ ಮೇಲ್ವಿಚಾರಣೆ ಮಾಡಬೇಕು | ಅವರು ವಿಶ್ವಾಸಿಗಳ ಮೇಲೆ ದೊರೆತನ ಮಾಡಬಾರದು |
| ಅವರು ವಿಶ್ವಾಸಿಗಳಿಗೆ ಮಾದರಿಯಾಗಿರಬೇಕು | ಬಲತ್ಕಾರದಿಂದ ಮೇಲ್ವಿಚಾರಣೆಮಾಡಬಾರದು |
| ಕುರುಬನು ತನ್ನ ಮಂದೆಯನ್ನು ಕಾಯುವಂತೆ ಅವರು ಕಾಯಬೇಕು | |
| ಮೇಲ್ವಿಚಾರಣೆ ಮಾಡುವವರಾಗಿರಬೇಕು | |
| ಅವರು ದೇವರ ಚಿತ್ತದ ಪ್ರಕಾರ ಕಾಯುವವರಾಗಿರಬೇಕು | |

5. ವ. 2–3 ರಲ್ಲಿ ಪೇತ್ರನ ಮನೋಭಾವನೆಯನ್ನು ಈ ರೀತಿಯಾಗಿ ವಿವರಿಸಬಹುದು. (ನೀವು ವಿಭಿನ್ನವಾಗಿ ಮಾಡಿರಬಹುದು):

   a. ಮೇಲ್ವಿಚಾರಕನು: ಗ್ರೀಕ್ ಪಠ್ಯವು 'ಕಾಯುವವನಾಗಿರುವುದು' ಎಂಬ ಕ್ರಿಯಾಪದವನ್ನು ಹೊಂದಿದೆ. ಇದು– ವಿಚಾರಣೆಮಾಡುವುದು, ಮೇಲ್ವಿಚಾರಣೆಮಾಡುವುದು, ನೋಡಿಕೊಳ್ಳುವುದು, ಭೇಟಿಮಾಡುವುದು (ಉದಾ: ಅನಾರೋಗಿಯನ್ನು) ಎಂಬ ವಿವಿಧ

ಅರ್ಥಗಳನ್ನು ಹೊಂದಿದೆ. ಯೇಸು ಕ್ರಿಸ್ತನು ಮತ್ತಾಯ 25:36 ರಲ್ಲಿ 'ನಾನು ರೋಗದಲ್ಲಿ ಬಿದ್ದಿದ್ದೆನು, ನನ್ನನ್ನು ಆರೈಕೆಮಾಡುವುದಕ್ಕೆ ಬಂದಿರಿ' ಎಂಬ ಪದವು ಈ ಪದದಿಂದಲೇ ಬಂದಿದೆ.

b. ಸಿದ್ಧಮನಸ್ಸು: ಗ್ರೀಕ್ ಪಠ್ಯವು 'ಸಿದ್ಧಮನಸ್ಸಿನಿಂದ' ಎಂಬ ಕ್ರಿಯಾವಿಶೇಷಣವನ್ನು ಹೊಂದಿದೆ. ಇದರರ್ಥ– ನೀವು ಇದನ್ನು ಮಾಡಲು ಬಯಸುವುದರಿಂದ ಮಾಡುವಿರೋ ವಿನಃ ನೀವು ಇದನ್ನು ಮಾಡಲು ಒತ್ತಾಯಿಸಿದ್ಧರಿಂದ ಮಾಡುವುದಿಲ್ಲ.

c. ತವಕ: ಗ್ರೀಕ್ ಪಠ್ಯವು 'ಆತುರದಿಂದ' ಎಂಬ ಕ್ರಿಯಾವಿಶೇಷಣವನ್ನು ಹೊಂದಿದೆ. ಇದರರ್ಥ– ನೀವು ಏನನ್ನಾದರೂ ಮಾಡಲು ಬಯಸುವುದು ಮಾತ್ರವಲ್ಲಅದನ್ನು ಮಾಡಲು ತವಕಪಡುವಿರಿ. ನೀವು ಅದನ್ನು ತಡಮಾಡದೆ ಮಾಡುವಿರಿ ಮತ್ತು ನೀವು ಅದನ್ನು ತುಂಬಾ ಉತ್ಸಾಹದಿಂದ ಮಾಡುವಿರಿ.

d. ಅತ್ಯಾಶೆ: ಅತ್ಯಾಶೆಯುಳ್ಳವರಾಗಿರುವುದೆಂದರೆ– ನೀವು ಏನೇ ಮಾಡಿದರೂ ಅದರಿಂದ ಲಾಭಕ್ಕಾಗಿ ಸ್ವಾರ್ಥವಾದ ಆಶೆ ಇಟ್ಟುಕೊಳ್ಳುವುದು (ಸಾಮಾನ್ಯವಾಗಿ ಆರ್ಥಿಕವಾಗಿ) ಇತಿಹಾಸದುದ್ದಕ್ಕೂ ಅಸಂಖ್ಯಾತ ಸಭಾನಾಯಕರ ಪತನಕ್ಕೆ ಇದೇ ಕಾರಣವಾಗಿದೆ.

e. ದೊರೆತನ ಮಾಡುವುದು: ಗ್ರೀಕ್ ಪದವು– 'ಒಬ್ಬರ ಸ್ವಂತ ಲಾಭಕ್ಕಾಗಿ ಇತರ ಜನರ ಮೇಲೆ ಅಧಿಕಾರ ಸಾಧಿಸುವುದು' ಎಂಬ ಅರ್ಥವನ್ನು ಕೊಡುತ್ತದೆ. ಹಾಗಾಗಿ ಒಂದು ಸಭೆಯನ್ನು ದೊರೆತನಮಾಡುವ ಸಭಾನಾಯಕನು ತನ್ನ ನಾಯಕತ್ವದಿಂದ ಕೆಲವು ವೈಯಕ್ತಿಕ ಲಾಭವನ್ನು ಅಪೇಕ್ಷಿಸುತ್ತಾನೆ.

f. ಮಾದರಿಯಾಗಿರ್ರಿ: ಇದರರ್ಥ ಸಭೆಯ ಸದಸ್ಯರುಗಳು ಮೆಚ್ಚುವ ಮತ್ತು ಅನುಕರಿಸಲು ಬಯಸುವ ಗುಣಗಳನ್ನು ಹೊಂದಿರುವದು ಮತ್ತು ವಿಶ್ವಾಸಿಗಳಿಗೆ ಮಾದರಿಯಾಗಿರುವುದು.

6. 5 ನೇ ವಚನವನ್ನು ಪೇತ್ರನು 'ಅದೇ ರೀತಿಯಾಗಿ' ಎಂಬ ಹೇಳಿಕೆಯೊಂದಿಗೆ ಪ್ರಾರಂಭಿಸುತ್ತಾನೆ. ಅಲ್ಲಿಂದ ಪೇತ್ರನು ಸಮರ್ಪಣೆ ಮತ್ತು ದೀನತೆಯು ಸಭೆಯಲ್ಲಿ ಎಲ್ಲಾ ವಿಶ್ವಾಸಿಗಳ ಗುಣಲಕ್ಷಣವಾಗಬೇಕೆಂದು ಹೇಳುತ್ತಾನೆ. ಇದು ಕೇವಲ ಯೌವ್ವನಸ್ಥರು ಮಾತ್ರ (ಅಥವಾ ಸಾಮಾನ್ಯವಾಗಿ ಸಭೆಯ ಸದಸ್ಯರು) ಹಿರಿಯರ ಎದುರು ಅಧೀನರಾಗಿ ಮತ್ತು ದೀನರಾಗಿ ನಡೆದುಕೊಳ್ಳುವುದಲ್ಲ. ಸಭಾ ಹಿರಿಯರ 'ಕುರುಬರ ಸೇವೆ'ಯು 'ಕುರಿಗಳ' ಅಗತ್ಯತೆಗಳಿಗೆ ಅಧೀನರಾಗಿರುವುದನ್ನು ಒಳಗೊಂಡಿರುತ್ತದೆ. ಸಭೆಯ ನಾಯಕತ್ವವು– ಸಭೆಯೆಂಬ ಇಡೀ ದೇಹಕ್ಕೆ ದೀನತೆ ಮತ್ತು ಅಧೀನರಾಗಿರುವುದರಲ್ಲಿ ವ್ಯಕ್ತಗೊಳ್ಳಲೇಬೇಕು.

7. ಅದೇ ವಚನದಲ್ಲಿ (ವ.5) ಪೇತ್ರನು ದೀನತೆಯು ಯಾಕೆ ಪ್ರಾಮುಖ್ಯವಾದದ್ದೆಂಬುದನ್ನು ವಿವರಿಸುತ್ತಾನೆ. ತನ್ನ ಹೇಳಿಕೆಯನ್ನು ಬೆಂಬಲಿಸಲು ಆತನು ಜ್ಞಾನೋಕ್ತಿ 3:34 ನ್ನು ಉಪಯೋಗಿಸುತ್ತಾನೆ. ದೇವರು ಗರ್ವಿಷ್ಟರನ್ನು (ಅಹಾಂಕಾರಿಗಳನ್ನು) ವಿರೋಧಿಸುತ್ತಾನೆ (ಇದರರ್ಥ ಆತನು ಎದುರಿಸುತ್ತಾನೆ), ಆದರೆ ದೀನರಿಗೆ ತನ್ನ ಕೃಪೆಯನ್ನು (ಕೃಪಾವಂತನಾಗಿದ್ದಾನೆ) ಅನುಗ್ರಹಿಸುತ್ತಾನೆ. ಹಾಗಾಗಿ ದೇವರ ರಾಜ್ಯದಲ್ಲಿ ದೀನತೆಯು ಒಂದು ಮೂಲಭೂತ/ಪ್ರಾಮುಖ್ಯ ಸ್ವಭಾವವಾಗಿದೆ. ಯೇಸು ಕ್ರಿಸ್ತನ ಕುರಿತಾಗಿ ಪೌಲನ ವರ್ಣನೆಯನ್ನು

ಹೋಲಿಸಿರಿ: "ತನ್ನನ್ನು ತಗ್ಗಿಸಿಕೊಂಡು ಮರಣವನ್ನು ಅಂದರೆ ಶಿಲುಬೆಯ ಮರಣವನ್ನಾದರೂ ಹೊಂದುವಷ್ಟು ವಿಧೇಯನಾದನು" (ಫಿಲಿಪ್ಪಿ 2:8).

8. ಮುಂದಿನ ವಚನದಲ್ಲಿ (6) ಪೇತ್ರನು– ಕ್ರೈಸ್ತೀಯ ದೀನತೆಯ ಫಲಿತಾಂಶ ಅಂದರೆ ದೇವರು ವಿಶ್ವಾಸಿಗಳನ್ನು ತಕ್ಕ ಸಮಯದಲ್ಲಿ ಮೇಲಕ್ಕೆತ್ತುವನು ಎಂದು ತಿಳಿಸುತ್ತಾನೆ. ಹಾಗಾಗಿ ತಮ್ಮ ಭವಿಷ್ಯದ ಉನ್ನತಿಯು ನಮ್ಮ ಪ್ರಸ್ತುತ ದೀನತೆಯ ಮೇಲೆ ಆತುಕೊಂಡಿದೆ. ನಾನೆಣಿಸುತ್ತೇನೆ ಪೇತ್ರನು ಕಡೆಯ ದಿನಗಳ ಬಗ್ಗೆ ಸೂಚಿಸುತ್ತಾನೆಂದು (ನ್ಯಾಯತೀರ್ಪಿನ ದಿನ, ಯೇಸು ಕ್ರಿಸ್ತನ ಎರಡನೇ ಬರೋಣ), ಆಗ ದೇವರಲ್ಲಿ ಯಾರು ತಮ್ಮನ್ನು ತಗ್ಗಿಸಿಕೊಂಡು, ಯೇಸು ಕ್ರಿಸ್ತನ ಮೂಲಕ ರಕ್ಷಣೆಯನ್ನು ಅಂಗೀಕರಿಸಿದರೆ ಅವರು ಮಾತ್ರ ದೃಢವಾಗಿ ನಿಲ್ಲುವರು. ನಿಶ್ಚಯವಾಗಿ ತಗ್ಗಿಸಿಕೊಳ್ಳುವವರು ಮಾತ್ರ ಯಜ್ಞದ ಕುರಿಯಾದಾತನ ವಿವಾಹದ ಔತಣದಲ್ಲಿ ಪಾಲುಗಾರರಾಗುವರು (ಪ್ರಕಟನೆ 19:9) ಮತ್ತು ಆತನೊಂದಿಗೆ ಯುಗಯುಗಾಂತರಗಳಲ್ಲಿಯೂ ಆಳುವರು (ಪ್ರಕಟನೆ 22:5).

9. ದೇವರು ನಮಗಾಗಿ ಚಿಂತಿಸುತ್ತಾನೆ, ಅ ನಿಮಿತ್ತ ನಾವು ನಮ್ಮ ಚಿಂತೆಯನ್ನೆಲ್ಲಾ ಆತನ ಮೇಲೆ ಹಾಕಬಹುದೆಂದು ಪೇತ್ರನು ಹೇಳುತ್ತಾನೆ (ವ.7). ಪೇತ್ರನ ಮಾತುಗಳು ನಿಜವೆಂಬುವುದಕ್ಕೆ 3 ಕಾರಣಗಳಿವೆ:

   a. ನಮ್ಮನ್ನು ರಕ್ಷಿಸುವುದಕ್ಕಾಗಿ ತನ್ನ ಮಗನನ್ನು ಕಳುಹಿಸುವುದರ ಮೂಲಕ ದೇವರು ಬಿದ್ದುಹೋದ ಮಾನವ ಜನಾಂಗಕ್ಕೆ ತನ್ನ ಚಿಂತೆ ಮತ್ತು ಕಾಳಜಿಯನ್ನು ದೇವರು ಪ್ರಕಟಿಸಿದ್ದಾನೆ. ಇದೊಂದು ಐತಿಹಾಸಿಕ ಸತ್ಯವಾಗಿದೆ. ಆದರೆ ಇದು ಎಲ್ಲಾ ವಿಶ್ವಾಸಿಗಳು ವ್ಯೆಯಕ್ತಿಕವಾಗಿ ಅನುಭವಿಸುವುದಾಗಿದೆ.

   b. ಸತ್ಯವೇದದ ಪುಟಗಳನ್ನು ಅಧ್ಯಯನ ಮಾಡುವಾಗ ದೇವರು ತನ್ನ ಜನರಿಗಾಗಿ ತಲತಲಾಂತರಗಳಿಂದ ಹೇಗೆ ಚಿಂತಿಸಿದ್ದಾನೆ/ಕಾಳಜಿವಹಿಸಿದ್ದಾನೆಂದು ನಾವು ಕಾಣಬಹುದು.

   c. ವಿಶ್ವಾಸಿಗಳಾದ ನಾವು ದೈನಂದಿನ ಒದಗಿಸುವಿಕೆಯ ಮೂಲಕ ನಮಗಾಗಿ ಆತನ ಕಾಳಜಿ/ಚಿಂತೆಯನ್ನು ನಾವು ಅನುಭವಿಸಿದ್ದೇವೆ. ಉದಾ: ಕುಟುಂಬ, ಆಹಾರ, ಮನೆ, ಆರೋಗ್ಯ, ಸ್ನೇಹಿತರು ಇತ್ಯಾದಿ.

10. ವಿಶ್ವಾಸಿಗಳಿಗಾಗಿ ನಾವು ಸ್ವಸ್ಥಚಿತ್ತರಾಗಿರಬೇಕು ಮತ್ತು ಎಚ್ಚರವಾಗಿರಬೇಕು (ವ.8). ಯಾಕೆಂದರೆ, ಸೈತಾನನು ನಮ್ಮ ವೈರಿಯಾಗಿದ್ದು ನಿರಂತರವಾಗಿ ದೇವರ ಮಕ್ಕಳ ಮೇಲೆ ದಾಳಿ ಮಾಡಲು ಪ್ರಯತ್ನಿಸುತ್ತಿರುತ್ತಾನೆ. ಈ ವಚನದಲ್ಲಿ ಪೇತ್ರನು ಒಂದು ರೂಪಾಲಂಕಾರವನ್ನು (ಸೈತಾನನು ಹುಡುಕುತ್ತಾ ತಿರುಗುತ್ತಾನೆ), ನಂತರ ಉಪಮೇಯವನ್ನು (ಗರ್ಜಿಸುವ ಸಿಂಹದಂತೆ) ಮತ್ತು ಕೊನೆಯದಾಗಿ ರೂಪಾಲಂಕರವನ್ನು (ನುಂಗಲಿ ಎಂದು) ಬಳಸಿ, ತಮ್ಮ ಪರಿಸ್ಥಿತಿಯ ಗಂಭೀರತೆಯನ್ನು ಅರಿತುಕೊಳ್ಳಲೆಂದು ವಿಶ್ವಾಸಿಗಳಿಗೆ ಸಹಾಯಿಸುತ್ತಾನೆ. ಹಾಗಾಗಿ ನಾವು ಸ್ವಸ್ಥಚಿತ್ತರಾಗಿ ಮತ್ತು ಎಚ್ಚರವಾಗಿರುವ ಒಂದು ದೊಡ್ಡ ಅವಶ್ಯಕತೆಯಿದೆ.

11. ನಮ್ಮ ದೈನಂದಿನ ಜೀವನದಲ್ಲಿ, ವಿಶ್ವಾಸಿಗಳಿಗೆ ಸೈತಾನನನ್ನು ಎದುರಿಸಲು ಯಾಕೆ ಸಾಧ್ಯವೆಂಬುದಕ್ಕೆ ಪೇತ್ರನು ಮೂರು ಕಾರಣಗಳನ್ನು ಕೊಡುತ್ತಾನೆ (ವ.9:10). ಅವೆಂದರೆ:–

a. ನಮ್ಮ ನಂಬಿಕೆ (ವ.9): ನಂಬಿಕೆಯಲ್ಲಿ ದೃಢವಾಗಿ ನಿಲ್ಲಬೇಕೆಂದು ಪೇತ್ರನು ಹೇಳುತ್ತಾನೆ. ಸೈತಾನನ ಎದುರಾಗಿ ಇದು ನಮಗೆ ಹೇಗೆ ಸಹಾಯಕವಾಗಬಲ್ಲದು? ಇದು ನಮಗೆ ಸಹಾಯಕವಾಗುತ್ತದೆ. ಯಾಕೆಂದರೆ– ಸೈತಾನನ ಶಕ್ತಿಯು ಸೀಮಿತವಾದದ್ದೆಂದು ನಮ್ಮ ನಂಬಿಕೆಯು ಹೇಳುತ್ತದೆ. ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಸತ್ತಾಗ ಸೈತಾನನ ತಲೆಯು ಜಜ್ಜಲ್ಪಟ್ಟಿದೆಯೆಂದು ನಮ್ಮ ನಂಬಿಕೆಯು ಹೇಳುತ್ತದೆ (ಹೋಲಿಸಿ. ಆದಿ 3:15).

b. ಈ ಲೋಕದಲ್ಲಿ ಕ್ರಿಸ್ತೀಯ ಜೀವನದ ತಿಳುವಳಿಕೆ (ವ.9): ನಾವೊಬ್ಬರೇ ಬಾಧೆಪಡುವವರಲ್ಲ. ಇತಿಹಾಸದುದ್ದಕ್ಕೂ ಮತ್ತು ಜಗತ್ತಿನಾದ್ಯಂತ ವಿಶ್ವಾಸಿಗಳು ಬಾಧೆ ಮತ್ತು ವಿರೋಧತೆಯನ್ನು ಅನುಭವಿಸಿದ್ದಾರೆ. ಆದರೆ ನಮ್ಮ ಬಾಧೆಗೆ ಒಂದು ಮಿತಿಯಿದೆಯೆಂದು ನಮಗೆ ತಿಳಿದಿದೆ. ಬೇಗನೇ ಯೇಸುವು ಬರುತ್ತಾನೆ ಮತ್ತು ನಾವು ಯುಗಯುಗಾಂತರಕ್ಕೂ ಆತನೊಂದಿಗೆ ಇರುವೆವು.

c. ದೇವರ ನಂಬಿಗಸ್ತಿಕೆ (ವ.10): ದೇವರು ಯಾವಾಗಲೂ ನಮ್ಮೊಂದಿಗೆ ಇರುತ್ತಾನೆ (ಆತನ ಪವಿತ್ರಾತ್ಮನ ಮೂಲಕ). ಆತನು ನಮ್ಮನ್ನು ಬಾಧೆಗಳ ಮೂಲಕ ಕೊಂಡೊಯ್ದು ಮತ್ತು ಕ್ರಿಸ್ತನಲ್ಲಿ ಆತನ ನಿತ್ಯಪ್ರಭಾವಕ್ಕೆ ತರುತ್ತಾನೆ.

12. ತಾನು ಕೃಪೆಯ ದೇವರನ್ನು (ವ.10) ಯೋಚಿಸುವಾಗ, ಪೇತ್ರನು ಒಂದು ಆರಾಧನಾ ಭಾವದೊಂದಿಗೆ ಈ ವಾಕ್ಯಭಾಗವನ್ನು ಮುಗಿಸುತ್ತಾನೆ: "ಆತನಿಗೆ ಅಧಿಪತ್ಯವು ಯುಗ ಯುಗಾಂತರಗಳಲ್ಲಿಯೂ ಇರಲಿ ಆಮೇನ್" (ವ.11). ಹೀಗೆ ಮಾಡುವುದರಿಂದ ನಾವು ಎದುರಿಸುವ ಪ್ರತಿಯೊಂದು ಪರಿಸ್ಥಿತಿಗಳಲ್ಲಿ ನಮ್ಮ ಹೃದಯವು ಸ್ತುತಿ ಮತ್ತು ಆರಾಧನೆಗಳಿಂದ ತುಂಬಿಕೊಳ್ಳಲು ಅನುಮತಿಸುವುದಕ್ಕೆ ಒಂದು ಮೂಲಭೂತವಾದ ಕ್ರೈಸ್ತೀಯ ಸ್ವಭಾವವನ್ನು ಆತನು ನಮಗೆ ಕಲಿಸುತ್ತಾನೆ. ಪೌಲನು ಇದನ್ನು ಈ ರೀತಿ ಹೇಳುತ್ತಾನೆ, "ಎಲ್ಲದರಲ್ಲಿಯೂ ಕೃತಾಜ್ಞತಾ ಸ್ತುತಿಮಾಡಿರಿ, ಇದೇ ನಿಮ್ಮ ವಿಷಯವಾಗಿ ಕ್ರಿಸ್ತಯೇಸುವಿನಲ್ಲಿ ತೋರಿಬಂದ ದೇವರ ಚಿತ್ತ" (1 ಥೆಸ 5:18).



## ಅವಲೋಕನ

ಗರ್ವವು ತೀರ ಕೆಟ್ಟದಾದ ಒಂದು ಪಾಪವಾಗಿದೆ. ಗರ್ವಿಷ್ಟ ವ್ಯಕ್ತಿಯು ವಿಗ್ರಹಾರಾಧಕನಾಗಿದ್ದಾನೆ. ಆತನು ದೇವರ ಬದಲಾಗಿ ತಮ್ಮನ್ನೆ ತನ್ನ ಜೀವನದ ಕೇಂದ್ರದಲ್ಲಿರಿಸಿಕೊಳ್ಳುತ್ತಾನೆ. ಗರ್ವದ ವಿರುದ್ಧ ಪದವು– ದೀನತೆಯಾಗಿದೆ– ಇದು ಒಬ್ಬ ಯೇಸು ಕ್ರಿಸ್ತನ ಹಿಂಬಾಲಕನ ಅತೀ ಪ್ರಾಮುಖ್ಯವಾದ ಒಂದು ಗುಣಸ್ವಭಾವವಾಗಿದೆ. ಯಾಕೋಬನು ಜ್ಞಾನೋಕ್ತಿ 3:34 ನ್ನು ಉಪಯೋಗಿಸಿ ಹೇಳುತ್ತಾನೆ– "ದೇವರು ಅಹಂಕಾರಿಗಳನ್ನು ಎದುರಿಸುತ್ತಾನೆ, ಆದರೆ ದೀನರಿಗಾದರೋ ತನ್ನ ಕೃಪೆಯನ್ನು ಅನುಗ್ರಹಿಸುವನು" (ಯಾಕೋಬ 4:6). ಖಂಡಿತವಾಗಿ ತನ್ನನ್ನು ತಗ್ಗಿಸಿಕೊಂಡು ಮತ್ತು ಮರಣವನ್ನು ಹೊಂದುವಷ್ಟು ವಿಧೇಯನಾದ (ಫಿಲಿಪ್ಪಿ 2:8) ಯೇಸು ಕ್ರಿಸ್ತನೇ ದೀನತೆಗೆ ಪರಮೋಚ್ಛ ಮಾದರಿಯಾಗಿದ್ದಾನೆ. ವಿಶ್ವಾಸಿಯು ಗರ್ವಿ/ಅಹಂಕಾರಿಯೆನಿಸುವುದು ದುಃಖಕರ ಸಂಗತಿ, ಆದರೆ ಒಬ್ಬ ಅಹಂಕಾರಿ ಸಭಾನಾಯಕನು ಇಡೀ ಸಭೆಗೆ ಆಪತ್ತನ್ನು ತರುವವನಾಗಿದ್ದಾನೆ. ಪೇತ್ರನು ತನ್ನ ಓದುಗರನ್ನು "ದೀನ ಮನಸ್ಸೆಂಬ ವಸ್ತ್ರದಿಂದ ಸೊಂಟ ಕಟ್ಟಿಕೊಂಡು ಒಬ್ಬರಿಗೊಬ್ಬರು ಸೇವೆಮಾಡಿರಿ"

(1 ಪೇತ್ರ 5:5–6) ಎಂದು ಉತ್ತೇಜಿಸುತ್ತಾನೆ. ಕೇವಲ ಯೌವ್ವನಸ್ಥರಷ್ಟೇ ದೀನರಾಗಿರುವುದಿಲ್ಲ, ಸಭೆಯ ನಾಯಕರುಗಳೂ ಸಹ ದೀನರಾಗಿರಬೇಕು.

ಆಳವಾಗಿ ವಿಭಾಗಿಸಲ್ಪಟ್ಟ ತನ್ನ ಸಾಮಾಜಿಕ ರಚನೆಯೊಂದಿಗೆ ಭಾರತದಲ್ಲಿ ದೀನತೆಯು ಒಂದು ಧನಾತ್ಮಕ ಅಂಶವಾಗಿಲ್ಲ. ಖಂಡಿತವಾಗಿ ಕೆಳಜಾತಿಯ ವ್ಯಕ್ತಿಯೊಬ್ಬನು ಮೇಲ್ಜಾತಿಯ ವ್ಯಕ್ತಿಯ ಎದರು ದೀನತೆಯಿಂದ ಇರಬೇಕಾಗಿದೆ. ಆದರೆ ಅವಕಾಶವಾದಿಗಳು ತಮ್ಮ ಸ್ಥಾನಮಾನದ ನಿಮಿತ್ತ ಅಹಂಕಾರಿಗಳಾಗಿರಲು ಅಧಿಕಾರವಿದೆ (ಹಕ್ಕಿದೆ). ಅಧೀನತೆ ಇದು ಪೇತ್ರನು ತನ್ನ ಪತ್ರಿಕೆಯಲ್ಲಿ ಪ್ರಸ್ತಾಪಿಸಿದ ಮತ್ತು ಇನ್ನೊಂದು ಅತೀ ಪ್ರಾಮುಖ್ಯವಾದ ಕ್ರೈಸ್ತೀಯ ಸ್ವಭಾವ ಇದಾಗಿದೆ. ವಿಶ್ವಾಸಿಗಳು ತಮ್ಮ ನಾಯಕರುಗಳಿಗೆ ಅಧೀನರಾಗಿರಬೇಕೆಂದು ಪೇತ್ರನು ಅಪೇಕ್ಷಿಸುತ್ತಾನೆ. ಆದರೆ ಸಭೆಯ ನಾಯಕರುಗಳೂ ಸಹ ತಮ್ಮ ಮಂದೆಗೆ ಅಧೀನರಾಗಿರಬೇಕೆಂದೂ ಆತನು ಅಪೇಕ್ಷಿಸುತ್ತಾನೆ (1 ಪೇತ್ರ 5:5). ಭಾರತಿಯ ಸಭೆಗೆ ಇದೊಂದು ಕಠಿಣವಾದ ಬೋಧನೆಯಾಗಿದೆ.

ಸೈತಾನನನ್ನು ಸರಿಯಾಗಿ ನಿಭಾಯಿಸಲು ನಮಗೆ ಜ್ಞಾನ ಬೇಕು. ಆತನಿಗೆ ಅತಿಯಾಗಿ ಅಧಿಕಾರ ಕೊಡುವುದೂ ಮತ್ತು ಆತನಿಗೆ ಯಾವುದೇ ಅಧಿಕಾರವನ್ನು ಕೊಡದಿರುವುದರ ನಡುವೆ ಒಂದು ಸಮತೋಲನವಿದೆ. ಈ ವಾಕ್ಯಭಾಗದಲ್ಲಿ ಪೇತ್ರನು ಆತನನ್ನು 'ವಿಶ್ವಾಸಿಗಳನ್ನು ನುಂಗುವುದಕ್ಕಾಗಿ ಗರ್ಜಿಸುವ ಸಿಂಹದಂತೆ ಹುಡುಕುತ್ತಿರುವನು ಎಂದು ವರ್ಣಿಸುತ್ತಾನೆ' (5:8). ಹಾಗಾಗಿ ನಾವೆಲ್ಲ ಸ್ವಸ್ಥಚಿತ್ತ ಮತ್ತು ಎಚ್ಚರವಾಗಿರುವುದರ ಅವಶ್ಯಕತೆಯಿದೆ. ಆದರೆ– ನಾನೆಣಿಸುತ್ತೇನೆ, ಕೆಲವೊಮ್ಮೆ ಭಾರತೀಯ ಸಭೆಯು ಸೈತಾನನ ಕಾರ್ಯಚಟುವಟಿಕೆಗಳ ಮೇಲೆ ಅತಿಯಾಗಿ ದೃಷ್ಟಿಯಿಟ್ಟು ದೇವರ ಕೃಪೆ ಮತ್ತು ಬಲವನ್ನು ಮರೆತುಬಿಡುತ್ತದೆ. ನಾವು ಸ್ವಸ್ಥಚಿತ್ತರಾಗಿ ಮತ್ತು ಎಚ್ಚರವಾಗಿದ್ದು ನಂಬಿಕೆಯಲ್ಲಿ ದೃಢವಾಗಿ ನಿಂತಿರುವಾಗ ಸೈತಾನನನ್ನು ನಾವು ಎದುರಿಸಬಲ್ಲೆವು. ದೇವರು ಎಲ್ಲವನ್ನು ನಿಯಂತ್ರಣದಲ್ಲಿಟ್ಟುಕೊಂಡಿದ್ದಾನೆಯೇ ಹೊರತು ಸೈತಾನನಲ್ಲ.



# ಉತ್ತರಗಳು 11. ಕಡೇ ವಂದನೆಗಳು, 5:12–14

## ಶಿಕ್ಷಕರ ಗಮನಕ್ಕೆ

ಈ ಅಧ್ಯಯನವು ಈ ಪುಸ್ತಕದ ಮೊದಲ ಅಧ್ಯಾಯದಲ್ಲಿ ತಿಳಿಸಲ್ಪಟ್ಟ ಕೆಲವು ವಿಷಯಗಳನ್ನು ಸಹ ಪುನಃ ಸಂಧಿಸುತ್ತದೆ (1 ಪೇತ್ರ ಪರಿಚಯ). ಉದಾಹರಣೆಗೆ, ಕೆಳಕಂಡ 1, 2 ಮತ್ತು 4 ರ ಪ್ರಶ್ನೆಗಳಿಗೆ ಉತ್ತರಗಳನ್ನು ನೋಡಿರಿ. ಖಂಡಿತವಾಗಿ ವಿದ್ಯಾರ್ಥಿಗಳು ಇದನ್ನು ಸಮಯ ವ್ಯರ್ಥವೆಂದು ಪರಿಗಣಿಸುವುದಿಲ್ಲವೆಂದು ಎಣಿಸುತ್ತೇನೆ. ಪ್ರಶ್ನೆ 6 ರೊಂದಿಗೆ ವ್ಯವಹರಿಸುವಾಗ ವಿದ್ಯಾರ್ಥಿಗಳು ಕೆಲವು ಅರ್ಥಪೂರ್ಣವಾದ ಅವಲೋಕನಗಳನ್ನು ಮಾಡುವವರೆಂದು ನಿರೀಕ್ಷಿಸುತ್ತೇನೆ. (ಉದಾ: ಪರಿಚಯ/ಪೀಠಿಕೆ ಮತ್ತು ಈ ಅಧ್ಯಯನದಲ್ಲಿನ ನನ್ನ ಉತ್ತರಗಳ ನಡುವಿನ ಒಂದು ಅಥವಾ ಎರಡು ವ್ಯತ್ಯಾಸಗಳನ್ನು ಕಂಡುಹಿಡಿಯಿರಿ).

## ಉತ್ತರಗಳು

1. ಸಿಲ್ವಾನ/ಸೀಲನ ಸಹಾಯದಿಂದ ಎಂಬ ಹೇಳಿಕೆಯನ್ನು ಅರ್ಥೈಸಿಕೊಳ್ಳುವ 3 ವಿಧಗಳಿವೆ (ವ.12).

   a. ಪೇತ್ರನು ಹೇಳಿದ ನಂತರ ಸಿಲ್ವಾನನು ಬರೆದನು. ಇದರರ್ಥ ಪ್ರತಿ ಮಾತುಗಳು ಸಹ ಪೇತ್ರನ ಬಾಯಿಂದ ಬಂದದ್ದಾಗಿದೆ.

   b. ಆತನು ಏಷ್ಯ ಸೀಮೆಯಲ್ಲಿನ ಸಭೆಗಳಿಗೆ ಏನನ್ನು ಹೇಳಲು ಬಯಸಿದ್ದಾನೋ ಅದನ್ನು ಪೇತ್ರನು ಸಿಲ್ವಾನನಿಗೆ ಹೇಳಿದನು ಮತ್ತು ಸಿಲ್ವಾನನು ಸ್ವತಂತ್ರವಾಗಿ ಅದಕ್ಕೆ ಬರವಣಿಗೆಯ ರೂಪಕೊಟ್ಟನು.

   c. ಪೇತ್ರ ಮತ್ತು ಸಿಲ್ವಾನ ಇಬ್ಬರೂ ಜೊತೆಯಾಗಿ ಈ ಪತ್ರಿಕೆಯ ವಿಷಯಾಂಶವನ್ನು ರೂಪಿಸಿದರು. ನಾನು ವೈಯಕ್ತಿಕವಾಗಿ ಎರಡನೆಯದನ್ನು ಇಷ್ಟಪಡುತ್ತೇನೆ. ಪೇತ್ರನು ಪತ್ರಿಕೆಯ ಗ್ರಂಥಕರ್ತನಾಗಿದ್ದಾನೆ. ಸಭೆಗಳಿಗಾಗಿ ಸಂದೇಶವನ್ನು ಆತನು ಸಿಲ್ವಾನನಿಗೆ ಹೇಳಿದನು ಮತ್ತು ಸಿಲ್ವಾನನು ಸ್ವತಂತ್ರವಾಗಿ ಪತ್ರವನ್ನು ಬರೆದನು. ನಾನು ಈ ಆಯ್ಕೆಯನ್ನು ಯಾಕೆ ಆರಿಸಿಕೊಂಡೇನೆಂದರೆ, ಎರಡನೆಯ ಪೇತ್ರ ಪತ್ರಿಕೆಯಲ್ಲಿನ ಭಾಷೆಯು ನಯವಾಗಿ ಇಲ್ಲದೆ ಇರುವಾಗ ಇದರಲ್ಲಿನ ಗ್ರೀಕ್ ಭಾಷೆಯು ತುಂಬಾ ನಯವಾಗಿದೆ.

   ಸಿಲ್ವಾನನು ಚದುರಿಸಲ್ಪಟ್ಟ ಯೆಹೂದ್ಯನಾಗಿದ್ದು, ಹೆಚ್ಚುಕಡಿಮೆ ಗ್ರೀಕ್ ಭಾಷೆಯು ಆತನ ಪ್ರಥಮ ಭಾಷೆಯಾಗಿದ್ದಿರಬಹುದು. ಒಂದುವೇಳೆ ಸಿಲ್ವಾನನು 1 ಪೇತ್ರದಲ್ಲಿ ಪತ್ರವನ್ನು ಮತ್ತು ಪೇತ್ರನು 2 ಪೇತ್ರದ ಪತ್ರವನ್ನು ಬರೆದಿರುವುದಾದಲ್ಲಿ ವಿಭಿನ್ನ ಭಾಷಾ ಶೈಲಿಯ ಸಮಸ್ಯೆಯು ಪರಿಹಾರವಾಗುತ್ತದೆ.

   ಪ್ರಾಯಶಃ (ಬಹುತೇಕವಾಗಿ) ಈ ಪತ್ರಿಕೆಯ ಕಡೆಯ ವಚನಗಳನ್ನು ಪೇತ್ರನು ಸ್ವಂತ ಕೈಯಿಂದ ಬರೆದಿರುವನು (ವ.12–14). (ಪೌಲನು 2 ಥೆಸ 3:17–18, ಗಲಾತ್ಯ 6:11–18 ರಲ್ಲಿ ಹೋಲಿಸಿರಿ).

2. ಪೇತ್ರನು ವಚನ 12 ರಲ್ಲಿ ತನ್ನ ಪತ್ರಿಕೆಯ ಸಂದೇಶವನ್ನು ಸಾರಾಂಶಗೊಳಿಸುತ್ತಾನೆ.

a. ಇವು ಆತನ ಎರಡು ಅಂಶಗಳು:

- ಆತನು ತನ್ನ ಓದುಗರನ್ನು ಉತ್ತೇಜಿಸಲು ಬಯಸುತ್ತಾನೆ.
- ಆತನು ನಿಜವಾದ ದೇವರ ಕೃಪೆಯನ್ನು ಸಾಕ್ಷಿಕರಿಸುತ್ತಾನೆ.

b. ಈ ರೀತಿಯಲ್ಲಿ ಈ ಎರಡು ಅಂಶಗಳು ಪರಸ್ಪರ ಸಂಬಂಧಿಸುತ್ತವೆ: ಪೇತ್ರನು ಯೇಸು ಕ್ರಿಸ್ತನು ಮತ್ತು ಆತನ ಪುನರುತ್ಥಾನದ ಬಗ್ಗೆ ಸುವಾರ್ತೆಯ ಸತ್ಯವನ್ನು ಸಾಕ್ಷಿಕರಿಸುವ ಒಬ್ಬ ಅಪೋಸ್ತಲನಾಗಿದ್ದಾನೆ. ಯಾವಾಗ ಓದುಗರು ದೇವರ ಕೃಪೆಯ ಸುವಾರ್ತೆಯನ್ನು ಅರ್ಥೈಸಿಕೊಂಡು ಸುವಾರ್ತೆಯ ಸತ್ಯದಲ್ಲಿ ದೃಢವಾಗಿ ನೆಲೆಗೊಳ್ಳುತ್ತಾರೋ ಆಗ ಸೈತಾನನಿಂದ ಬರುವ ಬಾಧೆ ಮತ್ತು ಹೋರಾಟಗಳ ಹೊರತಾಗಿಯೂ ಅವರು ಈ ಲೋಕದಲ್ಲಿ ಜಯಭರಿತರಾಗಿ ಜೀವಿಸಲು ಉತ್ತೇಜಿಸಲ್ಪಡುತ್ತಾರೆ. ಸುವಾರ್ತೆಯು ಸತ್ಯವಾದದ್ದಾಗಿದೆ ಮತ್ತು ಇದು ಕೊಡುವ ಉತ್ತೇಜನವು ಸಹ ನಿಜವಾಗಿದೆ. ಆದರೆ ಅವರು ದೃಢವಾಗಿ ನಿಲ್ಲಬೇಕಾಗಿದೆ.

3. 'ನನ್ನ ಮಗನಾದ ಮಾರ್ಕನು' ಯಾರು (ವ.13)? ನಾನು ನಾಲ್ಕು ವಾಕ್ಯಭಾಗಗಳನ್ನು ನೋಡಿ ಮತ್ತು ಆತನ ಬಗ್ಗೆ ನಾವು ಏನನ್ನು ಕಲಿಯಬಹುದೆಂಬುದನ್ನು ಕೆಳಗೆ ಪಟ್ಟಿಮಾಡಿದ್ದೇನೆ.

a. ಅ.ಕೃ 12:12– ಇಲ್ಲಿ ಮೊದಲ ಬಾರಿ ನಾವು ಮಾರ್ಕನೆನಿಸಿಕೊಳ್ಳುವ ಯೋಹಾನನ ಬಗ್ಗೆ ನಾವು ಕೇಳುತ್ತೇವೆ. ಈತನ ತಾಯಿಯಾದ ಮರಿಯಳ ಮನೆಯಲ್ಲಿ ಆದಿ ಸಭೆಯು ಕೂಡಿ ಆರಾಧಿಸುತ್ತಿದ್ದರು ಮತ್ತು ಇದು ಅನೇಕ ಜನರಿಗೆ ಆಶ್ರಯವನ್ನು ನೀಡಿತ್ತು. ಹಾಗಾಗಿ ಈತನು ಯೆರೂಸಲೇಮಿನಲ್ಲಿ ಒಂದು ಪ್ರಮುಖವಾದ ಕುಟುಂಬದಿಂದ ಬಂದವನಾಗಿರಬಹುದು. ಯೋಹಾನ ಎಂಬುದು ಈತನ ಯೆಹೂದಿ ಹೆಸರು ಮತ್ತು ಮಾರ್ಕ ಎಂಬುದು ರೋಮನ್ ಹೆಸರು. ಆತನ ತಾಯಿಯು ಯೆರೂಸಲೇಮಿನಲ್ಲಿ ಮನೆಯನ್ನು ಹೊಂದಿದ್ದರೂ ಈತನ ಅಂತರಾಷ್ಟ್ರೀಯತೆ/ಚದುರಿದ ಹಿನ್ನಲೆಯನ್ನು ಸೂಚಿಸುವ ರೋಮನ್ ಹೆಸರನ್ನು ಈತನು ಹೊಂದಿದ್ದನು. ಈತನ ದಾಯದಿಯಾಗಿರುವ ಬಾರ್ನಬನು (ಕೊಲೊಸ್ಸೆ 4:10) ಒಬ್ಬ ಚದುರಿಹೋದ ಯೆಹೂದ್ಯನಾಗಿದ್ದನು, ಯೆರೂಸಲೇಮಿನಲ್ಲಿ ವಾಸವಾಗಿದ್ದನು (ಅ.ಕೃ 4:36–37).

b. ಅ.ಕೃ 12:25: ಬಾರ್ನಬ ಮತ್ತು ಸೌಲನು/ಪೌಲನು ಯೆರುಸಲೇಮನ್ನು ಸಂಧಿಸುತ್ತಿದ್ದರು. ಅವರು ಅಂತಿಯೋಕ್ಯಕ್ಕೆ ಹಿಂದಿರುಗಿದಾಗ ಯೋಹಾನ ಮಾರ್ಕನನ್ನು ತಮ್ಮೊಂದಿಗೆ ಕರೆದೊಯ್ದರು. ಆತನು ಅಂತರ್–ರಾಷ್ಟ್ರೀಯ ಸೇವೆಗೆ ಬಹಳ ಸಹಾಯಕರವಾಗಬಹುದೆಂದು ಅವರು ನೆನೆಸಿರಬಹುದು: ಅಂತಿಯೋಕ್ಯವು ಒಂದು ದೊಡ್ಡ ಪಟ್ಟಣವಾಗಿದ್ದು ರೋಮನ್ ಪ್ರಾಂತವಾದ ಸಿರಿಯಾದ ರಾಜಧಾನಿಯಾಗಿತ್ತು. ಬಾರ್ನಬ ಮತ್ತು ಪೌಲರು ಅಲ್ಲಿ ಸಭಾಪಾಲಕ ಸೇವೆಯನ್ನು ಮಾಡುತ್ತಿದ್ದರು.

c. ಅ.ಕೃ 15:37–39: ಇದು ಕೆಲವು ವರ್ಷಗಳ ನಂತರ ನಡೆಯಿತು. ಬಾರ್ನಬ ಮತ್ತು ಪೌಲರು ಯೋಹಾನ ಮಾರ್ಕನನ್ನು ತಮ್ಮೊಂದಿಗೆ ಪೌಲನ ಮೊದಲ ಸೇವಾ ಪ್ರಯಾಣದಲ್ಲಿ ಕರೆದೊಯ್ದಿರಬಹುದು. ಈಗ ಅವರು ಮತ್ತೊಂದು ಪ್ರಯಾಣ ಮಾಡಲು ಸಿದ್ಧರಾಗಿದ್ದಾರೆ. ಈ ಬಾರಿಯೂ ಯೋಹಾನ ಮಾರ್ಕನನ್ನು ಕರೆದೊಯ್ಯಬೇಕೆಂದು ಬಾರ್ನಬನು

ಬಯಸಿದನು. ಆದರೆ ಪೌಲನು ನಿರಾಕರಿಸಿದನು, ಯಾಕೆಂದರೆ ಯೋಹಾನ ಮಾರ್ಕನು ಮೊದಲ ಪ್ರಯಾಣವನ್ನು ಪೂರ್ಣಗೊಳಿಸಿರಲಿಲ್ಲ. ಹಾಗಾಗಿ ಬಾರ್ನಬ ಮತ್ತು ಪೌಲರು ಬೇರ್ಪಟ್ಟರು. ಪೌಲನು ಸೀಲನನ್ನು ಕರೆದುಕೊಂಡು ಉತ್ತರ ದಿಕ್ಕಿಗೆ ಏಷ್ಯಾ ಮೈನರ್‌ಗೆ ಹೋದನು ಮತ್ತು ಬಾರ್ನಬನು ಯೋಹಾನ ಮಾರ್ಕನನ್ನು ಕರೆದುಕೊಂಡು ಹಡಗು ಪ್ರಯಾಣವಾಗಿ ಸೈಪ್ರಸ್‌ಗೆ ಹೋದನು.

d. ಕೊಲೊಸ್ಸೆ 4:10: ನಂತರ ಸತ್ಯವೇದದಲ್ಲಿ ಯೋಹಾನ ಮಾರ್ಕನ ಹೆಸರು ಕಾಣಿಸುವುದು ಈ ವಾಕ್ಯಭಾಗದಲ್ಲಾಗಿದೆ. ಅಪೊಸ್ತಲರ ಕೃತ್ಯಗಳಲ್ಲಿ ಉಂಟಾದ ಘರ್ಷಣೆಯ ಘಟನೆ ಕಳೆದು ಈಗ ಸುಮಾರು 11 ವರ್ಷಗಳಾಗಿವೆ. ಪೌಲನು ಈಗ ರೋಮ್‌ನಿಂದ ತನ್ನ ಮೊದಲ ಸೆರೆವಾಸದ ಸಮಯದಲ್ಲಿ ಕೊಲೊಸ್ಸೆಯವರಿಗೆ ಪತ್ರ ಬರೆಯುತ್ತಿದ್ದಾನೆ ಯೋಹಾನ ಮಾರ್ಕನು ಆತನ ವಿಶ್ವಾಸನೀಯ ಸಹೋದ್ಯೋಗಿಯಾಗಿ ಆತನೊಂದಿಗಿದ್ದಾನೆ.

e. 1 ತಿಮೊ. 4:11: ಈಗ ಇನ್ನೂ ಕೆಲವು ವರ್ಷಗಳು ಕಳೆದಿವೆ. ಪೌಲನು ಮತ್ತೊಮ್ಮೆ ರೋಮ್‌ನಲ್ಲಿ ಖೈದಿಯಾಗಿದ್ದಾನೆ ಮತ್ತು ತನ್ನ ಜೀವನದ ಅಂತ್ಯಕ್ಕೆ ತಾನು ಬಂದಿದ್ದೇನೆಂದು ಆತನು ತಿಳಿದಿದ್ದಾನೆ. ಆತನು ಯೋಹಾನ ಮಾರ್ಕನನ್ನು ತನ್ನೊಂದಿಗೆ ಕರೆತರಬೇಕೆಂದು ತಿಮೋಥಿಯನಲ್ಲಿ ಕೇಳಿಕೊಳ್ಳುತ್ತಾನೆ, ಯಾಕೆಂದರೆ ಮಾರ್ಕನು ಈವರೆಗೂ ಹಾಗೂ ಮುಂದೆಯೂ ಸಹ ತನ್ನ ಸೇವೆಯಲ್ಲಿ ಸಹಾಯಕವಾಗುವನು ಎಂದು ಆತನು ತಿಳಿದಿದ್ದನು.

ಮಾರ್ಕನು ಸ್ಪಷ್ಟವಾಗಿ ಪೇತ್ರನ ಶಾರೀರಿಕ ಮಗನಾಗಿರಲಿಲ್ಲ ಬದಲಾಗಿ ಆತ್ಮಿಕ ಮಗನಾಗಿದ್ದನು. ಮಾರ್ಕನು ಪೇತ್ರ ಮತ್ತು ಸೀಲರು ಈ ಪತ್ರವನ್ನು ಬರೆದಾಗ ಪೇತ್ರನೊಂದಿಗೆ ರೋಮ್‌ನಲ್ಲಿದ್ದನು. ನಾಲ್ಕು ಸುವಾರ್ತೆಗಳಲ್ಲಿ ಮೊದಲು ಬರೆಯಲ್ಪಟ್ಟ ಸುವಾರ್ತೆಯಾದ ಮಾರ್ಕನು ಬರೆದ ಸುವಾರ್ತೆಯನ್ನು ಇದೇ ಮಾರ್ಕನು ಬರೆದನು ಎಂದು ಸಭಾ–ಇತಿಹಾಸ ನಮಗೆ ತಿಳಿಸುತ್ತದೆ ಮತ್ತು ಆತನಿಗೆ ಮಾಹಿತಿಗಳನ್ನು ತಿಳಿಸಿದವನು ಪೇತ್ರನಾಗಿದ್ದನು. ಹಾಗಾಗಿ ಮಾರ್ಕನ ಸುವಾರ್ತೆಯು ಯೇಸುವಿನ ಜೀವನ, ಸೇವೆ ಮತ್ತು ಮರಣದ ಕುರಿತು ಪೇತ್ರನಿಗಿದ್ದ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತದೆ.

4. ಪೌಲ ಮತ್ತು ಆತನ ಸಹಕೆಲಸಗಾರರಾದ ಬಾರ್ನಬ ಮತ್ತು ಮಾರ್ಕರ ನಡುವಿನ ಸಂಬಂಧವನ್ನು ಮೌಲ್ಯಮಾಪನ ಮಾಡಲು 1 ಪೇತ್ರ 3:8 ನ್ನು ನಾನು ಈ ರೀತಿ ಉಪಯೋಗಿಸುತ್ತೇನೆ (ಹಿಂದಿನ ಪ್ರಶ್ನೆಯಲ್ಲಿನ ವಚನಕ್ಕನುಗುಣವಾಗಿ).

ಸಭೆಯಲ್ಲಿನ ಭಯಭಕ್ತಿಯ ಜೀವಿತಕ್ಕಾಗಿ 5 ಮುಖ್ಯ ಗುಣಲಕ್ಷಣಗಳನ್ನು ರೂಢಿಸಿಕೊಳ್ಳಬೇಕೆಂದು ಪೇತ್ರನು ತನ್ನ ಓದುಗರನ್ನು ಪ್ರಬೋಧಿಸುತ್ತಾನೆ. *ಏಕಮನಸ್ಸುಳ್ಳವರಾಗಿರುವುದು, ಪರರ ಸುಖದುಃಖಗಳಲ್ಲಿ ಸೇರುವುದು, ಅಣ್ಣತಮ್ಮಂದಿರಂತೆ ಒಬ್ಬರನ್ನೊಬ್ಬರು ಪ್ರೀತಿಸುವುದು, ಕರುಣೆಯುಳ್ಳವರಾಗಿರುವುದು ಮತ್ತು ದೀನಭಾವವುಳ್ಳವರಾಗಿರುವುದು* (3:8). ಇವೆಲ್ಲವು ಪೌಲ, ಬಾರ್ನಬ ಮತ್ತು ಮಾರ್ಕರ ಸಂಬಂಧಗಳ ನಡುವೆ ಕಾರ್ಯಗತವಾಗಿದ್ದವೆಂದು ನಾನೆಣಿಸುತ್ತೇನೆ. ಮಾರ್ಕನೆನಿಸಿಕೊಳ್ಳುವ ಯೋಹಾನನು ಸೇವೆಗೆ ಹೊಂದಿಕೆಯಾಗುತ್ತಾನೋ ಇಲ್ಲವೋ ಎಂಬುದರ ಬಗ್ಗೆ ಪೌಲನ ಮತ್ತು ಬಾರ್ನಬರ ನಡುವೆ *ಒಂದು ತೀಕ್ಷ್ಣವಾದ ಭಿನ್ನಾಭಿಪ್ರಾಯವಿತ್ತು* ಮತ್ತು ಈ ಭಿನ್ನಾಭಿಪ್ರಾಯವು ಒಂದು ತಾತ್ಕಾಲಿಕವಾದ ಬೇರ್ಪಡುವಿಕೆಗೆ ನಡೆಸಿತು ಎಂಬುದು ಸತ್ಯ.ಇದು ಅಷ್ಟೊಂದು ಸಾಮರಸ್ಯವಾಗಿ ಕಾಣಿಸುವುದಿಲ್ಲ! ಆದರೆ ಸುವಾರ್ತೆಯು ಇನ್ನೂ

ವಿಶಾಲವಾಗಿ ಹರಡಲು ಈ ರೀತಿ ಆಗುವುದು ಅವಶ್ಯಕವಾಗಿತ್ತು. ಹೇಗಿದ್ದರೂ ಒಂದು ಒಳ್ಳೆಯ ವಿಷಯವೆಂದರೆ ಅವರು ಪರಸ್ಪರ ಯಾವುದೇ ರೀತಿಯ ಕಹಿತನವನ್ನು ಮನಸ್ಸಿನಲ್ಲಿ ಹೊಂದಿರಲಿಲ್ಲವೆಂಬುದನ್ನು ನಾವು ಕಾಣಬಹುದು. ಕೆಲವು ವರ್ಷಗಳ ನಂತರ ಕೊರಿಂಥದವರಿಗೆ ಬರೆದ ಮೊದಲ ಪತ್ರಿಕೆಯಲ್ಲಿ ಪೇತ್ರನು ಬಾರ್ನಬನನ್ನು ಸಕಾರಾತ್ಮಕವಾದ ರೀತಿಯಲ್ಲಿ ಬಣ್ಣಿಸುತ್ತಾನೆ (1 ಕೊರಿಂಥ 9:6). ಆ ಬೇರ್ಪಡುವಿಕೆಯು ಶಾಶ್ವತವಾದುದ್ದಲ್ಲವೆಂಬುದನ್ನು ನಾವೂ ಸಹ ನೋಡುತ್ತೇವೆ ಮತ್ತು ಮಾರ್ಕನೆನಿಸಿಕೊಳ್ಳುವ ಯೋಹಾನನು ಬೆಳೆದಂತೆ ಮತ್ತು ಅನುಭವವನ್ನು ಪಡೆದಂತೆಲ್ಲ ಪೌಲನ ಜೀವನದ ಅಂತ್ಯದವರೆಗೂ ಆತನ ಒಬ್ಬ ಆಪ್ತ ಕೆಲಸದವನಾದನು. ಹಾಗಾಗಿ ವಿವಾದ ಮತ್ತು ವಿಂಗಡನೆಯ ನಡುವೆ ನಾವು ಸಾಮರಸ್ಯವನ್ನು ಕಾಣಬಹುದೆಂದು ನಾನೆಣಿಸುತ್ತೇನೆ. ಪೌಲನ ತಿರಸ್ಕಾರದ ಹೊರತಾಗಿಯೂ ಬಾರ್ನಬನು ಮಾರ್ಕನೆನಿಸಿಕೊಳ್ಳುವ ಯೋಹಾನನನ್ನು ಕಾಳಜಿ ವಹಿಸಿದ ರೀತಿ ಅನುಕಂಪ ಮತ್ತು ಕರುಣೆಯನ್ನು ಎತ್ತಿ ತೋರಿಸುತ್ತದೆ. ವಾಸ್ತವಾಂಶವೆಂದರೆ, ನಂತರ ಮಾರ್ಕನೆನಿಸಿಕೊಳ್ಳುವ ಯೋಹಾನನು ಒಬ್ಬ ನಂಬಿಗಸ್ತ ಜೊತೆ ಕೆಲಸಗಾರನಾಗುವುದಕ್ಕೆ ಪೌಲನು ಅನುಮತಿಸಿದ್ದು 'ದೀನತೆ' ಮತ್ತು 'ಕರುಣೆ'ಯನ್ನು ತೋರಿಸುತ್ತದೆ. ಕಡೆಯದಾಗಿ ಈ ಮೂವರು ದೇವರ ಸೇವಕರುಗಳು ಒಬ್ಬರಿಗೊಬ್ಬರು ವ್ಯವಹರಿಸಿದ ರೀತಿಯಲ್ಲಿ ಸಹೋದರರ ಸ್ನೇಹವನ್ನು ನಾವು ಕಾಣಬಹುದೆಂದು ನಾನೆಣಿಸುತ್ತೇನೆ.

5. ವಚನ 13 ರಲ್ಲಿನ ಬಾಬಿಲೋನ್ ಬಗೆಗಿನ ಗ್ರೀಕ್ ಹೇಳಿಕೆಯನ್ನು/ಪದವನ್ನು ಹೇಗೆ ಅರ್ಥೈಸಿಕೊಳ್ಳುವುದೆಂಬುದನ್ನು ಸತ್ಯವೇದ ಪಂಡಿತರು ಒಪ್ಪಿಕೊಳ್ಳುವುದಿಲ್ಲ. (ಹೆಚ್ಚಿನ ಇಂಗ್ಲೀಷ್ ಭಾಷಾಂತರಗಳು 'ಬಾಬಿಲೋನಿನಲ್ಲಿರುವವಳು' ಎಂದು ಬರೆದಿವೆ, ಇದು ಗ್ರೀಕ್ ಪಠ್ಯಕ್ಕೆ ಹತ್ತಿರವಾಗಿದೆ. ಕನ್ನಡದ ಎರಡು ಭಾಷಾಂತರಗಳು ಸಹ ಬಾಬಿಲೋನಿನಲ್ಲಿರುವ ಸಭೆಯು ಎಂದಿದೆ). ಇದಕ್ಕೆ ಒಂದು ಕಾರಣ ಈ ಒಂದು ಸಮಯದಲ್ಲಿ ಇತಿಹಾಸದಲ್ಲಿ ಪ್ರಾಚೀನ ಬಾಬಿಲೋನ್ ಪಟ್ಟಣವು ತನ್ನ ಪ್ರಮುಖ್ಯತೆಯನ್ನು ಕಳೆದುಕೊಂಡಿತ್ತು. ಇದನ್ನು ಈ ರೀತಿಯಲ್ಲಿ ಅರ್ಥೈಸಿಕೊಳ್ಳಬಹುದೆಂದು ನಾನೆಣಿಸುತ್ತೇನೆ:

ಹೆಚ್ಚುಕಡಿಮೆ 'ಬಾಬಿಲೋನ್' ರೋಮ್ ಪಟ್ಟಣವನ್ನು ಸೂಚಿಸುತ್ತದೆ. ಈ ಹೆಸರು ಯುಪ್ರಟೀಸ್ ನದಿಯ ಮೇಲೆ ಸ್ಥಾಪಿತವಾಗಿರುವ ಪ್ರಾಚೀನ ಬಾಬಿಲೋನ್ ಪಟ್ಟಣವನ್ನು ಸೂಚಿಸುತ್ತದೆ ಮತ್ತು ಇದಕ್ಕಿಂತ ಹೆಚ್ಚಾಗಿ ಈಗ ಐಗುಪ್ತದಲ್ಲಿನ ಆ ಹೆಸರಿನಿಂದ ರೋಮನ್ ಸೈನ್ಯವನ್ನು ಸೂಚಿಸುತ್ತದೆ.

ಪ್ರಕಟಣೆ ಪುಸ್ತಕದಲ್ಲಿ 'ಬಾಬಿಲೋನ್' ಎಂಬುದು ರೋಮ್‌ಗೆ ಒಂದು ರಹಸ್ಯ ಹೆಸರಾಗಿ ಕೊಡಲ್ಪಟ್ಟಿದೆ. ರೋಮನ್ ಸಾಮ್ರಾಜ್ಯವು ಎಲ್ಲ ರೀತಿಯ ಕೆಟ್ಟ ಮತ್ತು ಪಾಪಮಯವಾದ ಲೋಕದ ಪಟ್ಟಣಗಳ ಸಂಕೇತವಾಗಿ ಕೊಡಲ್ಪಟ್ಟಿದೆ ಎಂದು ನಾನೆಣಿಸುತ್ತೇನೆ (ಕ್ಲೊವ್‌ನೀಯೊಂದಿಗೆ, *1 ಪೇತ್ರದ ಸಂದೇಶ*). ಪೇತ್ರನು 'ಬಾಬಿಲೋನನ್ನು' ಸಾಂಕೇತಿಕವಾಗಿ ಉಪಯೋಗಿಸುತ್ತಾನೆ. ಹಳೆ ಒಡಂಬಡಿಕೆಯಲ್ಲಿ ಬಾಬಿಲೋನ್– ಜಗತ್ತಿನ ರಾಜಧಾನಿಯಾಗಿತ್ತು. ಇಲ್ಲಿಗೆ ಇಸ್ರಾಯೇಲರು ಅರಸನಾದ ನೆಬುಕದ್ನೆಚರನಿಂದ ಸೆರೆಗೆ ಒಯ್ಯಲ್ಪಟ್ಟಿದ್ದರು. ಇದು ಯೆಹೂದಿ ಚದುರುವಿಕೆಯ ಪ್ರಾರಂಭವಾಗಿತ್ತು. ಈ ಪೇತ್ರನು ಹೊಸ ಚದುರಿಸಲ್ಪಟ್ಟ ಜನರಿಗೆ (1:1), ಏಷ್ಯಾ ಸೀಮೆಯಲ್ಲಿ ಚದುರಿಸಲ್ಪಟ್ಟು, ಹೊಸ ಬಾಬಿಲೋನ್, ರೋಮನ್ ಅಧಿಕಾರದಡಿಯಲ್ಲಿ ಜೀವಿಸುತ್ತಿರುವ ಸಭೆಗಳಿಗೆ ಬರೆಯುತ್ತಿದ್ದಾನೆ. ಹಳೆ ಒಡಂಬಡಿಕೆಯಲ್ಲಿ ಬಾಬಿಲೋನು ದೇವರನ್ನು ಮತ್ತು ದೇವ ಜನರನ್ನು ವಿರೋಧಿಸಿದ (ಈ ಅಂಶವನ್ನು ಪ್ರಕಟಣೆ

ಪುಸ್ತಕದಲ್ಲಿ ತೆಗೆದುಕೊಳ್ಳಲಾಗಿದೆ) ಮತ್ತು ಖಂಡಿತವಾಗಿ ತಮ್ಮ ಮೇಲೆ ದೇವರ ನ್ಯಾಯತೀರ್ಪು ಬರಲಿರುವ ಅನ್ಯರಾಷ್ಟ್ರಗಳನ್ನು ಪ್ರತಿನಿಧಿಸುತ್ತದೆ. ಹಾಗಾಗಿ ಪೇತ್ರನು ಸಹ ಯೇಸು ಕ್ರಿಸ್ತನ ಬರೋಣ ಮತ್ತು ದೇವರ ಕಡೆಯ ನ್ಯಾಯತೀರ್ಪಿನೊಂದಿಗೆ ಈಗಿನ ಪ್ರಸ್ತುತ ಜಗತ್ತು ಅಂತ್ಯಗೊಳ್ಳಲಿದೆ ಎಂಬುದಕ್ಕೆ ಸಂಕೇತವಾಗಿ ಹೊಸ 'ಬಾಬಿಲೋನನ್ನು' ಉಪಯೋಗಿಸುತ್ತಾನೆ.

'ಅವರು' – ಸ್ಥಳೀಯ ಸಭೆಯನ್ನು ಸೂಚಿಸುತ್ತದೆ. ಹಾಗಾಗಿ ಪೇತ್ರನು ರೋಮಿನಿಂದ ಬರೆಯುತ್ತಾನೆ ಮತ್ತು ರೋಮಿನಲ್ಲಿನ ಸಭೆಯು ತನ್ನ ಏಷ್ಯಾ ಸೀಮೆಯಲ್ಲಿರುವ ಸಭೆಗಳಿಗೆ ವಂದನೆಗಳನ್ನು ಕಳುಹಿಸುತ್ತದೆಂಬುದು ನನ್ನ ಅಂತ್ಯೋಕ್ತಿಯಾಗಿದೆ (ಉಪಸಂಹಾರವಾಗಿದೆ).

6. ಪೇತ್ರನು ತನ್ನ ಪತ್ರಿಕೆಯನ್ನು– ತನ್ನ ಓದುಗರಿಗೆ ಶಾಂತಿಯ ಆಶೀರ್ವಾದದೊಂದಿಗೆ ಪ್ರಾರಂಭಿಸಿದ ರೀತಿಯಲ್ಲಿಯೇ ಮುಗಿಸುತ್ತಾನೆ (ನೋಡಿ 1:2).

7. ಪುನಃ **ಪೇತ್ರನು ಬರೆದ ಮೊದಲನೆಯ ಪತ್ರಿಕೆಯ ಪರಿಚಯಕ್ಕೆ**ಹಿಂತಿರುಗಿರಿ. ಮೇಲ್ಕಂಡ 1, 2 ಮತ್ತು 4 ಪ್ರಶ್ನೆಗಳ ಉತ್ತರಗಳಲ್ಲಿ ಕೊಡಲ್ಪಟ್ಟ ಮಾಹಿತಿಗಳೊಂದಿಗೆ ಹೋಲಿಸಿರಿ.

8. ಅಧ್ಯಾಯ 5 ರಲ್ಲಿ ಪೇತ್ರನು 3 ಬಾರಿ ಬಾಧೆಯ ವಿಷಯವನ್ನು ತಿಳಿಸುತ್ತಾನೆ. ಆತನ ಓದುಗರು ನಿರಂತರ ಬಾಧೆಯ ಬೆದರಿಕೆಗಳನ್ನು ಎದುರಿಸುತ್ತಿದ್ದರು ಮತ್ತು ಈ ಬಾಧೆಗೆ ಕಾರಣವು ಅವರ ಕ್ರೈಸ್ತೀಯ ನಂಬಿಕೆಯಾಗಿದೆ. ಆದರೆ ಅವರು ಸಭೆಗೆ ಬೆನ್ನುಕೊಟ್ಟು ಮತ್ತು ತಮ್ಮ ಹಳೆಯ ಅನ್ಯ ನಡವಳಿಕೆಗೆ ತಿರುಗಿಕೊಂಡಷ್ಟು ಬೇಗ ಅವರ ಬಾಧೆಯು ಮುಕ್ತಾಯವಾಗುತ್ತಿತ್ತು (ನಿಲ್ಲುತ್ತಿತ್ತು). ಹಾಗಾಗಿ ಇದು ಅನೇಕ ವಿಶ್ವಾಸಿಗಳು ಹಿಂಜಾರುವವರಾಗಲು ಮತ್ತು *ಗರ್ಜಿಸುವ ಸಿಂಹದಂತೆ* ತಿರುಗಾಡುವ ಸೈತಾನನಿಂದ ನುಂಗಲ್ಪಡಲು ಇದೊಂದು ನಿಜವಾದ ಶೋಧನೆಯಾಗಿತ್ತು. ತನ್ನ ಓದುಗರನ್ನು *ದೇವರ ಕೃಪೆಯಲ್ಲಿ ದೃಢವಾಗಿ ನಿಲ್ಲಿರಿ* (5:12) ಎಂದು ಉತ್ತೇಜಿಸುವ ಮೂಲಕ ಪೇತ್ರನು ತನ್ನ ಪತ್ರಿಕೆಯನ್ನು ಮುಗಿಸುತ್ತಾನೆ. ಆದರೆ ಅಧ್ಯಾಯದಲ್ಲಿ ಈ ಮೊದಲು ಆತನು ಸಭೆಯ ಅನ್ಯೋನ್ಯತೆಯಲ್ಲಿ ವಿಶ್ವಾಸಿಗಳು ಪರಸ್ಪರ ಒಬ್ಬರಿಗೊಬ್ಬರು ಹೇಗೆ ವ್ಯವಹರಿಸಬೇಕೆಂದು ತಾನು ಬಯಸುತ್ತಾನೆಂಬುದನ್ನು (5:1–9 ರಲ್ಲಿ ಆತನ ಅನೇಕ ಪ್ರಬೋಧನೆಗಳ ಮೂಲಕ) ಆತನು ವಿವರಿಸುತ್ತಾನೆ.

5 ನೇ ಅಧ್ಯಾಯದಲ್ಲಿ ಸಭೆಯ ಸಂಬಂಧದ ಕುರಿತಾದ ಪೇತ್ರನ ಬೋಧನೆಯು ನಿಮ್ಮ ವೈಯಕ್ತಿಕ ನಂಬಿಕೆಯಲ್ಲಿ ದೃಢವಾಗಿ ನಿಲ್ಲಲು ಹೇಗೆ ಸಹಾಯಿಸಿತು?

ನಿಮ್ಮ ಬಗ್ಗೆ ನನಗೆ ಗೊತ್ತಿಲ್ಲ, ಆದರೆ ನನ್ನ ಸ್ವಂತ ಅನುಭವದ ಆಧಾರದ ಮೇಲೆ ಇಲ್ಲಿ ಕೆಲವು ಸಾಮಾನ್ಯ ಆಲೋಚನೆಗಳಿವೆ:

1) ಸರಿಯಾದ ರೀತಿಯ ಸಭಾನಾಯಕತ್ವದ ಪ್ರಾಮುಖ್ಯತೆ. ಯಾವಾಗ ಸಭಾನಾಯಕರುಗಳು ದೇವರ ಮಂದೆಯ ನಿಜವಾದ ಕುರುಬರಾಗಿರುತ್ತಾರೋ (ನಿಸ್ವಾರ್ಥ, ಉಧಾರತೆ, ಕಾಳಜಿ ವಹಿಸುವುದು, ಸೇವೆಮಾಡುವುದು, ದೀನತೆ, ತಮ್ಮ ಉತ್ತಮ ಮಾದರಿಯ ಮೂಲಕ ನಡೆಸುವುದು) ಆಗ ವಿಶ್ವಾಸಿಗಳು ಬೆಳೆಯುತ್ತಾರೆ, ಪರಿಪಕ್ವಗೊಳ್ಳುತ್ತಾರೆ ಮತ್ತು ತಮ್ಮ ನಂಬಿಕೆಯಲ್ಲಿ ದೃಢವಾಗಿ ಬೇರೂರುತ್ತಾರೆ. ಆದರೆ ಬಡವಾದ ನಾಯಕತ್ವವು (ಕೆಟ್ಟ ಕುರುಬರು) ವಿಶ್ವಾಸಿಗಳನ್ನು ಅವರ ನಂಬಿಕೆಯಲ್ಲಿ ದೃಢವಾಗಿರದಂತೆ ಮತ್ತು ಸೈತಾನನಿಗೆ ಸುಲಭವಾಗಿ ತುತ್ತಾಗುವಂತೆ ಮಾಡುತ್ತದೆ.

2) ಒಂದು ಸಭೆಯಲ್ಲಿನ ಭಕ್ತಿಯುತವಾದ ವಾತಾವರಣದ ಪ್ರಾಮುಖ್ಯತೆ. ಸಹೋದರ ಸ್ನೇಹ, ಸೇವಕನ ಮನೋಭಾವ, ದೀನತೆ ಮತ್ತು ಸಮರ್ಪಣೆ/ ಒಬ್ಬರಿಗೊಬ್ಬರು ಅಧೀನರಾಗಿರುವ ಸಭೆಯಲ್ಲಿ ವಿಶ್ವಾಸಿಗಳು ಆತ್ಮಿಕವಾಗಿ ಬೆಳೆಯುತ್ತಾರೆ. ಆದರೆ ಯಾವ ಸಭೆಯಲ್ಲಿ ವಾತಾವರಣವು ಅಹಂಕಾರ/ಗರ್ವ, ಸ್ವಾರ್ಥ, ದುರಾಶೆ, ಅಧಿಕಾರ ಪ್ರವೃತ್ತಿ ಮತ್ತು ಸ್ವಾರ್ಥ ಮನೋಭಾವದಿಂದ ತುಂಬಿರುತ್ತದೋ ಅಲ್ಲಿನ ವಿಶ್ವಾಸಿಗಳು ತಮ್ಮ ನಂಬಿಕೆಯಲ್ಲಿ ದೃಢವಾಗಿರುವುದಿಲ್ಲ ಮತ್ತು ಸೈತಾನನಿಗೆ ತುತ್ತಾಗುತ್ತಾರೆ.

3) ಒಂದು ಸಭೆಯಲ್ಲಿನ ಭಕ್ತಿಯುತವಾದ 'ದಿನಚರಿಗಳ' ಪ್ರಾಮುಖ್ಯತೆ. ಕೇವಲ ವ್ಯಕ್ತಿಗತ ವಿಶ್ವಾಸಿಗಳು ಮಾತ್ರವಲ್ಲ ಬದಲಾಗಿ ಇಡೀ ಸಭೆಯು *ಸ್ವಸ್ಥಚಿತ್ತವಾಗಿದ್ದು ಎಚ್ಚರವಾಗಿರಬೇಕು*. ನಿತ್ಯವಾದ ಆರಾಧನೆ ಕೂಟಗಳು, ಸ್ವಸ್ಥ ಸತ್ಯವೇದ ಬೋಧನೆ, ವಿಶ್ವಾಸಿಗಳು ವಿಭಿನ್ನವಾದ ಸೇವೆಗಳಲ್ಲಿ ಬೆಳೆಯಲು ಅವಕಾಶಗಳು ಇತ್ಯಾದಿ ಭಕ್ತಿಯುತವಾದ ದಿನಚರಿಗಳಿರಬೇಕು. ಈ ಎಲ್ಲಾ ಸಂಗತಿಗಳು ವಿಶ್ವಾಸಿಗಳಿಗೆ ಬೆಳೆಯಲು, ಪರಿಪಕ್ವಗೊಳ್ಳಲು ಮತ್ತು ತಮ್ಮ ನಂಬಿಕೆಯಲ್ಲಿ ದೃಢವಾಗಿ ಬೇರೂರಲು ಸಹಾಯಿಸುತ್ತವೆ. ಒಂದು ವೇಳೆ ಈ ಸಂಗತಿಗಳು ಇಲ್ಲದಿದ್ದರೆ ವಿಶ್ವಾಸಿಗಳು ತಮ್ಮ ನಂಬಿಕೆಯಲ್ಲಿ ದೃಢವಾಗಿರದೆ ಸೈತಾನನಿಗೆ ಸುಲಭವಾಗಿ ತುತ್ತಾಗುವರು.

ಈ ರೀತಿಯ ವಿಷಯಗಳ ಬಗ್ಗೆ ನಿಮ್ಮ ಅನುಭವಗಳೇನು?



*“ಕ್ರಿಸ್ತನು ಸಹ ನಿಮಗೋಸ್ಕರ ಬಾಧೆಯನ್ನನುಭವಿಸಿ ನೀವು ತನ್ನ ಹೆಜ್ಜೆಯ ಜಾಡಿನಲ್ಲಿ ನಡೆಯಬೇಕೆಂದು ಮಾದರಿಯನ್ನು ತೋರಿಸಿ ಹೋದನು” (1 ಪೇತ್ರ 2:21).*

*“ಕ್ರಿಸ್ತನು ಸಹ ನೀತಿವಂತನಾಗಿದ್ದು ಅನೀತಿವಂತರಿಗೋಸ್ಕರ ಪ್ರಾಣಕೊಟ್ಟು ನಮ್ಮನ್ನು ದೇವರ ಬಳಿಗೆ ಸೇರಿಸುವುದಕ್ಕಾಗಿ ಒಂದೇ ಸಾರಿ ಪಾಪನಿವಾರಣೆಗೋಸ್ಕರ ಬಾಧೆಪಟ್ಟು ಸತ್ತನು” (1 ಪೇತ್ರ 3:18).*

*“ಆದರೆ ನೀವು ಎಷ್ಟರ ಮಟ್ಟಿಗೂ ಕ್ರಿಸ್ತನ ಬಾಧೆಗಳಲ್ಲಿ ಪಾಲುಗಾರರಾಗಿದ್ದಿರೋ ಅಷ್ಟರ ಮಟ್ಟಿಗೆ ಸಂತೋಷವುಳ್ಳವರಾಗಿರಿ” (1 ಪೇತ್ರ 4:13).*

# ಉತ್ತರಗಳು 12. ಪೇತ್ರನು ಬರೆದ ಮೊದಲನೆಯ ಪತ್ರಿಕೆಯ ಕುರಿತು ಯೋಚಿಸಿರಿ

## ಶಿಕ್ಷಕರ ಗಮನಕ್ಕೆ

ಈ ಅಧ್ಯಯನವನ್ನು ನಿರ್ಲಕ್ಷಿಸಬೇಡಿರಿ!ವಿದ್ಯಾರ್ಥಿಗಳು ಹಿಂದಿನ ಅಧ್ಯಯನಗಳಲ್ಲಿ ಏನನ್ನು ಕಲಿತರೆಂಬುದನ್ನು ಕ್ರೋಢಿಕರಿಸಲು ಇದು ಸಹಾಯಕವಾಗಬಲ್ಲದು.

ವಿದ್ಯಾರ್ಥಿಗಳ ಮೇಲೆ ಅತಿಯಾದ ನಿರೀಕ್ಷೆಯನ್ನು ಇಡಬೇಡಿರಿ! ಪ್ರಶ್ನೆ 2 ಬಹಳ ಕಠಿಣವಾಗಿದೆ. ಹಾಗಾಗಿ ವಿದ್ಯಾರ್ಥಿಗಳು ಕಲಿತುಕೊಳ್ಳುವ ಅಂಶಗಳು ಪರಸ್ಪರ ಬಹಳ ವ್ಯತ್ಯಾಸವಾಗಿರುವುದು. ಬಲಹೀನ ವಿದ್ಯಾರ್ಥಿಗಳೆಡೆಗೆ ಕರುಣೆಯಿಂದಿರುವುದನ್ನು ನೆನಪಿಟ್ಟುಕೊಳ್ಳಿರಿ. ಎಲ್ಲಾ ವಿದ್ಯಾರ್ಥಿಗಳು ತಮ್ಮ ಶಕ್ತಿಗನುಸಾರವಾದ ಪ್ರಯತ್ನವನ್ನು ಮಾಡುವುದೇ ಮುಖ್ಯವಾದ ಸಂಗತಿಯಾಗಿದೆ.ಪರಿಶ್ರಮವು ಫಲಿತಾಂಶಕ್ಕಿಂತ ಹೆಚ್ಚು ಪ್ರಾಮುಖ್ಯವಾದದ್ದಾಗಿದೆ!

ವಿದ್ಯಾರ್ಥಿಗಳ ಸಾರಾಂಶವನ್ನು ಮೌಲ್ಯಮಾಪನ ಮಾಡಲು 3 ಅಳತೆಗೋಲನ್ನು ಬಳಸಿರಿ (ಪಶ್ನೆ 2):

1. ವಿಷಯಾಂಶ: ಸಾರಾಂಶವು a–gವರೆಗಿನ ಹೆಚ್ಚಿನ ಅಂಶಗಳನ್ನು ಒಳಗೊಂಡಿದೆಯೋ?
2. ರಚನೆ: ಸಾರಾಂಶವನ್ನು ವಿಸ್ತೃತವಾಗಿ ಬರೆದಿದ್ದಾರೋ ಅಥವಾ ಕೇವಲ ಕೆಲವು ಅಂಶಗಳ ಒಂದು ಪಟ್ಟಿಯನ್ನು ಬರೆದಿದ್ದಾರೋ?
3. ಭಾಷೆ: ಅವರು ಬರೆದಿರುವ ಪಠ್ಯವು ವಿಷಯಾಂಶವನ್ನು ಒಂದು ತರ್ಕ ಮತ್ತು ಸಂಬಂಧ ಕಲ್ಪಿಸುವ ವಿಧದಲ್ಲಿ ಪ್ರಸ್ತುತ ಪಡಿಸಿದ್ದಾರೋ? ಅಥವಾ ಒಬ್ಬ ಸಾಮಾನ್ಯ ಓದುಗನಿಗೆ ('ಸಭೆಯಲ್ಲಿನ ಒಬ್ಬ ಸ್ನೇಹಿತನಿಗೆ') ಅದು ಅರ್ಥವಾಗುವ ರೀತಿಯಲ್ಲಿದೆಯೋ?

## ಉತ್ತರಗಳು

1. –
2. ಕನಿಷ್ಟ ಪಕ್ಷ 1 ಪೇತ್ರದಲ್ಲಿನ ಹೆಚ್ಚಿನ ಪ್ರಾಮುಖ್ಯ ಸಂಗತಿಗಳೆಲ್ಲ ವಿದ್ಯಾರ್ಥಿಗಳ ಸಾರಾಂಶದಲ್ಲಿ ಒಳಗೊಂಡಿರಬೇಕಾಗಿದೆ:

    a. ದೇವರ ಕೃಪೆ (1:1, 10, 13, 4:10, 5:5, 10, 12)

    b. ಪ್ರವಾಸಿಗಳೂ ಚದುರಿಸಲ್ಪಟ್ಟವರೂ ಆಗಿ ಈ ಲೋಕದಲ್ಲಿ ವಿಶ್ವಾಸಿಗಳ ಜೀವನ (1:1, 6, 17, 2:11, 5:10)

    c. ಬಾಧೆ, ವಿಶ್ವಾಸಿಗಳ ಬಾಧೆ, ಅಂತೆಯೇ ಕ್ರಿಸ್ತನ ಬಾಧೆ (1:6, 11, 2:19–23, 3:14, 17, 4:1, 12–16, 19, 5:1, 9–10)

    d. ಯೇಸು ಕ್ರಿಸ್ತನ ಎರಡನೇ ಬರೋಣ, ದೇವರ ನ್ಯಾಯತೀರ್ಪಿನ ದಿನ ಮತ್ತು ಭವಿಷ್ಯದ/ಮುಂದಿನ ನಿತ್ಯ ಪ್ರಭಾವ (1:4–5, 7, 9, 3:9, 4:5,, 13, 5:1, 4, 10)

e. ಈ ಲೋಕದಲ್ಲಿ ಭಯಭಕ್ತಿಯಿಂದ ಜೀವಿಸುವುದು ಹೇಗೆ (1:13–16, 22, 2:1–3, 12–20, 3:1–9, 15, 4:1–11, 5:1–9)

f. ಅಂಶ a ಮತ್ತು eಗಳಿಗೆ ಹೆಚ್ಚುವರಿಯಾಗಿ ಸಭೆಯ ಸಿದ್ಧಾಂತ (2:1–4, 12)

g. ಯೇಸು ಕ್ರಿಸ್ತನು ಮತ್ತು ಆತನು ನಮಗಾಗಿ ಏನೆಲ್ಲಾ ಮಾಡಿದನು (1:2–3, 18–21, 2:21–25, 3:18, 21–22)

# ಪೇತ್ರನು ಬರೆದ ಎರಡನೆಯ ಪತ್ರಿಕೆಯ ಪರಿಚಯ ಭಾಗದ ಉತ್ತರಗಳು

## ಶಿಕ್ಷಕರ ಗಮನಕ್ಕೆ

1. ಈ ಪರಿಚಯ/ಪೀಠಿಕೆಯಲ್ಲಿಯೇ ಬಹಳಷ್ಟು ಸಮಯ ಕಳೆಯಬೇಡಿರಿ. ಮೊದಲ ಪಾಠದ ಅರ್ಧಭಾಗವು ಇದಕ್ಕೆ ಸಾಕು. ಆದರೆ ಪ್ರಾಮುಖ್ಯವಾದದ್ದನ್ನು ಅರಗಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಸಾಕಷ್ಟು ಸಮಯ ನೀಡಿರಿ.
2. ವಿದ್ಯಾರ್ಥಿಗಳು ಎಲ್ಲಾ ವಿವರಗಳನ್ನು ಕಂಠಪಾಠ ಮಾಡುವಂತೆ ಮಾಡಬೇಡಿರಿ. ಪುಸ್ತಕದ ಹಿನ್ನಲೆಗಾಗಿ ಅವರು ಕೆಲವು ಸಂಗತಿಗಳನ್ನು ಕಲಿತರೆ ಅಷ್ಟೇ ಸಾಕು. ಕೋರ್ಸಿನ ಕೊನೆಯಲ್ಲಿ ಅವರು ಈ ಪಾಠಕ್ಕೆ ಆನಂತರ ಬರಬಹುದು.
3. ನೀವು ವಿದ್ಯಾರ್ಥಿಗಳೊಂದಿಗೆ ಸ್ಪಂದಿಸುವಾಗ ಈ ಪೀಠಿಕೆವನ್ನು ಮುಗಿಸಲು ಪ್ರಯತ್ನಿಸಿರಿ.
4. ಗ್ರಂಥಾಲಯ ಸಮಯದಲ್ಲಿ ಇಡೀ ಪೀಠಿಕೆಯ ಭಾಗವನ್ನು ಮತ್ತೊಮ್ಮೆ ವಿದ್ಯಾರ್ಥಿಗಳು ಓದುವಂತೆ ಮಾಡುವುದರ ಮೂಲಕ ನೀವು ಅವರನ್ನು ಬಲಪಡಿಸಬಹುದು.

## ಉತ್ತರಗಳು

1. ಎರಡನೇ ಪೇತ್ರ ಪತ್ರಿಕೆಯು ಅಪೋಸ್ತಲನಾದ ಪೇತ್ರನಿಂದ ಬರೆಯಲ್ಪಟ್ಟಿದೆ ಎಂದು ಯಾಕೆ ಸತ್ಯವೇದ ಪಂಡಿತರು ಒಪ್ಪಿಕೊಳ್ಳುವುದಿಲ್ಲ ಎನ್ನುವುದಕ್ಕೆ 3 ಕಾರಣಗಳಿವೆ:
   a. ಇದರಲ್ಲಿನ ಭಾಷೆಯು 1ನೇ ಪೇತ್ರದಲ್ಲಿರುವುದಕ್ಕಿಂತ ವಿಭಿನ್ನವಾಗಿದೆ. ಹಾಗಾಗಿ 1 ಮತ್ತು 2ನೇ ಪೇತ್ರವನ್ನು ಒಬ್ಬನೇ ವ್ಯಕ್ತಿಯಿಂದ ಬರೆಯಲ್ಪಡಲು ಸಾಧ್ಯವಿಲ್ಲ.

   b. 2ನೇ ಪೇತ್ರದಲ್ಲಿ ವ್ಯವಹರಿಸುವ ವಿಷಯವು ನಂತರದ ಐತಿಹಾಸಿಕ ಸಮಯವನ್ನು ಪ್ರತಿಬಿಂಬಿಸುತ್ತದೆ. ಹಾಗಾಗಿ 2ನೇ ಪೇತ್ರ ಪತ್ರಿಕೆ ಬರೆಯುವ ವೇಳೆಗೆ ಪೇತ್ರನು ಸತ್ತಿರಬಹುದು.

   c. 2ನೇ ಪೇತ್ರ ಪತ್ರಿಕೆಯು ಪತ್ರಿಕೆಗಳ ಸಂಗ್ರಹವಾಗಿ ಸಭೆಗಳಲ್ಲಿ ಹಂಚಿಕೆಯಾದ ಪೌಲನ ಪತ್ರಿಕೆಗಳನ್ನು ಸೂಚಿಸುತ್ತದೆ. ಇದು ಪೇತ್ರನ ಜೀವಿತಾವಧಿಯಲ್ಲಿನ ವಿಷಯವಲ್ಲದಿರಬಹುದು.
2. ಈ ಸತ್ಯವೇದದ ಪಂಡಿತರನ್ನು ನಾನು ಈ ರೀತಿಯಲ್ಲಿ ಖಂಡಿಸುತ್ತೇನೆ:
   a. ಅವರ ಮೊದಲ ಅಂಶವು ಆಧಾರರಹಿತವಾದದ್ದು: 1ನೇ ಪೇತ್ರ ಪತ್ರಿಕೆಯು ಸಿಲ್ವಾನನ ಸಹಾಯದಿಂದ ಪೇತ್ರನಿಂದ ಬರೆಯಲ್ಪಟ್ಟಿದೆ. 2ನೇ ಪೇತ್ರ ಪತ್ರಿಕೆಯು ರೋಮಿನಲ್ಲಿ ಸೆರೆಯಾಗಿ ತನ್ನ ಸಾವಿಗಾಗಿ ಎದುರುನೋಡುತ್ತಿದ್ದಾಗ ಪೇತ್ರನಿಂದಲೇ ಬರೆಯಲ್ಪಟ್ಟಿದೆ. ಗ್ರೀಕ್ ಭಾಷೆ ಮತ್ತು ಶೈಲಿ ವಿಭಿನ್ನವಾಗಿರುವುದು ಅದ್ಭುತವೇನಲ್ಲ.

b. ಅವರ ಎರಡನೇ ಅಂಶವು ಸಹ ಆಧಾರವಿಲ್ಲದ್ದು: ಕನಿಷ್ಟ ಪಕ್ಷ 2ನೇ ಪೇತ್ರ ಪತ್ರಿಕೆ ಬರೆಯುವುದಕ್ಕಿಂತ 15 ವರ್ಷಗಳ ಮುಂಚೆ ಪೌಲನು ಬಹಳ ಅಧಿಕಾರದಿಂದ ಕೂಡಿರುವ ಅಪೋಸ್ತಲನಾಗಿದ್ದನು. ಈತನು ಮತ್ತು ಪೇತ್ರನು ರಕ್ತಸಾಕ್ಷಿಗಳಾಗುವುದಕ್ಕಿಂತ ಮುಂಚೆಯೇ ಈತನ ಪತ್ರಿಕೆಗಳು ಸ್ಥಳಿಯ ಸಭೆಗಳಲ್ಲಿ ಪ್ರತಿಗಳನ್ನು ಮಾಡಿ ಉಪಯೋಗಿಸಿದ್ದಿರಬಹುದು. ರೋಮನ್ ಸಾಮ್ರಾಜ್ಯದಲ್ಲಿ ಸಂಪರ್ಕವು ತುಂಬಾ ಉತ್ತಮವಾಗಿದ್ದು ಮತ್ತು ಸಾಮ್ರಾಜ್ಯದ ವಿಭಿನ್ನ ಭಾಗಗಳಿಂದಲೂವಿಶ್ವಾಸಿಗಳು ಒಬ್ಬರಿಗೊಬ್ಬರು ಸಂಪರ್ಕದಲ್ಲಿರುತ್ತಿದ್ದರು.

3. ಕ್ರಿ.ಶ. 65 ರಲ್ಲಿ ರೋಮ್‌ನಿಂದ ಪೇತ್ರನು ಈ ಪತ್ರಿಕೆಯನ್ನು ಬರೆದನೆಂದು ನಾನೆಣಿಸುತ್ತೇನೆ. ಇದಕ್ಕೆ ಇವು ನನ್ನ ಕಾರಣಗಳು:

a. ಹೆಚ್ಚು ಕಡಿಮೆ– ಅದೆ ಸಭೆಗಳಿಗೆ ಪೇತ್ರನ ಎರಡನೇ ಪತ್ರಿಕೆಯಾಗಿದೆ (3:1). ಆತನ ಮೊದಲನೆಯ ಪತ್ರಿಕೆಯು ರೋಮಿನಿಂದ ಬರೆಯಲ್ಪಟ್ಟಿದೆ.

b. ಆತನ ಸಾವಿಗಿಂತ ಸ್ವಲ್ಪ ಮೊದಲು ಇದು ಬರೆಯಲ್ಪಟ್ಟಿರಬಹುದು (1:13–14). ಚಕ್ರವರ್ತಿಯಾದ ನಿರೋ (ಈತನು ಕ್ರಿ.ಶ. 68 ರಲ್ಲಿ ಸತ್ತನು)ನ ಆಳ್ವಿಕೆಯಡಿಯಲ್ಲಿ ರೋಮಿನಲ್ಲಿ ಪೇತ್ರನು ರಕ್ತಸಾಕ್ಷಿಯಾದನು ಮತ್ತು ಕ್ರೈಸ್ತರ ಹಿಂಸೆಯೊಂದಿಗಿನ ಸಂಬಂಧದಲ್ಲಿ ಕ್ರಿ.ಶ.64 ರಲ್ಲಿ ರೋಮಿನ ಮಹಾ ಆಗ್ನಿಯ ನಂತರ ಸಂಭವಿಸಿರಬಹುದು ಎಂದು ನಂಬಲರ್ಹವಾದ ಇತರೇ ಸತ್ಯವೇದ ಮೂಲಗಳು ಹೇಳುತ್ತವೆ.

c. ಹಾಗಾಗಿ 'ಕ್ರಿ.ಶ. 65 ರ ಆಸುಪಾಸಿನಲ್ಲಿ ರೋಮಿನಲ್ಲಿ' ಎಂಬುದು ಈ ವಾಸ್ತವಾಂಶಗಳಿಗೆ ಸಮರ್ಪಕವಾದ ಸಾರಾಂಶವಾಗಿದೆ.



*ಚಿತ್ರಗಾರನ ಕಲ್ಪನೆಯಲ್ಲಿ ಪೇತ್ರನು*

# ಪೇತ್ರನು ಬರೆದ ಎರಡನೆಯ ಪತ್ರಿಕೆಯನ್ನು ಓದುವುದು ಭಾಗದ ಉತ್ತರಗಳು

## ಶಿಕ್ಷಕರ ಗಮನಕ್ಕೆ

1. 2ನೇ ಪೇತ್ರ ಅಧ್ಯಯನದ 4 ಮೊದಲ ಹಂತವನ್ನು ನಿರ್ಲಕ್ಷಿಸಬೇಡಿರಿ. ಈ ಕೋರ್ಸಿನ ಮೊದಲ ಪಾಠವನ್ನು ವಿದ್ಯಾರ್ಥಿಗಳು ಒಟ್ಟಾಗಿ ಕುಳಿತು ಓದುವುದಕ್ಕಾಗಿ ಉಪಯೋಗಿಸಿರಿ. ಅವರು 2 ಅಥವಾ 3 ಜನರ ಗುಂಪಾಗಿ ಕುಳಿತು ಕಾರ್ಯಮಾಡುವಂತೆ ನೋಡಿಕೊಳ್ಳಿರಿ. ಒಬ್ಬರಾದ ನಂತರ ಒಬ್ಬರು ಓದಲಿ.
2. ಪ್ರಶ್ನೆಗಳಿಗೆ ಉತ್ತರಗಳನ್ನು ಬೋಧಿಸಬೇಡಿರಿ. ಪ್ರಶ್ನೆಗಳ ಮುಖ್ಯ ಉದ್ದೇಶವು ಗಮನವಿಟ್ಟು ಓದಲು ಮತ್ತು ಅವರು ಓದಿದ್ದನ್ನು ಬೇಗನೆ ಪರಾಮರ್ಶಿಸಿ ಸಹಕರಿಸುವುದಕ್ಕಾಗಿದೆ. ಅವರು ಪ್ರಶ್ನೆಗಳಿಗೆ ಉತ್ತರಿಸಲು ಪ್ರಯತ್ನಿಸಿದ್ದಾರೋ ಎಂದು ಪರಿಶೀಲಿಸಿರಿ.
3. ವಿದ್ಯಾರ್ಥಿಗಳು ಪ್ರಶ್ನೆಗಳಿಗೆ ಉತ್ತರಿಸಿದ ವಿಧವನ್ನು ಮೌಲ್ಯಮಾಪನಮಾಡಿರಿ. ಇದು ನಿಮಗೆ ವಿದ್ಯಾರ್ಥಿಗಳ ತಿಳುವಳಿಕೆ/ಅರ್ಥೈಸಿಕೊಳ್ಳುವಿಕೆಯ ಒಂದು ಚಿತ್ರಣವನ್ನು ಕೊಡುತ್ತದೆ. ವಿದ್ಯಾರ್ಥಿಗಳ ಅಗತ್ಯಕ್ಕೆ ತಕ್ಕಂತೆ ನಿಮ್ಮ ಬೋಧನೆಯನ್ನು ಹೊಂದಿಸಿಕೊಳ್ಳಲು/ ಮಾರ್ಪಡಿಸಿಕೊಳ್ಳಲು ಈ ಚಿತ್ರಣವು ಸಹಾಯಿಸುತ್ತದೆ.
4. ಪ್ರಶ್ನೆ 5 ರಲ್ಲಿ ವಿದ್ಯಾರ್ಥಿಗಳಿಂದ ಉದ್ಭವಿಸಿದ ಸಂಗತಿ/ಪ್ರಶ್ನೆಗಳನ್ನು ಗಮನಿಸಿ ಪಟ್ಟಿಮಾಡಿಕೊಳ್ಳಿರಿ. ಅಧ್ಯಯನದ ಮೂಲಕ ಇದನ್ನೆಲ್ಲ ಪೂರ್ಣಗೊಳಿಸುವಂತೆ ನೋಡಿಕೊಳ್ಳಿರಿ. ಒಂದುವೇಳೆ ನೀವು ಮರೆತರೂ ನೆನಪಿಸುವಂತೆ ವಿದ್ಯಾರ್ಥಿಗಳಿಗೆ ಹೇಳಿರಿ.

## ಪ್ರಶ್ನೆಗಳಿಗೆ ಟಿಪ್ಪಣಿಗಳು:

1. ಪ್ರತಿ 3 ಅಧ್ಯಾಯಗಳಿಂದ ಪ್ರಾಮುಖ್ಯವಾದ ವಿಷಯಗಳು:
   a. ಅಧ್ಯಾಯ 1:
      - ಭಯಭಕ್ತಿಯುಳ್ಳ ಜೀವನದ ವರ್ಣನೆ (ವ.5–9)
      - ಕ್ರೈಸ್ತೀಯ ನಂಬಿಕೆಯ ಆಧಾರಗಳನ್ನು ಸ್ಥಾಪಿಸಿಕೊಳ್ಳುವುದರ ಪ್ರಾಮುಖ್ಯತೆ (ವ.12–15)
      - ಸತ್ಯ ಸುವಾರ್ತೆಗೆ/ಸುವಾರ್ತೆಯ ಸತ್ಯತೆಗಳಿಗೆ ಸಾಕ್ಷಿಗಳು (ವ.16, 21)

   b. ಅಧ್ಯಾಯ 2:
      - ಸಭೆಯಲ್ಲಿ ಸುಳ್ಳುಬೋಧಕರ ಉಪಸ್ಥಿತಿ (ವ.1–4)
      - ಹಳೆ ಒಡಂಬಡಿಕೆಯಿಂದ ದೇವರ ನ್ಯಾಯತೀರ್ಪು ಮತ್ತು ಶಿಕ್ಷೆಯ ಉದಾಹರಣೆಗಳು (ವ.4–9)

- ಸುಳ್ಳುಬೋಧಕರ ವರ್ಣನೆ (ವ.10–22)

c. ಅಧ್ಯಾಯ 3:

- ಪ್ರಾಮುಖ್ಯವಾದ ಸತ್ಯಗಳನ್ನು ಜ್ಞಾಪಿಸುವವುಗಳಿಗಾಗಿ ಪೇತ್ರನ ಪತ್ರಿಕೆಗಳು (ವ.1–2)
- ಕುಚೋದ್ಯಗಾರರು ಮತ್ತು ಕರ್ತನ ದಿನ (ವ.3–7)
- ಕರ್ತನ ದಿನದ ವರ್ಣನೆ (ವ.10)
- ಕರ್ತನ ದಿನವನ್ನು ಮುನ್ನೋಡುವ ಭಯಭಕ್ತಿಯುಳ್ಳ ಜನರಾಗಿ ಜೀವಿಸುವುದು ಹೇಗೆ (ವ.11–18)

2. ಅನೇಕರು 2 ಪೇತ್ರ ಒಂದು ಸವಾಲಿನ ಪುಸ್ತಕವೆನ್ನುವರು. ವೈಯಕ್ತಿಕವಾಗಿ ನನಗೆ ಕೆಲವು ಸವಾಲುಗಳು ಇಂತಿವೆ:

   a. ಸಭೆಯಲ್ಲಿ ಯಾವಾಗಲೂ ಸುಳ್ಳುಬೋಧಕರು ಇರುವುದು ವಾಸ್ತವಿಕ ಸಂಗತಿಯಾಗಿದೆ. ನನ್ನ ಕುರಿತಾಗಿ ಏನು? ನಾನೊಬ್ಬ ಸುಳ್ಳುಬೋಧಕನಾ? ಸುಳ್ಳುಬೋಧಕನಾಗುವುದನ್ನು ತಡೆಯಲು ನಾನೇನು ಮಾಡಬಹುದು? ಸುಳ್ಳುಬೋಧಕರನ್ನು ನಾವು ಹೇಗೆ ಗುರುತಿಸಬಹುದು? ಸಭೆಯಲ್ಲಿನ ಸುಳ್ಳುಬೋಧಕರೊಡನೆ ಹೇಗೆ ವ್ಯವಹರಿಸುತ್ತೇವೆ?

   b. ಭಯಭಕ್ತಿಯುತ ಜೀವನದ ವರ್ಣನೆ: ಪೇತ್ರನ ಅಪೇಕ್ಷೆಗೆ ನನ್ನ ಸಭೆ ಹೇಗೆ ಹೋಲುತ್ತದೆ? ನಾನು ಹೇಗೆ ಹೋಲುತ್ತೇನೆ?

   c. ನನ್ನ ಬೋಧನಾ ವರವನ್ನು ನಾನು ಹೇಗೆ ನಿಭಾಯಿಸುತ್ತೇನೆ? ಸುವಾರ್ತೆಯ ಸತ್ಯಾಂಶಗಳ ಬಗ್ಗೆ ಸಭೆಗಳಿಗೆ ಯಾವಾಗಲೂ ನಾನು ಎಚ್ಚರಿಸುತ್ತಾ/ನೆನಪಿಸುತ್ತಾ ಇರುತ್ತೇನಾ? ಅಥವಾ ಅತೀ ಪ್ರಾಮುಖ್ಯವಲ್ಲದ ಸಲಹೆಗಳಲ್ಲಿ ಸಮಯ ವ್ಯರ್ಥ ಮಾಡುತ್ತಿರುವೆನಾ?

   d. ಸುವಾರ್ತೆಗೆ ಹಳೆ ಒಡಂಬಡಿಕೆಯ ಸಾಕ್ಷಿಗಳನ್ನು ನಾನು ಹೇಗೆ ನಿಭಾಯಿಸುತ್ತೇನೆ (ಪ್ರವಾದಿಗಳ ನುಡಿಗಳು)? ನಾನು ಇದನ್ನು ಗಂಭೀರವಾಗಿ ಅಧ್ಯಯನ ಮಾಡುತ್ತೇನಾ?

   e. ಯೇಸು ಕ್ರಿಸ್ತನ ಎರಡನೇ ಬರೋಣದ ವಾಗ್ದಾನವನ್ನು ನಾನು ಹೇಗೆ ಎದುರಿಸುವೆನು?

3. ಅನೇಕರು 2ನೇ ಪೇತ್ರ ಓದಲು ಕಷ್ಟಕರವಾದ ಪುಸ್ತಕ ಎನ್ನುವರು. ನನಗೆ ಕಷ್ಟಕರವೆನಿಸುವ ಸಂಗತಿಗಳು ಇಂತಿವೆ:

   a. ಅನೇಕ ವಾಕ್ಯಗಳು ಉದ್ದ/ದೀರ್ಘವಾಗಿವೆ ಮತ್ತು ಗೊಂದಲಮಯವಾಗಿವೆ. ಇದು ಕೆಲವೊಮ್ಮೆ ಪೇತ್ರನು ಏನನ್ನು ಹೇಳುತ್ತಾನೆಂಬುದನ್ನು ಕಂಡುಹಿಡಿಯಲು ಕಠಿಣವಾಗುವಂತೆ ಮಾಡುತ್ತದೆ.

   b. ಯಾವಾಗಲೂ ಪೇತ್ರನು ತನ್ನ ಅಂಶಗಳನ್ನು ವಿವರಿಸುವುದಿಲ್ಲ. ಇದು ಪೇತ್ರನು ಏನನ್ನು ಹೇಳಲು ಪ್ರಯತ್ನಿಸುತ್ತಿದ್ದಾನೆಂಬುದರ ಬಗ್ಗೆ ನನ್ನನ್ನು ಅನಿಶ್ಚಿತನನ್ನಾಗಿಸುತ್ತದೆ.

c. ಅನೇಕ ಪದಗಳು ಅಸಾಮಾನ್ಯವಾಗಿವೆ ಮತ್ತು ಯಾವಾಗಲೂ ಸ್ಪಷ್ಟವಾಗಿಲ್ಲ. ಅನೇಕ ಪದಗಳ ಮತ್ತು ಹೇಳಿಕೆಗಳ ಪುನಾರವರ್ತನೆಯಿದೆ. ಇದು ನನ್ನನ್ನು ಗೊಂದಲಗೊಳಿಸುತ್ತದೆ.

d. ಕೆಲವೊಮ್ಮೆ ಹಿನ್ನಲೆಯ ಜ್ಞಾನದ ಕೊರತೆಯುಳ್ಳವನಾಗಿದ್ದೇನೆಂದು ಎಣಿಸುವೆನು. ಹಾಗಾಗಿ ಪೇತ್ರನು ತನ್ನ ಓದುಗರಿಗೆ ಏನನ್ನು ಹೇಳುತ್ತಿರುವನೆಂಬುದನ್ನು ಯೋಚಿಸುವುದನ್ನು ನಿಲ್ಲಿಸುತ್ತೇನೆ.

e. ಕೆಲವೊಮ್ಮೆ ಹಳೆ ಒಡಂಬಡಿಕೆಯ ವಾಕ್ಯಭಾಗಗಳು ಅರ್ಥೈಸಿಕೊಳ್ಳಲು ಕಠಿಣವಾಗಿವೆ (ಕ್ಲೀಷ್ಟಕರವಾಗಿವೆ)

4. ಈ ಪುಸ್ತಕದ 'ನಾದ' ಅಥವಾ 'ಭಾವ'ವನ್ನು ಕೆಳಕಂಡ ಶಬ್ದಗಳ ಮೂಲಕ ನಾನು ವರ್ಣಿಸುತ್ತೇನೆ: ಸವಾಲಿನದು, ಆಳವಾದ ದೈವಶಾಸ್ತ್ರದಿಂದ ಕೂಡಿದೆ, ಗಂಭೀರ, ಎಚ್ಚರಿಕೆಗಳಿಂದ ತುಂಬಿದೆ, ಬೆದರಿಸುವಂತದ್ದು, ಉತ್ತೇಜನಗಳಿಂದ/ಪ್ರಬೋಧನೆಗಳಿಂದ ಕೂಡಿದೆ.

5. ನಿಮಗೆ ಜೀರ್ಣಿಸಿಕೊಳ್ಳಲು/ಅರ್ಥೈಸಿಕೊಳ್ಳಲು ಕಷ್ಟಕರ ಅಥವಾ ಗೊಂದಲಮಯವೆನಿಸುವ ಕೆಲವು ಹೇಳಿಕೆಗಳು ಅಥವಾ ಸಿದ್ಧಾಂತಗಳನ್ನು ನೀವು ಕಂಡಿರಬಹುದು ಮತ್ತು ಈ ಕೋರ್ಸ್ ಅದನ್ನು ಪರಿಹರಿಸುವಂತೆ ನೀವು ಬಯಸಬಹುದು. ಆ ಹೇಳಿಕೆ ಅಥವಾ ಸಿದ್ಧಾಂತಗಳನ್ನು ಪಟ್ಟಿಮಾಡಿರಿ.

# ಉತ್ತರಗಳು 13. ವಂದನೆ, 1:1–2

ಕನ್ನಡದ ಭಾಷಾಂತರವು ನನ್ನ ಹೇಳಿಕೆಯನ್ನು ಬೆಂಬಲಿಸದೆ ಇರುವುದರಿಂದಉತ್ತರ 4 –c ಯಲ್ಲಿ ನೀಡಲಾಗಿರುವ ಮಾಹಿತಿಯು ಕೆಲವು ವಿದ್ಯಾರ್ಥಿಗಳನ್ನು ಗಲಿಬಿಲಿಗೊಳಿಸಬಹುದು. ಗ್ರೀಕ್ ಪಠ್ಯದ ಮಿತವಾದ ತಿಳುವಳಿಕೆಯು ಇರುವಾಗ ವಿವಿಧ ಭಾಷಾಂತರಗಳ ಮೊರೆ ಹೋಗಬೇಕಾಗುತ್ತದೆ. ಆಗ ಇಂತಹ ಸಮಸ್ಯೆಯು ಅನಿವಾರ್ಯವಾಗುತ್ತದೆ. 2 ಪೇತ್ರದುದ್ದಕ್ಕೂ ನೀವು ಇದಕ್ಕೆ ಅನೇಕ ಉದಾಹರಣೆಗಳನ್ನು ಕಾಣುವಿರಿ.

ಇದರ ಪರಿಣಾಮವಾಗಿ– ಒಂದು ಭಾಷಾಂತರವು ಮೂಲ ಪಠ್ಯವನ್ನು ಸರಿಯಾಗಿ ಪ್ರತಿಬಿಂಬಿಸುತ್ತದೋ ಇಲ್ಲವೋ ಎಂಬುದನ್ನು ಮೊದಲು ಖಚಿತಪಡಿಸಿಕೊಳ್ಳದೆ ಅದನ್ನೇ ನೇರವಾಗಿ ಆಧರಿಸುವುದರ ಮೂಲಕತಪ್ಪಾದ ಸಮಾರೋಪಗಳನ್ನು ತಲುಪುವ ಅಪಾಯದ ಕುರಿತು ವಿದ್ಯಾರ್ಥಿಗಳು ಮುನ್ನೆಚ್ಚರಿಕೆಯಿಂದಿರಬೇಕು.

## ಉತ್ತರಗಳು

1. ಈ ಮೂರು ವಚನಗಳು ಮೂರು ವಿಷಯಗಳನ್ನು ಒಳಗೊಂಡಿವೆ.

   a. ಕಳುಹಿಸುವವನ ಪರಿಚಯ/ನಿರೂಪಣೆ, ಪತ್ರಿಕೆಯ ಗ್ರಂಥಕರ್ತ (ವ.1).

   b. ಸ್ವೀಕೃತರ ವರ್ಣನೆ, ಪತ್ರಿಕೆಯನ್ನು ಸ್ವೀಕರಿಸುವವರು (ವ.1).

   c. ಆಶೀರ್ವಾದ (ವ.2).

2. ಪೇತ್ರನು ತನ್ನನ್ನು ಈ ರೀತಿಯಲ್ಲಿ ವರ್ಣಿಸಿಕೊಳ್ಳುತ್ತಾನೆ:

   a. ಪೇತ್ರನು: ಆತನು ಯೇಸು ಕ್ರಿಸ್ತನು ತನಗೆ ಕೊಟ್ಟ ಹೆಸರಿನೊಂದಿಗೆ ತನ್ನ ಸ್ವಂತ ಯೆಹೂದಿ ಹೆಸರನ್ನು ಉಪಯೋಗಿಸುತ್ತಾನೆ. (ಕೆಲವು ಗ್ರೀಕ್ ಪ್ರತಿಗಳಲ್ಲಿ 'ಸಿಮೆಯೋನ್' ಎಂಬ ದೀರ್ಘವಾದ ರೂಪ ಒಳಗೊಂಡಿದೆ). 'ಪೇತ್ರ' ಎಂಬುದು 'ಬಂಡೆ'ಗೆ ಸಂಬಂಧಿಸಿದ ಗ್ರೀಕ್ ಪದದಿಂದ ಬಂದಿದೆ (ಮಾರ್ಕ 3:16)

   b. ಯೇಸು ಕ್ರಿಸ್ತನ ದಾಸನೂ ಮತ್ತು ಅಪೋಸ್ತಲನೂ: ಇವೆರಡೂ ಪದಗಳೂ ಸಹ ಪೇತ್ರನಿಗೆ ದೇವರಿಂದ ಕೊಡಲ್ಪಟ್ಟ ಅಧಿಕಾರವನ್ನು ಸೂಚಿಸುತ್ತವೆ. ಹಳೆ ಒಡಂಬಡಿಕೆಯಲ್ಲಿ ತನ್ನನ್ನು ಸೇವಿಸುವುದಕ್ಕಾಗಿ ತಾನು ಅವರಿಗೆ ತನ್ನ ಅಧಿಕಾರವನ್ನು ಕೊಟ್ಟಿದ್ದೇನೆಂಬುದನ್ನು ತೋರಿಸಲು ದೇವರು ಪ್ರವಾದಿಗಳನ್ನು (ಉದಾ: ಯೆಶಾಯ, ಯೆರೆಮೀಯ) ಮತ್ತು ಅರಸರನ್ನು (ಉದಾ: ದಾವೀದ) 'ಸೇವಕರು' ಎಂದು ಕರೆದಿದ್ದಾನೆ.

      'ಅಪೋಸ್ತಲ' ಎಂಬುದು ಒಂದು ಗ್ರೀಕ್ ಪದವಾಗಿದೆ. ಇದರರ್ಥ– ಸಂದೇಶಕ, ರಾಯಭಾರಿ ಎಂಬುದಾಗಿದೆ. ಯೇಸು ಕ್ರಿಸ್ತನು ತನ್ನ ಹಿಂಬಾಲಕರಲ್ಲಿ ಮತ್ತು ಶಿಷ್ಯರಲ್ಲಿ 12 ಜನರನ್ನು *ತನ್ನ ಸಂಗಡ ಇರಬೇಕೆಂತಲೂ ಸುವಾರ್ತೆಯನ್ನು ಸಾರುವುದಕ್ಕೆ ತಾನು ಅವರನ್ನು ಕಳುಹಿಸುವೆನೆಂತಲೂ ಅವರನ್ನು ಆರಿಸಿ ನೇಮಿಸಿದನು* (ಮಾರ್ಕ 3:14). ಅವರಲ್ಲಿ

ಪೇತ್ರನೆಂದು ಕರೆಯಲ್ಪಡುವ ಸಿಮೋನನಿದ್ದನು (ಮತ್ತಾಯ 10:2).ಆದಿ ಯೆರೂಸಲೇಮಿನ ಸಭೆಯಲ್ಲಿ ಅಪೋಸ್ತಲನಾಗಲು ಇರಬೇಕಾದ ಒಂದು ಅತೀ ಪ್ರಾಮುಖ್ಯವಾದ ಅರ್ಹತೆಯೆಂದರೆ ಆತನು ಯೇಸು ಕ್ರಿಸ್ತನ ಸೇವೆ, ಮರಣ ಮತ್ತು ಪುನರುತ್ಥಾನಕ್ಕೆ ಸಾಕ್ಷಿಯಾಗಿರಬೇಕಾಗಿತ್ತು (ಅ.ಕೃ. 1:21–22). ಹೊಸ ಒಡಂಬಡಿಕೆಯಲ್ಲಿ ಇತರೆ ಸಭಾನಾಯಕರು, ಮಿಶನರಿಗಳು ಮತ್ತು ಸಭಾಸ್ಥಾಪಕರಿಗೂ ಸಹ 'ಅಪೋಸ್ತಲ' ಎಂಬ ಪದವನ್ನು ಬಳಸಲಾಗಿದೆ. ಉದಾ: ಯೇಸುವಿನ ಸಹೋದರನಾದ ಯಾಕೋಬ (ಗಲಾತ್ಯ 1:19), ಪೌಲ (ಅ.ಕೃ 14:14, ರೊಮಾ 1:1), ಬಾರ್ನಬ (ಅ.ಕೃ 14:14) ಮತ್ತು ಒಬ್ಬ ಸ್ತ್ರೀ (ಯೂನ್ಯಳು, ರೋಮಾ 16:7).

3. ಈ ಪತ್ರಿಕೆಯ ಓದುಗರು ಮತ್ತು ಅವರ ನಂಬಿಕೆಯ ಬಗ್ಗೆ ನಾವು 3 ಸಂಗತಿಗಳನ್ನು ಕಲಿಯುತ್ತೇವೆ:

   a. ಅವರು ವಿಶ್ವಾಸಿಗಳು: ಅವರು *ನಂಬಿಕೆಯನ್ನು ಸ್ವೀಕರಿಸಿದವರು.*

   b. ಅವರ ನಂಬಿಕೆಯು ಪೇತ್ರನದಂತೆ ಅಮೂಲ್ಯವಾಗಿತ್ತು. ಅವರು ಹೊಸ ವಿಶ್ವಾಸಿಗಳಾಗಿದ್ದು ಸುಳ್ಳುಬೋಧಕರುಗಳಿಗೆ ಸುಲಭವಾಗಿ ಸಿಲುಕುವಂತಾದರೂ ಅವರ ನಂಬಿಕೆಯ ಗುಣಮಟ್ಟದಲ್ಲಿ ಯಾವುದೇ ತಪ್ಪಿರಲಿಲ್ಲ.

   c. ಇದಕ್ಕೆ ಕಾರಣ, ಅವರ ನಂಬಿಕೆಯು ಸ್ವತಃ ಅವರಿಂದ ಹುಟ್ಟಿರುವಂತದ್ದಲ್ಲ ಮತ್ತು ಇದು ಅವರ ಮೇಲೆ ಆಧಾರಗೊಂಡಿರುವಂತದ್ದಲ್ಲ. ಇದು ಅವರ ದೇವರು ಮತ್ತು ರಕ್ಷಕನಾದ ಯೇಸು ಕ್ರಿಸ್ತನಿಂದ ಬಂದಂತ ನಂಬಿಕೆಯಾಗಿದೆ. ಮತ್ತು ಇದು ಯೇಸು ಕ್ರಿಸ್ತನ ನೀತಿವಂತಿಕೆ ಮೇಲೆ ಆಧಾರಗೊಂಡಿರುವುದೇ ವಿನಃ ಅವರ ನೀತಿವಂತಿಕೆ ಮೇಲೆ ಅಲ್ಲ.

4. ಈ ಎರಡು ವಚನಗಳಲ್ಲಿ ಯೇಸು ಕ್ರಿಸ್ತನ ಬಗ್ಗೆ ನಾವು 5 ಸಂಗತಿಗಳನ್ನು ಕಲಿಯುತ್ತೇವೆ:

   a. ಆತನು ಮೆಸ್ಸೀಯನಾದ ಕ್ರಿಸ್ತನು.

   b. ಆತನು ನಮ್ಮ ರಕ್ಷಕನು.

   c. ಆತನು ನಮ್ಮ ದೇವರು (ದೇವರು ಮತ್ತು ರಕ್ಷಕನಾದ ಯೇಸು ಕ್ರಿಸ್ತನು ಎಂಬ ಹೇಳಿಕೆ ಕನ್ನಡದ ಭಾಷಾಂತರದಲ್ಲಿ ಪ್ರತಿಬಿಂಬಿಸಿಲ್ಲ, ಬದಲಾಗಿ ಅಲ್ಲಿ ದೇವರು ಮತ್ತು ನಮ್ಮ ರಕ್ಷಕನಾದ ಯೇಸು ಕ್ರಿಸ್ತನ ನೀತಿಯಿಂದ, ಎಂದಿದೆ). ಯೇಸು ಕ್ರಿಸ್ತನು ನಮ್ಮ ದೇವರೂ ಮತ್ತು ರಕ್ಷಕನೂ ಆಗಿದ್ದಾನೆ.

   d. ಆತನು ನಮ್ಮ ಕರ್ತನು. ಪೇತ್ರನು ಯೆಹೂದ್ಯನಿಗೆ 'ಕರ್ತನು' ಎಂಬುದು ಹಳೆ ಒಡಂಬಡಿಕೆಯ 'ಕರ್ತನ'ನ್ನು ಸೂಚಿಸುತ್ತದೆ. ಹಾಗಾಗಿ ಯೇಸು ಕ್ರಿಸ್ತನು ದೇವರೆಂದು ಸಾರುವುದಕ್ಕೆ ಹೊಸ ಒಡಂಬಡಿಕೆಯ ಬರಹಗಾರರಿಗೆ ಇದು ಇನ್ನೊಂದು ವಿಧವಾಗಿದೆ.

   e. ಆತನು 'ನಮ್ಮ ಕರ್ತನು' ಹಾಗಾಗಿ ನಾವು ಆತನೊಂದಿಗೆ ಒಂದು ಒಡಂಬಡಿಕೆಯ ಸಂಬಂಧವನ್ನು ಹೊಂದಿದ್ದೇವೆ.

5. ‘ಪರಿಜ್ಞಾನದ/ತಿಳುವಳಿಕೆಯ’ ಮೂಲಕ ತನ್ನ ಓದುಗರು ಕೃಪೆ ಮತ್ತು ಶಾಂತಿಯಿಂದ ಆಶೀರ್ವದಿಸಲ್ಪಡುವರು ಎಂದು ಪೇತ್ರನು ಹೇಳುವುದು ನನಗೆ ಆಶ್ಚರ್ಯಕರವಾಗಿ ತೋರುತ್ತದೆ. ‘ತಿಳಿದುಕೊಳ್ಳುವುದು’ ಮತ್ತು ‘ಜ್ಞಾನ’ ಇವೆರಡೂ 2 ಪೇತ್ರದಲ್ಲಿ ಪ್ರಾಮುಖ್ಯ ಪದಗಳಾಗಿವೆ. ಆದರೆ ಇಂಗ್ಲಿಷ್ ಭಾಷಾಂತರಗಳು ಪೇತ್ರನು ಎರಡು ವಿಭಿನ್ನವಾದ ಆದರೆ ಸಂಬಂಧಿಸಿದ ಪದಗಳನ್ನು ಬಳಸುತ್ತಾನೆಂಬುದನ್ನು ಪ್ರತಿಬಿಂಬಿಸುವುದಿಲ್ಲ (ಕನ್ನಡದಂತಲ್ಲ). ಇಲ್ಲಿ ಉಪಯೋಗಿಸಿದ ಪದದ ಅರ್ಥವೇನಂದರೆ– ‘ವೈಯಕ್ತಿಕ ತಿಳುವಳಿಕೆ/ಜ್ಞಾನ, ಅನುಭವದಿಂದ ತಿಳಿದುಕೊಳ್ಳುವುದು’. ಉದಾಹರಣೆಗೆ: ವ.6–7 ರಲ್ಲಿ ಬಳಸಿದ ಪದದ (ಕನ್ನಡದ ಭಾಷಾಂತರಗಳಲ್ಲಿ ಜ್ಞಾನ ಎಂದಿದೆ) ಅರ್ಥವುಬೌದ್ಧಿಕ ತಿಳುವಳಿಕೆಯಾಗಿದೆ.



## ಅವಲೋಕನ

ಕೆಲವು ಪರಿಚಯದ ಹೇಳಿಕೆಗಳಿಗೆ ಪೇತ್ರನು ಅನೇಕ ದೈವಶಾಸ್ತ್ರಗಳನ್ನು ತುಂಬಿಸುತ್ತಾರೆಂಬುದನ್ನು ನಾವು ಕಾಣುತ್ತೇವೆ. ಆತನ ಪತ್ರವನ್ನು ಅತೀ ಆಳವಾಗಿ ಸಮಯ ತೆಗೆದುಕೊಂಡು ಓದುವುದು ನಮಗೆ ಯೋಗ್ಯವೆನಿಸುತ್ತದೆ.

# ಉತ್ತರಗಳು 14. ನಿಮ್ಮ ಕರೆ ಮತ್ತು ಆಯ್ಕೆಯನ್ನು ದೃಢಪಡಿಸಿಕೊಳ್ಳಿರಿ, 1:3–11

## ಶಿಕ್ಷಕರ ಗಮನಕ್ಕೆ

ಈ ವಾಕ್ಯಭಾಗವು ಅನೇಕ ದೈವಶಾಸ್ತ್ರವನ್ನು ಒಳಗೊಂಡಿದೆ. ಹಾಗಾಗಿ ವಿದ್ಯಾರ್ಥಿಗಳಿಗೆ ಸಾಕಷ್ಟು ಸಮಯಾವಕಾಶಬೇಕು. ಪ್ರಶ್ನೆಗಳಿಗೆ ತಮ್ಮದೇ ಸ್ವಂತ ಉತ್ತರಗಳೊಂದಿಗೆ ಬರುವುದಕ್ಕೆ ಮಾತ್ರವಲ್ಲ. ಆದರೆ ಕೆಳಗೆ ಕೊಡಲ್ಪಟ್ಟ ಉತ್ತರಗಳನ್ನು ಜೀರ್ಣಿಸಿಕೊಳ್ಳಲು ಖಂಡಿತವಾಗಿಯೂ ನಿಮ್ಮಿಂದ ಅವರಿಗೆ ಸಾಕಷ್ಟು ಸಹಾಯದ ಅಗತ್ಯವಿದೆ.

ಈ ಅಧ್ಯಯನದಲ್ಲಿ ಪಠ್ಯದಲ್ಲಿ ನಾನು ಅನೇಕ ವಿವರಗಳಿಗೆ ಹೋಗುತ್ತೇನೆ. ಹೆಚ್ಚಾಗಿ ನಾನು ಇಂಗ್ಲಿಷಿನ ಎನ್‌ಐವಿ ಭಾಷಾಂತರವನ್ನು ಬಳಸಿದ್ದೇನೆ. ಇದರರ್ಥ ನನ್ನ ಎಲ್ಲಾ ಅಂಶಗಳೂ ಕನ್ನಡದಲ್ಲಿ ಸ್ಪಷ್ಟವಾಗಿ ಇಲ್ಲದೇ ಇರಬಹುದು. ಹಾಗಾಗಿ ತರಗತಿಯನ್ನು ಎದುರಿಸುವುದಕ್ಕಿಂತ ನೀವು ಪೂರ್ಣ ಸಿದ್ಧರಾಗಿರಿ.

ಅಧ್ಯಯನ 1 ರಲ್ಲಿ ನಾವು 'ಆಯ್ಕೆ'ಯ ಬಗ್ಗೆ ಕಲಿತಿದ್ದೇವೆ. ಕೆಳಕಂಡ ಪ್ರಶ್ನೆ 5 ರ ಉತ್ತರವು ಈ ವಿವಾದಾತ್ಮಕ ಸಂಗತಿಯ ಬಗ್ಗೆ ಹೆಚ್ಚು ಹಿನ್ನೆಲೆಯ ಮಾಹಿತಿಯನ್ನು ಒಳಗೊಂಡಿದೆ. ಪೆಂಟೆಕೊಸ್ಟಲ್ ಮತ್ತು ಕರಿಶ್ಮಾಟಿಕ್ ದೈವಶಾಸ್ತ್ರದ ವಿದ್ಯಾರ್ಥಿಗಳಿಗಿರುವ ಒಂದು ಸಮಸ್ಯೆಯೆಂದರೆ– ವ್ಯವಸ್ಥಿತವಾದ ದೈವಶಾಸ್ತ್ರ, ಹೆಚ್ಚಿನ ಸತ್ಯವೇದ ಕಮೆಂಟರಿಗಳು ಮತ್ತು ಸತ್ಯವೇದದ ಶಬ್ದಕೋಶಗಳ ಕುರಿತಾದ ಪುಸ್ತಕಗಳೆಲ್ಲವೂ ಪರಿಷ್ಕರಿಸಿದ (ಅಥವಾ ಕ್ಯಾಲ್ವಿನ್ ವಾದ) ದೃಷ್ಟಿಕೋನ/ನಿಲುವನ್ನು ಆತುಕೊಂಡಿದೆ. ಇದು ಅನಾನುಕೂಲರನ್ನಾಗಿ ಅಥವಾ ಗಲಿಬಿಲಿಯುಳ್ಳವರನ್ನಾಗಿಸುತ್ತದೆ.

ಆತ್ಮಿಕ ಕೂಟದ 6 ನೇ ವಿಭಾಗವು (ಆತ್ಮಿಕ ಕೂಟ ಪುಸ್ತಕ ನೋಡಿ) ದಕ್ಷಿಣ ಭಾರತದ ಹಿನ್ನಲೆಯಲ್ಲಿ 'ತಮ್ಮ ಕರೆ ಮತ್ತು ಆಯ್ಕೆಯನ್ನು ದೃಢಪಡಿಸಿಕೊಳ್ಳಿರಿ' ಎಂಬುದರ ಅರ್ಥವೇನೆಂದು ವಿದ್ಯಾರ್ಥಿಗಳ ತಿಳುವಳಿಕೆಯನ್ನು ಆಳಗೊಳಿಸುತ್ತದೆ. ಯೇಸು ಕ್ರಿಸ್ತನ ಕುರಿತಾದ ತಿಳುವಳಿಕೆ ಮತ್ತು ಭಯಭಕ್ತಿಯಿಂದ ಜೀವಿಸುವುದರ ನಡುವೆ ಒಂದು ರೀತಿಯ ಸೈದ್ಧಾಂತಿಕ/ಸತ್ಯವೇದಾಂತಿಕವಾದ ಸಮತೋಲನದ ಅವಶ್ಯಕವಿದೆ. ಸಮತೋಲನತೆಯನ್ನು ಅಭ್ಯಸಿಸಲು ಅವರು ಆತ್ಮಿಕವಾಗಿ ಬೆಳೆದಂತೆಲ್ಲಾ– ಅದು ಅವರನ್ನು ಉತ್ತಮವಾದ ಮರಣಕ್ಕೆ ಸಿದ್ಧಗೊಳಿಸುತ್ತದೆ ಮತ್ತು ತಮ್ಮ ಕರ್ತನೂ ರಕ್ಷಕನೂ ಆದ ಯೇಸು ಕ್ರಿಸ್ತನೊಂದಿಗೆ ನಿತ್ಯತ್ವವನ್ನು ಎದುರಿಸಲು ಅವರನ್ನು ಸಿದ್ಧಗೊಳಿಸುತ್ತದೆ.

## ಉತ್ತರಗಳು

1. ವಚನ 3 ರಲ್ಲಿ ಮುಖ್ಯ ಪದ 'ಪ್ರಭಾವ' ಮತ್ತು ವಚನ 4 ರಲ್ಲಿ ಮುಖ್ಯ ಪದ 'ವಾಗ್ದಾನಗಳು'. ಈ ವಚನಗಳಲ್ಲಿ ಯೇಸು ಕ್ರಿಸ್ತನ 'ಪ್ರಭಾವ' ಮತ್ತು 'ವಾಗ್ದಾನಗಳ' ಬಗ್ಗೆ ಅನೇಕ ಸಂಗತಿಗಳನ್ನು ಕಲಿಯುತ್ತೇವೆ:

    a. ಯೇಸು ಕ್ರಿಸ್ತನ ಪ್ರಭಾವ:

- ಇದು ವೈಯಕ್ತಿಕವಾದದ್ದು: ಯೇಸು ಕ್ರಿಸ್ತನು ದೇವರಾಗಿರುವುದರಿಂದ ಈ ಪ್ರಭಾವವು ದೇವರಿಂದ ಬಂದದ್ದಾಗಿದೆ.

- ಇದು ನಮಗೆ ಒಂದು ವರವಾಗಿದೆ: ಇದಕ್ಕೆ ನಾವು ಯೋಗ್ಯರಲ್ಲ. ಆದರೆ ನಾವಿದನ್ನು ಸ್ವೀಕರಿಸಬೇಕು. ಸ್ವೀಕರಿಸುವವರೆಗೂ ಮತ್ತು ಉಪಯೋಗಿಸುವವರೆಗೂ ವರ/ಕಾಣಿಕೆ/ಉಡುಗರೆ/ಬಹುಮಾನಗಳು ನಿಷ್ಪ್ರಯೋಜಕವಾಗಿವೆ. ಹಾಗಾಗಿ ವರ/ಬಹುಮಾನವನ್ನು ಸ್ವೀಕರಿಸುವಲ್ಲಿ ಒಂದು ಕರೆಯು ಒಳಗೊಂಡಿದೆ. ಆತನು ನಮ್ಮನ್ನು ತನ್ನ ಪ್ರಭಾವದ ಗುಣಾತಿಶಯಗಳಿಂದ ಕರೆದಿದ್ದಾನೆ (ಪ್ರಭಾವ ಮತ್ತು ಗುಣಾತಿಶಯ ಎಂಬ ಪದ ಬಳಸಲಾಗಿದೆ).

- ನಾವು ಭಯಭಕ್ತಿಯಿಂದ ಜೀವಿಸುವುದಕ್ಕೆ ನಮಗೆ ಈ ವರ/ಬಹುಮಾನ ಬೇಕಾಗಿದೆ. (ಜೀವನ ಮತ್ತು ದೈವಿಕತೆ/ಭಕ್ತಿಭಾವವು ಭಯಭಕ್ತಿಯುಳ್ಳ ಜೀವನದ ಬಗ್ಗೆ ತಿಳಿಸುವುದಕ್ಕೆ ಒಂದು ಸತ್ಯವೇದಾಂತಿಕವಾದ ವಿಧವಾಗಿದೆ). ಹಾಗಾಗಿ ನಮಗಾಗಿನ ಆತನ ವರದೊಂದಿಗೆ ಒಂದು ಉದ್ದೇಶವಿದೆ.

- ನಾವು ಯೇಸು ಕ್ರಿಸ್ತನನ್ನು ತಿಳಿದಂತೆಲ್ಲ ಆ ವರವು ಸ್ವೀಕರಿಸಲ್ಪಡುತ್ತದೆ. ನಾವು ಆತನನ್ನು ಅರಿಯದೆ ಹೋದರೆ ನಾವು ಆ ವರವನ್ನು ಹೊಂದಲಾಗುವುದಿಲ್ಲ. ಇಲ್ಲಿ 'ತಿಳಿದುಕೊಳ್ಳುವುದು' ಎಂಬ ಪದಕ್ಕೆ ಅರ್ಥ 'ಅನುಭವದ ಮೇಲೆ ಆಧಾರಿತವಾದ ವೈಯಕ್ತಿಕ ತಿಳುವಳಿಕೆ, ಜ್ಞಾನ' ಎಂಬುದಾಗಿದೆ. ಯೇಸು ಕ್ರಿಸ್ತನು ನಮ್ಮ ದೈನಂದಿನ ಜೀವನದ ಭಾಗವಾಗಿರಬೇಕು.

- ನಾವು ಆತನನ್ನು ತಿಳಿದಿರುವುದರಿಂದ ಆತನು ನಮ್ಮಿಂದ ಅಪೇಕ್ಷಿಸುವ ಭಯಭಕ್ತಿಯುಳ್ಳ ಜೀವನದ ಗುಣಮಟ್ಟವನ್ನು ಸಹ ನಾವು ತಿಳಿದಿದ್ದೇವೆ. ಹೆಚ್ಚು ಹೆಚ್ಚಾಗಿ ಆತನಂತೆ ಆಗುವುದೇ ನಮ್ಮ ಭಯಭಕ್ತಿಯ ಗುರಿ/ಉದ್ದೇಶವಾಗಿರಬೇಕು. ಹಾಗಾಗಿ ನಮ್ಮ ಮೇಲಿನ ಯೇಸು ಕ್ರಿಸ್ತನು ಹೆಚ್ಚಿನ ನಿರೀಕ್ಷೆಯಿಟ್ಟಿದ್ದಾನೆ.

- ಆದರೆ ಶುಭ ಸಂದೇಶವೆಂದರೆ – ದೇವರನ್ನು ಮೆಚ್ಚಿಸುವ ಮತ್ತು ಗೌರವಿಸುವ ಜೀವನವನ್ನು ಜೀವಿಸುವುದಕ್ಕೆ ಆತನು ನಮಗೆ ತನ್ನ ಶಕ್ತಿಯನ್ನು ಕೊಟ್ಟಿದ್ದಾನೆ.

b. ಯೇಸು ಕ್ರಿಸ್ತನ ವಾಗ್ದಾನಗಳು:

- ಅವುಗಳು ಯೇಸು ಕ್ರಿಸ್ತನ ಪ್ರಭಾವದ ಗುಣಾತಿಶಯಗಳ ಮೂಲಕ ಕೊಡಲ್ಪಟ್ಟಿವೆ.

- ಅವುಗಳುಉತ್ಕೃಷ್ಟವಾಗಿವೆ ಮತ್ತು ಅಮೂಲ್ಯವಾಗಿವೆ.

- ಅವುಗಳುನಮಗಾಗಿ ಎರಡು ಸಂಗತಿಗಳನ್ನು ಸಾಧ್ಯವಾಗಿಸುತ್ತವೆ:ಮೊದಲನೆಯದಾಗಿ, ಅವು ನಾವು *ದೈವಸ್ವಭಾವದಲ್ಲಿ ಪಾಲುಗಾರರಾಗುವಂತೆ* ಸಾಧ್ಯವಾಗಿಸುತ್ತವೆ. ಇದರರ್ಥ ನಾವು ರಕ್ಷಿಸಲ್ಪಟ್ಟಿದ್ದೇವೆಂಬುದಾಗಿದೆ. ನಾವು ಪವಿತ್ರಾತ್ಮನಿಂದ ಹುಟ್ಟಿದ್ದೇವೆ. ಪವಿತ್ರಾತ್ಮನು ನಮ್ಮ ಹೃದಯವನ್ನು ಪ್ರವೇಶಿಸಿ ನಾವು ಆತ್ಮಿಕವಾಗಿ ಬದುಕುವಂತೆ ಮಾಡುತ್ತಾನೆ. ನಮ್ಮ ಪಾಪ ಮತ್ತು ಅಪರಾಧಗಳಲ್ಲಿ ಸತ್ತವರಾಗಿದ್ದ ನಾವು

ಕ್ರಿಸ್ತನೊಂದಿಗೆ ಬದುಕಿಸಲ್ಪಟ್ಟವರಾಗಿದ್ದೇವೆ (ಎಫೆಸ 2:1, ಕೊಲೊಸ್ಸೆ 2:13).ಎರಡನೆಯದಾಗಿ,*ಈ ಲೋಕದಲ್ಲಿ ದುರಾಶೆಯಿಂದುಂಟಾದ ಕೆಟ್ಟತನಕ್ಕೆ ನಾವು ತಪ್ಪಿಸಿಕೊಳ್ಳುತ್ತೇವೆ.* ಇದರರ್ಥ ನಿತ್ಯತ್ವಕ್ಕಾಗಿ ನಮಗೊಂದು ನಿರೀಕ್ಷೆಯಿದೆ. ಕರ್ತನ ದಿನ ಬಂದು ಈ ದುಷ್ಟಲೋಕಕ್ಕೆ ಮತ್ತು ಅದರ ಎಲ್ಲಾ ದುಷ್ಟ ಆಶೆಗಳಿಗೆ ಅಂತ್ಯವನ್ನು ಹಾಕುವಾಗ ನಮ್ಮ ಅಂತಿಮ ರಕ್ಷಣೆಯ ದಿನವು ಬರುವುದಾಗಿದೆ. ಯುಗಯುಗಕ್ಕೂ ನಾವು ನಮ್ಮ ರಕ್ಷಕನಾದ ಯೇಸು ಕ್ರಿಸ್ತನೊಂದಿಗೆ ಇರುವೆವು.

ಹಾಗಾಗಿ ವಚನ 4 ರಲ್ಲಿನಾವು ನಮ್ಮ ರಕ್ಷಣೆಯ ಮೇಲೆ ಎರಡು ದೃಷ್ಟಿಕೋನಗಳನ್ನು ಕಾಣುತ್ತೇವೆ: ಯೇಸು ಕ್ರಿಸ್ತನನ್ನು ನಮ್ಮ ಸ್ವಂತ ರಕ್ಷಕನನ್ನಾಗಿ ಸ್ವೀಕರಿಸುವಾಗ ನಾವು ದೇವರ ರಾಜ್ಯವನ್ನು ಸೇರುತ್ತೇವೆ. 'ಈಗ ನಾವು ರಕ್ಷಿಸಲ್ಪಡುತ್ತೇವೆ',ಯೇಸು ಕ್ರಿಸ್ತನು ಮಹಿಮೆಯಲ್ಲಿ ಬರುವಾಗ ದೇವರ ರಾಜ್ಯವು ಪೂರ್ಣವಾಗಿ ಪ್ರಜ್ವಲಿಸುತ್ತದೆ, 'ನಾವು ನಿತ್ಯನಿತ್ಯಕ್ಕೂ ರಕ್ಷಿಸಲ್ಪಡುತ್ತೇವೆ'.

2. ನಮಗೆ ಜೀವಕ್ಕೆ ಮತ್ತು ಭಕ್ತಿಗೆ ಬೇಕಾದದ್ದೆಲ್ಲವನ್ನು ದೇವರು ಕೊಟ್ಟಿದ್ದಾನೆಂದು ಪೇತ್ರನು ಬರೆಯುತ್ತಾನೆ (ವ.3). ಈ ರೀತಿಯಲ್ಲಿ ಒಬ್ಬ ಅಕ್ರೈಸ್ತ ಸ್ನೇಹಿತ ಅಥವಾ ನೆರೆಯವನು ಭಕ್ತಿ ರೂಪವನ್ನು ಅರ್ಥೈಸಿಕೊಳ್ಳಬೇಕೆಂದು ನಾನು ಬಯಸುತ್ತೇನೆ.

    a. ಯಾಥಾರ್ಥತೆ, ಉದಾ: ಸತ್ಯವನ್ನು ನುಡಿಯುವುದು, ಲಂಚವನ್ನು ಸ್ವೀಕರಿಸದಿರುವುದು, ಕದಿಯದೆ ಇರುವುದು.

    b. ಸಭ್ಯತೆ/ಮರ್ಯಾದೆಯಿಂದಿರುವುದು, ಉದಾ: ಒಳ್ಳೆಯ ಹವ್ಯಾಸ ರೂಢಿಸಿಕೊಳ್ಳುವುದು (ದೂಮಪಾನ ಅಥವಾ ಮದ್ಯಪಾನ ಮಾಡದಿರುವುದು, ಅಶ್ಲೀಲ ಚಿತ್ರವನ್ನು ನೋಡದಿರುವುದು ಅಥವಾ ವೇಶ್ಯರನ್ನು ಸಂಪರ್ಕಿಸದಿರುವುದು, ಹೊಡೆದಾಟ ಅಥವಾ ಕ್ರೂರವಾದ ಜೀವನದಲ್ಲಿ ಪಾಲುಗೊಳ್ಳದಿರುವುದು).

    c. ಸೌಮ್ಯತೆ, ಉದಾ: ಸಭ್ಯತೆಯಿಂದಿರುವುದು, ದಾನಧರ್ಮ ಮಾಡುವುದು, ಬಡವರಿಗೆ ಸಹಾಯ ಮಾಡುವುದು.

    d. ದೇವರಿಗೆ ಭಯಪಡುವುದು, ಉದಾ: ದೇವರಲ್ಲಿ ನಂಬಿಕೆಯಿಡುವುದು, ಸಭೆಗೆ ಹೋಗುವುದು, ಪ್ರಾರ್ಥನೆ ಮಾಡುವುದು, ಸಭೆಯ ಕೆಲಸಕ್ಕೆ ಹಣದ ಸಹಾಯ ಮಾಡುವುದು.

3. ಈ ವಾಕ್ಯಭಾಗಕ್ಕೆ ನಾವು ಹೋದಾಗ (ವ.3–11) ಭಕ್ತಿಯ ಬಗ್ಗೆ ಈ ಎಲ್ಲಾ ಸಂಗತಿಗಳನ್ನು ಪೇತ್ರನು ಪ್ರಸ್ತಾಪಿಸುತ್ತಾನೆಂದು ನಾನು ನಂಬುತ್ತೇನೆ (ಈ ಕೆಲವು ಅಂಶಗಳು ಬೇರೆ ಪ್ರಶ್ನೆಗಳಲ್ಲಿ ಪುನರಾವರ್ತನೆಯಾಗಿವೆ).

    a. ಭಕ್ತಿಯು ನಮ್ಮಲ್ಲಿ ಕಾರ್ಯಮಾಡುವ ದೇವರ ದೈವಿಕ ಶಕ್ತಿಯಾಗಿದೆ (ವ.3). ಇದು ದೇವರಿಂದ ಬರುತ್ತದೆ. ಇದನ್ನು ನಮ್ಮ ಸ್ವಂತಿಕೆಯಿಂದ ಸಂಪಾದಿಸಲು ಸಾಧ್ಯವಿಲ್ಲ.

    b. ಯೇಸು ಕ್ರಿಸ್ತನ ಕುರಿತಾದ ಪರಿಜ್ಞಾನ/ತಿಳುವಳಿಕೆಯ ಮೂಲಕ ಭಕ್ತಿಯು ಬರುತ್ತದೆ (ವ.3). ನಾವು ಕ್ರಿಸ್ತನನ್ನು ವೈಯಕ್ತಿಕವಾಗಿ ಅರಿಯಬೇಕಾಗಿದೆ. ಯೇಸು ಕ್ರಿಸ್ತನಿಲ್ಲದೆ ನಿಜವಾದ ಭಕ್ತಿಯಿಲ್ಲ.

c. ದೇವರು ನಮ್ಮನ್ನು ಭಕ್ತಿಯಿಂದಿರಲು ಕರೆದಿದ್ದಾನೆ (ವ.3). ಹಾಗಾಗಿ ನಾವು ಭಕ್ತಿಯನ್ನು ಹಿಂಬಾಲಿಸಬೇಕಾಗಿದೆ. ಇದು ನಮ್ಮ ಜೀವನದಲ್ಲಿ ಒಂದು ಬಹು ಪ್ರಾಮುಖ್ಯ ಭಾಗವಾಗಿರಬೇಕು (ವ.3).

d. ಭಕ್ತಿಯು ದೈವಸ್ವಭಾವದಲ್ಲಿ ಪಾಲುಗಾರರಾಗುವುದಾಗಿದೆ (ವ.4). ಇದು ನಮ್ಮ ಜೀವನವನ್ನು ಬದಲಿಸುತ್ತದೆ. ಇದು ನಮ್ಮನ್ನು ಮೊದಲು ಇದ್ದದ್ದಕ್ಕಿಂತ ವಿಭಿನ್ನವಾಗಿ ಮಾಡುತ್ತದೆ. ಇದು ನಮ್ಮನ್ನು ಲೌಕಿಕತೆಗೆ ಬದಲಾಗಿ ಆತ್ಮಿಕರನ್ನಾಗಿ ಮಾಡುತ್ತದೆ. ಆದರೆ ನಾವು ದೈವಿಕ ಅಥವಾ ದೇವರುಗಳಾಗುತ್ತೇವೆಂದು ಅರ್ಥವಲ್ಲ.

e. ಭಕ್ತಿಯಿಂದ ನಾವು ಲೋಕದಲ್ಲಿ ದುರಾಶೆಯಿಂದುಂಟಾಗುವ ಕೆಟ್ಟತನದಿಂದ ಪಾರಾಗಬಹುದು (ವ.4). ಕೇವಲ ಭಕ್ತಿಯು ಮಾತ್ರ ನಮ್ಮನ್ನು ಪರಲೋಕಕ್ಕೆ ಮುಟ್ಟಿಸುತ್ತದೆ. ನಿಜವಾದ ಭಕ್ತಿಯು ಕರ್ತನ ದಿನದಲ್ಲುಂಟಾಗುವ ನಾಶನದಿಂದ ನಮ್ಮನ್ನು ತಪ್ಪಿಸಿ ಕಾಪಾಡುವುದು.

f. ಭಕ್ತಿಯನ್ನು ಪಡೆಯಲು ನಾವು ಎಲ್ಲಾ ರೀತಿಯ ಪ್ರಯತ್ನಗಳನ್ನು ಸೇರಿಸಿಕೊಳ್ಳಬೇಕು (ವ.5). ನಮ್ಮ ಜೀವನವು ಭಕ್ತಿಯ ಮೇಲೆ ಕೇಂದ್ರಿಕರಿಸಬೇಕು.

g. ನಂಬಿಕೆಯು ಭಕ್ತಿಯ ಪ್ರಾರಂಭವಾಗಿದೆ (ವ.5). ನಮ್ಮ ರಕ್ಷಕನಾದ ಯೇಸು ಕ್ರಿಸ್ತನಲ್ಲಿನ ನಂಬಿಕೆಯ ಹೊರತಾಗಿ ಎಲ್ಲಿಯೂ ನಿಜವಾದ ಭಕ್ತಿಯಿಲ್ಲ.

h. ಭಕ್ತಿಯ ಅಂಶಗಳು ಈ ಕೆಳಕಂಡ ಗುಣಗಳಾಗಿವೆ: ಸದ್ಗುಣ ಮತ್ತು ಜ್ಞಾನ (ವ.5), ದಮೆ ಮತ್ತು ತಾಳ್ಮೆ (ವ.6), ಸಹೋದರ ಸ್ನೇಹ ಮತ್ತು ಪ್ರೀತಿ (ವ.7). ಈ ಗುಣಗಳು ಒಬ್ಬ ಭಕ್ತಿವಂತನ ಭಕ್ತಿಯ ಲಕ್ಷಣಗಳಾಗಿವೆ. ಹಾಗಾಗಿ ನಾವು ನಮ್ಮ ಜೀವಿತಗಳಿಗಾಗಿ ಈ ಗುಣಗಳನ್ನು ಒಂದು ಕನ್ನಡಿಯಾಗಿ ಬಳಸಬಹುದು.

i. ಭಕ್ತಿಯು– ನಮ್ಮ ಕರ್ತನಾದ ಯೇಸು ಕ್ರಿಸ್ತನ ಕುರಿತಾದ ಪರಿಜ್ಞಾನವನ್ನು ಹೊಂದುವ ವಿಷಯದಲ್ಲಿ ನಮ್ಮನ್ನು ಅಲಸ್ಯಗಾರರೂ ಮತ್ತು ನಿಷ್ಫಲರೂ ಆಗದಂತೆ ತಡೆಯುತ್ತದೆ (ವ.8). ಯೇಸು ಕ್ರಿಸ್ತನ ಕುರಿತಾದ ನಮ್ಮ ಅನುಭವದ ಮತ್ತು ವೈಯಕ್ತಿಕವಾದ ಜ್ಞಾನವು ನಮ್ಮ ಜೀವಿತಗಳಲ್ಲಿ ಒಂದು ಭಕ್ತಿಯ ಫಲವನ್ನುಂಟುಮಾಡುತ್ತದೆ.

j. ಭಕ್ತಿಯಿಲ್ಲದೆ ಇರುವುದು ಒಂದು ರೀತಿಯ ಕುರುಡರೂ ಮತ್ತು ದೂರದೃಷ್ಟಿಯಿಲ್ಲದವರೂ ಆಗಿರುವುದಾಗಿದೆ (ವ.9). ಒಬ್ಬ ಭಕ್ತಿಹೀನ ಮನುಷ್ಯನು ಆತ್ಮಿಕ ಸತ್ಯಗಳನ್ನು ಕಾಣಲಾರನು ಮತ್ತು ತಾನು ಹೇಗೆ ಜೀವಿಸಬೇಕೆಂಬುದನ್ನು ದೇವರು ತನ್ನ ಬಗ್ಗೆ ಬಯಸುತ್ತಾನೆಂಬುದನ್ನು ತಿಳಿಯದವನಾಗಿದ್ದಾನೆ. ದೂರದೃಷ್ಟಿಯಿಲ್ಲದವನು ಭವಿಷ್ಯಕ್ಕಾಗಿನ ದೇವರ ಯೋಜನೆಯನ್ನು ಅರಿಯಲಾರನು: ದುಷ್ಟರ ನಾಶನ ಮತ್ತು ಭಕ್ತಿವಂತರ ರಕ್ಷಣೆ.

k. ಭಕ್ತಿಯಿಲ್ಲದಿರುವುದು ಮರೆತುಬಿಡುವುದಾಗಿದೆ. ಆ ರೀತಿಯ ವ್ಯಕ್ತಿಯು ಯೇಸು ಕ್ರಿಸ್ತನು ನಮ್ಮ ರಕ್ಷಕನಾಗಿ ಬಂದನೆಂಬುದನ್ನು ಚಿಂತಿಸದವನೂ ಅಥವಾ ಅದನ್ನು ನೆನಸದವನೂ ಆಗಿದ್ದಾನೆ (ವ.9).

l. ಭಕ್ತಿಯು ನಮ್ಮ ಕರೆ ಮತ್ತು ಆಯ್ಕೆಯನ್ನು ದೃಢಪಡಿಸುತ್ತದೆ ಮತ್ತು ನಮ್ಮ ರಕ್ಷಣೆಯನ್ನು ನಿಶ್ಚಯಿಸುತ್ತದೆ (ವ.18). ಕೆಳಗಿನ 6, 7 ರ ಉತ್ತರವನ್ನು ನೋಡಿರಿ.

m. ಭಕ್ತಿಯು ಆತನ ರಕ್ಷಣೆಯನ್ನು ನಮಗೆ ಈಗಷ್ಟೆ ಕೊಡುವುದಿಲ್ಲ, ಆದರೆ ಇದು ನಮ್ಮನ್ನು ಯೇಸು ಕ್ರಿಸ್ತನ ನಿತ್ಯರಾಜ್ಯದವರೆಗೂ ಕೊಂಡೊಯ್ಯುತ್ತದೆ (ವ.11). ವಚನ 4 ರಲ್ಲಿ 'ದೇವರ ವಾಗ್ದಾನದ ನಿಮಿತ್ತ ವಿಶ್ವಾಸಿಗಳಾದ ನಾವು ದೈವ ಸ್ವಭಾವದಲ್ಲಿ ಪಾಲನ್ನು ಹೊಂದಬಹುದೆಂದು ಮತ್ತು ಲೋಕದ ಕೆಟ್ಟತನದಿಂದ ನಾವು ತಪ್ಪಿಸಿಕೊಳ್ಳುವೆವು' ಎಂದು ಹೇಳುತ್ತದೆ. ಇದು ನಮ್ಮ ಭವಿಷ್ಯವನ್ನು ಸೂಚಿಸುತ್ತದೆ.

4. ಯೇಸು ಕ್ರಿಸ್ತನ ಕುರಿತಾದ ಜ್ಞಾನ ಮತ್ತು ಭಕ್ತಿಯ ಜೀವಿತವು ಈ ರೀತಿಯಲ್ಲಿ ಒಂದಕ್ಕೊಂದು ಸಂಬಂಧಿಸುತ್ತದೆ (ವ.8–9):

   a. ನಮ್ಮ ಜೀವನ ಹೆಚ್ಚು ಭಕ್ತಿಯುತವಾದಂತೆಲ್ಲಾ ನಾವು ಹೆಚ್ಚಾಗಿ ಯೇಸು ಕ್ರಿಸ್ತನನ್ನು ತಿಳಿದುಕೊಳ್ಳುತ್ತೇವೆ.

   b. ಭಕ್ತಿಯುತ ಜೀವನವು ಯೇಸು ಕ್ರಿಸ್ತನ ಕುರಿತಾದ ನಮ್ಮ ಜ್ಞಾ/ತಿಳುವಳಿಕೆಯನ್ನು ಪರಿಣಾಮಕಾರಿಯಾಗಿ ಮತ್ತು ಫಲಕಾರಿಯಾಗುವಂತೆ ಮಾಡುತ್ತವೆ.

   c. ಆದರೆ ನಮ್ಮ ಜೀವಿತಗಳು ಭಕ್ತಿಯ ಗುರುತುಗಳನ್ನು ಹೊಂದದೆ ಹೋದರೆ ನಾವು ನಿಜವಾಗಲೂ ಯೇಸು ಕ್ರಿಸ್ತನನ್ನು ಆತನ ಶುದ್ಧಿಕರಿಸುವ ಶಕ್ತಿಯನ್ನು ಮತ್ತು ಆತನ ರಕ್ಷಣೆಯನ್ನು ಅರಿಯದವರಾಗುತ್ತೇವೆ.

5. ಒಬ್ಬ ವ್ಯಕ್ತಿಯು ದೇವರಿಂದ ಕರೆಯಲ್ಪಡುವುದು ಮತ್ತು ಆರಿಸಲ್ಪಡುವುದೆಂದರೆ ಏನುಎಂಬ ಪ್ರಶ್ನೆಯು (ವ.10–11)ಸಭಾ ಇತಿಹಾಸದ ಪ್ರಾರಂಭದಿಂದಲೂ ಪ್ರಾಮಾಣಿಕವಾದ ಹಾಗೂ ಸತ್ಯವೇದವನ್ನು ನಂಬುವ ಕ್ರೈಸ್ತರನ್ನು ಚಿಂತೆಗೀಡಾಗಿಸಿದೆ. ಇಂದಿಗೂ ಸಹ ವಿವಿಧ ಕ್ರೈಸ್ತ ಪಂಗಡಗಳು (ಅಥವಾ ಸಭೆಗಳು ಅಥವಾ ಕ್ರೈಸ್ತರ ಗುಂಪುಗಳು) ಈ ಪ್ರಶ್ನೆಗೆ ವಿಭಿನ್ನವಾದ ಉತ್ತರಗಳನ್ನು ಕೊಡುತ್ತವೆ.

   ಈ ವಿಭಾಗವು ಧರ್ಮಸುಧಾರಣೆಯ ಸಮಯದಲ್ಲಿ ಸ್ಪಷ್ಟವಾಗಿ ಕಾಣಿಸಿತು (16 ನೇ ಶತಮಾನದ ಮತ್ತು ನಂತರ ಅವಧಿಯಲ್ಲಿ). ಎರಡು ವ್ಯತ್ಯಾಸವಾದ ಮತ್ತು ಒಂದಕ್ಕೊಂದು ವಿರೋಧವಾದ ದೃಷ್ಟಿಕೋನಗಳು ಈ ವ್ಯಕ್ತಿಗಳಿಂದ ಪ್ರತಿನಿಧಿಸಲ್ಪಟ್ಟವು:

   a. ಜಾನ್ ಕ್ಯಾಲ್ವಿನ್; ಈತನು ಸ್ವಿಟ್ಜರ್‌ಲ್ಯಾಂಡ್‌ನಿಂದ ಬಂದ 16 ನೇ ಶತಮಾನದ ಒಬ್ಬ ಧರ್ಮಸುಧಾರಕನಾದ ದೈವಶಾಸ್ತ್ರಜ್ಞನಾಗಿದ್ದನು. ದೇವರು ಕೆಲವು ಜನರಿಗಷ್ಟೇ ತನ್ನ ಕೃಪೆಯನ್ನು ಕೊಡುತ್ತಾನೆಂದು ಬೋಧಿಸಿದನು. ಆದದರಿಂದ ದೇವರು ರಕ್ಷಣೆಗಾಗಿ ಕೆಲವು ಜನರನ್ನಷ್ಟೆ ಕರೆದು ಆದುಕೊಳ್ಳುತ್ತಾನೆ. ಪರಿಣಾಮವಾಗಿ ಉಳಿದವರೆಲ್ಲರೂ ಸಹ ನಾಶನವನ್ನು ಎದುರಿಸುವರು. ಈ ರೀತಿಯ ದೈವಶಾಸ್ತ್ರ ಮತ್ತು ಇದರ ಬದಲಾವಣೆಯನ್ನು/ಭೇದವನ್ನು 'ಕ್ಯಾಲ್ವಿನ್ ವಾದ' ಅಥವಾ 'ಸುಧಾರಿತವಾದ ದೈವಶಾಸ್ತ್ರ' ಎನ್ನುವರು. ಹೆಚ್ಚಿನ ಹೆಸರಾಂತ ಬರಹಗಾರರೆಲ್ಲಾ (ವೇಯ್ನ ಗ್ರೂಡಮ್ ಮತ್ತು ಮಿಲ್ಲಾರ್ಡ ಎರಿಕ್ಸನ್) ಇವರೆಲ್ಲರೂ ಈ ಒಂದು ಗುಂಪಿಗೆ ಸೇರಿದವರು.

b. ಜೇಕಬಸ್ ಆರ್ಮೇನಿಯಸ್; ಇತನು ಹಾಲೆಂಡಿನಿಂದ ಬಂದ 17 ನೇ ಶತಮಾನದ ಒಬ್ಬ ಧರ್ಮಸುಧಾರಕನಾದ ದೈವಶಾಸ್ತ್ರಜ್ಞನಾಗಿದ್ದನು. ಈತನು ದೇವರ ಕರೆ ಮತ್ತು ಆಯ್ಕೆಯು ಮುಂದೆ ಯಾರು ಇದಕ್ಕೆ ಪ್ರತಿಕ್ರಿಯಿಸುತ್ತಾರೋ/ಸ್ಪಂಧಿಸುತ್ತಾರೋ ಎಂದು ದೇವರು ತಿಳಿದಿದ್ದಾನೋ ಅವರನ್ನು ಸೂಚಿಸುತ್ತದೆಂದು ಬೋಧಿಸಿದನು. ಖಂಡಿತವಾಗಿಯೂ ದೇವರು ಯಾರನ್ನೂ ಸಹ ನಾಶನಕ್ಕಾಗಿ ಆರಿಸಿಕೊಂಡಿಲ್ಲ, ಆದರೆ ನಾಶನವು ಕೆಲವು ಜನರ– ಯೇಸು ಕ್ರಿಸ್ತನನ್ನು ಸ್ವಂತ ರಕ್ಷಕನನ್ನಾಗಿ ಅಂಗೀಕರಿಸದವರ ಅಂತ್ಯವಾಗಿರುತ್ತದೆಂದು ದೇವರು ಬಲ್ಲವನಾಗಿದ್ದಾನೆ. ಅನೇಕ ದೈವಶಾಸ್ತ್ರದ ಪುಸ್ತಕಗಳ ಬರಹಗಾರರು ಈ ಗುಂಪಿಗೆ ಸೇರಿದವರಲ್ಲ.

ಪೆಂಟೆಕೊಸ್ಟಲ್ ಮತ್ತು ಕರಿಷ್ಮಾಟಿಕ ಸಭೆಗಳು ಕ್ಯಾಲ್ವಿನ್ ವಾದವನ್ನು ಖಂಡಿಸಿ, ಆರ್ಮೇನಿಯನ್ ವಾದವನ್ನು ಆತುಕೊಳ್ಳುತ್ತವೆ. ಆದರೆ ಅವರನ್ನು 'ಆರ್ಮೇನಿಯನ್ನರು' ಎಂದು ಕರೆಯುವುದು ಅಷ್ಟೇನು ಸರಿಯಿಲ್ಲ. ಬದಲಾಗಿ ಅವರ ದೃಷ್ಟಿಕೋನ/ಅಭಿಪ್ರಾಯವನ್ನು ಈ ರೀತಿಯಲ್ಲಿ ಸಾರಾಂಶಗೊಳಿಸಬಹುದು: ದೇವರು ಎಲ್ಲರನ್ನು ಕರೆಯುತ್ತಾನೆ, ಆದರೆ ಆತನ ಕರೆಗೆ ಸ್ಪಂಧಿಸುವವರು ಮಾತ್ರ ರಕ್ಷಿಸಲ್ಪಡುವರು. ಹಾಗಾಗಿ ಅವರು ಆರಿಸಲ್ಪಟ್ಟವರಾಗುತ್ತಾರೆ. ಒಬ್ಬ ಆಧುನಿಕ ದೈವಶಾಸ್ತ್ರಜ್ಞರು *ರಿನೀವಲ್ ಥಿಯಾಲಜಿ* ಎಂಬ ಪುಸ್ತಕದ ಗ್ರಂಥಕರ್ತರೂ ಆದ ರೋಡ್‌ಮನ್ ವಿಲಿಯಮ್ಸ್ ಎಂಬುವವರು ಈ ರೀತಿಯ ದೃಷ್ಟಿಕೋನ/ಅಭಿಪ್ರಾಯ ಹೊಂದಿದವರಲ್ಲಿ ಒಬ್ಬರಾಗಿದ್ದಾರೆ.

6. ಹಿಂದಿನ ಪ್ರಶ್ನೆಗೆ ನನ್ನ ಉತ್ತರದ ಬೆಳಕಿನಡಿಯಲ್ಲಿ 'ನಿಮ್ಮ ಕರೆ ಮತ್ತು ಆಯ್ಕೆಯನ್ನು ದೃಢಪಡಿಕೊಳ್ಳಿರಿ' (ವ.10) ಎಂಬ ಪೇತ್ರನ ಹೇಳಿಕೆಯನ್ನು ನಾನು ಈ ರೀತಿಯಾಗಿ ಅರ್ಥೈಸಿಕೊಳ್ಳಬಲ್ಲೆನು:

   a. ದೇವರು ನಮ್ಮನ್ನು ರಕ್ಷಣೆಗಾಗಿ ಕರೆದಿದ್ದಾನೆ, ಯಾಕೆಂದರೆ– 'ಎಲ್ಲಾ ಮನುಷ್ಯರು ರಕ್ಷಣೆಯನ್ನು ಹೊಂದಿ ಸತ್ಯದ ಜ್ಞಾನಕ್ಕೆ ಸೇರಬೇಕೆಂದು ಆತನು ಬಯಸುತ್ತಾನೆ' (1 ತಿಮೋಥಿ 2:4).

   b. ದೇವರು ನಮ್ಮನ್ನು ಜಗದುತ್ಪತ್ತಿಗಿಂತ ಮೊದಲೇ ನಾವು ಪರಿಶುದ್ಧರೂ ದೋಷವಿಲ್ಲದವರೂ ಆಗಿರಬೇಕೆಂದು ಕ್ರಿಸ್ತಯೇಸುವಿನಲ್ಲಿ ಕರೆದಿದ್ದಾನೆ (ಎಫೆಸ 1:4). ಪ್ರಾರಂಭದಿಂದಲೂ ಎಲ್ಲಾ ಮನುಷ್ಯ ಜೀವಿಗಳ ರಕ್ಷಣೆಯು ದೇವರ ಯೋಜನೆಯಾಗಿತ್ತು.

   c. ನಾವು ಯೇಸು ಕ್ರಿಸ್ತನನ್ನು ನಮ್ಮ ಸ್ವಂತ ರಕ್ಷಕನನ್ನಾಗಿ ಸ್ವೀಕರಿಸಿದಾಗ ಈ ಆಯ್ಕೆಯು ನಮಗೊಂದು ನೈಜ ಸಂಗತಿಯಾಯಿತು (ಹೋಲಿಸಿರಿ, ತೀತ 1:1, 1 ಪೇತ್ರ 1:1).

   d. ಆತನ ಪ್ರೀತಿಯಲ್ಲಿ ನೆಲೆಗೊಂಡು ಮತ್ತು ಆತನ ಆಜ್ಞೆಗಳಿಗೆ ವಿಧೇಯರಾಗುವುದರ ಮೂಲಕ ನಾವು ನಮ್ಮ ಕರೆ ಮತ್ತು ಆಯ್ಕೆಯನ್ನು ದೃಢಪಡಿಸಿಕೊಳ್ಳಬಹುದು (ಯೊಹಾನ 15:10).ಒಂದು ವೇಳೆ ನಾವು ಯೇಸು ಕ್ರಿಸ್ತನೆಡೆಗೆ ಬೆನ್ನುಹಾಕಿ ನಮ್ಮ ಮೊದಲ ಪ್ರೀತಿಯನ್ನು ಮರೆತರೆ (ಪ್ರಕ 2:4) ಮತ್ತು ನಾವು ಭಕ್ತಿಯುತ ಜೀವಿತವನ್ನು ಭಕ್ತಿಹೀನತೆಗೆ ಮತ್ತು ಲೌಕಿಕತೆಗೆ ಮಾರಿದರೆ ಆಗ ನಾವು ನಮ್ಮ ಕರೆ ಮತ್ತು ಆಯ್ಕೆಯನ್ನು ಕಳೆದುಕೊಳ್ಳುತ್ತೇವೆ.

ಹಾಗೆಯೆ ಯೇಸು ಕ್ರಿಸ್ತನ ಬರೋಣದಲ್ಲಿ ನಾವು ದೇವರ ನ್ಯಾಯತೀರ್ಪಿನಡಿಯಲ್ಲಿ ಬರುತ್ತೇವೆ.

7. ಈ ಪ್ರಬೋಧನೆ/ಎಚ್ಚರಿಕೆಯನ್ನು ಕಾದುಕೊಳ್ಳುವವರಿಗೆ ಎರಡು ವಾಗ್ದಾನಗಳಿವೆ (ವ.10–11):

   a. ಅವರು ಎಂದಿಗೂ ಎಡುಹುವುದಿಲ್ಲ (ವ.10). ಇದರರ್ಥ– ಅವರು ಬದುಕಿರುವವರೆಗೂ ಭಕ್ತಿಯಿಂದ ಜೀವಿಸುವುದನ್ನು ಮುಂದುವರೆಸುತ್ತಾರೆಂಬುದಾಗಿದೆ.

   b. ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ನಿತ್ಯರಾಜ್ಯಕ್ಕೆ ಅವರು ಒಂದು ಧಾರಾಳವಾದ ಆಹ್ವಾನವನ್ನು ಪಡೆಯುವರು (ವ.11). ಇದರರ್ಥ– ಅವರ ಭವಿಷ್ಯವು ನಿತ್ಯನಿತ್ಯಕ್ಕೂ ಯೇಸು ಕ್ರಿಸ್ತನೊಂದಿಗೆ ಪರಲೋಕದಲ್ಲಿರುವುದಾಗಿದೆ.



## ಅವಲೋಕನ

ಈ ವಾಕ್ಯಭಾಗದಲ್ಲಿ ಪೇತ್ರನು ಹೊರತರುವ ಒಂದು ಸಂಗತಿಯೇನೆಂದರೆ– ಯೇಸು ಕ್ರಿಸ್ತನ ಕುರಿತಾದ ಪರಿಜ್ಞಾನ ಮತ್ತು ನಮ್ಮ ಕ್ರೈಸ್ತೀಯ ಜೀವಿತಗಳ ನಡುವಿನ ನಿಕಟವಾದ ಸಂಬಂಧವಾಗಿದೆ. ಹೆಚ್ಚಾಗಿ ನಾವು ಆತನನ್ನು ಅರಿತ ಹಾಗೆಲ್ಲ ಹೆಚ್ಚಾಗಿ ಆ ಜ್ಞಾನವು ನಮ್ಮ ಜೀವಿತಗಳನ್ನು ಭಕ್ತಿಯ ಸ್ವಭಾವದಿಂದ ಕೂಡಿದ ಜೀವಿತಕ್ಕೆ ಮಾರ್ಪಡಿಸುತ್ತದೆ. ಆದರೆ ಈ ಜ್ಞಾನವು ಒಂದು ರೀತಿಯ ಬೌದ್ಧಿಕ ಅಥವಾ ತತ್ವಶಾಸ್ತ್ರದ ಜ್ಞಾನವಲ್ಲ. ಇದು ಒಂದು ಆಳವಾದ ಜ್ಞಾನದ ಸಂಗತಿಯೂ ಅಲ್ಲ, ಬದಲಾಗಿ ಇದೊಂದು ಅನ್ಯೋನ್ಯವಾದ ಮತ್ತು ವೈಯಕ್ತಿಕ ಜ್ಞಾನ, ನಮ್ಮ ರಕ್ಷಕನಾದ ಕ್ರಿಸ್ತನ ಜ್ಞಾನವಾಗಿದೆ.

ಆದರೆ ಈ ಸಂಬಂಧವು ಎರಡೂ ವಿಧದಲ್ಲಿ ಸಾಗುತ್ತದೆ. ನಮ್ಮ ಭಕ್ತಿಯ ಗುಣಮಟ್ಟ ಮತ್ತು ಸ್ವಭಾವವು ನಾವು ಯೇಸು ಕ್ರಿಸ್ತನನ್ನು ಯಾವ ಮಟ್ಟದವರೆಗೆ ಅರಿತುಕೊಳ್ಳುತ್ತೇವೋ ಅಲ್ಲಿಯವರೆಗೆ ಪ್ರಕಟಿಸಲ್ಪಡುತ್ತದೆ. ಒಬ್ಬ ವ್ಯಕ್ತಿಯು ತಾನು ಯೇಸು ಕ್ರಿಸ್ತನ ಕುರಿತಾಗಿ ಜ್ಞಾನವನ್ನು ಹೊಂದಿರುವನೆಂದು ತೋರ್ಪಡಿಸಿಕೊಂಡು ಮತ್ತು ಕ್ರಿಸ್ತನಲ್ಲಿ ತನಗೆ ನಂಬಿಕೆಯುಂಟೆಂದು ಸಾರಿ ಹೇಳಿ, (ಆದರೆ) ಒಂದು ವೇಳೆ ಸ್ವಾರ್ಥ, ಆತ್ಮಸಂಯಮವಿಲ್ಲದವನಾಗಿದ್ದು ಮತ್ತು ತನ್ನ ಸಹ ವಿಶ್ವಾಸಿಯನ್ನು ಪ್ರೀತಿಸದಿದ್ದರೆ ಅಂಥ ವ್ಯಕ್ತಿಯು ಆತ್ಮಿಕವಾಗಿ ಅಲಸ್ಯಗಾರನೂ ಮತ್ತು ನಿಷ್ಫಲನೂ ಆಗಿದ್ದಾನೆ (ವ.8). ತನ್ನ ಹಿಂದಣ ಪಾಪಗಳು ಪರಿಹಾರವಾಗಿ ತಾನು ಶುದ್ಧನಾದದ್ದನ್ನು ಮರೆತುಬಿಟ್ಟಿದ್ದಾನೆ (ವ.9). ಯೇಸು ಕ್ರಿಸ್ತನ ಕುರಿತಾದ ಆತನ ಜ್ಞಾನವು ಅಪೂರ್ಣವಾದದ್ದಾಗಿದೆ.

# ಉತ್ತರಗಳು 15: ಸಾಕ್ಷಿಗಳನ್ನು ಜ್ಞಾಪಕಮಾಡಿಕೊಳ್ಳಿರಿ, 1:12–21

## ಶಿಕ್ಷಕರ ಗಮನಕ್ಕೆ

ಈ ವಾಕ್ಯಭಾಗವು ಅನುಭವವಿಲ್ಲದ ಓದುಗರಿಗೆ ಅಥವಾ ಸತ್ಯವೇದದ ಹಿನ್ನಲೆಯ ಬಗ್ಗೆ ಮಿತವಾದ ಜ್ಞಾನವುಳ್ಳ ಓದುಗನಿಗೆ ಅರ್ಥೈಸಿಕೊಳ್ಳಲು ಕಷ್ಟಕರವಾದ ವಾಕ್ಯ ಮತ್ತು ಹೇಳಿಕೆಗಳನ್ನು ಒಳಗೊಂಡಿದೆ. ವಚನ 16–18 ರಲ್ಲಿ ಪೇತ್ರನು ಯಾವುದರ ಬಗ್ಗೆ ಬರೆಯುತ್ತಿದ್ದಾನೆ? (ಉತ್ತರ: ಆತನು ಯೇಸು ಕ್ರಿಸ್ತನ ರೂಪಾಂತರವನ್ನು ಸೂಚಿಸುತ್ತಿದ್ದಾನೆ). ಮತ್ತು ಆತನ ವಾದಕ್ಕಾಗಿ ಈ ವಚನಗಳ ಉದ್ದೇಶವೇನು? (ಉತ್ತರ: ಪೇತ್ರನ ಬೋಧನೆಯ ಸತ್ಯಕ್ಕೆ ಅವು ಸಾಕ್ಷಿಯಾಗಿವೆ).

ಇನ್ನೂ ಕಷ್ಟಕರವಾದ ಭಾಗ ವಚನ 19–21 ರಲ್ಲಿದೆ. ಇಲ್ಲಿ ಕೆಲವು ಸತ್ಯವೇದ ಪಂಡಿತರೂ ಸಹ ಅಸಮ್ಮತರಾಗಿದ್ದಾರೆ. 19 ನೇ ವಚನದ ಮೊದಲ ಭಾಗವು ಗ್ರೀಕ್‌ನಲ್ಲಿ ಅಸ್ಪಷ್ಟವಾಗಿದೆ ಮತ್ತು ನಮ್ಮ ಸತ್ಯವೇದದ ಭಾಷಾಂತರಗಳು ವಿಭಿನ್ನವಾದ ಆಯ್ಕೆಗಳನ್ನು ಪ್ರತಿಬಿಂಬಿಸುತ್ತವೆ (ಉದಾ: ಕನ್ನಡ ಭಾಷಾಂತರವನ್ನು ಇಂಗ್ಲೀಷಿನ ಎನ್‌ಐವಿ ಯೊಂದಿಗೆ ಹೋಲಿಸಿರಿ). ಮುಂದೆ ಈ ವಚನಗಳ ಮೂಲಕ ಪೇತ್ರನು ತನ್ನ ಓದುಗರಿಗೆ ಏನನ್ನು ತಿಳಿಸಲು ಬಯಸುತ್ತಾನೆ? ಮತ್ತು ಯಾವ ಪ್ರವಾದಿಗಳನ್ನು ಪೇತ್ರನು ಮನಸ್ಸಿನಲ್ಲಿಟ್ಟುಕೊಂಡಿದ್ದಾನೆ?

ಕೆಳಕಂಡ ಉತ್ತರಗಳು ಈ ವಿಷಯಗಳ ಮೇಲಿನ ನನ್ನ ದೃಷ್ಟಿಕೋನಗಳನ್ನು ಪ್ರತಿಬಿಂಬಿಸುತ್ತವೆ. ಈ ದೃಷ್ಟಿಕೋನಗಳು– ಪೇತ್ರನ ವಾದದ ತರ್ಕದ ಮೇಲೆ ಆಧಾರಿತವಾಗಿವೆ. ಯಾವುದೇ ವಿವರಗಳು ತರ್ಜುಮೆಯ ವಿಶಾಲವಾದ ಹಿನ್ನಲೆಯಲ್ಲಿ ಅರ್ಥವನ್ನು ಕಲ್ಪಿಸಿಕೊಡಬೇಕಾಗಿದೆ. ಈ ವಾಕ್ಯಭಾಗವು ಜ್ಞಾಪಕ ಹುಟ್ಟಿಸುವುದು ಮತ್ತು ನೆನಪುಮಾಡಿಕೊಳ್ಳುವುದರ ಕುರಿತಾಗಿದೆ. ಮತ್ತು ಪೇತ್ರನು ಸತ್ಯಕ್ಕೆ ಎರಡು ಸಾಕ್ಷಿಗಳನ್ನು ಹೊಂದಿದ್ದಾನೆ ಮತು ಇದರ ಬಗ್ಗೆ ಆತನು ತನ್ನ ಓದುಗರನ್ನು ಜ್ಞಾಪಕ ಪಡಿಸುತ್ತಾನೆ ಮತ್ತು ತನ್ನ ಓದುಗರು ಇದನ್ನು ನೆನಪಿನಲ್ಲಿಟ್ಟುಕೊಳ್ಳಬೇಕೆಂದು ಬಯಸುತ್ತಾನೆ.

## ಉತ್ತರಗಳು

1. ತನ್ನ ಜೀವನವು ಹೆಚ್ಚು ಕಡಿಮೆ ಅಂತ್ಯಕ್ಕೆ ಬಂದಿದೆಯೆಂದು ಪೇತ್ರನು ತಿಳಿದಿದ್ದನು. ಇದು ಸ್ವತಃ ಯೇಸು ಕ್ರಿಸ್ತನಿಂದಲೇ ಆತನಿಗೆ ತಿಳಿಸಲ್ಪಟ್ಟಿತ್ತು. ಹೇಗೆ ಮತ್ತು ಯಾವಾಗ ಯೇಸು ಕ್ರಿಸ್ತನು ಪ್ರಕಟಿಸಿದನೆಂಬುದನ್ನು ಪೇತ್ರನು ತಿಳಿಸುವುದಿಲ್ಲ.

2. ಸಾಮಾನ್ಯವಾಗಿ ಮರಣವನ್ನು ಮತ್ತು ಪ್ರತ್ಯೇಕವಾಗಿ ತನ್ನ ಮರಣವನ್ನು ವಿವರಿಸಲು ಪೇತ್ರನು ಮೂರು ಅಲಂಕಾರಿಕ ಹೇಳಿಕೆಗಳನ್ನು ಉಪಯೋಗಿಸುತ್ತಾನೆ (ವ.12–15).

    a. ನಾನು ನನ್ನ ದೇಹವೆಂಬ ಗುಡಾರದಲ್ಲಿರುವ ತನಕ (ವ.13). ರೂಪಾಲಂಕಾರವು ಒಬ್ಬ ಸಂಚರಿಸುವವನು (ಭಾರತೀಯ ಅಲೆಮಾರಿ) ಗುಡಾರಗಳಲ್ಲಿ ವಾಸಿಸುವುದಾಗಿದೆ. ಮರಣವು ಇನ್ನೊಂದು ಗುಡಾರ ಸ್ಥಳಕ್ಕೆ (ಪರಲೋಕ) ಹೋಗುವ ಸಲುವಾಗಿ ಒಂದು ಗುಡಾರಸ್ಥಳವನ್ನು ಬಿಡುವುದು (ಈ ಲೋಕದಲ್ಲಿನ ಜೀವನ) ಎಂಬುದಾಗಿ ಚಿತ್ರಿಸಲ್ಪಟ್ಟಿದೆ. ಈ ರೂಪಾಲಂಕಾರವು ವಿಶ್ವಾಸಿಗಳು ಈ ಲೋಕದಲ್ಲಿ ಪ್ರವಾಸಿಗಳೂ ಮತ್ತು ಪರದೇಶಿಗಳೂ ಆಗಿದ್ದಾರೆಂಬ ಪೇತ್ರನ ತಿಳುವಳಿಕೆಯನ್ನು ತಿಳಿಸುತ್ತದೆ.

b. ಗುಡಾರವನ್ನು (ಈ ದೇಹ) ಬೇಗನೆ ಕಿತ್ತುಹಾಕುವುದು (ವ.14). ಇಲ್ಲಿನ ರೂಪಾಲಂಕಾರವು ಒಬ್ಬ ಮನುಷ್ಯನು ತನ್ನ ಬಟ್ಟೆಯನ್ನು ತೆಗೆದುಹಾಕುವುದಾಗಿದೆ. ಮರಣವು ಶುಭ್ರವಾದ ವಸ್ತ್ರವನ್ನು ಧರಿಸಿಕೊಳ್ಳುವುದಕ್ಕಾಗಿ ಆತನು ಹೊಲಸಾದ ಅಂಗಿಯನ್ನು ತೆಗೆದು ಹಾಕುವಂತೆ ಆತನು ತನ್ನ ದೇಹವನ್ನು ತೆಗೆದು ಹಾಕುವನೆಂಬುದಾಗಿ ಚಿತ್ರಿಸಲ್ಪಟ್ಟಿದೆ.

c. ನನ್ನ ನಿರ್ಗಮನ (ವ.15): ಒಬ್ಬ ಮನುಷ್ಯನು ಇನ್ನೊಂದು ಸ್ಥಳಕ್ಕೆ ಹೋಗುವುದಕ್ಕಾಗಿ ಒಂದು ಸ್ಥಳವನ್ನು ಬಿಡುವುದು ಇಲ್ಲಿನ ಅಲಂಕಾರವಾಗಿದೆ. ಮರಣವು ಇನ್ನೊಂದು ಲೋಕಕ್ಕೆ ಹೋಗುವುದಕ್ಕಾಗಿ ಈ ಲೋಕದಿಂದ ನಿರ್ಗಮಿಸುವುದು, ಬಿಡುವಂತೆ ಕಂಡುಬರುತ್ತದೆ.

3. ಹಿಂದಿನ ಪ್ರಶ್ನೆಗೆ ತನ್ನ ಉತ್ತರವು– ಪೇತ್ರನು ತನ್ನ ಮರಣದ ಕುರಿತಾಗಿ ನಿರಾಳವಾದ ಮನೋಭಾವನೆಯನ್ನು ಹೊಂದಿದ್ದನೆಂಬುದನ್ನು ತೋರಿಸುತ್ತದೆ. ಆತನು ಇದನ್ನು ಪ್ರಸ್ತುತ ಜೀವನದಿಂದ ಒಂದು ಹೊಸ ಜೀವನಕ್ಕೆ ನಿರ್ಗಮಿಸುವುದೆಂಬಂತೆ ಕಾಣುತ್ತದೆ. ಈ ಲೋಕದಲ್ಲಿನ ಜೀವನವು ತಾತ್ಕಾಲಿಕವಾದುದೆಂಬುದನ್ನು ಆತನು ಅರಿತುಕೊಳ್ಳುತ್ತಾನೆ. ನಾವು ಇಲ್ಲಿ ಕೇವಲ ಪ್ರವಾಸಿಗಳೂ ಮತ್ತು ಪರದೇಶಿಗಳೂ ಆಗಿದ್ದೇವೆ. ನಮ್ಮ ನಿಜವಾದ ಮನೆಯು ಪರಲೋಕದಲ್ಲಿ ಯೇಸುವಿನೊಂದಿಗಿದೆ. ತನ್ನ ಮರಣವು ಅನಿವಾರ್ಯವಾದದ್ದು ಮತ್ತು ಅದು ಬೇಗನೆ ಬರುತ್ತದೆಂಬುದನ್ನು ಪೇತ್ರನು ಅರಿತಿದ್ದನು.

4. ವಚನ 12–15 ರಲ್ಲಿ 3 ಬಾರಿ ಕಂಡುಬರುವ ಮುಖ್ಯ ಪದವು– 'ನೆನಪಿಡಿರಿ' ಎಂಬುದರ ಮಾರ್ಪಾಡು/ಭೇದವಾಗಿದೆ.

a. ಪೇತ್ರನು ತನ್ನ ಓದುಗರಿಗೆ ಅವರ ನಂಬಿಕೆ ಮತ್ತು ಭಕ್ತಿಯ ಬಗ್ಗೆ ಜ್ಞಾಪಕಕೊಡುವುದಕ್ಕೆ ಬಯಸುತ್ತಾನೆ (ವ.12). ಇದು ಆತನು ಈ ಹಿಂದೆ ಮಾಡಿದ್ದು ಮತ್ತು ಆತನು ಬದುಕಿರುವವರೆಗೂ ಮಾಡುವುದಾಗಿದೆ.'ಯಾವಾಗಲೂ' ಎಂಬ ಪದವು ಈ ಜ್ಞಾಪಕ ಪಡಿಸುವುದರ ಪ್ರಾಮುಖ್ಯತೆಯನ್ನು ಎತ್ತಿ ತೋರಿಸುತ್ತದೆ. ಅವರು ನಿತ್ಯದಲ್ಲಿ ಸ್ಥಿರವಾಗಿ ನಿಲ್ಲಬೇಕೆಂದು ಪೇತ್ರನು ಬಯಸುತ್ತಾನೆ. ಹಾಗಾಗಿ ಅವರಿಗೆ ಈ ಬಗ್ಗೆ ಜ್ಞಾಪಕ ಪಡಿಸಬೇಕಾಗಿದೆ.

b. ತನ್ನ ಓದುಗರ ನೆನಪನ್ನು ಬಲಗೊಳಿಸಲು ಸಹ ಬಯಸುತ್ತಾನೆ. ತನ್ನ ಜೀವನ ಹೆಚ್ಚುಕಡಿಮೆ ಮುಗಿದಿದೆಯೆಂದು ಪೇತ್ರನಿಗೆ ಗೊತ್ತಿದೆ. ಹಾಗಾಗಿ ತನ್ನ ಓದುಗರಿಗೆ ಬರೆಯಲು ಆತನು ಕೆಲವು ಹೊಸ ಮತ್ತು ತಾಜಾ ವಿಚಾರಗಳನ್ನು ಹೊಂದಿರಬೇಕೆಂದು ನೀವು ಬಯಸುವಿರಿ, ಆದರೆ ಆತನು ಹಾಗೆ ಮಾಡುವುದಿಲ್ಲ. ಬದಲಾಗಿ ಆತನು ತನ್ನ ಓದುಗರಿಗೆ ಈ ಮೊದಲು ಬೋಧಿಸಿದ ಸಂಗತಿಗಳ ನೆನಪುಗಳನ್ನು ಬಲಪಡಿಸಿ ಪುನಶ್ಚೇತಗೊಳಿಸಬೇಕೆಂದು ಬಯಸುತ್ತಾನೆ. ಅವರಿಗೆ ಈಗಾಗಲೇ ಸತ್ಯ ತಿಳಿದಿದೆ. ಈಗ ಪೇತ್ರನು ಅವುಗಳನ್ನು ಜ್ಞಾಪಕ ಪಡಿಸಲು ಬಯಸುತ್ತಾನೆ. ಇದರಿಂದ ಅವರು ಸುಳ್ಳುಬೋಧಕರ ದುರ್ಬೋಧನೆಗಳಿಂದ ತಪ್ಪಿಸಿಕೊಳ್ಳಲಾಗುತ್ತದೆ (ವ.2:1).

c. ಕೊನೆಯದಾಗಿ ಪೇತ್ರನು ತನ್ನ ಮರಣದ ನಂತರ ಸಹ ಅವರು ಈ ಸಂಗತಿಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕೆಂದು ಬಯಸುತ್ತಾನೆ (ವ.15). ಕೆಳಕಂಡ 6 ನೇ ಪ್ರಶ್ನೆಯನ್ನು ನೋಡಿರಿ.

5. ವಚನ 12–15 ರಿಂದ ಪೇತ್ರನ ಕುರುಬ/ಸಭಾಪಾಲಕನ ಕಾಳಜಿಯ ಬಗ್ಗೆ ಕಡೇ ಪಕ್ಷ ಕೆಳಕಂಡ 4 ಮುಕ್ತಾಯಗಳನ್ನು ಮಾಡಬಹುದು:

   a. ತನ್ನ ಕಾಳಜಿಯಡಿಯಲ್ಲಿರುವ ತನ್ನ ಓದುಗರಿಗೆ ತಾನು ಜವಾಬ್ದಾರನೆಂದು ಪೇತ್ರನು ನೆನಸುತ್ತಾನೆ. ಅವರು ಕ್ರೈಸ್ತೀಯ ನಂಬಿಕೆಯನ್ನು ಮತ್ತು ಹೇಗೆ ಭಕ್ತಿಯುತ ಜೀವನವನ್ನು ನಡೆಸಬೇಕೆಂಬುದನ್ನು ಅರಿತುಕೊಳ್ಳಬೇಕೆಂಬುದಾಗಿ ಆತನು ಬಯಸುತ್ತಾನೆ.

   b. ಆತನು ಅವರೊಂದಿಗೆ ತಾಳ್ಮೆಯಿಂದಿದ್ದಾನೆ. ಆತನು ಪದೇ ಪದೇ ಮೂಲಭೂತ ಸತ್ಯಗಳ ಬಗ್ಗೆ ಅವರಿಗೆ ಜ್ಞಾಪಿಸುತ್ತಾನೆ.

   c. ಆತನು ಅವರ ಭವಿಷ್ಯದ ಬಗ್ಗೆ ಚಿಂತಿತನಾಗಿದ್ದಾನೆ. ಹಾಗಾಗಿ ಆತನು ಅವರಿಗೆ ಹೇಳಿದ್ದೆಲ್ಲದರ ಬಗ್ಗೆ ಅವರು ದೃಢವಾಗಿರಬೇಕೆಂದು ಬಯಸುತ್ತಾನೆ. ಯಾಕೆಂದರೆ ಕಠಿಣ ಮತ್ತು ಗಲಿಬಿಲಿಗೊಳಿಸುವ ಕಾಲಗಳು ಸಭೆಗೆ ಬರುತ್ತವೆ.

   d. ಆತನು ತನ್ನ ಅವಶ್ಯಕತೆಗಳಿಗಿಂತ ಮುಂದಾಗಿ ತನ್ನ ಕುರಿಗಳ ಅಗತ್ಯತೆಗಳನ್ನಿಡುತ್ತಾನೆ. ಹಾಗಾಗಿ ಆತನು ತನ್ನ ಸ್ವಂತ ಅಪಾಯಕಾರಿ ಪರಿಸ್ಥಿತಿಗಳಿಗಿಂತ ಅವರ ಬಗ್ಗೆ ಹೆಚ್ಚು ಚಿಂತಿತನಾಗಿದ್ದಾನೆ/ಕಾಳಜಿಯುಳ್ಳವನಾಗಿದ್ದಾನೆ.

6. ನಿಮ್ಮನ್ನು ಜ್ಞಾಪಕ ಪಡಿಸಿ ಪ್ರೇರೇಪಿಸುವುದು ಯುಕ್ತವೆಂದೆಣಿಸಿದ್ದೇನೆ ಎಂದು ಪೇತ್ರನು ಬರೆಯುತ್ತಾನೆ (ವ.13). ಆತನು ತನ್ನ ಓದುಗರನ್ನು ಎರಡು ಮುಖ್ಯ ಸಂಗತಿಗಳ ಬಗ್ಗೆ ಜ್ಞಾಪಕ ಪಡಿಸುತ್ತಾನೆ (ವ.16–21):

   a. ಹೊಸ ಒಡಂಬಡಿಕೆಯ ಅಪೋಸ್ತಲರ ಸಾಕ್ಷಿಗಳು ಸತ್ಯವಾಗಿವೆ ಮತ್ತು ನಂಬಲರ್ಹವಾಗಿವೆ (ವ.16–18). ತಾವು ಕಣ್ಣಾರೆ ಕಂಡು ಕೇಳಿದವುಗಳನ್ನೇ ಅವರು ಹೇಳಿದ್ದಾರೆ (1 ಯೊಹಾನ 1:1–4 ರೊಂದಿಗೆ ಹೋಲಿಸಿ).

   b. ಹಳೆ ಒಡಂಬಡಿಕೆಯ ಸಾಕ್ಷಿ ಸಹ ಸತ್ಯ ಮತ್ತು ನಂಬತಕ್ಕದ್ದಾಗಿದೆ (ವ.19–21). ಈ ವಚನಗಳಲ್ಲಿನ 'ಪ್ರವಾದಿಗಳು' ಹಳೆ ಒಡಂಬಡಿಕೆಯ ಪ್ರವಾದಿಗಳನ್ನು ಸೂಚಿಸುತ್ತದೆ (ಸಾಮಾನ್ಯರ್ಥದಲ್ಲಿನ ಪ್ರವಾದಿಗಳಲ್ಲಿ). ಇದು ಹಿನ್ನಲೆಯಿಂದ ಸ್ಪಷ್ಟವಾಗಿದೆ ವಚನ 16–2 ರ ವಿಧಿಯ ವಸ್ತುವು 'ಜ್ಞಾನ ಮತ್ತು ಭಕ್ತಿಯ ಬಗ್ಗೆ ಪೇತ್ರನು ತನ್ನ ಓದುಗರಿಗೆ ಏನನ್ನು ಹೇಳಿದನೋ ಅದರ ಆಧಾರ ಮತ್ತು ಯೋಗ್ಯತೆಗೆ' ಈ ಎರಡು ಸಾಕ್ಷಿಗಳಾಗಿವೆ.

7. 1:16–18 ರಲ್ಲಿ ಪೇತ್ರನು ಯೇಸು ಕ್ರಿಸ್ತನ ರೂಪಾಂತರಕ್ಕೆ ಸೂಚಿಸುತ್ತಾನೆ (ಮತ್ತಾಯ 17:1–8 ನ್ನು ಸಹ ನೋಡಿರಿ). ಈ ಎರಡು ವಚನಗಳ ಈ ಘಟನೆಯು ಯೇಸು ಕ್ರಿಸ್ತನ ಮಹಿಮೆಗೆ ಒಂದು ಪ್ರಕಟನೆಯಾಗಿತ್ತು ಎಂಬುದಕ್ಕೆ ಒಂದು ಪಟ್ಟಿ ಇಲ್ಲಿದೆ:

a. ಯೇಸು ಕ್ರಿಸ್ತನು 3 ಜನ ಶಿಷ್ಯರ ಮುಂದೆ ರೂಪಾಂತರಗೊಂಡನು (ವ.2). 'ರೂಪಾಂತರಗೊಳ್ಳು' ಪದದ ಅರ್ಥ 'ಬದಲಾದನು' ಎಂಬುದಾಗಿದೆ.

b. ಆತನ ಮುಖವು ಸೂರ್ಯನಂತೆ ಪ್ರಕಾಶಿಸಿತು (ವ.2).

c. ಮತ್ತು ಆತನ ವಸ್ತ್ರಗಳು ಬೆಳಕಿನಂತೆ ಬೆಳ್ಳಗಾದವು (ವ.5).

d. ಅವರನ್ನು ಒಂದು ಕಾಂತಿಯುಳ್ಳ ಮೋಡವು ಕವಿದಂತೆ ದೇವರು ಅಲ್ಲಿ ಹಾಜರಿದ್ದನು (ವ.5).

e. ದೇವರು ಮೋಡದೊಳಗಿನಿಂದ ಮಾತನಾಡಿ 'ಈತನು ಪ್ರಿಯನಾಗಿರುವ ನನ್ನ ಮಗನು, ಈತನನ್ನು ನಾನು ಮೆಚ್ಚಿದ್ದೇನೆ, ಈತನ ಮಾತನ್ನು ಕೇಳಿರಿ' ಎಂದು ಹೇಳಿದನು (ವ.5).

f. ಯೇಸು ಕ್ರಿಸ್ತನು ತಂದೆಯಾದ ದೇವರಿಂದ ಘನಮಾನಗಳನ್ನು ಹೊಂದಿದನು (2 ಪೇತ್ರ 1:17).

g. ಶಿಷ್ಯರು ದೇವರ ಸ್ವರವನ್ನು ಕೇಳಿ ಯೇಸು ಕ್ರಿಸ್ತನ ಗುರುತನ್ನು ಸ್ಪಷ್ಟಪಡಿಸಿಕೊಂಡರು (ಮತ್ತಾಯ 17:5, 2 ಪೇತ್ರ 1:5).

8. ಯೇಸು ಕ್ರಿಸ್ತನ ಕುರಿತಾದ ಆತನ ಬೋಧನೆಗಳು ಯೇಸು ಕ್ರಿಸ್ತನ ಮಹಿಮೆಯನ್ನು ಕಣ್ಣಾರೆ ಕಂಡ ಸಾಕ್ಷಿಗಳಿಂದ ಬಂದವುಗಳೆಂದು, ಪೇತ್ರನನ್ನು ತಿಳಿದವರಿಗೆ ಇದು ಒಂದು ವ್ಯತ್ಯಾಸ/ಬದಲಾವಣೆಯನ್ನುಂಟುಮಾಡಬಲ್ಲದು. ಖಂಡಿತವಾಗಿಯೂ ಪೇತ್ರನ ಮಾತುಗಳು (ಮತ್ತು ಇತರೆ ಅಪೋಸ್ತಲರ ಮಾತುಗಳು) ನಂಬತಕ್ಕವುಗಳೆಂದು ಅವರಿಗೆ ನಿಶ್ಚಯವುಂಟಾಗಬಲ್ಲದು. ಅವರಿಗೆ ಆತನು ಏನನ್ನು ಬೋಧಿಸಿದನೋ ಅದು ನಿಜವಾಗಿರಲೇಬೇಕು. ಇದು ಚಮತ್ಕಾರದಿಂದ ಕಲ್ಪಿಸಿದ ಕಥೆಗಳಿಗೆ ವಿರುದ್ಧವಾಗಿದೆ (ವ.16). ಅವು ಪೇತ್ರನ ಬದಲಾಗಿ ಸುಳ್ಳು ಬೋಧಕರನ್ನೇ ವರ್ಣಿಸಬಲ್ಲವು. ಈ ಸುಳ್ಳು ಬೋಧಕರುಗಳು ತಮ್ಮ ದುರ್ಬೋಧನೆಗಳನ್ನು ಬೆಂಬಲಿಸಲು ಕಟ್ಟು ಕಥೆಗಳನ್ನು ಸೃಷ್ಟಿಸಿದರು.

9. ವಚನ 19–21 ರಲ್ಲಿ ಪೇತ್ರನು ಈ 4 ರೂಪಾಲಂಕಾರಗಳನ್ನು ಬಳಸುತ್ತಾನೆ:

a. ಕತ್ತಲೆಯಾದ ಸ್ಥಳದಲ್ಲಿ ಪ್ರಕಾಶಿಸುವ ದೀಪ (ವ.19): ಕತ್ತಲೆಯ ಸ್ಥಳದಲ್ಲಿ ಒಬ್ಬ ಮನುಷ್ಯನಿಗೆ ದಾರಿತೋರಿಸಬಲ್ಲದು. ಅದೇ ರೀತಿ ಹಳೆ ಒಡಂಬಡಿಕೆಯ ಪತ್ರಗಳು ವಿಶ್ವಾಸಿಗಳಿಗೆ ಆತ್ಮಿಕವಾದ ಮಾರ್ಗದರ್ಶನವನ್ನು ಕೊಡಬಲ್ಲವು. ಹಾಗಾಗಿ ಅವರು ಹಳೆ ಒಡಂಬಡಿಕೆಗೆ ಮತ್ತು ಪೇತ್ರನು ತನ್ನ ಓದುಗರಿಗೆ ಜ್ಞಾಪಕಪಡಿಸುವ ಸುವಾರ್ತೆಯ ಸತ್ಯಕ್ಕಾಗಿನ ಇದರ ಸಾಕ್ಷಿಗಾಗಿ ಗಮನಕೊಡಲೇಬೇಕಾಗುತ್ತದೆ.

b. 'ಅರುಣೋದಯವಾಗುವ ಪರ್ಯಂತರ' (ವ.19): ಇದು ಹೆಚ್ಚಾಗಿ ಕರ್ತನ ದಿನ (ಹೋಲಿಸಿರಿ, ಯೋವೇಲ 2:2) ಮತ್ತು ಯೇಸು ಕ್ರಿಸ್ತನ ಎರಡನೇ ಬರೋಣವನ್ನು ಸೂಚಿಸುತ್ತದೆ.

c. ನಿಮ್ಮ ಹೃದಯದೊಳಗೆ ಬೆಳ್ಳಿಯು ಮೂಡಿ (ವ.20): ಬೆಳ್ಳಿಯು (ಮುಂಜಾನೆಯ ನಕ್ಷತ್ರ) ಶುಕ್ರಗ್ರಹವಾಗಿದ್ದು, ಬೆಳಗಾಗುವುದಕ್ಕಿಂತ ಮುಂಚೆ ಈ ಗ್ರಹವು ಬಹಳ ಪ್ರಕಾಶಮಾನವಾಗಿರುವುದನ್ನು ಕಾಣಬಹುದು. ಹಾಗಾಗಿ ಬೆಳ್ಳಿಯು ಒಂದು ಹೊಸ ದಿನದ ವಾಗ್ದಾನವಾಗುತ್ತದೆ. ಮೆಸ್ಸೀಯನ ಬರೋಣದ ಬಗ್ಗೆ ಹಳೆ ಒಡಂಬಡಿಕೆಯಲ್ಲಿ ನಕ್ಷತ್ರವು ಸಹ ಉಪಯೋಗಿಸಲ್ಪಟ್ಟಿದೆ (ಅರಣ್ಯಕಾಂಡ 24:17, ಮತ್ತಾಯ 2:2 ರೊಂದಿಗೆ ಹೋಲಿಸಿ). ನಿಮ್ಮ ಹೃದಯದೊಳಗೆ ಎಂಬುದರ ಏನನ್ನು ಪೇತ್ರನು ಹೇಳುತ್ತಿದ್ದಾನೆಂಬುದು ಅನಿಶ್ಚಿತವಾಗಿದೆ.

   ಆದರೆ ಹಿನ್ನಲೆಯು ಯೇಸು ಕ್ರಿಸ್ತನ ಎರಡನೇ ಬರೋಣವಾಗಿವೆ. ಹಾಗಾಗಿ ನಾನು ಇದನ್ನು ಈ ರೀತಿಯಲ್ಲಿ ಅರ್ಥೈಸಿಕೊಂಡಿದ್ದೇನೆ: ಯೇಸು ಕ್ರಿಸ್ತನು ಬರುವಾಗ ನೀವು ಆತನನ್ನು ಮುಖಾಮುಖಿಯಾಗಿ ನೋಡುವಿರಿ ಮತ್ತು ಹಾಗೆಯೇ ಇಂದಿಗಿಂತ ಹೆಚ್ಚಾಗಿ ನೀವು ಆತನನ್ನು ನಿಕಟವಾಗಿ ಅರಿತುಕೊಳ್ಳುವಿರಿ.

d. ಅವರು ದೇವರಾತ್ಮ ಪ್ರೇರಿತವಾಗಿ ದೇವರಿಂದ ಹೊಂದಿದ್ದನ್ನು ಮಾತಾಡಿದರು (ವ.21): ಇದರರ್ಥ ಹಳೆ ಒಡಂಬಡಿಕೆಯ ಪ್ರವಾದಿಗಳು ಪವಿತ್ರಾತ್ಮ ಪ್ರೇರಿತರಾಗಿದ್ದರು.

10. ಹಳೆ ಒಡಂಬಡಿಕೆಯ ವಾಕ್ಯದ ಮೂಲವು ಸ್ವತಃ ದೇವರಾಗಿದ್ದಾನೆ (ವ.19–21 ಪ್ರಕಾರ). ಬರಹಗಾರರು ಪವಿತ್ರಾತ್ಮನಿಂದ ಪ್ರೇರಿತರಾಗಿ ದೇವರಿಂದ ಮಾತನಾಡಿದರು. ಬರಹಗಾರರು ಏನನ್ನು ಬರೆಯಬೇಕೆಂದು ತಾವೇ ನಿರ್ಧರಿಸಲಿಲ್ಲ, ಆದರೆ ದೇವರು ಅವರ ಮೂಲಕ ಮಾತಾಡಿದನು. ಹಾಗಾಗಿ ಇದು ದೇವರ ಮಾತಾಗಿದೆ/ವಾಕ್ಯವಾಗಿದೆ.

11. ಇದು ದಕ್ಷಿಣ ಭಾರತದಲ್ಲಿ ಬೋಧಿಸುವ ಮತ್ತು ಪ್ರಸಂಗಿಸುವ ನಾವುಗಳು ನಮ್ಮ ಬೋಧನಾ ಮತ್ತು ಪ್ರಸಂಗದ ಸೇವೆಗಳಿಗಾಗಿ ಈ ಅಧ್ಯಯನದಿಂದ ಕನಿಷ್ಟ ಪಕ್ಷ 5 ಸಂಗತಿಗಳನ್ನು ಕಲಿಯಬಹುದು:

   a. ಸಭೆಯ ಬೋಧನಾ ಸೇವೆಯ ಮಹತ್ವ: ಸಭೆಯು ಎಂದಿಗೂ ಈ ಕೆಲಸವನ್ನು ನಿರ್ಲಕ್ಷಿಸಬಾರದು. ಪೇತ್ರನು ನಮಗೆ ಒಬ್ಬ ಉತ್ತಮ ಮಾದರಿಯಾಗಿ ಕಾರ್ಯಮಾಡುತ್ತಾನೆ. ತನ್ನ ಮಂದೆಗೆ/ವಿಶ್ವಾಸಿಗಳಿಗೆ ದೇವರ ಸತ್ಯಗಳನ್ನು ಜ್ಞಾಪಿಸುವುದನ್ನು ಆತನು ಎಂದಿಗೂ ನಿಲ್ಲಿಸಲಿಲ್ಲ. ತನ್ನ ಮಂದೆಯು ಆತನ ಮರಣದ ನಂತರ ಸಹ ದೇವರ ವಾಕ್ಯದೊಂದಿಗೆ ಸಂಪರ್ಕವಿಟ್ಟುಕೊಳ್ಳಬೇಕೆಂಬ ನಿಶ್ಚಯವನ್ನು ಆತನು ಮಾಡಿಕೊಂಡಿದ್ದನು.

   b. ಉತ್ತಮವಾದ ಅಸ್ತಿವಾರ/ತಳಹದಿಯನ್ನು ಹಾಕುವುದರ ಮಹತ್ವ: ಬೋಧಕರುಗಳೂ ಪ್ರಸಂಗಿಗಳೂ ಆದ ನಾವು ಕೆಲವೊಮ್ಮೆ ಹೊಸ ಸಂಗತಿಗಳೊಂದಿಗೆ ಬರಬೇಕೆಂದು ಭಾವಿಸುತ್ತೇವೆ. ಇದೊಂದು ಭಯಾನಕ ತಪ್ಪು ತಿಳುವಳಿಕೆಯಾಗಿದೆ. ನಮ್ಮ ಗುರಿಯು ಬೋಧಿಸುವುದಕ್ಕಾಗಿ ಹೊಸ ಸಂಗತಿಯನ್ನು ಕಂಡುಹಿಡಿಯುವುದಲ್ಲ. ನಮಗೆ ಕೇಳಿಸಿಕೊಳ್ಳುವವರಿಗೆ ಅವು ಯಾವಾಗಲೂ ತಾಜಾ ಮತ್ತು ಸಮಂಜಸವಾಗಿರುವ ರೀತಿಯಲ್ಲಿ ಅವಶ್ಯಕವಾದವುಗಳನ್ನು ಬೋಧಿಸುವುದಾಗಿದೆ. ಹಳೆಯ ಸತ್ಯಗಳನ್ನು ಹೊಸ ಸನ್ನಿವೇಶಗಳಿಗೆ ಹೇಗೆ ಅಳವಡಿಸಬೇಕೆಂಬುದನ್ನು ನಾವು ಕಲಿಯಬೇಕಾಗಿದೆ. ಹೊಸ

ಸನ್ನಿವೇಶಗಳಿಗೆ ಹೊಂದಿಕೊಳ್ಳಬೇಕೆಂದು ನಾವೆಂದಿಗೂ ಸಹ ಸತ್ಯಗಳನ್ನು ಬದಲಾಯಿಸಬಾರದು.

c. ನಾವು ಸೇವೆ ಮಾಡುತ್ತಿರುವ/ನೋಡಿಕೊಳ್ಳುತ್ತಿರುವ ವಿಶ್ವಾಸಿಗಳ ಆತ್ಮಿಕ ಜ್ಞಾನ ಮತ್ತು ಭಕ್ತಿಗಾಗಿನ ಕಾಳಜಿ: ಪೇತ್ರನು ತನ್ನ ಮಂದೆಯ ಕುರಿತು ಬಹಳ ಕಾಳಜಿಯುಳ್ಳವನಾಗಿದ್ದನು. ತಮ್ಮ ನಂಬಿಕೆ ಮತ್ತು ಕ್ರಿಸ್ತೀಯ ಜೀವನಶೈಲಿಗಾಗಿ ಅವರು ಸುಳ್ಳುಬೋಧಕರು ಮತ್ತು ಸವಾಲುಗಳನ್ನು ಎದುರಿಸುತ್ತಿರುವರೆಂಬುದನ್ನು ಅವನು ಅರಿತಿದ್ದನು. ಹಾಗಾಗಿ ಅವರು ತಮ್ಮ ನಂಬಿಕೆಯಲ್ಲಿ ಬೇರೂರಿ ಯೇಸು ಕ್ರಿಸ್ತನ ವೈಯಕ್ತಿಕ ಅನುಭವವನ್ನು ಹೊಂದಿದ್ದೇವೆಂದು ಮತ್ತು ತಾವು ಭಕ್ತಿಯಲ್ಲಿ ಬೆಳೆದಿದ್ದೇವೆಂಬುದನ್ನು ದೃಢಪಡಿಸಲು ಆತನು ತನ್ನ ಬಲದಲ್ಲಿ ಎಲ್ಲವನ್ನು ಮಾಡಲು ಬಯಸಿದನು.

d. ಸತ್ಯವೇದದ ದೈವಿಕ ಪ್ರೇರಣೆ:ಸತ್ಯವೇದವು ಇತರ ಎಲ್ಲಾ ಪುಸ್ತಕಗಳಿಗಿಂತ ವಿಭಿನ್ನವಾಗಿದೆ. ಇತರ ಪುಸ್ತಕಗಳು ಭಯಭಕ್ತಿಯುಳ್ಳ ಜನರಿಂದ ಬರೆಯಲ್ಪಟ್ಟಿರಬಹುದು ಮತ್ತು ಅವು ಉಪಯುಕ್ತವಾದ ಮತ್ತು ಪ್ರೇರಣೆಗೊಳಿಸುವಂತಹ ಆತ್ಮಿಕ ಸಂಗತಿಗಳನ್ನು ಒಳಗೊಂಡಿರಬಹುದು. ಆದರೆ ಅವು ಪವಿತ್ರಾತ್ಮನಿಂದ ಪ್ರೇರಿತವಾದವುಗಳಲ್ಲ, ಮತ್ತು ಅವು ದೇವರ ಮಾತುಗಳಲ್ಲ. ಸತ್ಯವೇದವು ದೇವರಿಂದ ಹೊಂದಿದವುಗಳನ್ನು ಮಾತಾಡಿದ, ಪವಿತ್ರಾತ್ಮ ಪ್ರೇರಿತವಾದ ಮನುಷ್ಯರಿಂದ ಬರೆಯಲ್ಪಟ್ಟಿದೆ. ಯಾರು ಪ್ರಸಂಗಿಸುತ್ತಾರೆ ಮತ್ತು ಬೋಧಿಸುತ್ತಾರೆಂಬ ಕ್ಷೇತ್ರಗಳು ನಮಗೆ ಸವಾಲನ್ನು ಕೊಡುತ್ತವೆ. ನಾವು ದೇವರ ವಾಕ್ಯವನ್ನು ಗೌರವದಿಂದ ನೋಡಿಕೊಳ್ಳಬೇಕು. ಸತ್ಯವೇದದ ವಾಕ್ಯಭಾಗಗಳನ್ನು ನಾವು ದೇವರ ಉದ್ದೇಶದೊಂದಿಗಿನ ಸಮ್ಮತಿಯಲ್ಲಿ ತರ್ಜುಮೆ ಮಾಡಬೇಕಾಗಿದೆ. ಪವಿತ್ರಾತ್ಮನು ನಮ್ಮ ಮನಸ್ಸುಗಳನ್ನು ಬೆಳಗುವಂತೆ ನಾವು ಅನುವು ಮಾಡಿಕೊಡಬೇಕು, ಆಗ ಆತನ ವಾಕ್ಯದ ಮೂಲಕ ದೇವರ ಸಂದೇಶವನ್ನು ನಾವು ತಿಳುಕೊಳ್ಳಬಹುದು. ನೋಡಲು ಜ್ಞಾನ ಮತ್ತು ಮಾತನಾಡಲು ಧೈರ್ಯ ನಮಗೆ ಬೇಕಾಗಿದೆ.

e. ಹಳೆ ಒಡಂಬಡಿಕೆ ಸಾಕ್ಷಿಯ ಆಧಾರ: ಹೆಚ್ಚಾಗಿ ಕ್ರೈಸ್ತರು ಹಳೆ ಒಡಂಬಡಿಕೆಯನ್ನು ನಿರ್ಲಕ್ಷಿಸುತ್ತಾರೆ. ಅವರು ಪಠ್ಯವನ್ನು ತೀರಾ ವಿಕೃತ ಮತ್ತು ಗಲಿಬಿಲಿಯನ್ನುಂಟು ಮಾಡುವವುಗಳನ್ನಾಗಿ ಕಾಣುತ್ತಾರೆ. ಆಧುನಿಕ ಐತಿಹಾಸಿಕ ಮತ್ತು ಸಾಂಸ್ಕೃತಿಕ ಹಿನ್ನಲೆಯಲ್ಲಿ ಇದು ಸಭೆಗೆ ಸಂಬಂಧಿಸುವಂತದ್ದಲ್ಲವೆಂದು ಅವರು ಭಾವಿಸುತ್ತಾರೆ. ಆದರೆ ಈ ರೀತಿಯಲ್ಲಿ ತನ್ನ ಓದುಗರು ಹಳೆ ಒಡಂಬಡಿಕೆಯನ್ನು ನೋಡಬೇಕೆಂದು ಪೇತ್ರನು ಬಯಸುವುದಿಲ್ಲ. ಬದಲಾಗಿ ಅವರು ಇದಕ್ಕೆ ಗಮನವನ್ನು ಕೊಡಬೇಕು ಮತ್ತು ನಾವು ಕತ್ತಲೆಯಲ್ಲಿ ದೀಪವನ್ನು ಬಳಸಿದಂತೆ ಇದನ್ನು ಉಪಯೋಗಿಸಬೇಕೆಂದು ಆತನು ಬಯಸುತ್ತಾನೆ. ಆತನು ಹಳೆ ಒಡಂಬಡಿಕೆಯ ಸಾಕ್ಷಿಯನ್ನು ಸ್ವೀಕರಿಸುತ್ತಾನೆ. ಇದು ಯೇಸು ಕ್ರಿಸ್ತನ ಮೂಲಕ ದೇವರ ರಕ್ಷಣೆಯ ಬಗ್ಗೆ ಮಾತನಾಡುತ್ತದೆ. ಇದು ದೇವರ ನ್ಯಾಯತೀರ್ಪಿನ ದಿನ ಮತ್ತು ಕರ್ತನ ತಿರುಗಿ ಬರೋಣದ ಬಗ್ಗೆ ಮಾತನಾಡುತ್ತದೆ. ಹಾಗಾಗಿ ಇಂದು ದಕ್ಷಿಣ ಭಾರತದಲ್ಲಿ ಬೋಧಿಸುವ ಮತ್ತು ಪ್ರಸಂಗಿಸುವ ನಾವುಗಳು ಹಳೆ ಒಡಂಬಡಿಕೆಯ ಕುರಿತಾದ ನಮ್ಮ ವಿಚಾರ ಮತ್ತು ಅದರ ಉಪಯೋಗವನ್ನು ಪರಿಗಣಿಸಬೇಕಾಗಿದೆ.



## ಅವಲೋಕನ

ಇಂದು ದಕ್ಷಿಣ ಭಾರತದಲ್ಲಿ ಪ್ರಸಂಗಿಸುವ ಮತ್ತು ಬೋಧಿಸುವ ನಮಗೆ ಇದೊಂದು ಸವಾಲಿನ ಅಧ್ಯಯನವಾಗಿದೆ. ತನ್ನ ಓದುಗರಿಗಾಗಿ ಪೇತ್ರನ ಕಾಳಜಿಯು ಅದನ್ನು ಪಾಲಿಸಲು ನಮಗೊಂದು ಮಾದರಿಯಾಗಿದೆ. ದೇವರ ವಾಕ್ಯದ ಆಧಾರದ ಮೇಲೆ ನಮ್ಮ ಒಂದು ಆತ್ಮಿಕ ತಳಹದಿ/ಅಸ್ತಿವಾರವನ್ನು ಹಾಕುವುದಕ್ಕೆ ನಮ್ಮ ಪ್ರಯತ್ನಗಳಲ್ಲಿ ನಾವು ಅವಿಶ್ರಾಂತರಾಗಿದ್ದೇವಾ? ನಮ್ಮ ಸಭೆಯ ಸದಸ್ಯರುಗಳು ಕೂಡ ಸತ್ಯದಲ್ಲಿ ದೃಢವಾಗಿ ನಿಂತುಕೊಳ್ಳುವಂತೆ ನಾವು ನೋಡಿಕೊಳ್ಳುತ್ತಿದ್ದೇವಾ? ಚಮತ್ಕಾರದಿಂದ ಕಲ್ಪಿಸಿದ ಕಥೆಗಳನ್ನು ನಾವು ಹಿಂಬಾಲಿಸುತ್ತೇವಾ (ವ.1:6)? ಅಥವಾ ಅಪೋಸ್ತಲರು (ಹೊಸ ಒಡಂಬಡಿಕೆಯ ಪುಸ್ತಕಗಳು) ಮತ್ತು ಪ್ರವಾದಿಗಳಿಗೆ (ಹಳೆ ಒಡಂಬಡಿಕೆಯ ಪುಸ್ತಕಗಳು) ನಾವು ನಂಬಿಗಸ್ತರಾಗಿದ್ದೇವಾ?



*''ಇದಲ್ಲದೆ ಪ್ರವಾದನಾ ವಾಕ್ಯವು ನಮಗೆ ಮತ್ತೂ ದೃಢವಾಗಿದೆ. ನಿಮ್ಮ ಹೃದಯದೊಳಗೆ ಬೆಳ್ಳಿಯು ಮೂಡಿ ಅರುಣೋದಯವಾಗುವ ಪರ್ಯಂತರ ಅದನ್ನು ಕತ್ತಲೆಯಾದ ಸ್ಥಳದಲ್ಲಿ ಪ್ರಕಾಶಿಸುವ ದೀಪವೆಂದೆಣಿಸಿ ಅದಕ್ಕೆ ಲಕ್ಷಕೊಡುವುದೇ ಒಳ್ಳೆಯದು'' (2 ಪೇತ್ರ 1:9).*

# ಉತ್ತರಗಳು 16: ಸುಳ್ಳು ಬೋಧಕರ ಬಗ್ಗೆ ಎಚ್ಚರಿಕೆಯಿಂದಿರಿ, 2:1–9

## ಶಿಕ್ಷಕರ ಗಮನಕ್ಕೆ

1 ಮತ್ತು 3 ನೇ ಪ್ರಶ್ನೆಗಳು ಪಠ್ಯದಿಂದ ವಿದ್ಯಾರ್ಥಿಗಳು ಸಾರಾಂಶವನ್ನು ಹೊರತರಬೇಕೆಂದು ಅಪೇಕ್ಷಿಸುತ್ತೇವೆ. ಉತ್ತರಗಳು ಸ್ಪಷ್ಟವಾಗಿ ಪ್ರಕಟಗೊಂಡಿಲ್ಲ, ಆದರೆ ತೊಡಗಿಸುವುದರ ಮೇಲೆ ಆಧರಿತಗೊಂಡಿವೆ.

ಪ್ರಶ್ನೆ 4 ಪೇತ್ರನು ದೇವದೂತರ ಬಗ್ಗೆ ಹೇಳುವ ಒಂದು ನಿಗೂಢವಾದ ಹೇಳಿಕೆಯಾಗಿದೆ. ಅನೇಕ ವ್ಯಾಖ್ಯಾನಗಳು ಇದನ್ನು 'ದೇವಪುತ್ರರ' ಬಗ್ಗೆ (ಆದಿಕಾಂಡ 6:1–4) ಆದಿಕಾಂಡದಲ್ಲಿನ ಪ್ರಳಯ ಪೂರ್ವ ಕಥೆಗೆ ಒಂದು ಆಧಾರವೆಂಬಂತೆ ನೋಡುತ್ತಾರೆ. ನನಗಿದು ಸಮಂಜಸವೆನಿಸುವುದಿಲ್ಲ. ನನ್ನ ಪಂಚಕಾಂಡಗಳ ಪುಸ್ತಕದಲ್ಲಿ (ಆದಿಕಾಂಡ ಅಧ್ಯಯನ 9) ಸೇತನ ವಂಶಾವಳಿಯ ಭಕ್ತಿಯುತ ಪುರುಷರಾದ 'ದೇವಪುತ್ರರು' ಕಾಯಿನನ ದುಷ್ಟ ವಂಶಾವಳಿಯಿಂದ ಸ್ತ್ರೀಯರನ್ನು ಮದುವೆಯಾಗುವುದು (ಮನುಷ್ಯ ಪುತ್ರರು) ಎಂದು ಅರ್ಥೈಸಿಕೊಂಡಿದ್ದೇನೆ. ಪ್ರಶ್ನೆ 4 ಕ್ಕೆ ನನ್ನ ಉತ್ತರವನ್ನು ನೋಡಿರಿ.

## ಉತ್ತರಗಳು

1. ಸಭೆಯಲ್ಲಿ ಸುಳ್ಳುಬೋಧಕರುಗಳು ಯಾವಾಗಲೂ ಇರುತ್ತಾರೆಂಬುದನ್ನು ನಾವು ವಚನ 1 ರಿಂದ ತಿಳಿದುಕೊಳ್ಳಬಹುದು. ಪೇತ್ರನು ಕೆಲವು ಹಳೆ ಒಡಂಬಡಿಕೆಯ ಪ್ರವಾದಿಗಳು ಸುಳ್ಳು ಬೋಧಕರುಗಳಾಗಿದ್ದರು ಎಂಬ ಹೇಳಿಕೆಯೊಂದಿಗೆ ಪ್ರಾರಂಭಿಸುತ್ತಾನೆ (ಉದಾಹರಣೆಗೆ ನೋಡಿರಿ– ಧರ್ಮೋ 13;15, ಯೆಶಾಯ 9:14–16, ಯೆರೆಮಿಯ 14:14, ಜೆಕರ್ಯ 13:2–3) ಮತ್ತು ನಂತರದ 4 ಅಧ್ಯಾಯದಲ್ಲಿ ಆತನು ಮೆಸಪೊಟೋಮಿಯಾದ ಪ್ರವಾದಿಯಾದ ಬಿಳಾಮನ ಬಗ್ಗೆ ಪ್ರಸ್ತಾಪಿಸುತ್ತಾನೆ. ಆನಂತರ ಪೇತ್ರನು 'ನಿಮ್ಮಲ್ಲಿಯೂ ಸುಳ್ಳು ಬೋಧಕರು ಇರುವರು' ಎಂದು ಹೇಳುತ್ತಾನೆ. ಹಾಗಾಗಿ ನಮ್ಮ ಸಭೆಗಳಲ್ಲಿ ಸುಳ್ಳು ಬೋಧಕರುಗಳು ಮತ್ತು ಸುಳ್ಳು ಪ್ರಸಂಗಿಗಳು ಕಾಣಿಸಿಕೊಳ್ಳುವಾಗ ನಾವು ಆಶ್ಚರ್ಯಪಡಬೇಕಾಗಿಲ್ಲ.

2. ಪೇತ್ರನು ಸುಳ್ಳು ಬೋಧಕರ 5 ಗುಣಲಕ್ಷಣಗಳನ್ನು ನೀಡುತ್ತಾನೆ (ವ.1–3). ಇವು ಸಭೆಯಲ್ಲಿನ ಸುಳ್ಳು ಬೋಧಕರುಗಳನ್ನು ಗುರುತಿಸಲು ನಮಗೆ ಸಹಾಯಕವಾಗಬಲ್ಲವು.

   a. ಅವರು ದುರ್ಬೋಧನೆಗಳನ್ನು ಬೋಧಿಸುವರು (ವ.1). ಸುಳ್ಳು ಬೋಧಕರು ತಮ್ಮ ಬೋಧನೆಯನ್ನು ಸತ್ಯವೇದದ ಸತ್ಯಗಳ ಒಂದು ಸರಿಯಾದ ತಿಳುವಳಿಕೆಯ ಮೇಲೆ ಆಧಾರಿತಗೊಂಡಿಲ್ಲ. ಬದಲಾಗಿ ಅವರು ಅದನ್ನು ತಾವೇ ಕಲ್ಪಿಸಿದ ಕಥೆಗಳ ಮೇಲೆ ಆಧಾರವಾಗಿಟ್ಟುಕೊಳ್ಳುತ್ತಾರೆ. ವಿಶ್ವಾಸಿಗಳಿಗೆ ಈ ದುರ್ಬೋಧನೆಗಳನ್ನು ಕಂಡುಹಿಡಿಯಲು ಅಷ್ಟು ಸುಲಭವಾಗಿರುವುದಿಲ್ಲ. ಯಾಕೆಂದರೆ ಅವು ಹೆಚ್ಚಾಗಿ ಗುಪ್ತವಾಗಿ ಪರಿಚಯಿಸಲ್ಪಟ್ಟಿರುತ್ತದೆ. ಈ ದುರ್ಬೋಧನೆಗಳು ಸಾಮಾನ್ಯವಾಗಿ ಸಭಾ ಅನ್ಯೋನ್ಯತೆಗೆ ಹಾನಿಕಾರಕವಾಗಿವೆ.ಈ ದುರ್ಬೋಧನೆಗಳು ಕಾಣಬರುವ ಒಂದು ಸೈದ್ಧಾಂತಿಕ ಕ್ಷೇತ್ರವನ್ನು

ಸಹ ಪೇತ್ರನು ತಿಳಿಸುತ್ತಾನೆ: 'ತಮ್ಮನ್ನು ಕೊಂಡುಕೊಡ ಒಡೆಯನನ್ನು ಸಹ ತಾವು ಅರಿಯೆವು ಎಂದು ಹೇಳುವವರೂ ಆಗಿದ್ದು'. ಅವರು ಯೇಸು ಕ್ರಿಸ್ತನ ದೈವತ್ವವನ್ನು ಮತ್ತು ರಕ್ಷಣೆಗಾಗಿ ಶಿಲುಬೆಯ ಮೇಲೆ ಆತನು ಮಾಡಿದ ಕಾರ್ಯವನ್ನು ಅಲ್ಲಗಳೆಯುವವರಾಗಿದ್ದಾರೆ. ಅವರ ದುರ್ಬೋಧನೆಯ ಇನ್ನೊಂದು ಕ್ಷೇತ್ರವು ನೀತಿಶಾಸ್ತ್ರ, ವಿಶ್ವಾಸಿಗಳ ಭಯಭಕ್ತಿಯ ಜೀವಿತಗಳಾಗಿವೆ. ಮುಂದಿನ ಅಂಶವನ್ನು ನೋಡಿರಿ.

b. ಅವರು ನಿರ್ಲಜ್ಜಾಕೃತ್ಯಗಳನ್ನು/ ನಾಚಿಕೆಗೇಡು ಮಾರ್ಗಗಳನ್ನು ಅನುಸರಿಸುವರು (ವ.2). ಅವರ ದುರ್ಬೋಧನೆಗಳು ಅವರ ಜೀವನ ಶೈಲಿಯನ್ನು ನಕರಾತ್ಮಕವಾಗಿ ಬಾಧಿಸುತ್ತದೆ. ಭಕ್ತಿಯನ್ನು ಹಿಂಬಾಲಿಸುವುದರ ಬದಲಾಗಿ, ಅವರು ತಮ್ಮ ಸ್ವಾರ್ಥ ದ್ರವ್ಯಾಶೆಗಳಿಗಾಗಿ ತವಕ ಪಡುವರು. ಒಂದು ಬಾರಿ ಅವರ ಕ್ರೈಸ್ತೀಯ ಜೀವನ ಶೈಲಿಯು ಹೊಂದಾಣಿಕೆ ಮಾಡಿಕೊಂಡಾಗ ಪಾಪಮಯವಾದ ಚಟಗಳು ಅವರ ಜೀವನವನ್ನು ನಿಯಂತ್ರಿಸುವವು ಮತ್ತು ಆಳುವವು. ತಮ್ಮ ಪಾಪಗಳನ್ನು ಸಮರ್ಥಿಸಲು ಅವರು ತಮ್ಮ ಸುಳ್ಳು ಸಿದ್ಧಾಂತಗಳನ್ನು ಉಪಯೋಗಿಸುವರು ಮತ್ತು ವಿಶ್ವಾಸಿಗಳು ಅವರ ಮಾದರಿಯನ್ನು ಹಿಂಬಾಲಿಸುವರು. ಮುಂದಿನ ಅಂಶವನ್ನು ನೋಡಿರಿ.

c. ಅವರಿಗೆ ಅನೇಕ ಹಿಂಬಾಲಕರಿರುವರು (ವ.2). ಸುಳ್ಳು ಬೋಧಕರು ಮೃದುವಾಗಿ ಮಾತಾಡುವರು. ಅವರು ರೋಮಾಂಚನಕಾರಿ ಹೊಸ ಸಿದ್ಧಾಂತಗಳನ್ನು ಹುಟ್ಟುಹಾಕುವರು. ಸತ್ಯವೇದದಲ್ಲಿ ಹಿಂದೆ ಯಾರೂ ಸಹ ಕಂಡುಹಿಡಿಯದಿರುವ ಮರ್ಮಗಳನ್ನು ಅವರು ತೆರೆದಿಡುವರು. ತಮ್ಮ ಕೇಳುಗರಿಗೆ ಆಕರ್ಷಕವಾಗಿರುವಂತೆ ಮಾಡಲು ಅವರು ಹಳೆಯ ಸಿದ್ಧಾಂತಗಳನ್ನು ಮರುರೂಪಗೊಳಿಸುವರು. ಜನರು ತಮ್ಮ ಶಿಲುಬೆಯನ್ನು ಹೊತ್ತುಕೊಂಡು, ಯೇಸುವನ್ನು ಹಿಂಬಾಲಿಸಲು ಅವಶ್ಯವಾಗಿರುವ ಸತ್ಯವೇದದ ಸತ್ಯಗಳನ್ನು ಅವರು ಅಲ್ಲಗಳೆಯುವರು. ಅವರು ಮಾನವನ ಬಲಹೀನ ಮತ್ತು ಪಾಪಮಯವಾದ ಸ್ವಭಾವವನ್ನು ಮುಂದಿಡುವರು. ಹಾಗಾಗಿ ಜನರು ಅವರಿಗೆ ಕಿವಿಗೊಡಲು ಪುಳಕಗೊಳ್ಳುವರು ಮತ್ತು ಅವರನ್ನು ಹಿಂಬಾಲಿಸಲು ಸಂತೋಷಿಸುವರು. ಸ್ವತಃ ಅವರ ಪಾಪಮಯವಾದ ಜೀವನವು ಹಿಂಬಾಲಕರನ್ನು ಆಕರ್ಷಿಸುವುದು. ಇದರ ಪರಿಣಾಮವಾಗಿ ಸಭೆಯು ತನ್ನ ಸಾಕ್ಷಿಯನ್ನು ಕಳಕೊಳ್ಳುತ್ತದೆ. ಮುಂದಿನ ಅಂಶವನ್ನು ನೋಡಿರಿ.

d. ಅವರು ಸಭೆಯ ಸಾಕ್ಷಿಯನ್ನು ದೂಷಣೆಗೆ ತರುವರು (ವ.2). ಈ ಜಗತ್ತಿನ ಜನರು ಪ್ರಾಪಂಚಿಕರಾಗಿರಬಹುದು ಆದರೆ ಅವರು ಮೂರ್ಖರಲ್ಲ. ಅವರು ತಮ್ಮ ಕ್ರೈಸ್ತೀಯ ನೆರೆಹೊರೆಯವರನ್ನು ಸಹ ವಿದ್ಯಾರ್ಥಿಗಳನ್ನು ಮತ್ತು ಸಹ ಕೆಲಸಗಾರರನ್ನು ಗಮನಿಸುತ್ತಿರುವರು. ಕ್ರೈಸ್ತರು ಉನ್ನತವಾದ ನೈತಿಕತೆ ಮತ್ತು ಒಳ್ಳೆಯ ನೀತಿಯುತ ಕಾರ್ಯಗಳಿಂದ ಕೂಡಿರಬೇಕೆಂದು ಅವರಿಗೆ ಗೊತ್ತಿದೆ. ಕ್ರೈಸ್ತೀಯ ವಿಶ್ವಾಸಿಗಳು ಶಿಸ್ತುಬದ್ಧರಾಗಿ ಮತ್ತು ಯಥಾರ್ಥರೂ ಆಗಿರಬೇಕೆಂದು ಅವರು ಬಯಸುವರು. ಹಾಗಾಗಿ ಸುಳ್ಳು ಬೋಧಕರ ಮತ್ತು ಅವರ ಹಿಂಬಾಲಕರ ಭಕ್ತಿಹೀನವಾದ ಜೀವಿತಗಳು ಸಭೆಯನ್ನು ದೂಷಣೆಗೆ ಗುರಿಮಾಡುತ್ತವೆ. ಇದರಿಂದ ಸಭೆಯು ತನ್ನ ಸಾಕ್ಷಿಯನ್ನು ಮತ್ತು ಆಕರ್ಷಣೆಯನ್ನು ಕಳಕೊಳ್ಳುತ್ತದೆ. ಆ ರೀತಿಯ ಜನರಿಗೆ ಯಾರು ಕಿವಿಗೊಡುತ್ತಾರೆ? ಆ ರೀತಿಯ ಜನರಿರುವ ಸಭೆಗೆ ಸೇರಲು ಯಾರು ಬಯಸುವರು? ಪರಿಣಾಮವಾಗಿ ಸುವಾರ್ತೆಯನ್ನು ಸಾರುವುದು ತನ್ನ ಶಕ್ತಿಯನ್ನು ಕಳೆದುಕೊಳ್ಳುತ್ತದೆ.

e. ಅವರು ವಿಶ್ವಾಸಿಗಳನ್ನು ಹಾಳು ಮಾಡುವರು (ವ.3). ಅವರು ಸ್ವಾರ್ಥ ಮನೋಭಾವನೆಯುಳ್ಳವರು. ಅವರು ಅಧಿಕಾರ ಮತ್ತು ನಿಯಂತ್ರಣವನ್ನು ಬಯಸುವರು. ಅವರು ಹಣ ಮತ್ತು ಆಸ್ತಿಯನ್ನು ಆಶಿಸುವರು. ಅವರು ತಮ್ಮದೇ ಆದ ಸ್ವಂತ ಸಾಮ್ರಾಜ್ಯ ಮತ್ತು ಸಂಸ್ಥಾನಗಳನ್ನು ಕಟ್ಟಲು ಅಪೇಕ್ಷಿಸುವರು. ಹಾಗಾಗಿ ವಿಶ್ವಾಸಿಗಳನ್ನು ಅವರು ಹಾಳುಮಾಡುವರು. ದುಃಖಕರವೆಂದರೆ ಅನೇಕ ಮಂದಿ ಸುಳ್ಳುಬೋಧಕರ ಹಿಂಬಾಲಕರುಗಳು, ಅವರ ಕಿವಿಗಳು ತಾವು ಕೇಳುವುದರಿಂದ ಪುಳಕಗೊಳ್ಳುವವರೆಗೂ ಮತ್ತು ಅವರ ಲೌಕಿಕವಾದ ಮಾನುಶಿಕವಾದ ಆಶೆಗಳಿಂದ ತೃಪ್ತರಾಗುವವರೆಗೂ ತಾವು ಹಾಳಾಗುತ್ತಿದ್ದೇವೆಂಬುದನ್ನು ಗಮನಿಸುವುದಿಲ್ಲ.

3. ಅವರ ಹಿಂಬಾಲಕರು ಮೂರ್ಖರಾದರೂ ದೇವರು ಸುಳ್ಳು ಬೋಧಕರಿಂದ ಮೂರ್ಖನಾಗುವುದಿಲ್ಲವೆಂಬುದನ್ನು ವಚನ 3 ರಿಂದ ತಿಳುಕೊಳ್ಳಬಹುದು. ದೇವರು ತಕ್ಷಣವೇ ಸುಳ್ಳು ಬೋಧಕರನ್ನು ಶಿಕ್ಷಿಸದೇ ಇರಬಹುದು, ಆದರೆ ಪ್ರಾರಂಭದಿಂದಲೇ ಆತನವರನ್ನು ಖಂಡಿಸಿದ್ದಾನೆ. ಇದನ್ನು ವರ್ಣಿಸಲು ಪೇತ್ರನು 2 ರೂಪಾಲಂಕಾರಗಳನ್ನು ಉಪಯೋಗಿಸುತ್ತಾನೆ.

   a. ಅವರಿಗಾಗುವ ತೀರ್ಪು ಸುಮ್ಮನೆ ಕುಳಿತಿಲ್ಲ (ಇಎಸ್‌ವಿ).

   b. ಅವರಿಗಾಗುವ ವಿನಾಶವು ನಿದ್ರೆ ಮಾಡುತ್ತಿಲ್ಲ.

ತಮ್ಮ ದುಷ್ಟಮಾರ್ಗಗಳ ಹೊರತಾಗಿಯೂ ಸುಳ್ಳು ಬೋಧಕರುಗಳು ಕೆಲಸಕಾರ್ಯದಲ್ಲಿ ಅಭಿವೃದ್ಧಿಯಾಗುವಾಗ ಮತ್ತು ಅನೇಕ ಹಿಂಬಾಲಕರನ್ನು ಆಕರ್ಷಿಸುವುದನ್ನು ನಾವು ನೋಡುವಾಗ ನಾವು ಈ ರೀತಿ ದೇವರನ್ನು ಪ್ರಶ್ನಿಸುತ್ತೇವೆ. ಯಾಕೆ ಈ ರೀತಿ ಆಗಲು ಆತನು ಅನುಮತಿಸಿದನು? ಯಾಕೆ ಆತನು ಮಧ್ಯೆ ಪ್ರವೇಶಿಸಿ ಅವರ ದುಷ್ಟತನವನ್ನು ನಿಲ್ಲಿಸುವುದಿಲ್ಲ? ದುಷ್ಕೃತ್ಯಗಳನ್ನು ಮಾಡುವವರನ್ನು ಆತನು ಯಾಕೆ ದಂಡಿಸುವುದಿಲ್ಲ? ನಾವು ಪೇತ್ರನ ಮಾತುಗಳನ್ನು ಜ್ಞಾಪಿಸಿಕೊಳ್ಳಬೇಕು. ದೇವರು ಈಗಾಗಲೇ ಅವರನ್ನು ಖಂಡಿಸಿದ್ದಾನೆ ಮತ್ತು ಅವರ ದಂಡನೆ/ನಾಶನವು ಖಂಡಿತವಾದದ್ದು.

ಕೆಲವೊಮ್ಮೆ ಸುಳ್ಳು ಬೋಧಕರುಗಳ ದುಷ್ಟತನವು ಪಕ್ಕನೆ ಅವರ ಮೇಲೆ ನಾಶನವನ್ನು ಬರಮಾಡುವುದು (ವ.1).

4. ದೇವದೂತರು ಪಾಪಮಾಡಿದಾಗ ದೇವರು ಅವರನ್ನು ಸುಮ್ಮನೆ ಬಿಡದೆ ನಾಶನಕ್ಕೆ ದೊಬ್ಬಿ ನ್ಯಾಯತೀರ್ಪನ್ನು ಹೊಂದುವುದಕ್ಕೆ ಇಡಲ್ಪಟ್ಟವರಾಗಿರಬೇಕೆಂದು ಕತ್ತಲೆ ಗುಂಡಿಗಳಿಗೆ ಒಪ್ಪಿಸಿದನು (ವ.4). ಈ ಹೇಳಿಕೆಯನ್ನು ಪೇತ್ರನು ಸತ್ಯವೇದದ ಯಾವ ಘಟನೆಗೆ ಸೂಚಿಸುತ್ತಾನೆಂಬುದನ್ನು ಸತ್ಯವೇದ ಪಂಡಿತರುಗಳು ಒಪ್ಪುವುದಿಲ್ಲ:

   a. ಕೆಲವರು ಪೇತ್ರನು ಆದಿಕಾಂಡ 6:1–4 ನ್ನು ಕುರಿತು ಹೇಳುತ್ತಾನೆಂದು ಯೋಚಿಸುವರು (ಇದು ಇಬ್ರಿಯ ಪಠ್ಯದಲ್ಲಿ ಅನಿಶ್ಚಿತತೆಯಿಂದ ಕೂಡಿರುವ ಕ್ಲೀಷ್ಟಕರವಾದ ಒಂದು ಕಥೆಯಾಗಿದೆ). ಅಲ್ಲಿ ದೇವಪುತ್ರರು (ದೇವದೂತರನ್ನು ಸೂಚಿಸುವುದೆಂದು ಅವರು ಹೇಳುವರು) ಮನುಷ್ಯ ಪುತ್ರಿಯರನ್ನು ಮದುವೆಯಾದರು ಮತ್ತು ಅವರಿಂದ ಮಕ್ಕಳನ್ನು ಪಡೆದರು ಎಂಬುದಾಗಿ ನಾವು ಓದುತ್ತೇವೆ. ಆಗ ಹುಟ್ಟಿದ ಮಕ್ಕಳನ್ನು ನೆಫಿಲಿಯರೆಂದು ಕರೆಯಲ್ಪಟ್ಟರು. ಅವರು ಬಹುಶರೀರಿಗಳಾಗಿದ್ದರು ಮತ್ತು ಪುರಾತನ ನಾಯಕರುಗಳಾಗಿದ್ದರು. ಆದರೆ ಪಠ್ಯದಲ್ಲಿ ದೇವದೂತರ ಬಗ್ಗೆ ಮತ್ತು ನರಕದಲ್ಲಿ ಅವರ

ಶಿಕ್ಷೆಯ ಬಗ್ಗೆ ಏನೆಂದೂ ಹೇಳಿಲ್ಲ. ದೇವದೂತರುಗಳು ಸ್ತ್ರೀಯರೊಂದಿಗೆ ಲೈಂಗಿಕ ಸಂಬಂಧ ಹೊಂದಿದ್ದರೆಂಬುದನ್ನು ನಾನು ಪರಿಗಣಿಸುವುದಿಲ್ಲ. (ಮತ್ತಾಯ 22:30 ರಲ್ಲಿ ಯೇಸು ಕ್ರಿಸ್ತನು ದೇವದೂತರು ಮದುವೆಯಾಗುವುದಿಲ್ಲವೆಂದು ಹೇಳುತ್ತಾನೆ).

b. ಇನ್ನೂ ಕೆಲವರು ಆದಾಮ ಮತ್ತು ಹವ್ವರ ಬೀಳುವಿಕೆಗಿಂತ ಮೊದಲು ಸಂಭವಿಸಿದ ಸಂಗತಿಯ ಬಗ್ಗೆ ಹೇಳುತ್ತಾನೆಂದು ಯೋಚಿಸುತ್ತಾರೆ. ಬಿದ್ದುಹೋದ ದೇವದೂತರು ದುರಾತ್ಮಗಳಾದರು ಮತ್ತು ಆತನ ಕೆಟ್ಟ ದೂತರುಗಳಾದರು. ಈ ಕುರಿತು ಸ್ಪಷ್ಟವಾದ ದಾಖಲೆ ಹೊಂದಿಲ್ಲ. ಪೇತ್ರನ ಮಾತುಗಳು– ದೇವರು ಬಿದ್ದು ಹೋದ ಈ ಕೆಲವು ದೇವದೂತರುಗಳನ್ನು ನ್ಯಾಯತೀರ್ಪಿನ ದಿನದವರೆಗೆ ನರಕದಲ್ಲಿ ಸೆರೆಯಿಟ್ಟಿರುವನೆಂಬುದನ್ನು ಸೂಚಿಸುವಂತೆ ತೋರುತ್ತದೆ. ನಾನೆಣಿಸುತ್ತೇನೆ 2 ಪೇತ್ರ 2:4 ನ್ನು ಸರಿಯಾಗಿ ಅರ್ಥೈಸಿಕೊಳ್ಳುವುದಾಗಿದೆ.

5. ಪಾಪಮಯ ದೇವದೂತರ ಬಗ್ಗೆ ತಿಳಿಸುವುದರಿಂದ ಪೇತ್ರನು ಎರಡು ಅಂಶಗಳನ್ನು ಪ್ರಸ್ತಾಪಿಸುತ್ತಾನೆ:

   a. ಮೊದಲನೆಯದು– ಯಾವ ಪಾಪಿಯೂ ದೇವದೂತರೂ ಸಹ ದೇವರ ನ್ಯಾಯತೀರ್ಪಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.

   b. ಎರಡನೆಯದು– ದುಷ್ಟರಿಗೆ ದೇವರ ನ್ಯಾಯತೀರ್ಪು, ನ್ಯಾಯತೀರ್ಪಿನ ದಿನದವರೆಗೂ ತಡವಾದರೂ ಖಂಡಿತವಾಗಿ ತಪ್ಪದೇ ಬರುವುದು.

6. ಪೇತ್ರನು ನೋಹನನ್ನು ಸುನೀತಿಯನ್ನು ಸಾರುವವನೆಂಬುದಾಗಿ ವರ್ಣಿಸುತ್ತಾನೆ (ವ.5). ಹಳೆ ಒಡಂಬಡಿಕೆಯಲ್ಲಿ ನಾವೆ ಮತ್ತು ಜಲಪ್ರಳಯದ ಸಮಯದಲ್ಲಿನ ಆತನ ಜೀವನದ ಬಗ್ಗೆ ನಾವು ಹೊಂದಿರುವ ಮಾಹಿತಿಗಳೊಂದಿಗೆ ನೋಹನ 'ಮೌಲ್ಯಮಾಪನ'ವನ್ನು ಹೋಲಿಸುವಾಗ (ನೋಡಿ, ಆದಿ 6:9– 7:1) ಪೇತ್ರನು ಎಲ್ಲಿಂದ ಈ ಮಾಹಿತಿಯನ್ನು ಪಡೆದನೆಂಬುದಾಗಿ ನಾವು ಚಕಿತಗೊಳ್ಳುತ್ತೇವೆ. ಅನೀತಿ ಮತ್ತು ದೇವರಿಗೆ ಭಯಪಡದ ಜನರಿರುವ ಲೋಕದಲ್ಲಿ ನೋಹನು ಒಬ್ಬ ಭಕ್ತಿಯುತ ಮತ್ತು ನೀತಿವಂತ ಮನುಷ್ಯನಾಗಿದ್ದನೆಂದು ಹಳೆ ಒಡಂಬಡಿಕೆಯು ಚಿತ್ರಿಸುವುದು ಸತ್ಯ. (ನೋಹನು ನೀತಿವಂತನೂ ತನ್ನ ಕಾಲದಲ್ಲಿ ತಪ್ಪಿಲ್ಲದವನೂ ಆಗಿದ್ದನು. ಅವನು ದೇವರೊಂದಿಗೆ ಅನ್ಯೋನ್ಯವಾಗಿ ನಡೆದುಕೊಂಡನು. ಆದಿಕಾಂಡ 6:9, ಯೆಹೆಜ್ಕೆಲ 14:14 ರೊಂದಿಗೆ ಹೋಲಿಸಿರಿ). ಆದರೆ ಆತನು ಒಬ್ಬ ಪ್ರಸಂಗಿಯಾಗಿದ್ದನೆಂದು ಹೇಳಿಲ್ಲ. ಆದಾಗ್ಯೂ 'ನೀತಿಯನ್ನು ಸಾರುವವನಾಗಿ' ಮಾಡಿತು ಎಂಬುದು ಪೇತ್ರನು ಹೇಳಬಯಸುವ ಸಂಗತಿಯಾಗಿದೆ. ಅಥವಾ ನೋಹನು ತನ್ನ ಸಮಯದಲ್ಲಿನ ಜನರೊಂದಿಗೆ ಹೊಂದಿದ ಆಸಕ್ತಿಯ ಬಗೆಗಿನ ಮಾಹಿತಿಯನ್ನು ಪೇತ್ರನು ಹೊಂದಿರಬಹುದು. ಇದನ್ನು ತಿಳಿಯಲು ನಮಗೆ ಮಾರ್ಗವಿಲ್ಲ.

7. ಪೇತ್ರನು ಲೋಟನನ್ನು ಚಿತ್ರೀಕರಿಸುವ ಚಿತ್ರಣ ಇದಾಗಿದೆ (ವ.6–8).

   a. ಆತನೊಬ್ಬ ನೀತಿವಂತ ಮನುಷ್ಯನಾಗಿದ್ದನು. ಆದಿಕಾಂಡ 18:16– 19:29 ರಲ್ಲಿ ಸೊದೋಮ್ ಮತ್ತು ಗೊಮೋರಾ ಮತ್ತು ಆ ಸೀಮೆಯ ಪಟ್ಟಣಗಳ ಮೇಲೆ ದೇವರ

ನ್ಯಾಯತೀರ್ಪಿನ ಬಗ್ಗೆ ನಾವು ಓದಬಹುದು. ಲೋಟನು ನೀತಿವಂತ ವ್ಯಕ್ತಿಯಾಗಿದ್ದ ನಿಮಿತ್ತ ರಕ್ಷಿಸಲ್ಪಟ್ಟನು.

b. ಸೊದೋಮ್ ಮತ್ತು ಗೊಮೋರಾ ಪಟ್ಟಣದ ಜನರು ಜೀವಿಸಿದ ಪಾಪಮಯವಾದ ರೀತಿಯಿಂದ ಆತನು ಬೇಸರಗೊಂಡಿದ್ದನು. ಅವರ ಜೀವಿತವು ತುಚ್ಛವಾಗಿತ್ತು ಮತ್ತು ಅವರು ಅಧರ್ಮಿಗಳಾಗಿದ್ದರು.

c. ಪ್ರತಿದಿನವೂ ಸಹ ಆತನು ಅವರ ಮಧ್ಯದಲ್ಲಿಯೇ ಜೀವಿಸಿದನು. ಹಾಗಾಗಿ ಅವರ ಪಾಪಮಯವಾದ ನಡವಳಿಕೆ ಮತ್ತು ಅಧರ್ಮದಿಂದ ಕಸಿವಿಸಿಗೊಂಡಿದ್ದನು.

8. ವಚನ 4–9 ರಲ್ಲಿ ತಾನು ಪ್ರಸ್ತಾಪಿಸಿದ ಹಳೆ ಒಡಂಬಡಿಕೆಯ ಘಟನೆಗಳಿಂದ ತನ್ನ ಓದುಗರು ಕನಿಷ್ಟಪಕ್ಷ 9 ಸಂಗತಿಗಳನ್ನು ಕಲಿಯಬೇಕೆಂದು ಪೇತ್ರನು ಬಯಸುತ್ತಾನೆಂದು ನಾನು ಯೋಚಿಸುತ್ತೇನೆ.

a. ದೇವರ ನ್ಯಾಯತೀರ್ಪು ತಪ್ಪಿಸಿಕೊಳ್ಳಲಾಗದ್ದು. ವಿಶ್ವದ ಇತಿಹಾಸದಲ್ಲಿ ಯಾರೂ ಅರಿಯದ ಒಂದು ಸಮಯದಲ್ಲಿ ಅದು ದೇವದೂತರ ಮೇಲೆ ಬಂದಿತು. ಜಲಪ್ರಳಯದ ಸಮಯದಲ್ಲಿ ಪಾಪಮಯವಾದ ಲೋಕದ ಮೇಲೆ ಇದು ಬಂದಿದೆ. ಅಬ್ರಹಾಮ ಮತ್ತು ಲೋಟನ ಸಮಯದಲ್ಲಿ ಸೀಮೆಯ ಪಟ್ಟಣಗಳ ಮೇಲೆ ಇದು ಬಂದಿದೆ.

b. ಯಾವ ದುಷ್ಟ ಮತ್ತು ಪಾಪಿಷ್ಟ ಮನುಷ್ಯನೂ ಸಹ ದೇವರ ನ್ಯಾಯತೀರ್ಪಿನಿಂದ ತಪ್ಪಿಸಿಕೊಳ್ಳಲು ಆಗುವುದಿಲ್ಲ. ದೇವದೂತರೂ ಸಹ.

c. ಆದರೆ ನೀತಿವಂತರು ದೇವರ ನ್ಯಾಯತೀರ್ಪಿನಿಂದ ತಪ್ಪಿಸಿಕೊಳ್ಳುವರು. ನೋಹನು ಜಲಪ್ರಳಯದಿಂದ ತಪ್ಪಿಸಿಕೊಂಡನು. ಲೋಟನು ಸೀಮೆಯ ಪಟ್ಟಣಗಳಿಂದ ತಪ್ಪಿಸಿಕೊಂಡನು.

d. ದೇವರ ನ್ಯಾಯತೀರ್ಪಿನ ಸಮಯವು ಆತನ ಕೈಯಲ್ಲಿದೆ. ಇದು ಯಾವಾಗ ಬರುತ್ತದೆಂದು ತಿಳಿದುಕೊಳ್ಳುವುದು ನಮ್ಮ ಕೆಲಸವಲ್ಲ. ಆದರೆ ಆ ಸಮಯವು ಈಗ ಬರದಿದ್ದಾಗ್ಯೂ ನ್ಯಾಯತೀರ್ಪಿನ ದಿನದಲ್ಲಾದರೂ ಅದು ಬಂದೇ ಬರುವುದು.

e. ದೇವರು ಎಲ್ಲವನ್ನು ಹತೋಟಿಯಲ್ಲಿಟ್ಟುಕೊಂಡಿದ್ದಾನೆ. ಕರ್ತನು ಭಕ್ತರನ್ನು ಕಷ್ಟದೊಳಗಿಂದ ತಪ್ಪಿಸುವುದಕ್ಕೂ ದುರ್ಮಾರ್ಗಿಗಳನ್ನು ನ್ಯಾಯತೀರ್ಪಿನ ದಿನದ ತನಕ ಶಿಕ್ಷಾನುಭವದಲ್ಲಿ ಇಡುವುದಕ್ಕೂ ಬಲ್ಲವನಾಗಿದ್ದಾನೆ (ವ.9).

f. ಈಗಲೂ ಸಹ ಭಕ್ತಿಹೀನರು ಮತ್ತು ಅನೈತಿಕ ಜನರು ಶಿಕ್ಷಿಸಲ್ಪಡುತ್ತಿದ್ದಾರೆ. ಅವರ ನಾಶನಕರವಾದ ಜೀವನ ಶೈಲಿಯು ಖಂಡಿತವಾಗಿ ಅವರನ್ನು ಹಾಳುಮಾಡುತ್ತದೆ. ಕುಡುಕುತನವು– ಕುಡುಕುತನದ ಚಟಕ್ಕೆ, ರೋಗಕ್ಕೆ ಮತ್ತು ಅಕಾಲಿಕ ಮರಣಕ್ಕೆ ನಡೆಸುವುದು. ಅನೈತಿಕ ಲೈಂಗಿಕ ಸ್ವಭಾವವು ಹೆಚ್ಐವಿ ಮತ್ತು ಏಡ್ಸ್‌ಗೆ ನಡೆಸಬಲ್ಲದು.ಹೊಟ್ಟೆಬಾಕುತನವು ಮತ್ತು ಅತಿಯಾಗಿ ತಿನ್ನುವುದು ಮಧುಮೇಹ, ಪಾರ್ಶ್ವವಾಯು ಮತ್ತು ಹೃದಯಘಾತಕ್ಕೆ ನಡೆಸಬಲ್ಲದು. ಕಳ್ಳತನ, ದರೋಡೆ ಮತ್ತು ಕೊಲೆಯು– ಸೆರೆಮನೆವಾಸಕ್ಕೆ ಮತ್ತು ಕೆಲ ಸಮಯ ಮರಣದಂಡನೆಗೂ ನಡೆಸಬಲ್ಲದು.

g. ಹೊಲಸು ತುಂಬಿದ, ಪಾಪಮಯವಾದ ಮತ್ತು ಅಕ್ರಮ ಜೀವಿತಗಳನಡುವೆ ಒಬ್ಬ ನೀತಿವಂತ ವ್ಯಕ್ತಿಯು ಭಕ್ತಿಯುತ ಜೀವಿತವನ್ನು ಜೀವಿಸಲು ಸಾಧ್ಯವಿದೆ. ನೋಹನು ಇದನ್ನು ಮಾಡಿದನು, ಲೋಟನು ಸಹ ಇದನ್ನೇ ಮಾಡಿದನು.

h. ಆದರೆ ಅಂತಹ ಜೀವಿತವನ್ನು ಜೀವಿಸುವುದು ಕಷ್ಟಕರವಾದದ್ದು. ತನ್ನ ಸುತ್ತಲು ನಡೆಯುವುದನ್ನು ಕೇಳುವಾಗ ಮತ್ತು ನೋಡುವಾಗ ಒಬ್ಬ ಭಕ್ತಿಯುತ ಮತ್ತು ನೀತಿಯುತ ವ್ಯಕ್ತಿಯು ಲೋಟನಂತೆ ಒತ್ತಡಕ್ಕೊಳಗಾಗುತ್ತಾನೆ ಮತ್ತು ಸಂಕಟಪಡುತ್ತಾನೆ.

i. ಬಯಲು ಸೀಮೆಯ ಪಟ್ಟಣಗಳಿಗೆ ಆದ ಗತಿಯು ಈ ಪ್ರಸ್ತುತ ಜಗತ್ತು ನಾಶವಾಗಲಿಕ್ಕಿರುವಾಗ ಭಕ್ತಿಹೀನರಿಗೆ ಆಗುವ ಗತಿಗೆ ಉದಾಹರಣೆಯಾಗಿದೆ. ಸೊದೋಮ್ ಮತ್ತು ಗೊಮೋರ್ ಸುಡಲ್ಪಟ್ಟವು. ಕರ್ತನ ದಿನವು ಬರುವಾಗ ಆಕಾಶಮಂಡಲವು ಮಹಾಘೋಷದಿಂದ ಇಲ್ಲವಾಗುವದು. ಭೂಮಿಯು ಅದರಲ್ಲಿರುವ ಕೆಲಸಗಳೂ ಸುಟ್ಟು ಹೋಗುವವು (2 ಪೇತ್ರ 3:10, 12).



## ಅವಲೋಕನ

ಸಿದ್ಧಾಂತವು ಪ್ರಾಮುಖ್ಯವಾದದ್ದು. ಒಂದು ಸಭೆಯಲ್ಲಿ ಸರಿಯಾದ ಸಿದ್ಧಾಂತಗಳು ಬೋಧಿಸಲ್ಪಟ್ಟರೆ ವಿಶ್ವಾಸಿಗಳು ತಮ್ಮ ಜೀವಿತಕ್ಕಾಗಿ ದೇವರ ಚಿತ್ತವನ್ನು ತಿಳುಕೊಳ್ಳುವರು. ಅವರು ತಮ್ಮ ರಕ್ಷಕನ ಜ್ಞಾನದಲ್ಲಿ ಬೆಳೆಯುವರು. ಅವರು ಭಕ್ತಿ ಮತ್ತು ಪವಿತ್ರ ಜೀವನದಲ್ಲಿ ಬೆಳೆಯುವರು. ಸಭೆಯಲ್ಲಿ ಪ್ರೀತಿ ಮತ್ತು ಐಕ್ಯತೆ ಇರುತ್ತದೆ. ಆದರೆ ಸಭೆಯಲ್ಲಿ ದುರ್ಬೋಧನೆಗಳು ಬೋಧಿಸಲ್ಪಟ್ಟರೆ ಅಲ್ಲಿ ವಿಶ್ವಾಸಿಗಳಿಗೆ ಸಮಸ್ಯೆಯಿರುತ್ತದೆ. ದೇವರು ಯಾರಾಗಿದ್ದಾನೆಂಬುದರ ಬಗ್ಗೆ ಅವರು ಗಲಿಬಿಲಿಗೊಳ್ಳುವರು. ಯೇಸು ಕ್ರಿಸ್ತನ ಬಾಧೆ, ಮರಣ, ಪುನರುತ್ಥಾನ ಮತ್ತು ಸ್ವರ್ಗಾರೋಹಣದ ಮೂಲಕ ಆತನು ಅವರನ್ನು ಹೊರತಂದ ರಕ್ಷಿಸುವ ಕೃಪೆಯ ಬಗ್ಗೆ ಅವರು ಮರೆತುಬಿಡುವರು.

ಕ್ರೈಸ್ತರಾಗಿ ಹೇಗೆ ಜೀವಿಸಬೇಕೆಂಬುದರ ಬಗ್ಗೆ ಅವರು ದಾರಿತಪ್ಪುವರು. ಭಕ್ತಿಯುತ ಜೀವನವನ್ನು ಪಾಲಿಸುವುದರ ಬದಲಾಗಿ ಅವರು ತಮ್ಮ ಬಲಹೀನ ಮತ್ತು ಪಾಪಮಯವಾದ ಮಾನುಷಿಕ ಆಶೆಗಳನ್ನು ತೃಪ್ತಿಪಡಿಸುವರು. ದೀನತೆ, ಸೌಹಾರ್ದತೆ ಮತ್ತು ವಿಶ್ವಾಸಿಗಳ ಅನ್ಯೋನ್ಯತೆಯನ್ನು ಸೂಚಿಸುವ ಪ್ರೀತಿಯ ಬದಲಾಗಿ ಸಭೆಯಲ್ಲಿ ಗರ್ವ, ಹೊಟ್ಟೆಕಿಚ್ಚು, ಅಧಿಕಾರದ ಗೊಂದಲ ಮತ್ತು ವಿಂಗಡನೆಗಳು ಮತ್ತು ಸಭೆಯಲ್ಲಿ ಒಡಕುಗಳುಂಟಾಗುವವು. ಹಾಗಾಗಿ ಶಿಕ್ಷಕರೇ ಮತ್ತು ಪ್ರಸಂಗಿಗಳೇ ದೇವರ ದೃಷ್ಟಿಗೆ ಯೋಗ್ಯರಾಗಿ ಕಾಣಿಸಿಕೊಳ್ಳುವುದಕ್ಕೆ ಪ್ರಯಾಸಪಡಿರಿ. ಅವಮಾನಕ್ಕೆ ಗುರಿಯಾಗದ ಕೆಲಸದವರೂ ಸತ್ಯವಾಕ್ಯವನ್ನು ಸರಿಯಾಗಿ ಉಪದೇಶಿಸುವವರೂ ಆಗಿರಿ (2 ತಿಮೊಥಿ 2:15). ಎಚ್ಚರಿಕೆಯಾಗಿರ್ರಿ! ಸುಳ್ಳು ಬೋಧನೆಗಳ ಬಗ್ಗೆ ಜಾಗೂರಕರಾಗಿರಿ. ಸುಳ್ಳು ಬೋಧಕರನ್ನು ನಿರ್ಲಕ್ಷಿಸಿರಿ ಮತ್ತು ನಿಮ್ಮಲ್ಲಿ ಯಾರೊಬ್ಬರೂ ಆ ರೀತಿ ಆಗಬೇಡಿರಿ.

ಭಕ್ತಿಯನ್ನು ಸಾಕ್ಷಿಕರಿಸುವ ಶಕ್ತಿಯನ್ನು ನಾವೆಂದೂ ಸಹ ಕೀಳಾಗಿ ಕಾಣಬಾರದು. ನಮ್ಮ ಕ್ರೈಸ್ತೀಯ ಜೀವಿತಗಳು ನಮ್ಮ ದೇವರ ಮತ್ತು ರಕ್ಷಕನ ಒಳ್ಳೆಯತನ, ಕೃಪೆ ಮತ್ತು ಪ್ರೀತಿಗೆ ಸಾಕ್ಷಿಯಾಗಿರಬೇಕು. ನಾವು ನಮ್ಮ ದೈನಂದಿನ ಜೀವನವನ್ನು ಹೇಗೆ ಜೀವಿಸುತ್ತೇವೆಂಬುದನ್ನು ನಮ್ಮ ಸುತ್ತಲಿನ ಜನರು ನೋಡುವಾಗ ನಾವು ನಮ್ಮ ಸಹ ವಿಶ್ವಾಸಿಗಳೊಂದಿಗೆ ಹೇಗೆ ವರ್ತಿಸುತ್ತೇವೆಂಬುದನ್ನು ಅವರು ಗಮನಿಸುವಾಗ ಸಾಮಾನ್ಯವಾಗಿ, ಸಾರ್ವಜನಿಕವಾಗಿ ನಾವು ಹೇಗೆ

ಅಡ್ಡಾಡುತ್ತೇವೆಂಬುದನ್ನು ಅವರು ಗಮನಿಸುವಾಗ– ಆಗ ಅವರು ಇವರ ದೇವರು ಯಾರು? ಎಂಬುದಾಗಿ ತಮ್ಮನ್ನೇ ಪ್ರಶ್ನಿಸಿಕೊಳ್ಳಬೇಕು. ಅವರ ಮನಸ್ಸುಗಳು ಕ್ರೈಸ್ತೀಯ ಸಾಕ್ಷಿಗೆ ಸಾರುವ ಸುವಾರ್ತೆಗೆ ತೆರೆಯಲ್ಪಡುತ್ತವೆ. ಅವರ ಜೀವಿತಗಳು ದೇವರ ವಾಕ್ಯದ ಬೀಜವನ್ನು ಸ್ವೀಕರಿಸುವುದಕ್ಕಾಗಿ ತವಕಿಸುವ ಹೊಲಗಳಾಗುತ್ತವೆ.

ಈ ಲೋಕದಲ್ಲಿನ ಜೀವನವು ದೇವರ ನ್ಯಾಯತೀರ್ಪಿನಡಿಯಲ್ಲಿನ ಜೀವನವಾಗಿದೆ. ನೀತಿವಂತನು ಈಗ ಮತ್ತು ಕರ್ತನ ದಿನದಲ್ಲಿಯೂ ಸಹ ದೇವರ ನ್ಯಾಯತೀರ್ಪಿನಿಂದ ಪಾರಾಗುವನು. ಆದರೆ ಕೇವಲ ನಮ್ಮ ಸ್ವಂತ ಮಾನುಷಿಕ ನೀತಿವಂತಿಕೆ ಸಾಲದು. ಯೇಸು ಕ್ರಿಸ್ತನನ್ನು ನಮ್ಮ ರಕ್ಷಕನನ್ನಾಗಿ ಅಂಗೀಕರಿಸುವುದರ ಮೂಲಕ ನಾವು ನೀತಿವಂತರಾಗಿ ಮಾಡಲ್ಪಡಬೇಕು. ತನ್ನ ಯೆಹೂದಿ ಸ್ಥಾನಮಾನಗಳಿಗನುಸಾರವಾಗಿ ನೀತಿವಂತ ಮನುಷ್ಯನಾಗಿದ್ದ ಪೌಲನು ತನ್ನ ಹಿಂದಿನ ನೀತಿವಂತಿಕೆಯನ್ನು ಕಸವೆಂದೆಣಿಸುತ್ತಾನೆ; ನನ್ನ ಕರ್ತನಾದ ಯೇಸು ಕ್ರಿಸ್ತನನ್ನು ಅರಿಯುವುದೇ ಅತಿಶ್ರೇಷ್ಟವಾದದ್ದೆಂದು ತಿಳಿದು ನಾನು ಎಲ್ಲವನ್ನು ಕಳಕೊಂಡು ಅದನ್ನು ಕಸವೆಂದೆಣಿಸುತ್ತೇನೆ. ಇದರಲ್ಲಿ ನನ್ನ ಉದ್ದೇಶವೇನೆಂದರೆ– ನಾನು ಕ್ರಿಸ್ತನನ್ನು ಸಂಪಾದಿಸಿಕೊಂಡು ನೇಮನಿಷ್ಠೆಗಳ ಫಲವಾಗಿರುವ ಸ್ವನೀತಿಯನ್ನಾಶ್ರಯಿಸದೆ ಕ್ರಿಸ್ತನನ್ನು ನಂಬುವುದರಿಂದ ದೊರಕುವಂಥ, ಅಂದರೆ ಕ್ರಿಸ್ತನ ಮೇಲಣ ನಂಬಿಕೆಯ ಆಧಾರದಿಂದ ದೇವರು ಕೊಡುವಂಥ ನೀತಿಯನ್ನೇ ಹೊಂದಿ ಕ್ರಿಸ್ತನಲ್ಲಿರುವವನಾಗಿ ಕಾಣಿಸಿಕೊಳ್ಳಬೇಕೆಂಬುದೇ (ಫಿಲಿಪ್ಪಿ 3:8–9). ಹೇಗೆ ಆಗಲಿ, ಅನೀತಿವಂತ ವ್ಯಕ್ತಿಯು ದೇವರಿಂದ ನ್ಯಾಯತೀರ್ಪಿಗೊಳಗಾಗುವನು. ಈ ಜೀವನದಲ್ಲಾಗಬಹುದು, ಇಲ್ಲದಿದ್ದರೆ ಖಂಡಿತವಾಗಿ ದೇವರ ನ್ಯಾಯತೀರ್ಪಿನ ದಿನದಲ್ಲಾಗಬಹುದು.

ಈ ನಡುವೆ ಕ್ರಿಸ್ತೀಯ ವಿಶ್ವಾಸಿಗಳು ಹೊಲಸು, ಪಾಪ ಮತ್ತು ಅನ್ಯಾಯದಿಂದ ತುಂಬಿರುವ ಲೋಕದಲ್ಲಿ ಜೀವಿಸಬೇಕು. ಭಕ್ತಿಹೀನತೆಯ ನಡುವೆ ನಮ್ಮ ಜೀವಿತವು ಭಕ್ತಿಯಿಂದ ಕೂಡಿರಬೇಕು. ಅನೀತಿಯ ನಡುವೆ ನಾವು ನೀತಿಯನ್ನು ಪಾಲಿಸಬೇಕು. ತನ್ನ ಯೌವನಸ್ಥ ಸಹ ಕೆಲಸಗಾರನಾದ ತಿಮೊಥಿಗೆ ಬರೆಯುವಂತೆ 'ನೀನು ಯೌವನದ ಇಚ್ಛೆಗಳಿಗೆ ದೂರವಾಗಿರು, ನೀತಿ, ವಿಶ್ವಾಸ, ಪ್ರೀತಿ ಮತ್ತು ಸಮಾಧಾನವನ್ನು ಸಂಪಾದಿಸುವುದಕ್ಕೆ ಶುದ್ಧ ಹೃದಯವುಳ್ಳವರಾಗಿ ಕರ್ತನನ್ನು ಬೇಡಿಕೊಳ್ಳುವವರ ಸಂಗಡ ಪ್ರಯಾಸಪಡು' (2 ತಿಮೊಥಿ 2:22). ವಿಶ್ವಾಸಿಗಳ ಅನ್ಯೋನ್ಯತೆ ಮತ್ತು ಸಭೆಯು ನೀತಿ ಮತ್ತು ಭಕ್ತಿಯನ್ನು ಪಾಲಿಸುವ ಸ್ಥಳವಾಗಿರಬೇಕು.

# ಉತ್ತರಗಳು 17: ಸುಳ್ಳುಬೋಧಕರನ್ನು ಗುರುತಿಸಿರಿ, 2:10–22

## ಶಿಕ್ಷಕರ ಗಮನಕ್ಕೆ

ಆತ್ಮಿಕ ಕೂಟದ 7 ನೇ ವಿಭಾಗವು ದಕ್ಷಿಣ ಭಾರತದ ಹಿನ್ನಲೆಯಲ್ಲಿ ಸುಳ್ಳುಬೋಧಕರನ್ನು ಹೇಗೆ ಗುರುತಿಸಬಹುದೆಂಬುದರಲ್ಲಿ ವಿದ್ಯಾರ್ಥಿಗಳ ತಿಳುವಳಿಕೆಯನ್ನು ಆಳವಾಗಿಸುವುದಾಗಿದೆ.

10 ನೇ ವಚನದ ಕೊನೆಯಲ್ಲಿ ಗ್ರೀಕ್ ಪಠ್ಯವು ತರ್ಜುಮೆದಾರರು ಮತ್ತು ಅನುವಾದಕರನ್ನು ಗಲಿಬಿಲಿಗೊಳಿಸುವ ಹಿನ್ನಲೆಯಲ್ಲಿ 'ಮಹಿಮೆ' ಎಂಬ ಪದವನ್ನು ಒಳಗೊಂಡಿದೆ. ಇಎಸ್‌ವಿ ಮತ್ತು ಎನ್‌ಎಎಸ್‌ಬಿ ಯನ್ನು ಹೋಲಿಸಿದರೆ 'ಅಧಿಕಾರ'ವೆಂದಿದೆ. ಕನ್ನಡದ ಎನ್‌ಐವಿ 'ಗೌರವವುಳ್ಳವರನ್ನು''ಗೌರವಕ್ಕೆ ಯೋಗ್ಯವಾದವರನ್ನು' ಮತ್ತು ಕನ್ನಡದ ಜೆವಿ ಯು 'ಮಹಾಪದವಿಯುವರನ್ನು''ಉನ್ನತ ಪದವಿಯಲ್ಲಿರುವವನು' ಎಂದು ಹೇಳುತ್ತದೆ. ಹೆಚ್ಚಿನ ಸತ್ಯವೇದ ಪಂಡಿತರು ಇದು ದೇವದೂತರನ್ನು ಮತ್ತು ಇತರರು ಸಭೆಯ ಹಿರಿಯರನ್ನು ಸೂಚಿಸುತ್ತದೆ ಎಂದು ಅರ್ಥೈಸಿಕೊಳ್ಳುವರು. ಕೆಳಗಿನ 2 ನೇ ಪ್ರಶ್ನೆಯ ಉತ್ತರವನ್ನು ನೋಡಿರಿ (ಡಿ. ಅಂಶ).

ಕೊನೆಯ ಪ್ರಶ್ನೆಯು ರಕ್ಷಣೆ ಮತ್ತು ವಚನಭ್ರಷ್ಟತೆಯ ಬಗೆಗಿನ ವಿವಾದಾತ್ಮಕ ದೈವಶಾಸ್ತ್ರೀಯ ಸಂಗತಿಯನ್ನು ಪ್ರತಿಪಾದಿಸುತ್ತದೆ. ವಚನ ಭ್ರಷ್ಟತೆಯು ನಿಜವಾದ ಸಾಧ್ಯತೆಯಾಗಿರುತ್ತದೆ ಎಂಬುದು ಪೆಂಟೆಕೋಸ್ಟಲ್ ಪಂಚಾಶತ್ತಮದ ದೃಷ್ಟಿಕೋನವಾಗಿದೆ (ಎರಡನೆ ದೃಷ್ಟಿಕೋನ). ಇನ್ನೊಂದೆಡೆ ಸುಧಾರಿತ ದೈವಶಾಸ್ತ್ರಜ್ಞರು (ಮೊದಲ ದೃಷ್ಟಿಕೋನ) ವಚನ ಭ್ರಷ್ಟತೆಯಂತೆ ಕಾಣುವುದು ನೈಜವಾದುದ್ದಲ್ಲವೆಂದು ಪ್ರತಿಪಾದಿಸುವರು. ನನ್ನ ಉತ್ತರಗಳಿಗೆ ಹೋಗಿ ಮತ್ತೂ ಎರಡೂ ವಿರೋದಾತ್ಮಕ ದೃಷ್ಟಿಕೋನವನ್ನು ಅರ್ಥೈಸಿಕೊಳ್ಳಲು ವಿದ್ಯಾರ್ಥಿಗಳಿಗೆ ಸಹಕರಿಸಿರಿ.

ಈ ಬಾರಿ ನಾನು ಉತ್ತಮ ವಿದ್ಯಾರ್ಥಿಗಳಿಗಾಗಿ ಅವರ ಪ್ರತ್ಯೇಕ ಸಮಯದಲ್ಲಿ ಎರಡು ***ಸಂಶೋಧನೆಗಳನ್ನು*** ಸೇರಿಸಿದ್ದೇನೆ. ಆದರೆ ಸಾಕಷ್ಟು ಇಂಗ್ಲಿಷ್ ಭಾಷೆಯ ಜ್ಞಾನವುಳ್ಳ ವಿದ್ಯಾರ್ಥಿಗಳು ಮಾತ್ರ ಅವನ್ನು ನಿರ್ವಹಿಸಲು ಸಾಧ್ಯ. ಅವರು ತಮಗೆ ಬೇಕಾದ ಮಾಹಿತಿಯನ್ನು ಕಂಡುಕೊಳ್ಳಲು ಅಂತರ್ಜಾಲವನ್ನು ಬಳಸಬೇಕಾಗಿದೆ (ಅಥವಾ ವಿಶಾಲವಾದ ಎನ್‌ಸೈಕ್ಲೋಪಿಡಿಯಾ ಅಥವಾ ಇತರೆ ಗ್ರಂಥಾಲಯ ಸಂಪನ್ಮೂಲಗಳು). ಯೆಹೋವ ಸಾಕ್ಷಿಗಳು ಮತ್ತು ಸಂಯುಕ್ತ ಪಂಚಾಶತ್ತಮ ಸಭೆಗಳು (ಯುನೈಟೆಡ್ ಪೆಂಟಿಕೋಸ್ಟಲ್ ಚರ್ಚಸ್ ಅಥವಾ 'ಜೀಸಸ್ ಓನ್ಲಿ') ದಕ್ಷಿಣ ಭಾರತದಲ್ಲಿ ಕ್ರಿಯಾತ್ಮಕವಾಗಿವೆ. ಭಾರತದಲ್ಲಿ ಇತರೆ ಗುಂಪುಗಳು ಚಿಕ್ಕದಾಗಿವೆ ಆದರೆ ಇತರೆ ದೇಶಗಳಲ್ಲಿ ಸಹ ಅವು ತಮ್ಮ ಹಿಂಬಾಲಕರನ್ನು ಹೊಂದಿವೆ. 'ಯೇಸು ಮಾತ್ರ' ಗುಂಪುಗಳು ಸಾಮಾನ್ಯವಾಗಿ 'ಕ್ರೈಸ್ತರೆಂದು' ಪರಿಗಣಿಸುವರು. ಆದರೆ ದೇವರ ಕುರಿತಾದ ಅವರ ಸಿದ್ಧಾಂತವು (ಅವರ ದೀಕ್ಷಸ್ನಾನದ ಸೂತ್ರ) ಅವರು ದುರ್ಬೋಧಕರೆಂದು ತೋರಿಸುತ್ತದೆ. ಹಾಗಾಗಿ ನಾವು ಅವರ ಸಭಾಪಾಲಕರುಗಳನ್ನು ಸುಳ್ಳು ಬೋಧಕರೆಂಬುದಾಗಿ ಪರಿಗಣಿಸಬೇಕು.

## ಉತ್ತರಗಳು

1. 10 ನೇ ವಚನದ ಮೊದಲಾರ್ಧ ಭಾಗದಲ್ಲಿ ಪೇತ್ರನು ಹೇಳುವ ಅಂಶವು ಹಳೆ ಒಡಂಬಡಿಕೆಯ ಕಾಲದಲ್ಲಿ ಭಕ್ತಿಹೀನರ ಮೇಲೆ ಬಂದಂತೆ (ವಚನ 4–8 ರಲ್ಲಿ ವಿವರಿಸಿದಂತೆ) ದೇವರ ನ್ಯಾಯತೀರ್ಪು (ಎರಡು ಕನ್ನಡ ಭಾಷಾಂತರಗಳು ದೇವರು ನ್ಯಾಯತೀರಿಸುತ್ತಾನೆ ಎಂಬ

ಹೇಳಿಕೆಯನ್ನು ಸೇರಿಸುತ್ತವೆ, ಇದು ಗ್ರೀಕ್ ಪಠ್ಯದಲ್ಲಿ ಕಾಣಸಿಗಲ್ಲ) ಸುಳ್ಳು ಬೋಧಕರ ಮೇಲೆ (ಅವರು ಬಂಡುತನವನ್ನು ಆಶಿಸುವವರು ಎಂದು ವರ್ಣಿಸಲ್ಪಟ್ಟವರು) ಬರುತ್ತದೆಂದು ತನ್ನ ಓದುಗರಿಗೆ ಭರವಸೆಕೊಡುವುದಾಗಿದೆ.

2. ಈ ವಾಕ್ಯಭಾಗದಲ್ಲಿ ಸುಳ್ಳು ಬೋಧಕರ ಸ್ವಭಾವಗಳನ್ನು ತೋರಿಸಲು ಪೇತ್ರನು ವಿಭಿನ್ನ ಬಗೆಯ ಚಿತ್ರಣಗಳನ್ನು ಬಳಸುತ್ತಾನೆ (ಉಪಮೆ, ರೂಪಾಲಂಕಾರಗಳು, ಜ್ಞಾನೋಕ್ತಿಯಂತಹ ಹೇಳಿಕೆಗಳು). ಇದರ ಅತೀ ಪ್ರಾಮುಖ್ಯವಾದ ಪಟ್ಟಿಯು ಇಲ್ಲಿದೆ. (ನೀವು ಇನ್ನು ಒಂದು ಅಥವಾ ಎರಡನ್ನು, ಹೆಚ್ಚಾಗಿ ಕಾಣಬಹುದು):

   a. ಅವರು ವಿವೇಕಹೀನ ಪಶುಗಳಂತೆ (ವ.12): ಇವು ಸ್ವಭಾವಿಕವಾಗಿ ಬೇಟೆಗೂ ಕೊಲೆಗೂ ಹುಟ್ಟಿರುವವು ಎಂದು ಪೇತ್ರನು ವಿವರಿಸುತ್ತಾನೆ. ಈ ಉಪಮೆ/ಹೋಲಿಕೆಯು ಸುಳ್ಳು ಬೋಧಕರ ಒಂದು ನಕರಾತ್ಮಕವಾದ ಚಿತ್ರಣವನ್ನು ಕೊಡುತ್ತದೆ. ಪೇತ್ರನು ಅವರನ್ನು ತಮ್ಮ ಪ್ರವೃತ್ತಿಗನುಗುಣವಾಗಿ ಜೀವಿಸುವ ಮತ್ತು ವಿವೇಕಹೀನ ಪಶುಗಳಿಗೆ ಹೋಲಿಸುತ್ತಾನೆ. ಅವರ ಭವಿಷ್ಯವು ಕೊಲ್ಲಲ್ಪಡುವುದು ಅಥವಾ ತಿಂದುಹಾಕಲ್ಪಡುವುದಾಗಿದೆ. ಅದೇ ರೀತಿ ಸುಳ್ಳು ಬೋಧಕರು ಸಾಮಾನ್ಯಜ್ಞಾನದ ಕೊರತೆಯುಳ್ಳವರಾಗಿದ್ದಾರೆ. ಅವರು ಶಿಸ್ತಿಲ್ಲದವರೂ ಮತ್ತು ಕೇವಲ ತಮ್ಮ ದುಷ್ಟ (ಪಾಪಮಯ) ಆಶೆಗಳನ್ನು ಹಿಂಬಾಲಿಸುವವರಾಗಿದ್ದಾರೆ. ಹಾಗಾಗಿ ಅವರ ಭವಿಷ್ಯವು ನಾಶನವಾಗಿದೆ.

   b. ಅವರು ಕಳಂಕಿತರೂ ಅವಮಾನಕ್ಕೆ ಕಾರಣರೂ ಆಗಿದ್ದಾರೆ (ವ.13). ಈ ಹೇಳಿಕೆಗಳು ಸುಳ್ಳು ಬೋಧಕರ ಅಯೋಗ್ಯತೆ ಮತ್ತು ಅಪ್ರಯೋಜಕತೆಯನ್ನು ತೋರ್ಪಡಿಸುತ್ತವೆ. ಮುಂದಿನ ಅಧ್ಯಾಯದಲ್ಲಿ ಪೇತ್ರನು ತನ್ನ ಓದುಗರನ್ನು ನಿರ್ಮಲರೂ ನಿರ್ದೋಶಿಗಳೂ ಆಗಿರುವುದಕ್ಕೆ ಪ್ರಯಾಸಪಡಿರಿ ಎಂದು ಪ್ರಬೋಧಿಸುತ್ತಾನೆ (ವ.3:14). ಆದರೆ ಆತನು ಇಲ್ಲಿ ಅದೇ ಗ್ರೀಕ್ ಪದಗಳ ವಿರುದ್ಧವಾದ ಪದಗಳನ್ನು ಬಳಸುತ್ತಾನೆ. ನಿರ್ಮಲರಾಗಿರುವುದರ ಬದಲು ಸುಳ್ಳು ಬೋಧಕರುಗಳು ಕಳಂಕಿತರು, ನಿರ್ಧೀಷಿಗಳಾಗಿರುವುದರ ಬದಲಾಗಿ ಅವರು ದೋಷಿಗಳೂ ಎಂದು ಹೇಳುತ್ತಾನೆ. ತನ್ನ ಮೊದಲ ಪತ್ರಿಕೆಯಲ್ಲಿ ಪೇತ್ರನು ಇದೇ ‘ನಿಷ್ಕಳಂಕ’ ಪದವನ್ನು ಪರಿಪೂರ್ಣವಾದ ಯಜ್ಞದ ಕುರಿಯಾದ ಯೇಸು ಕ್ರಿಸ್ತನ ಬಗ್ಗೆ ಉಪಯೋಗಿಸುತ್ತಾನೆ (1 ಪೇತ್ರ 1:19). ಕಳಂಕಿತ ಮತ್ತು ದೋಷಿಗಳಾದ ಸುಳ್ಳು ಬೋಧಕರು ದೇವರಿಂದ ಉಪಯೋಗಿಸಲ್ಪಡಲು ಸಾಧ್ಯವಿಲ್ಲ. ಅವರು ತಿರಸ್ಕರಿಸಲ್ಪಡುವರು ಮತ್ತು ತೆಗೆದುಹಾಕಲ್ಪಡುವರು.

   c. ಜಾರತ್ವದಿಂದ ತುಂಬಿದ ಕಣ್ಣುಳ್ಳವರು (ವ.14). ಸುಳ್ಳು ಬೋಧಕರು ಪ್ರತಿ ಹೆಣ್ಣನ್ನು ಕಾಮಾಭಿಲಾಷೆಯಿಂದ ನೋಡುವರು. (ಗ್ರೀಕ್‌ನಲ್ಲಿ ವ್ಯಭಿಚಾರ ತುಂಬಿದ ಕಣ್ಣುಗಳಿಂದ ಎಂದಿದೆ). ಹಾಗಾಗಿ ಅವರ ಕಣ್ಣುಗಳು ನಿರಂತರವಾಗಿ ಶರೀರದಾಶೆಯ ಸಾಧನವಾಗಿರುತ್ತವೆ.

   d. ಅವರು ಶಾಪದ ಮಕ್ಕಳು (ವ.14). ಈ ಪದವು ರೂಪಾಲಂಕಾರದ ಅರ್ಥವು ಅವರ ಮೇಲೆ ದೇವರ ಶಾಪವಿದೆ ಎಂದಾಗಿದೆ.

e. ಅವರು ನೀಟಾದ ಮಾರ್ಗವನ್ನು ಬಿಟ್ಟು ಬಿಳಾಮನ ಮಾರ್ಗವನ್ನು ಹಿಡಿದಿದ್ದಾರೆ (ವ.15). 'ನೀಟಾದ ಮಾರ್ಗವು' ನೀತಿಯುತ ಮಾರ್ಗವನ್ನು ಸೂಚಿಸುತ್ತದೆ (ಹೋಲಿಸಿರಿ, ಜ್ಞಾನೋಕ್ತಿ 8:2, 12:26). 'ಬಿಳಾಮನ ಮಾರ್ಗವನ್ನು ಹಿಂಬಾಲಿಸಲು' ಎಂಬುದು ಬಿಳಾಮನಂತೆ ಆಗುವುದು, ಆತನಂತೆ ಮಾಡುವುದು ಎಂದರ್ಥವಾಗುತ್ತದೆ. ಬಿಳಾಮನು ಇಸ್ರಾಯೇಲರನ್ನು ಶಪಿಸಲು ಮೊವಾಬ್ಯ ಅರಸನಾದ ಬಾಲಾಕನಿಂದ ನೇಮಿಸಲ್ಪಟ್ಟ ಒಬ್ಬ ಮೆಸಪೊಟೋಮಿಯಾದ ದುರಾಶೆಯುಳ್ಳ ಒಬ್ಬ ದೇವ ದರ್ಶಿಯಾಗಿದ್ದನು (ಅರಣ್ಯಕಾಂಡ 22–24 ನ್ನು ನೋಡಿರಿ).

f. ಅವರು ನೀರಿಲ್ಲದ ಬಾವಿಗಳಾಗಿದ್ದಾರೆ (ವ.17). ಈ ರೂಪಾಲಂಕಾರವು ಒಂದು ನೀರಿಲ್ಲದ ಬಾವಿಯು ಪ್ರಯೋಜನವಿಲ್ಲದ್ದು ಎಂಬ ವಾಸ್ತವಾಂಶವನ್ನು ಸೂಚಿಸುತ್ತದೆ. ಹಾಗಾಗಿ ಸುಳ್ಳು ಬೋಧಕರಿಗೆ ಹೇಳಲು ಮತ್ತು ಬೋಧಿಸಲು ಯಾವುದೇ ಪ್ರಯೋಜನಕರವಾದದ್ದು ಇಲ್ಲ.

g. ಅವರು ಬಿರುಗಾಳಿಯಿಂದ ಬಡಿಸಿಕೊಂಡು ಹಾರಿಹೋಗುವ ಮಂಜು ಆಗಿದ್ದಾರೆ (ವ.17). ಈ ರೂಪಾಲಂಕಾರವು ಬಿರುಗಾಳಿಯು ಇಬ್ಬನಿಯನ್ನು ಸಂಪೂರ್ಣವಾಗಿ ನಿಯಂತ್ರಿಸುತ್ತದೆಂಬ ವಾಸ್ತವಾಂಶಕ್ಕೆ ಸೂಚನೆಯಾಗಿದೆ. ಇಬ್ಬನಿ ತನ್ನಿಷ್ಟಕ್ಕೆ ತಾನೆ ನಿಯಂತ್ರಿಸಿಕೊಳ್ಳಲಾರದು, ಹಾಗೆಯೆ ಸುಳ್ಳು ಬೋಧಕರು ಸಹ ಅಸ್ಥಿರರೂ ಮತ್ತು ಭರವಸವಿಡಲಾರದವರು ಆಗಿದ್ದಾರೆ. ಅವರ ಮಾತನ್ನು ನಂಬಲಾಗುವುದಿಲ್ಲ.

h. ಕಾರ್ಗತ್ತಲೆ ಇವರಿಗಾಗಿ ಇಡಲ್ಪಟ್ಟಿದೆ (ವ.17). ಸುಳ್ಳು ಬೋಧಕರ ಭವಿಷ್ಯವು ಕಾರ್ಗತ್ತಲೆಯಾಗಿದೆ. ಅವರು ನರಕದಲ್ಲಿ ಕೊನೆಗೊಳ್ಳುವರು. ಇದನ್ನೆ ದೇವರು ಅವರಿಗಾಗಿ ನಿಯೋಜಿಸಿದ್ದಾನೆ.

i. ನಾಯಿ ತಾನು ಕಕ್ಕಿದ್ದನ್ನು ನೆಕ್ಕುವುದಕ್ಕೆ ತಿರುಗಿಕೊಂಡಂತೆ (ವ.22). ಈ ಹೇಳಿಕೆಯು ಜ್ಞಾನೋಕ್ತಿ 26:11 ಒಂದು ಅವತರಣವಾಗಿದೆ. 'ನಾಯಿ ತಾನು ಕಕ್ಕಿದ್ದನ್ನು ನೆಕ್ಕುವುದಕ್ಕೆ ತಿರುಗಿಕೊಳ್ಳುವ ಹಾಗೆ ಮೂಢನು ತಾನು ಮಾಡಿದ ಮೂರ್ಖತನವನ್ನು ಪುನಃ ಮಾಡುವನು' ಮುಂದಿನ ಹೇಳಿಕೆಯಂತೆ ಪೇತ್ರನು ಇದನ್ನು ಅದೇ ಅರ್ಥದೊಂದಿಗೆ ಉಪಯೋಗಿಸುತ್ತಾನೆ.

j. ತೊಳೆದ ಹಂದಿ ಕೆಸರಿನಲ್ಲಿ ಹೊರಳುವುದಕ್ಕೆ ಹೋದಂತೆ (ವ.22). ಈ ಹೇಳಿಕೆ ಅಥವಾ ಜ್ಞಾನೋಕ್ತಿಯು ಹಳೆ ಒಡಂಬಡಿಕೆಯಲ್ಲಿ ಕಾಣಸಿಗುವುದಿಲ್ಲ. ಯೆಹೂದ್ಯರು ಹಂದಿಯನ್ನು (ನಾಯಿ ಸಹ) ಅಪವಿತ್ರವಾದದೆಂದು ಪರಿಗಣಿಸಿದ್ಧರು. ಸುಳ್ಳು ಬೋಧಕರು ಕಡೆಗೆ ತಮ್ಮ ಮೂಲ ಅಪರಿಶುದ್ದವಾದ ಅನ್ಯ ಜೀವನಶೈಲಿಗೆ ಹಿಂದಿರುಗುವರೆಂಬುದನ್ನು ತೋರಿಸಲು ಪೇತ್ರನು ಈ ಹೇಳಿಕೆಯನ್ನು ಉಪಯೋಗಿಸುತ್ತಾನೆ.

3. ಈ ದೀರ್ಘವಾದ ಗುಣಲಕ್ಷಣಗಳ ಪಟ್ಟಿಯು ನಾವು ಸುಳ್ಳುಬೋಧಕರುಗಳನ್ನು ಎದುರಿಸುತ್ತೇವೆಂಬುದನ್ನು ಎಚ್ಚರಿಸುತ್ತದೆ (ವ.10–19):

a. ಸುಳ್ಳುಬೋಧಕರು ಬಂಡುತನವನ್ನು ಆಶಿಸಿ ಶರೀರಭಾವಾನುಸಾರವಾಗಿ ನಡೆಯುವರು (ವ.10). ಹಾಗಾಗಿ ಅವರು ದೇವರ ಚಿತ್ತ ಮತ್ತು ಯೋಜನೆಗನುಗುಣವಾಗಿ ಪರಿಶುದ್ಧ ಮತ್ತು ಪ್ರತ್ಯೇಕಿಸಲ್ಪಟ್ಟ ಜೀವನವನ್ನು ನಡೆಸುವುದಿಲ್ಲ.

b. ಪ್ರಭುತ್ವವನ್ನು ತಿರಸ್ಕರಿಸುವರು (ವ.10). ಹಾಗಾಗಿ ತಮ್ಮ ಮೇಲೆ ನೇಮಿಸಲ್ಪಟ್ಟ ಲೌಕಿಕ ಅಥವಾ ಆತ್ಮಿಕ ಅಧಿಕಾರವನ್ನು ಗೌರವಿಸುವುದಿಲ್ಲ.

c. ಅವರು ಹೆದರವರು ಮತ್ತು ಸ್ವೇಚ್ಛಾಪರರು (ವ.10). ಹಾಗಾಗಿ ಅವರು ಸಭೆಯ ಮತ್ತು ಕ್ರೈಸ್ತ ನಾಯಕನ ಒಂದು ಅತೀ ಪ್ರಾಮುಖ್ಯ ಗುಣಲಕ್ಷಣವಾದ ದೀನತೆಯ ಕೊರತೆಯುಳ್ಳವರಾಗಿದ್ದಾರೆ.

d. ಅವರು ಮಹಾಪದವಿಯವರನ್ನು ದೂಷಿಸುತ್ತಾರೆ (ವ.10). ಸಭೆಯ ನಾಯಕರಾಗಲಿ ಅಥವಾ ಆತ್ಮಿಕರಾಗಲಿ ಅವರ ಬಗ್ಗೆ ಸುಳ್ಳು ಬೋಧಕರು ಕೆಟ್ಟದ್ದಾಗಿ ಮಾತನಾಡುತ್ತಾರೆ.

e. ಅವರು ದೇವದೂಷಣೆ ಮಾಡುವರು (ವ.12). ಪವಿತ್ರವಾದ ಸಂಗತಿಗಳ ಬಗ್ಗೆ ಘನತೆಯಿಲ್ಲದಂತೆ ಮಾತನಾಡುವರು.

f. ಅವರು ತಿಳುವಳಿಕೆಯ ಕೊರತೆಯುಳ್ಳವರು, ವೈಚಾರಿಕತೆಯಿಲ್ಲದವರು ಮತ್ತು ವಿವೇಕಶೂನ್ಯ ಪಶು ಸ್ವಭಾವದವರು (ವ.12). ಅವರು ಮೃದುವಾಗಿ ಮತ್ತು ಸೆಳೆಯುವಂತೆ ಮತ್ತು ಒಪ್ಪಿಸುವಂತೆ ಸಹ ಮಾತಾಡಬಹುದು. ಆದರೆ ಅವರು ನಿಜವಾಗಲೂ ಪಶುವಿನಂತವರು, ಕೇವಲ ಅವರು ವರ್ತಿಸುವ ಮತ್ತು ಮಾಡುವ ರೀತಿಯಿಂದಲ್ಲ, ಆದರೆ ಅವರು ಯೋಚಿಸುವ ರೀತಿಯಲ್ಲಿಯೂ ಸಹ ಪಶುವಿನಂತಿದ್ದಾರೆ.

g. ಅವರು ಕೇಡನ್ನುಂಟುಮಾಡುವವರು (ವ.13). ಸುಳ್ಳುಬೋಧಕರುಗಳು ವ್ಯಕ್ತಿಗತರನ್ನು ಮತ್ತು ಸಭೆಗಳನ್ನು ಸಹ ಕೆಡಿಸುವರು. ಕಟ್ಟುವುದರ ಬದಲಾಗಿ ಅವರು ಕೆಡವಿಹಾಕುವರು.

h. ಅವರು ಔತಣ ಮತ್ತು ದುಂದುಗಾರಿಕೆ ಮಾಡುವರು (ವ.13). ಅವರ ಜೀವನಶೈಲಿಯೇ ಅವರಾರೆಂಬುದನ್ನು ತೋರ್ಪಡಿಸುತ್ತದೆ. ಅವರು ಪಾಪಮಯ ಶರೀರದ ಜನರಾಗಿದ್ದಾರೆ. ಅವರು ದೇವರಿಗೆ ವಿರೋಧವಾದ ಶರೀರದಾಶೆಯನ್ನು ತೃಪ್ತಿಪಡಿಸುದಕ್ಕಾಗಿ ಬದುಕುವವರಾಗಿದ್ದಾರೆ.

i. ಅವರು ಜಾರತ್ವವುಳ್ಳವರು ಮತ್ತು ಪಾಪಮಯರು (ವ.14). ಅವರು ಪ್ರತಿ ಹೆಂಗಸರನ್ನು ಸಹ ಕಾಮದೃಷ್ಟಿಯಿಂದ ನೋಡುವರು. ಅವರು ತಮ್ಮ ಅನೈತಿಕವಾದ ಅಲೋಚನೆ ಮತ್ತು ಪಾಪಮಯ ಕ್ರಿಯೆಗಳಿಂದ ನಾಚಿಕೆಪಡುವುದಿಲ್ಲ.

j. ಅವರು ಜನರನ್ನು ಮರಳುಗೊಳಿಸುವರು (ವ.14). ಅವರು ತಮ್ಮ ಸಂದೇಶಗಳಿಂದ ಮತ್ತು ಸುಳ್ಳು ವಾಗ್ದಾನಗಳಿಂದ ಜನರನ್ನು ದೂರ ಸೆಳೆಯುವರು. ಆದರೆ ಅವರು ತಮ್ಮ ಕೆಟ್ಟ ಉದಾಹರಣೆಯಿಂದ ಸಹ ಜನರನ್ನು ದೂರ ಸೆಳೆಯುವರು. ಅವರು ನಾಶಕರವಾದ ಮಾದರಿಗಳಾಗಿದ್ದಾರೆ.

k. ಅವರು ಲೋಭಿಗಳು (ವ.14). ಹಳೆ ಒಡಂಬಡಿಕೆಯ ಬಿಳಾಮನಂತೆ ಲಾಭ, ಅಧಿಕಾರ ಮತ್ತು ಶ್ರೀಮಂತಿಕೆಯನ್ನು ಗಳಿಸುವುದಕ್ಕಾಗಿ ಅವರು ಸೇವೆ ಮಾಡುವರು. ಯಾವಾಗಲೂ ಅವರು ಕೆಲ ವಿಧದ ವೈಯಕ್ತಿಕ ಲಾಭವನ್ನು ಅಪೇಕ್ಷಿಸುವರು. ಅವರು ತಮ್ಮ ಹಿಂಬಾಲಕರನ್ನು ಸುಲಿದುಕೊಳ್ಳುವರು.

l. ಹೇಳಲು ಪ್ರಯೋಜನಕಾರಿಯಾದದ್ದು ಅದರಲ್ಲಿ ಏನೂ ಇಲ್ಲ, ಅವರು ನೀರಿಲ್ಲದ ಬಾವಿಗಳಂತೆ (ವ.17). ಹಿಂದಿನ f ಪ್ರಶ್ನೆಯ ಅಂಶವನ್ನು ನೋಡಿರಿ.

m. ಅವರು ಅಸ್ಥಿರರು/ಗಾಳಿಯಿಂದ ಬಡಕೊಂಡು ಹೋಗುವ ಮಂಜಿನಂತೆ (ವ.17). ಹಿಂದಿನ ಪ್ರಶ್ನೆಯ g ಅಂಶವನ್ನು ನೋಡಿರಿ.

n. ಅವರು ಕೊಚ್ಚಿಕೊಳ್ಳುವವರು (ವ.18). ಅವರು ತಾವು ಯಾರೆಂಬುದಾಗಿ ಕೊಚ್ಚಿಕೊಳ್ಳುತ್ತಾರೆ ತಾವು ಏನನ್ನೋ ಸಾಧಿಸಿದೆಂಬುದಾಗಿ ಅವರು ಕೊಚ್ಚಿಕೊಳ್ಳುವರು. ತಾವು ಏನನ್ನು ಮಾಡಲು ಯೋಚಿಸಿದ್ದೇವೆಂಬುದರ ಬಗ್ಗೆ ಕೊಚ್ಚಿಕೊಳ್ಳುವರು. ದೇವರ ಬದಲಾಗಿ ತಾವು ಜಗತ್ತಿನ ಕೇಂದ್ರದಲ್ಲಿ ಇಡಲ್ಪಟ್ಟಿದ್ದೇವೆಂಬುದಾಗಿ ಅವರು ಕೊಚ್ಚಿಕೊಳ್ಳುವರು. ಅವರು ಗರ್ವಿಷ್ಟರೂ ಕೊಚ್ಚಿಕೊಳ್ಳುವವರು ಆಗಿದ್ದಾರೆ.

o. ಅವರು ಶರೀರದ ದುರಾಶೆಗಳನ್ನು ಹುಟ್ಟಿಸಿ (ವ.18): ಅವರು ಸ್ವತಃ ತಮ್ಮನ್ನು ಶಾರೀರಿಕ ಆಶೆಗಳಿಗೆ ಒಪ್ಪಿಸಿಕೊಟ್ಟವರಾಗಿದ್ದಾರೆ. ಹಾಗಾಗಿ ತಮ್ಮ ಹಿಂಬಾಲಕರು ಸಹ ಅದೇ ರೀತಿಯ ನಾಶಕರವಾದ ಮಾರ್ಗವನ್ನು ಹಿಡಿಯಬೇಕೆಂದು ಬಯಸುವರು.

p. ಅವರು ಜನರನ್ನು ಮರಳುಗೊಳಿಸುವರು (ವ.18). ಮೇಲಿನ j ಅಂಶವನ್ನು ನೋಡಿರಿ.

q. ಅವರು ಸುಳ್ಳು ಸ್ವಾತಂತ್ರ್ಯದ ವಾಗ್ದಾನಗಳನ್ನು ಮಾಡುವರು (ವ.19). ಈ ವಾಗ್ದಾನಗಳು ಸುಳ್ಳಾದವುಗಳು. ಯಾಕೆಂದರೆ ಸ್ವಾತಂತ್ರ್ಯವೆಂದು ಹೇಳುವುದು ದಾಸತ್ವಕ್ಕೆ ಮೊದಲ ಹೆಜ್ಜೆಯಾಗಿದೆ.

4. ಹಿಂದಿನ ಪ್ರಶ್ನೆಯ ಉತ್ತರವನ್ನು ನಾವು ನೋಡುವಾಗ ಯಾಕೆ ಕೆಲ ಜನರು ಸುಳ್ಳುಬೋಧಕರೆಡೆಗೆ ಆಕರ್ಷಿಸಲ್ಪಡುತ್ತಾರೆಂದು ನೋಡುವಾಗ ಈ ಗುಣಲಕ್ಷಣಗಳಿಂದ ನಾವು 4 ಮುಖ್ಯ ಕಾರಣಗಳನ್ನು ಕಾಣುತ್ತೇವೆ:

a. ಅವರು ಮನವೊಲಿಸುವಂತವರು (ಮೇಲ್ಕಂಡ 3 j ಮತ್ತು p ಅಂಶವನ್ನು ನೋಡಿರಿ). ಅವರು ಮೃದುಭಾಷೆಗಳು, ಅವರು ಮನವೊಲಿಸುವಂತಹ ಮಾತುಗಳನ್ನು ಮತ್ತು ಪದಗಳನ್ನು ಬಳಸುವರು. ಅವರು ರೋಮಾಂಚನಕಾರಿ ಪ್ರಕಟನೆಗಳನ್ನು ಹೊಂದಿರುವರು. ಅವರು ಸಭೆಗೆ ಹೊಸ ಸತ್ಯಗಳನ್ನು ತರುವರು.

b. ಅವರು ಮನುಷ್ಯನ ಬಲಹೀನತೆಯ ಮೊರೆಹೋಗುವವರು (3 a, h, i, k ಮತ್ತು oನೋಡಿರಿ). ಅವರು ನಾವು ಜೀವಿಸುವ ರೀತಿಗೆ ದೇವರು ನಮ್ಮನ್ನು ಖಂಡಿಸುವುದಿಲ್ಲ ಮತ್ತು ನ್ಯಾಯತೀರಿಸುವುದಿಲ್ಲ ಎಂದು ಸಾರುವರು. ನಮ್ಮ ಹಳೆಯ ಜೀವನ ಶೈಲಿಯಲ್ಲಿ

ಯಾವುದೇ ತಪ್ಪಿಲ್ಲವೆಂದು ಅವರು ಸಾಧಿಸುವರು. ನಾವು ಒಳ್ಳೆಯ ಸಮಯ ಕಳೆಯಬೇಕೆಂದು ದೇವರು ಬಯಸುತ್ತಾನೆ, ನಾವು ಜೀವನದಲ್ಲಿ ಸುಖಪಡಬೇಕೆಂದು ಬಯಸುತ್ತಾನೆ. ಹಾಗಾಗಿ ಔತಣ, ಕುಡಿಯುವುದು ಮತ್ತು ಶಾರೀರಿಕ ಇಚ್ಛೆಯಿಂದ ಯಾವುದೇ ತಪ್ಪಿಲ್ಲವೆಂದು ಅವರು ಹೇಳುತ್ತಾರೆ.

c. ಅವರು ತಮ್ಮ ಸುತ್ತಣ ಸಂಗತಿಗಳ ಮೇಲೆ ನಿಯಂತ್ರಣವುಳ್ಳವರು ಮತ್ತು ಯಶಸ್ಸುಹೊಂದಿದವರಾಗಿ ಕಾಣಲ್ಪಡುತ್ತಾರೆ (ಮೇಲ್ಕಂಡ 3 b, c, d, e ಮತ್ತು n ಅಂಶ ನೋಡಿರಿ). ಅವರು ಅಧಿಕಾರಗಳ ಬಗ್ಗೆ ಲಕ್ಷಕೊಡುವವರಲ್ಲ. ಅವರು ಸಭೆಯ ನಾಯಕರು ಮತ್ತು ಲೌಕಿಕ ನಾಯಕರ ಬಗ್ಗೆ ಗರ್ವದಿಂದ ಮಾತನಾಡುವರು. ಅವರನ್ನು ಯಾವುದೂ ಸಹ ನಿಲ್ಲಿಸಲಾಗಲ್ಲ. ಅವರಿಗೆ ಅನೇಕ ಮಂದಿ ಹಿಂಬಾಲಕರಿರುವರು. ಅವರಿಗೆ ಉನ್ನತವಾದ ಯಶಸ್ಸಿದೆ. ಅವರು ತಮ್ಮದೇ ಜಗತ್ತನ್ನು ಆಳುವರು.

d. ಅವರು ಆಕರ್ಷಣೆಯ ವಾಗ್ದಾನಗಳನ್ನು ಮಾಡುವರು (ಮೇಲಿನ 3 j ಮತ್ತು q, 2 b ನ್ನು ಸಹ ನೋಡಿರಿ). ಅವರು ನಿಮಗೆ ಸ್ವಾತಂತ್ರ್ಯವನ್ನು ವಾಗ್ದಾನವನ್ನು ಮಾಡುವರು. ಸಂಕುಚಿತ ಮನಸ್ಸಿನ ನಿಯಮ ಮತ್ತು ಕಾನೂನುಗಳನ್ನು ಪಾಲಿಸುವ ಅಗತ್ಯತೆ ಇಲ್ಲ. ಸೀಮಿತವಾದ ಜೀವನವನ್ನು ಜೀವಿಸುವ ಅವಶ್ಯಕತೆ ಇಲ್ಲ. ನಿಮ್ಮ ಸ್ವಂತ ಜೀವನದ ನಿಯಮಗಳನ್ನು ಮಾಡಲು ನೀವು ಸ್ವತಂತ್ರರು, ನಿಮ್ಮನ್ನು ಮೆಚ್ಚಿಸಲು ಸಂಪೂರ್ಣವಾಗಿ ನೀವು ಸ್ವತಂತ್ರರು, ದೇವರು ಸಹ ನಮಗೆ ಸ್ವತಂತ್ರವನ್ನು ವಾಗ್ದಾನ ಮಾಡಿಲ್ಲವಾ? ಮತ್ತು ಕ್ರಿಸ್ತನಲ್ಲಿ ಯಾವುದೇ ಖಂಡನೆಯಿಲ್ಲ ಎಂದು ಸತ್ಯವೇದ ಹೇಳುವುದಿಲ್ಲವಾ? ಎಂದು ಅವರು ಕೇಳುವರು.

5. 'ಸ್ವಾತಂತ್ರ್ಯಗಳು' ಸುಲಭವಾಗಿ ದಾಸತ್ವದ ಇನ್ನೊಂದು ರೂಪವಾಗಬಲ್ಲವು. ಸುಳ್ಳು ಬೋಧಕರು ಬೋಧಿಸುವ 'ಸ್ವಾತಂತ್ರ್ಯ'ವನ್ನು ವಿಶ್ಲೇಷಿಸುವಾಗ ಇದನ್ನು ನಾವು ಕಾಣಬಹುದು (ಮೇಲ್ಕಂಡ 4 bಮತ್ತು d ನ್ನು ನೋಡಿರಿ). 3 ಅನುದಿನದ ಉದಾಹರಣೆಗಳು ಈ ರೀತಿ ಇವೆ:

a. ಕ್ರೈಸ್ತನಾಗಿ ಖಂಡಿತವಾಗಿಯೂ ನೀನು ಮದ್ಯಪಾನ ಮಾಡಲು ಸ್ವತಂತ್ರನಾಗಿದ್ದೀಯೆಂದೆ ಒಬ್ಬ ಸುಳ್ಳು ಬೋಧಕ ಹೇಳಬಹುದು. ಹಾಗಾಗಿ ನೀವು ಸ್ವಲ್ಪ ಸ್ವಲ್ಪ ಕುಡಿಯಲು ಪ್ರಾರಂಭಿಸುವಿರಿ, ನೀವೊಬ್ಬ ಮಧ್ಯಪಾನಿಯಾಗುವವರೆಗೂ ಹಂತ ಹಂತವಾಗಿ ಮಧ್ಯವನ್ನು ಕುಡಿಯುವ ಪ್ರಮಾಣವನ್ನು ಹೆಚ್ಚಿಸುವಿರಿ. ನೋಡಿ, ನಿಮ್ಮ ಸ್ವಾತಂತ್ರ್ಯವು ಈಗ ದಾಸತ್ವವಾಯಿತು. ಈಗ ನೀವು ಕುಡಿಯುವ ಹವ್ಯಾಸಕ್ಕೆ ಒಬ್ಬ ದಾಸರಾಗಿದ್ದೀರಿ.

b. ಕ್ರೈಸ್ತನಾಗಿ ಜೀವನವನ್ನು ಸುಖಿಸಲು ನೀವು ಸ್ವತಂತ್ರವಾಗಿದ್ದೀರಿ ಎಂದು ಸುಳ್ಳು ಬೋಧಕರು ಹೇಳಬಹುದು. ಕೆಲವೊಮ್ಮೆ ಅಶ್ಲೀಲ ಚಿತ್ರಣವನ್ನು ವೀಕ್ಷಿಸುವುದು ತಪ್ಪೇನಲ್ಲ ಎಂದು ಹೇಳಬಹುದು. ಹಾಗಾಗಿ ಒಂದು ದಿನ ಈ ನಾಶಕರವಾದ ಹವ್ಯಾಸಕ್ಕೆ ನೀವು ದಾಸರಾಗುವವರೆಗೂ ಅಶ್ಲೀಲ ಚಿತ್ರಣವನ್ನು ವೀಕ್ಷಿಸುವಿರಿ. ನಿಮ್ಮ ಸ್ವಾತಂತ್ರ್ಯವು ದಾಸತ್ವವಾಗಿ ಮಾರ್ಪಡುವುದು.

c. ಕ್ರೈಸ್ತನಾಗಿ ಎಷ್ಟು ಸಾಧ್ಯವೋ ಅಷ್ಟಾಗಿ ನೀವು ಜೀವನವನ್ನು ಸುಖಿಸಬಹುದು, ಹಾಗಾಗಿ ಹಳೆಯ ಸ್ನೇಹಿತರೊಂದಿಗೆ ಯಾಕೆ ನೀವು ಸಮಯವನ್ನು ಕಳೆಯಬಾರದು? ಎಂಬುದಾಗಿ

ಸುಳ್ಳು ಬೋಧಕರು ಹೇಳಬಹುದು. ಹಾಗಾಗಿ ನೀವು ಹೆಚ್ಚು ಸಮಯವನ್ನು ನಿಮ್ಮ ಹಳೆಯ ಸ್ನೇಹಿತರೊಂದಿಗೆ ಉಣ್ಣುವುದರಲ್ಲಿ ಮತ್ತು ಕುಡಿಯುವುದರಲ್ಲಿ, ಸಿನಿಮಾ ಮತ್ತು ಡಿಸ್ಕೋಗಳಲ್ಲಿ, ವಾಯುವಿಹಾರ ಮತ್ತು ಪ್ರಯಾಣಗಳಲ್ಲಿ ಅಂತೂ ನಿಮ್ಮ ಹಣವೆಲ್ಲಾ ಖರ್ಚಾಯಿತೆಂದು ತಿಳಿಯುವವರೆಗೂ ಸಮಯ ಕಳೆಯುವಿರಿ. ಹಾಗಾಗಿ ಆಗ ನೀವು ಸಾಲಕೊಡುವವರಿಂದ ಹಣವನ್ನು ತೆಗೆದುಕೊಳ್ಳುವಿರಿ. ಕೆಲವು ತಿಂಗಳುಗಳ ಒಳಗೆ ಸಾಲ ಕೊಡುವವನಿಗೆ ಮತ್ತು ಗೂಂಡಗಳಿಗೆ ದಾಸರಾಗಿರುವಿರೆಂಬುದನ್ನು ಅರಿಯುವಿರಿ. ಆಗ ನಿಮ್ಮ ಖಾತೆಯಿರುವ ಕಂಪನಿಯಿಂದ ಹಣವನ್ನು ತೆಗೆದುಕೊಂಡು ನಿಮ್ಮ ಸಮಸ್ಯೆಯನ್ನು ಬಗೆಹರಿಸಲು ನೀವು ಪ್ರಯತ್ನಿಸುವಿರಿ. ನೀವು ಹಿಡಿಯಲ್ಪಟ್ಟು ಮತ್ತು ನಿಮ್ಮ ಇಡೀ ಜೀವನವೇ ಕುಸಿದು ಬೀಳುವವರೆಗೂ ಇದು ಸಾಗುತ್ತಲೇ ಇರುತ್ತದೆ. ನೀವು ಕೋರ್ಟಿಗೆ ಒಯ್ಯಲ್ಪಡುವಿರಿ. ನಿಮ್ಮ ದುರುಪಯೋಗವನ್ನು ಮನವರಿಕೆ ಮಾಡಿಕೊಂಡು ಜೈಲಿನಲ್ಲಿ ಕಳೆಯುವಿರಿ. ನಿಮ್ಮ ಸ್ವಾತಂತ್ರ್ಯವು ನಿಮ್ಮನ್ನು ಕಾರಾಗೃಹದಲ್ಲಿ ಕಬ್ಬಿಣದ ಕಂಬಿಗಳ ಹಿಂದೆ ಇಡಲ್ಪಡುವುದು.

6. 1:1–4 ರಲ್ಲಿ ನಿರೂಪಿಸಲ್ಪಟ್ಟ ಕ್ರಿಸ್ತನ ಕಾರ್ಯ ಮತ್ತು 2:19 ರಲ್ಲಿ ಪೇತ್ರನಿಂದ ವರ್ಣಿಸಲ್ಪಟ್ಟ ದಾಸತ್ವದ ನಡುವಿನ ಹೋಲಿಕೆಯು ಕ್ರಿಸ್ತನು ಕೊಡುವ ಬಹುಮಾನವು ಸುಳ್ಳು ಬೋಧಕರು ಕೊಡುವ ಸಂಗತಿಗಳಿಗಿಂತ ವಿಭಿನ್ನವಾಗಿರುತ್ತದೆಂಬುದನ್ನು ತೋರಿಸುತ್ತದೆ:

    a. 2 ಪೇತ್ರ 1:1–4: ವಿಶ್ವಾಸಿಗಳಾಗಿ ನಾವು ನಮ್ಮ ದೇವರೂ ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ನೀತಿವಂತಿಕೆಯಿಂದ ನಮ್ಮ ಅಮೂಲ್ಯವಾದ ನಂಬಿಕೆಯನ್ನು ಹೊಂದಿದ್ದೇವೆ (ವ.1). ದೇವರ ಮತ್ತು ಕ್ರಿಸ್ತನ ಕುರಿತಾಗಿನ ನಮ್ಮ ಜ್ಞಾನವು ನಮಗೆ ಕೃಪೆ ಮತ್ತು ಶಾಂತಿಯನ್ನು ಹೇರಳವಾಗಿ ಅನುಗ್ರಹಿಸುವುದು (ವ.2). ನಮ್ಮ ಕರ್ತನಾದ ಯೇಸು ಕ್ರಿಸ್ತನನ್ನು ನಾವು ಅರಿಯುವಾಗ ಆತನ ದೈವಿಕ ಶಕ್ತಿಯ ಮೂಲಕ ಭಕ್ತಿಯುತ ಜೀವನವನ್ನು ಜೀವಿಸಲು ನಮಗೆ ಬೇಕಾದುದ್ದನ್ನೆಲ್ಲ ನಾವು ಹೊಂದುವೆವು. ಅಷ್ಟಲ್ಲದೆ ಆತನು ಸಹ ನಮಗೆ ದೈವಿಕ ಸ್ವಭಾವವನ್ನು ಮತ್ತು ಈ ಲೋಕದಲ್ಲಿ ದುಷ್ಟ ಪ್ರಭಾವಗಳಿಂದ ರಕ್ಷಣೆಯನ್ನು ಮತ್ತು ನಿತ್ಯಜೀವವನ್ನು ವಾಗ್ದಾನ ಮಾಡಿದ್ದಾನೆ (ಈ ಲೋಕದ ಭ್ರಷ್ಟಚಾರದಿಂದ ತಪ್ಪಿಸಿಕೊಳ್ಳುವುದು, ವ.4).

    b. 2 ಪೇತ್ರ 2:19: ಪ್ರಾರಂಭದಲ್ಲಿ ಸ್ವಾತಂತ್ರ್ಯದಂತೆ ಕಾಣುವುದು ನಿಧಾನವಾಗಿ ದಾಸತ್ವಕ್ಕೆ ನಡೆಸುವುದು (ಉದಾ: ನಮ್ಮ ಸ್ವಂತ ಭ್ರಾಂತಿ ಮತ್ತು ಆಶೆಗಳನ್ನು ಪಾಲಿಸುವುದು ಅಥವಾ ಶರೀರದಾಶೆಯನ್ನು ತೃಪ್ತಿಪಡಿಸುವ ಜೀವನಶೈಲಿಯನ್ನು ಪಾಲಿಸುವುದು). ಶರೀರದಾಶೆಗಳನ್ನು ಪೂರೈಸುವ ನಮ್ಮ ಸ್ವಂತ ಭ್ರಾಂತಿ ಮತ್ತು ಆಶೆಗಳು ನಮ್ಮ ಯಜಮಾನರಾಗಿ ಮಾರ್ಪಡುತ್ತವೆ ಮತ್ತು ನಾವು ಅವರಡಿಯಲ್ಲಿ ದಾಸರಾಗುತ್ತೇವೆ.

ಹಾಗಾಗಿ ನಮ್ಮನ್ನು ನಾವು ದೇವರಿಗೆ ಒಪ್ಪಿಸಿಕೊಡುವಾಗ ಈ ಲೋಕದಲ್ಲಿ ಮತ್ತು ನಿತ್ಯತ್ವದಲ್ಲಿ ಸಹ ನಾವು ನಿಜವಾದ ಸ್ವಾತಂತ್ರ್ಯವನ್ನು ಪಡಕೊಳ್ಳುತ್ತೇವೆ. ಆದರೆ ಸುಳ್ಳು ಬೋಧಕರು ಹೇಳುವ ಸ್ವಾತಂತ್ರ್ಯಕ್ಕೆ ನಮ್ಮನ್ನು ಒಪ್ಪಿಸಿಕೊಡುವಾಗ ಈ ಲೋಕದಲ್ಲಲ್ಲದೆ ನಿತ್ಯತ್ವದಲ್ಲಿ ಸಹ ನಾವು ಈ ಸುಳ್ಳು ಸ್ವಾತಂತ್ರ್ಯದ ಅಡಿಯಲ್ಲಿ ನಾವು ದಾಸರಾಗಿ ಮಾರ್ಪಡುತ್ತೇವೆ.

7. ತಮ್ಮ ದೈವಶಾಸ್ತ್ರದ ಹಿನ್ನಲೆಯ ಆಧಾರದ ಮೇಲೆ ಸತ್ಯವೇದ ಪಂಡಿತರು ಸುಳ್ಳು ಬೋಧಕರ ಜೀವನ ಕ್ರಮದ ಬಗ್ಗೆ ವ.20–22 ನ್ನು ವಿಭಿನ್ನವಾಗಿ ವ್ಯಾಖ್ಯಾನಿಸುವರು. ಇವೆರಡು ಸಾಧ್ಯತೆಯ ವ್ಯಾಖ್ಯಾನಗಳು ಹೀಗಿವೆ:

   a. ಸುಧಾರಣಾ ದೈವಶಾಸ್ತ್ರಜ್ಞರು (ಮತ್ತು ಕ್ಯಾಲ್ವಿನ್ ಸಂಪ್ರದಾಯದ ಇತರರು, ಉತ್ತರ 14 ನ್ನು ನೋಡಿರಿ) ಸುಳ್ಳು ಬೋಧಕರುಗಳು ಎಂದಿಗೂ ಸಹ ಕ್ರಿಸ್ತನನ್ನು ತಿಳಿದಿಲ್ಲ ಮತ್ತು ಅವರ ನೀತಿಯು ಎಂದಿಗೂ ಯಥಾರ್ಥವಾದದ್ದಲ್ಲವೆಂದು ಈ ವಚನಗಳು ದೃಢಪಡಿಸುತ್ತವೆ ಎಂದು ಹೇಳುವರು. ಯಾಕೆಂದರೆ ಒಂದು ವೇಳೆ ನಿಜವಾಗಲೂ ಅವರು ಹೊಸದಾಗಿ ಹುಟ್ಟಿದ್ದರೆ ಮತ್ತು ರಕ್ಷಿಸಲ್ಪಟ್ಟಿದ್ದರೆ ಅವರು ತಮ್ಮ ನಂಬಿಕೆಯಲ್ಲಿ ಕಾಪಾಡಲ್ಪಡುತಿದ್ದರೆ ವಚನ 22 ರಲ್ಲಿನ ಎರಡು ಗಾದೆಗಳು ಸುಳ್ಳು ಬೋಧಕರುಗಳು ಯಾವಾಗಲೂ ನಾಯಿ ಮತ್ತು ಹಂದಿಗಳಾಗಿರುವರೆಂಬುದನ್ನು ದೃಢಪಡಿಸುತ್ತವೆ. ಒಂದು ಬಾರಿ ನಾಯಿಯಾಗಿದ್ದದ್ದು ಯಾವತ್ತೂ ನಾಯಿಯೇ ಆಗಿರುತ್ತದೆ. ಒಮ್ಮೆ ಹಂದಿಯಾಗಿರುವುದು ಎಂದೆಂದೂ ಹಂದಿಯೇ ಆಗಿರುತ್ತದೆ. ನಡುವೆ ಆಗಿರುವುದೆಲ್ಲಾ ಸುಳ್ಳಾಗಿರಬಹುದು.

   b. ಇತರೆ ಸತ್ಯವೇದ ತಜ್ಞರು (ಅವರಲ್ಲಿ ಅರ್ಮೋನಿಯನ್ ಸಂಪ್ರದಾಯದವರು, ಉತ್ತರ 14 ನ್ನು ನೋಡಿರಿ) ನಿಜವಾಗಲೂ ಹೊಸದಾಗಿ ಹುಟ್ಟಿದ ಮತ್ತು ರಕ್ಷಿಸಲ್ಪಟ್ಟ ವ್ಯಕ್ತಿ ಸಹ ತನ್ನ ರಕ್ಷಣೆಯನ್ನು ಕಳಕೊಂಡು ಮತ್ತು ಒಬ್ಬ ಸುಳ್ಳು ಬೋಧಕರಾಗುವುದಕ್ಕೆ ಸಾಧ್ಯತೆಯಿದೆ ಎಂಬುದನ್ನು ಈ ವಚನಗಳು ದೃಢಪಡಿಸುತ್ತವೆಂದು ಹೇಳುವರು. ಸುಳ್ಳು ಬೋಧಕರುಗಳು ಒಮ್ಮೆ ರಕ್ಷಕನಾದ ಯೇಸು ಕ್ರಿಸ್ತನನ್ನು ತಿಳಿಯುವುದರಿಂದ ಲೋಕದ ಕೆಟ್ಟತನದಿಂದ ಪಾರಾದವರಾಗಿದ್ದಾರೆ. ಒಮ್ಮೆ ಅವರು ನೀತಿಯ ಮಾರ್ಗವನ್ನು ಅರಿತವರಾಗಿದ್ದರು. ಆದರೆ ಅವರು ತಮಗಾಗಿನ ದೇವರ ರಕ್ಷಣೆ ಮತ್ತು ಭಕ್ತಿಯೆಡೆಗೆ ಬೆನ್ನು ತಿರುಗಿಸಿದರು.

ವಚನ 22 ರಲ್ಲಿ ಎರಡು ಗಾದೆಗಳು ಈ ವಾಸ್ತವಾಂಶಗಳನ್ನು ತಿಳಿಸುತ್ತದೆ: ನಾಯಿಯು ತಾನು ಕಕ್ಕಿದ್ದನ್ನು ನೆಕ್ಕುವುದಕ್ಕೆ ಹಿಂತಿರುಗಿದಂತೆ ಮತ್ತು ಹಂದಿಯು ತಿರುಗಿ ಕೆಸರಿಗೆ ಹೋದಂತೆ ಸುಳ್ಳು ಬೋಧಕರುಗಳು ಸಹ ತಮ್ಮ ಹಳೆಯ ಅನ್ಯ ಮತ್ತು ಕ್ರೈಸ್ತ ಪೂರ್ವ ಜೀವಿತಕ್ಕೆ ಹಿಂದಿರುಗಿದ್ದಾರೆ.

ಪೆಂಟೆಕೊಸ್ಟಲ್ (ಪಂಚಾಶತ್ತಮ) ದೈವಶಾಸ್ತ್ರದ ಸಂಪ್ರದಾಯದ ವ್ಯಕ್ತಿಯಾದ ನಾನು ಈ ಮೊದಲ ವ್ಯಾಖ್ಯಾನವನ್ನು ಒಪ್ಪಲಾರೆ. ನಾನು ಖಂಡಿತವಾಗಿ ನಂಬುತ್ತೇನೆ, ಮನುಷ್ಯರಾದ ನಮಗೆ ಯೇಸು ಕ್ರಿಸ್ತನ ಮುಖಾಂತರ ಸಿಗುವ ರಕ್ಷಣೆಯ ಆಹ್ವಾನಕ್ಕೆ ಹೌದು ಅಥವಾ ಇಲ್ಲ ಎನ್ನುವ ಸ್ವಾತಂತ್ರ್ಯವನ್ನು ದೇವರು ನಮಗೆ ಕೊಟ್ಟಿದ್ದಾನೆಂದು ಸತ್ಯವೇದವು ಬೋಧಿಸುತ್ತದೆ. ಯಾವಾಗ ನಾವು ಹೌದು ಎಂದು ಹೇಳುತ್ತೇವೋ ಆಗ ನಿಜವಾಗಲೂ ನಾವು ಹೊಸದಾಗಿ ಹುಟ್ಟುತ್ತೇವೆ ಮತ್ತು ರಕ್ಷಿಸಲ್ಪಡುತ್ತೇವೆ. ನಾವು ಇಲ್ಲ ಎಂದು ಹೇಳುವಾಗ ದೇವರು ನಮ್ಮನ್ನು ಒತ್ತಾಯಿಸಿ ನಮ್ಮ ಚಿತ್ತಕ್ಕೆ ವಿರುದ್ಧವಾಗಿ ರಕ್ಷಿಸುವುದಿಲ್ಲ. ಕೆಲವು ಕಾರಣಗಳ ನಿಮಿತ್ತ ನಾವು ಆತನ ರಕ್ಷಣೆಯನ್ನು ಅಂಗೀಕರಿಸುವಾಗ ತದನಂತರ ನಾವು ಆತನಿಗೆ ಮತ್ತು ನಮಗಾಗಿನ ಆತನ ಉದ್ದೇಶಗಳಿಗೆ ಬೆನ್ನು ತಿರುಗಿಸುವುದಕ್ಕೆ ತೀರ್ಮಾನಿಸುತ್ತೇವೆ, ಆಗ ನಾವು ರಕ್ಷಣೆಯನ್ನು ಕಳೆದುಕೊಂಡು ಧರ್ಮಭ್ರಷ್ಟರಾಗುತ್ತೇವೆ.



## ಅವಲೋಕನ

ನಿಮ್ಮದೇ ಆದ ದಕ್ಷಿಣ ಭಾರತದ ಸಾಂಸ್ಕೃತಿಕ ಹಿನ್ನಲೆಯಲ್ಲಿ ಸಹ ಸುಳ್ಳು ಬೋಧಕರನ್ನು ಗುರುತಿಸಲು ಈ ಅಧ್ಯಯನವು ನಿಮಗೆ ಅನೇಕ ಮಾಹಿತಿಗಳನ್ನು ಕೊಟ್ಟಿರಬಹುದು. ಯೇಸು ಸುಳ್ಳು ಬೋಧಕರ ಬಗ್ಗೆ ಈ ರೀತಿ ಹೇಳುತ್ತಾನೆ (ಆತನು ಅವರನ್ನು 'ಸುಳ್ಳು ಪ್ರವಾದಿಗಳು' ಎಂದು ಕರೆದಿದ್ದಾನೆ):*''ಸುಳ್ಳು ಪ್ರವಾದಿಗಳ ವಿಷಯದಲ್ಲಿ ಎಚ್ಚರವಾಗಿರ್ರಿ. ಅವರು ಕುರಿವೇಷ ಹಾಕಿಕೊಂಡು ನಿಮ್ಮ ಬಳಿಗೆ ಬರುತ್ತಾರೆ; ಆದರೆ ಒಳಗೆ ನೋಡಿದರೆ ಅವರು ಹಿಡುಕೊಂಡು ಹೋಗುವ ತೋಳಗಳೇ. ಅವರ ಫಲಗಳಿಂದ ಅವರನ್ನು ತಿಳುಕೊಳ್ಳುವಿರಿ. ಮುಳ್ಳುಗಿಡಗಳಲ್ಲಿ ದ್ರಾಕ್ಷೆಹಣ್ಣುಗಳನ್ನೂ ಮದ್ದುಗುಣಿಕೇಗಿಡಗಳಲ್ಲಿ ಅಂಜೂರಗಳನ್ನೂ ಕೊಯ್ಯುವುದುಂಟೇ? ಹಾಗೆಯೇ ಒಳ್ಳೆಮರಗಳೆಲ್ಲಾ ಒಳ್ಳೇ ಫಲವನ್ನು ಕೊಡುವವು; ಹುಳುಕು ಮರವು ಕೆಟ್ಟ ಫಲವನ್ನು ಕೊಡುವುದು. ಒಳ್ಳೇ ಮರವು ಕೆಟ್ಟಫಲವನ್ನು ಕೊಡಲಾರದು; ಹುಳುಕು ಮರವು ಒಳ್ಳೆ ಫಲವನ್ನು ಕೊಡಲಾರದು. ಒಳ್ಳೇ ಫಲವನ್ನು ಕೊಡದ ಎಲ್ಲಾ ಮರಗಳನ್ನು ಕಡಿದು ಬೆಂಕಿಯಲ್ಲಿ ಹಾಕುತ್ತಾರೆ. ಹೀಗಿರಲಾಗಿ ಅವರ ಫಲಗಳಿಂದ ಅವರನ್ನು ತಿಳುಕೊಳ್ಳುವಿರಿ. ನನ್ನನ್ನು ಸ್ವಾಮಿ, ಸ್ವಾಮಿ ಅನ್ನುವವರೆಲ್ಲರು ಪರಲೋಕರಾಜ್ಯದಲ್ಲಿ ಸೇರುವರೆಂದು ನೆನಸಬೇಡಿರಿ; ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತದಂತೆ ನಡೆಯುವವನೇ ಪರಲೋಕರಾಜ್ಯಕ್ಕೆ ಸೇರುವನು. ಸ್ವಾಮಿ, ಸ್ವಾಮಿ, ನಿನ್ನ ಹೆಸರಿನ ಮೇಲೆ ನಾವು ಬೋಧನೆ ಹೇಳಲಿಲ್ಲವೇ? ನಿನ್ನ ಹೆಸರಿನ ಮೇಲೆ ದೆವ್ವಗಳನ್ನು ಬಿಡಿಸಲಿಲ್ಲವೇ? ನಿನ್ನ ಹೆಸರಿನ ಮೇಲೆ ಅನೇಕ ಮಹತ್ಕಾರ್ಯಗಳನ್ನು ಮಾಡಲಿಲ್ಲವೇ? ಎಂದು ಆ ದಿನದಲ್ಲಿ ಎಷ್ಟೋ ಜನರು ಹೇಳುವರು. ಆಗ ನಾನು ಅವರಿಗೆ– ನಾನೆಂದೂ ನಿಮ್ಮ ಗುರುತು ಕಾಣೆನು; ಧರ್ಮವನ್ನು ಮೀರಿ ನಡೆಯುವವರೇ, ನನ್ನಿಂದ ತೊಲಗಿಹೋಗಿರಿ ಎಂದು ಎಲ್ಲರ ಮುಂದೆ ಹೇಳಿಬಿಡುವೆನು''* (ಮತ್ತಾಯ 7:15–23).

*ಅವರ ಫಲಗಳಿಂದ ಅವರನ್ನು ನೀವು ತಿಳಿದುಕೊಳ್ಳುವಿರೆಂದು* ಯೇಸು ಹೇಳಿದನು. ನಿಮ್ಮ ಸೇವೆಯು ಹೊರಪಡಿಸುವ ಫಲವೇನು? ಸತ್ಯವಾಕ್ಯವನ್ನು ಸರಿಯಾಗಿ ಬೋಧಿಸುವ ಕೌಶಲ್ಯವುಳ್ಳ ಸುವಾರ್ತಾ ಕೆಲಸದವರಾಗಿದ್ದೀರಾ (2 ತಿಮೊಥಿ 2:15)? ಅಥವಾ ಸುಳ್ಳು ವಾಗ್ದಾನಗಳ ಮೂಲಕ ಮತ್ತು ಮರುಳುಗೊಳಿಸುವ ಜೀವನ ಶೈಲಿಯಿಂದ ಜನರನ್ನು ದೂರಕ್ಕೆ ನಡೆಸುವ ಸುಳ್ಳು ಬೋಧಕರಾಗಿದ್ದೀರಾ?

## ಸಂಶೋಧನೆಗಳು



### 1. ನೈಸಿಯಾದ ನಂಬಿಕೆಯ ಘೋಷಣೆ

ಕ್ರಿ.ಶ. 325 ನೇ ವರ್ಷದಲ್ಲಿ ಸುಮಾರು 300 ಕ್ರೈಸ್ತ ಬಿಷಪ್‌ಗಳು ಪ್ರಸ್ತುತ ಟರ್ಕಿ ದೇಶದ ಪಶ್ಚಿಮೋತ್ತರದ ನೈಸಿಯಾ ಎಂಬ ಸ್ಥಳದಲ್ಲಿ ಕೂಡಿದರು. ಕ್ರೈಸ್ತೀಯ ನಂಬಿಕೆಯ ಒಂದು ಸ್ಥಿರವಾದ ಮತ್ತು ಸಂಕ್ಷಿಪ್ತವಾದ ಹೇಳಿಕೆಯನ್ನು ಬರೆಯುವುದು ಅವರ ಕಾರ್ಯವಾಗಿತ್ತು. ಹಲವು ತಿಂಗಳುಗಳ ಶ್ರದ್ಧೆಯುಳ್ಳ ಸತ್ಯವೇದ ಅಧ್ಯಯನದ ನಂತರ ಅವರು ನೈಸಿಯಾದ ಒಪ್ಪಂದವನ್ನು ಹುಟ್ಟುಹಾಕಿದರು. ಅವರು ನೈಸಿಯಾದ ಒಪ್ಪಂದಕ್ಕೆ ಹೋಲಿಸುವಾಗ ಅನೇಕ ದುರ್ಬೋಧನೆಗಳು ಬಹಿರಂಗಗೊಳ್ಳುವವು.

ಗ್ರಂಥಾಲಯದಲ್ಲಿ ಅಥವಾ ಇಂಟರ್‌ನೆಟ್‌ನಲ್ಲಿ ನೈಸಿಯಾದ ಒಪ್ಪಂದದ ಒಂದು ಇಂಗ್ಲೀಷ್ ಪ್ರತಿಯನ್ನು ಹುಡುಕಿರಿ. ಈ ಪಠ್ಯವನ್ನು ಕನ್ನಡಕ್ಕೆ ಭಾಷಾಂತರಿಸಲು ಪ್ರಯತ್ನಿಸಿರಿ. ಅಥವಾ ಒಪ್ಪಂದದ

ಕನ್ನಡ ಆವೃತ್ತಿಯನ್ನು ನೀವು ಕಂಡುಕೊಳ್ಳಬಹುದು (ಉದಾ: ಪಾದ್ರಿಗಳಿಗಾಗಿನ ರೋಮನ್ ಕ್ಯಾಥೋಲಿಕ್ ಕೈಪಿಡಿಯಲ್ಲಿ).

2. ಹೆಚ್ಚು ಕಡಿಮೆ ಕ್ರೈಸ್ತರು ಆದರೆ ಪೂರ್ತಿಯಾಗಿ ಅಲ್ಲ, ಕೆಲವು ಧರ್ಮಗಳು ಹೆಚ್ಚುಕಡಿಮೆ ಕ್ರೈಸ್ತರೆನಿಸುತ್ತದೆ ಆದರೆ ಪೂರ್ತಿಯಾಗಿ ಅಲ್ಲ, ಕೆಲವೊಮ್ಮೆ ಅವರು ಕ್ರೈಸ್ತೀಯ ಪಂಥವೆಂದು ಕರೆಯಲ್ಪಡುವರು. ಅದರಲ್ಲಿ ಒಂದು ಕ್ರೈಸ್ತೀಯವೆಂದು ಅನೇಕ ಜನರಿಂದ ಪರಿಗಣಿಸಲ್ಪಟ್ಟಿದೆ. ಅವುಗಳಲ್ಲಿ ಈ ರೀತಿಯಿವೆ:

- ಮೊರ್ಮೋನ್ ಸಭೆ
- ಕ್ರೈಸ್ತೀಯ ವಿಜ್ಞಾನ
- ಯೆಹೋವನ ಸಾಕ್ಷಿಗಳು
- ಅಂತರಾಷ್ಟ್ರೀಯ ಕುಟುಂಬ (ಮೊದಲು ದೇವರ ಮಕ್ಕಳೆಂದು ಕರೆಯಲ್ಪಟ್ಟಿದ್ದರು)
- ಸಂಯುಕ್ತ ಪೆಂಟೆಕೊಸ್ಟಲ್ ಸಭೆ (ಒಮ್ಮತದ ಪೆಂಟೆಕೊಸ್ಟಲರು, ಯೇಸು ಮಾತ್ರ)

ಇವುಗಳಲ್ಲಿ ಯಾವುದನ್ನು ನೀವು ಈ ಹಿಂದೆ ಕೇಳಿದ್ದೀರಿ? ಇವುಗಳಲ್ಲಿ ಯಾವುದಾದರೂ ಕರ್ನಾಟಕದಲ್ಲಿ ಹಿಂಬಾಲಕರನ್ನು ಹೊಂದಿವೆಯಾ? ಈ ಹಿಂಬಾಲಕರು ಕ್ರೈಸ್ತರೆಂದು ಪರಿಗಣಿಸಲ್ಪಟ್ಟಿವೆಯಾ ಅಥವಾ ಅಕ್ರೈಸ್ತರೆಂದು ಪರಿಗಣಿಸಲ್ಪಟ್ಟಿವೆಯಾ?

ಯೇಸು ಮಾತ್ರ ಎನ್ನುವ ಗುಂಪುಗಳು ಭಾರತದಲ್ಲಿ ಹೆಚ್ಚಾಗಿ ಕ್ರೈಸ್ತರೆಂದು ಪರಿಗಣಿಸಲ್ಪಟ್ಟಿದ್ದಾರೆ. ಯಾಕೆ? ಅವರ ದೇವರ ಕುರಿತಾದ ಸಿದ್ಧಾಂತಕ್ಕನುಗುಣವಾಗಿ ಅದು ಸರಿಯಾದ ಹಣೆಪಟ್ಟಿಯಾಗಿದೆಯಾ?

ಇಂಗ್ಲಿಷ್‌ನಲ್ಲಿ ಈ ಗುಂಪುಗಳ ಬಗ್ಗೆ ಇಂಟರ್‌ನೆಟ್‌ನಲ್ಲಿ ನೀವು ಸುಲಭವಾಗಿ ಮಾಹಿತಿಯನ್ನು ಕಂಡುಕೊಳ್ಳಬಹುದು. ನೀವು ಹುಡುಕುತ್ತಿರುವ ಮಾಹಿತಿಗಳುಳ್ಳ ನಿಮ್ಮ ಗ್ರಂಥಾಲಯ ಸಹ ಹೊಂದಿರಬಹುದು. ನಿಮ್ಮ ಹುಡುಕುವಿಕೆ ಮತ್ತು ಮುಕ್ತಾಯದ ಬಗ್ಗೆ ಸಂಕ್ಷಿಪ್ತವಾಗಿ ಒಂದು ಪ್ರತಿಯನ್ನು ಬರೆಯಿರಿ.

# ಉತ್ತರಗಳು 18: ವಾಗ್ದಾನವನ್ನು ನೆನಪುಮಾಡಿಕೊಳ್ಳಿರಿ, 3:1–7

## ಶಿಕ್ಷಕರ ಗಮನಕ್ಕೆ

ಗ್ರೀಕ್ ಪಠ್ಯದಲ್ಲಿ (ಇಂಗ್ಲೀಷ್ ಭಾಷಾಂತರದಲ್ಲಿ ಕಾಣಬಹುದು, ಆದರೆ ಕನ್ನಡ ಸತ್ಯವೇದದಲ್ಲಿಲ್ಲ) ವಚನ 3 'ಎಲ್ಲಕ್ಕಿಂತ ಮೊದಲು' ಎಂಬ ಹೇಳಿಕೆಯಿಂದ ಪ್ರಾರಂಭವಾಗುತ್ತದೆ. ಇದು 'ಎಲ್ಲವುಗಳಿಗಿಂತ ಮಿಗಿಲಾಗಿ' ಅಥವಾ 'ಅತೀ ಪ್ರಾಮುಖ್ಯವಾಗಿ' ಎಂದು ಅರ್ಥೈಸಲ್ಪಡಬೇಕೇ ವಿನಃ ಅಂಶಗಳ ಪಟ್ಟಿಯಲ್ಲಿ ಮೊದಲ ಸಂಗತಿಯೆಂದು ಅಲ್ಲ.

ಹೊಸ ಒಡಂಬಡಿಕೆಯ 'ಕಡೇ ದಿನಗಳು' ಎಂಬ ಹೇಳಿಕೆಯ ಅರ್ಥವನ್ನು ವಿದ್ಯಾರ್ಥಿಗಳು ತಿಳುಕೊಳ್ಳುವುದು ಅತೀ ಪ್ರಾಮುಖ್ಯವಾಗಿದೆ (ಪ್ರಶ್ನೆ 4 ಕ್ಕೆ ನನ್ನ ಉತ್ತರವನ್ನು ನೋಡಿರಿ). ಈ ದಿನ ನಾವು ಈ ಹೇಳಿಕೆಯ ಅರ್ಥವನ್ನು ಸಂಕುಚಿತವಾಗಿ ಕಾಣುತ್ತೇವೆ. ಹಾಗಾಗಿ 'ಕಡೇ ದಿನಗಳಿಂದ' ನಾವು 'ಸಭಾ ಅವಧಿಯ ಅಂತ್ಯ, ಕೇವಲ ಯೇಸು ಕ್ರಿಸ್ತನ ಎರಡನೇ ಬರೋಣದ ಹಿಂದಿನ ಸಮಯ'ವೆಂದು ಅರ್ಥೈಸಿಕೊಳ್ಳುತ್ತೇವೆ. ಆದರೆ ದೇವರ ಉದ್ದೇಶ. ಹೊಸ ಒಡಂಬಡಿಕೆಯ ಅರ್ಥವಲ್ಲ. ಪೌಲನು ತನ್ನ ಓದುಗರಿಗೆ ಇಸ್ರಾಯೇಲರ ಇತಿಹಾಸದಿಂದ ಎಚ್ಚರಿಕೆಯ ಬಗ್ಗೆ ಜ್ಞಾಪಿಸುವಾಗ ಆತನು ಈ ರೀತಿ ಮುಕ್ತಾಯಗೊಳಿಸುತ್ತಾನೆ:*ಅವರಿಗೆ ಸಂಭವಿಸಿದ ಈ ಸಂಗತಿಗಳು ನಿದರ್ಶನ ರೂಪವಾಗಿವೆ ಮತ್ತು ಯುಗಾಂತ್ಯಕ್ಕೆ ಬಂದಿರುವವರಾದ ನಮಗೆ ಬುದ್ಧಿವಾದಗಳಾಗಿ ಬರೆದಿವೆ* (1 ಕೊರಿಂಥ 10:11, ಎನ್ಎಎಸ್ಬಿ).ತಾನು ಈಗಾಗಲೇ ಕಡೆಯ ದಿನಗಳಲ್ಲಿ ಜೀವಿಸುತ್ತಿರುವೇನೆಂದೂ ಮತ್ತು ಯುಗಾಂತ್ಯವು ಯೇಸು ಕ್ರಿಸ್ತನ ಜೀವನ ಮತ್ತು ಸೇವೆಯೊಂದಿಗೆ ಬಂದಿರುವವೆಂದೂ ಪೌಲನು ಅರಿತುಕೊಳ್ಳುತ್ತಾನೆ. ಈಗಲೂ ನಾವು ಕಡೆಯ ದಿನಗಳಲ್ಲಿ ಜೀವಿಸುತ್ತಿರುವೆವು ಮತ್ತು ಇವು ಯೇಸು ಕ್ರಿಸ್ತನ ಬರೋಣ ಮತ್ತು ಕರ್ತನ ದಿನದಲ್ಲಿ ಪೂರ್ಣಗೊಳ್ಳುವವೆಂಬುದನ್ನು ನಾವು ಅರಿತುಕೊಳ್ಳಬೇಕಾಗಿದೆ.

## ಉತ್ತರಗಳು

1. ಈ ಎರಡೂ ಪತ್ರಿಕೆಗಳೊಡನೆ ತನ್ನ ಉದ್ದೇಶವನ್ನು ತಿಳಿಸುವುದರ ಮೂಲಕ ಪೇತ್ರನು ಈ ವಾಕ್ಯಭಾಗವನ್ನು ಪ್ರಾರಂಭಿಸುತ್ತಾನೆ. ಅವರನ್ನು ಹಿತಕರವಾದ ಯೋಜನೆಗಳಿಗಾಗಿ ಉತ್ತೇಜಿಸಲು ಇವುಗಳು ಆತನ ಓದುಗರಿಗೆ ಜ್ಞಾನ ಕೊಡುವಂತವುಗಳಾಗಿವೆ. ಈ ಹಿಂದಿನ ಅಧ್ಯಾಯದಲ್ಲಿ ಪೇತ್ರನು ಸುಳ್ಳು ಬೋಧಕರು ಮತ್ತು ಅವರ ಪಾಪಮಯ ಜೀವಿತ ಮತ್ತು ನಾಶಕರವಾದ ಯೋಜನೆಯ ವಿಧಗಳನ್ನು ವರ್ಣಿಸುತ್ತಾ ಬಂದಿದ್ದಾನೆ. ಆದರೆ ಪೇತ್ರನು ತನ್ನ ಓದುಗರು ವಿಭಿನ್ನವಾಗಿ ಬದುಕಬೇಕೆಂದು ಮತ್ತು ಯೋಚಿಸಬೇಕೆಂದು ಬಯಸುತ್ತಾನೆ. ಅವರ ಜೀವಿತವು ಭಕ್ತಿಯುತವಾಗಿಯೂ ಮತ್ತು ಅವರು ಯೋಚಿಸುವುದು ಹಿತಕರವಾಗಿಯೂ ಮತ್ತು ನಿರ್ಮಲವಾಗಿಯೂ ಇರಬೇಕು.
2. ಪೇತ್ರನು ತನ್ನ ಓದುಗರು ತಮ್ಮ ಹಿತಕರ/ಆರೋಗ್ಯದಾಯಕ ಯೋಚನೆಗಳನ್ನು ಎರಡು ಮೂಲಗಳ ಮೇಲೆ ಆಧರಿಸಿರಬೇಕೆಂದು ಬಯಸುತ್ತಾನೆ (ವ.2).

a. *ಪರಿಶುದ್ಧ ಪ್ರವಾದಿಗಳು ಈ ಹಿಂದೆ ಹೇಳಿದ ಮಾತುಗಳು:* ಇದು ಹಳೆ ಒಡಂಬಡಿಕೆಯ ಪಠ್ಯವನ್ನು ಸೂಚಿಸುತ್ತದೆ. ಪ್ರವಾದಿಗಳು ಎನ್ನುವುದು ಹಳೆ ಒಡಂಬಡಿಕೆಯ ಪುಸ್ತಕಗಳು ಎನ್ನುವುದಕ್ಕೆ ಸಂಕ್ಷಿಪ್ತವಾದ ವಿಧವಾಗಿದೆ.

b. *ಕರ್ತನಾದ ರಕ್ಷಕನು ಅಪೊಸ್ತಲರ ಮೂಲಕ ಕೊಟ್ಟ ಅಪ್ಪಣೆ:* ಇದು ಈಗ ನಾವು ಹೊಸ ಒಡಂಬಡಿಕೆಯಲ್ಲಿ ಕಾಣುವ ದಾಖಲೆಗಳನ್ನು ಸೂಚಿಸುತ್ತದೆ. ಅಪೋಸ್ತಲರು ಹೊಸ ಒಡಂಬಡಿಕೆಯ 27 ಪುಸ್ತಕಗಳಲ್ಲಿ ಕಂಡುಬರುವ ಮಾಹಿತಿಗಳ ಮೂಲವಾಗಿದ್ದಾರೆ.

ಹಾಗಾಗಿ ಪೇತ್ರನು ಪುನಃ ಇಲ್ಲಿ ಎರಡು ಸಾಕ್ಷಿಗಳ ಬಗ್ಗೆ ತನ್ನ ಓದುಗರಿಗೆ ಜ್ಞಾಪಕಪಡಿಸುತ್ತಾನೆ (ಅಧ್ಯಯನ 15 ನ್ನು ನೋಡಿರಿ): ಹೊಸ ಒಡಂಬಡಿಕೆಯ ಸಾಕ್ಷಿ ಮತ್ತು ಹಳೆ ಒಡಂಬಡಿಕೆಯ ಸಾಕ್ಷಿ (1:16–21).

3. ಕೇವಲ ಕೆಲವು ವಾಕ್ಯಗಳನ್ನು ಬಳಸಲು ಅನುಮತಿಸಲ್ಪಟ್ಟರೆ ಅಧ್ಯಾಯ 3 ರ ವಿಷಯಾಂಶಗಳನ್ನು ನಾನು ಈ ರೀತಿಯಲ್ಲಿ ಸಾರಾಂಶಗೊಳಿಸಬಲ್ಲೆನು: ಯೇಸುವು ಬರುತ್ತಾನೆಂದು ವಾಗ್ದಾನ ಮಾಡಿದರೂ ಯಾಕೆ ಇನ್ನು ಬಂದಿಲ್ಲವೆಂದು ಪ್ರಶ್ನೆಗೆ ಪೇತ್ರನು ಉತ್ತರಿಸುತ್ತಾನೆ. ಹಾಗೆಯೇ ಆತನು ಕರ್ತನ ದಿನವನ್ನು ವರ್ಣಿಸುತ್ತಾ ಆ ದಿನಕ್ಕಾಗಿ ಸಿದ್ಧರಾಗಬೇಕೆಂದು ತನ್ನ ಓದುಗರಿಗೆ ಎಚ್ಚರಿಸುತ್ತಾನೆ.

4. ವಚನ 3 ರಲ್ಲಿ ಕಡೇ ದಿನಗಳಲ್ಲಿ ಎಂಬ ಹೇಳಿಕೆಯನ್ನು ಬಳಸುತ್ತಾನೆ. ಹೊಸ ಒಡಂಬಡಿಕೆಯಲ್ಲಿ ಈ ಹೇಳಿಕೆಯು ಯೇಸು ಕ್ರಿಸ್ತನ ಮೊದಲ ಮತ್ತು ಎರಡನೇ ಬರೋಣದ ನಡುವಿನ ಅವಧಿಯನ್ನು ಸೂಚಿಸುತ್ತದೆ. ಇದು ಸಭಾ ಯುಗವಾಗಿದೆ. ಪಂಚಾಶತ್ತಮ ದಿನದ ಮೊದಲ ದಿನದಂದುನಡೆಯುತ್ತಿದ್ದ ಘಟನೆಯನ್ನು ನೆರೆದ ಜನರಿಗೆ ವಿವರಿಸಲು ಪೇತ್ರನು *'ದೇವರು ತರುವಾಯ ನಾನು ಎಲ್ಲಾ ಮನುಷ್ಯರ ಮೇಲೆ ನನ್ನ ಆತ್ಮವನ್ನು ಸುರಿಸುವೆನು'* (ಯೊವೇಲ 2:28) ಎಂಬ ಯೊವೇಲನ ಪ್ರವಾದನೆಯನ್ನು ತನ್ನ ಪ್ರಸಂಗದಲ್ಲಿ ಉಲ್ಲೇಖಿಸುತ್ತಾನೆ. ಆದರೆ ಪೇತ್ರನು ಕಡೆಯ ದಿನಗಳು ಈಗಾಗಲೇ ಬಂದಿವೆ ಮತ್ತು ಕರ್ತನ ದಿನಗಳಿಗೆ ನಡೆಸುವ ಹಳೆ ಒಡಂಬಡಿಕೆಯ ಪ್ರವಾದನೆಗಳನ್ನು ನೆರವೇರಿಸಲು ಮತ್ತು ಈ ಪ್ರಸ್ತುತ ಜಗತ್ತಿನ ಅಂತ್ಯವನ್ನು ನಿರ್ಧರಿಸಲು ದೇವರು ಪ್ರಾರಂಭಿಸಿದ್ದಾನೆಂಬುದನ್ನು 'ಕಡೇ ದಿನಗಳಲ್ಲಿ...' (ಅ.ಕೃ. 2:17) ಎಂಬುದಾಗಿ ಬದಲಾಯಿಸುತ್ತಾನೆ. ಹಾಗಾಗಿ ಕಡೆ ದಿನಗಳು ಯೇಸು ಕ್ರಿಸ್ತನ ಮೊದಲನೆಯ ಬರೋಣದಿಂದ ಪ್ರಾರಂಭವಾಗಿ ಆತನ ಎರಡನೆಯ ಬರೋಣದೊಂದಿಗೆ ಅಂತ್ಯಗೊಳ್ಳುವವು.

5. ವಚನ 4 ಕುಚೋದ್ಯಗಾರರು *ಆತನ 'ಪ್ರತ್ಯಕ್ಷತೆಯ' ವಿಷಯವಾದ ವಾಗ್ದಾನವು ಏನಾಯಿತು?* ಎಂದು ಕೇಳುವರೆಂದು ಹೇಳುತ್ತದೆ. ಈ ರೀತಿಯಾಗಿ ಯೇಸುವು ಯೊಹಾನ 14:1–3 ರಲ್ಲಿ ವಾಗ್ದಾನ ಮಾಡಿದ್ದಾನೆ:

- ತನ್ನ ಶಿಷ್ಯರುಗಳಿಗಾಗಿ ತಂದೆಯ ಮನೆಯಲ್ಲಿ ಸ್ಥಳವನ್ನು ಸಿದ್ಧಪಡಿಸಲು ಯೇಸು ಹೋಗುತ್ತಿದ್ದನು.

- ಯೇಸು ತಿರುಗಿ ಬರುವನು.

- ತಾನಿರುವಲ್ಲಿಯೇ ತನ್ನ ಶಿಷ್ಯರನ್ನು ಯೇಸು ಕರಕೊಂಡು ಹೋಗುವನು.

ಅ.ಕೃ. 1:6–11 ರಲ್ಲಿ ಈ ರೀತಿಯಾಗಿ ಯೇಸು ಹೇಳಿದನು ಮತ್ತು ದೇವದೂತರು ವಾಗ್ದಾನಮಾಡಿದರು:

- ಯೇಸು ಕ್ರಿಸ್ತನು ಇತಿಹಾಸದಲ್ಲಿ ಒಮ್ಮೆಲೆ ರಾಜ್ಯವನ್ನು ಮರುಸ್ಥಾಪಿಸುವುದಿಲ್ಲ, ಮೊದಲು ಪವಿತ್ರಾತ್ಮನು ಬಂದು ಆತನ ಶಿಷ್ಯರುಗಳು ಭೂಮಿಯ ಕಟ್ಟಕಡೆಯವರೆಗೂ ಸಾಕ್ಷಿಗಳಾಗುವಂತೆ ಮಾಡುವನು.

- ಆತನು ಏರಿಹೋಗುವುದನ್ನು ಕಂಡ ರೀತಿಯಲ್ಲಿಯೇ ಯೇಸುವು ತಿರುಗಿ ಪರಲೋಕದಿಂದ ಇಳಿದು ಬರುವನು.

ಎರಡು ಪ್ರಶ್ನೆಗಳ ನನ್ನ ಉತ್ತರಗಳು ಇಂತಿವೆ:

a. ಯೇಸು ಕ್ರಿಸ್ತನ ಮರಣ ಮತ್ತು ಪುನರುತ್ಥಾನದ 30 ವರ್ಷಗಳ ನಂತರ (ಒಂದು ಇಡೀ ತಲೆಮಾರು) ನಾನು ಜೀವಿಸುತ್ತಿದ್ದರೆ ಆತನ ಬರೋಣದ ಬಗ್ಗೆ ನಾನು ಈ ಪ್ರಶ್ನೆಗಳನ್ನು ಕೇಳುತ್ತಿದ್ದೆನು:

   - ಯಾಕೆ ಯೇಸು ಇನ್ನೂ ತಿರುಗಿ ಬಂದಿಲ್ಲ?

   - ಆತನು ಎಂದಾದರೂ ತಿರುಗಿ ಬರುವನಾ? ಅಥವಾ ದೇವರ ಯೋಜನೆಯಲ್ಲಿ ಏನಾದರೂ ಬದಲಾವಣೆಯಿದೆಯಾ?

   - ಆತನು ಬೇಗನೆ ಬರುವಂತೆ ನಾನು ಏನಾದರೂ ಮಾಡಬಲ್ಲೆನಾ?

   - ಆತನು ಯಾವತ್ತು ಬರಲು ನಿರ್ಧರಿಸಿದರೂ ಆತನ ಬರೋಣಕ್ಕಾಗಿ ನನ್ನನ್ನು ನಾನು ಹೇಗೆ ಸಿದ್ಧಪಡಿಸಿಕೊಳ್ಳಬಹುದು.

b. ಈಗ ಹೆಚ್ಚುಕಡಿಮೆ 2000 ವರ್ಷಗಳ ನಂತರ ನನಗೆ ನಾನೇ ಅದೇ ಪ್ರಶ್ನೆಗಳನ್ನು ಕೇಳಿಕೊಳ್ಳುವೆನು.

6. ಕುಚೋದ್ಯಗಾರರು ಬೇಕೆಂದೇ ಒಂದು ಸಂಗತಿಯನ್ನು ಮರೆತುಬಿಡುತ್ತಾರೆಂದು ಪೇತ್ರನು ಹೇಳುತ್ತಾನೆ (ವ.5). ದೇವರ ವಾಕ್ಯವು ನಂಬಲರ್ಹವಾದದೆಂಬುದನ್ನು ಅವರು ಮರೆತುಬಿಡುತ್ತಾರೆ. ತನ್ನ ವಾಕ್ಯ/ಮಾತಿನಿಂದ ದೇವರು ಜಗತ್ತನ್ನು ಸೃಷ್ಟಿಸಿದನು. ದೇವರ ಮಾತು ನೋಹನ ಕಾಲದಲ್ಲಿ ಜಲಪ್ರಳಯವನ್ನು ತಂದಿತು. ಹಾಗಾಗಿ ದೇವರ ವಾಕ್ಯದ ಮೇಲಿನ ಭರವಸೆಯು ಯೋಗ್ಯವಾದದ್ದೆಂದು ಇತಿಹಾಸವು ತೋರಿಸುತ್ತದೆ. ಆತನ ನ್ಯಾಯತೀರ್ಪಿನ ದಿನವು ಬರುತ್ತದೆಂದು ದೇವರು ಭವಿಷ್ಯದ ಬಗ್ಗೆ ಮಾತನ್ನು ಕೊಟ್ಟಿದ್ದಾನೆ. ಹಾಗಾಗಿ ನಾವೂ ಸಹ ಅದು ಬರುವುದೆಂದು ಖಚಿತಪಡಿಸಿಕೊಂಡಿದ್ದೇವೆ.

7. ವಚನ 7 ರಿಂದ 'ನ್ಯಾಯತೀರ್ಪಿನ ದಿನದ' ಬಗ್ಗೆ 4 ಸಂಗತಿಗಳನ್ನು ನಾವು ಕಲಿಯುತ್ತೇವೆ:

   a. ಪ್ರಸ್ತುತ ಜಗತ್ತು ನಾಶವಾಗುವುದು.

   b. ನಾಶನದ ಸಾಧನವು ಬೆಂಕಿಯಾಗಿರುವುದು.

c. ಇದು ದೇವರ ನ್ಯಾಯತೀರ್ಪಿನ ದಿನವಾಗಿರುವುದು.


d. ಈ ನ್ಯಾಯತೀರ್ಪು ದುಷ್ಟರನ್ನು ನಾಶನಕ್ಕೆ ನಡೆಸುವುದು.



## ಅವಲೋಕನ

ಆದಿಸಭೆಯಲ್ಲಿ ಯೇಸು ಕ್ರಿಸ್ತನ ಬರೋಣಕ್ಕಾಗಿ ಕಾಯುತ್ತಿರುವಾಗ ವಿಶ್ವಾಸಿಗಳು ಮೂರ್ಖರೆಂದು ಕುಚೋದ್ಯಗಾರರು ಯೋಚಿಸುತ್ತಿದ್ದರೂ ಯೇಸು ಕ್ರಿಸ್ತನು ಪರಲೋಕಕ್ಕೆ ಏರಿ ಹೋದಂದಿನಿಂದ ಇಡೀ ತಲಾತಲಾಂತರವೇ ಮುಗಿದು ಹೋಗಿದೆ. ಆದರೂ ಸಹ ಅವರು ಆತನ ಬರುವಿಕೆಗಾಗಿ ಕಾಯುತ್ತಿದ್ದಾರೆ. ಖಂಡಿತವಾಗಿ ಅವರು ಪೂರ್ಣ ಸಂಗತಿಯನ್ನು ತಪ್ಪಾಗಿ ಅರ್ಥೈಸಿಕೊಂಡಿದ್ದಾರೆ. ಪ್ರಾಯಶಃ ದೇವರು ತನ್ನ ಯೋಜನೆಯನ್ನು ಬದಲಿಸಿದನಾ? ಅಥವಾ ಬಹುಶಃ ಯೇಸು ಕ್ರಿಸ್ತನು ಈಗಾಗಲೇ ಒಂದು ರೀತಿಯ ಆತ್ಮಿಕ ವಿಧದಲ್ಲಿ ಅಥವಾ ಸಾಂಕೇತಿಕ ರೂಪದಲ್ಲಿ ಬಂದಿರಬಹುದಾ ಹಾಗೆಯೇ ಕುಚೋದ್ಯಗಾರರು ಕುಚೋದ್ಯಮಾಡಿದರು ಮತ್ತು ವಿಶ್ವಾಸಿಗಳು ಗಲಿಬಿಲಿಗೊಂಡರು.

ಪೇತ್ರನು ತನ್ನ ಎರಡನೇ ಪತ್ರಿಕೆಯನ್ನು ಬರೆದು ಹೆಚ್ಚುಕಡಿಮೆ 2000 ವರ್ಷಗಳು ಕಳೆದವು ಮತ್ತು ಆದಾಗ್ಯೂ ಯೇಸು ಕ್ರಿಸ್ತನು *ಆಕಾಶದ ಮೇಘಗಳ* ಮೇಲಿನಿಂದ ಬಂದಿಲ್ಲ (ಮತ್ತಾಯ 26:64). ಕುಚೋದ್ಯಗಾರರು ಸಹ ಶಾಂತವಾಗಿರುವಂತೆ ಕಾಣುತ್ತದೆ. ಬಹುಶಃ ಅವರಿಗೆ– ಇನ್ನು ಹೆಚ್ಚು ಕಾಲದ ಅಗತ್ಯವಿಲ್ಲವೆನಿಸುತ್ತದೆ. ಸಭೆಯು ಯಾವಾಗಲಾದರೂ ಒಮ್ಮೆ ಯೇಸುವಿನ ಎರಡನೇ ಬರೋಣದ ಬಗ್ಗೆ ಪ್ರಸಂಗಿಸುವುದು, ಆದರೆ ಯಾರೊಬ್ಬರು ಸಹ ಇದರ ಬಗ್ಗೆ ಕಾಳಜಿವಹಿಸುವಂತೆ ಕಾಣುವುದಿಲ್ಲ. ವಿಶ್ವಾಸಿಗಳು ನಮ್ಮ ಮಧ್ಯದಲ್ಲಿನ ಭಕ್ತಿವಂತರು ಸಹ ಆ ದಿನವು ಯಾವತ್ತು ಬರುವುದಿಲ್ಲವೋ ಎಂಬಂತೆ ರೂಢಿಯಂತೆ ವ್ಯವಹಾರವನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಪ್ರಾಯಶಃ ಇದು ಒಂದು ಎಚ್ಚರಿಕೆ ಕಡೆಗೆ ಸಮಯವಾಗಿರಬಹುದು.



# ಉತ್ತರಗಳು 19: ಇದು ಕಳ್ಳನಂತೆ ಬರುವುದು, 3:8–10

**ಶಿಕ್ಷಕರ ಗಮನಕ್ಕೆ**

ಸಮಯ ಸಂಕ್ಷಿಪ್ತವಾಗಿದ್ದರೆ ಪ್ರಶ್ನೆ 5 ನ್ನು ಬಿಡಬಹುದು. ಯಾಕೆಂದರೆ ಇದು ಯಾವುದೇ ಮುಖ್ಯ ದೈವಶಾಸ್ತ್ರದ ಸಂಗತಿಯನ್ನು ಒಳಗೊಂಡಿರುವುದಿಲ್ಲ. ಆದರೆ ಪ್ರಶ್ನೆಯು ಓದುವುದಕ್ಕಾಗಿ ಮತ್ತು ವ್ಯಾಖ್ಯಾನದ ಅಭ್ಯಾಸಕ್ಕಾಗಿ ಉಪಯೋಗಿಸಬಹುದು. ಪದವು ಏನನ್ನು ಸೂಚಿಸುತ್ತದೆಯೋ ಇದು ಯಾವ ಹಿನ್ನಲೆಯಲ್ಲಿ ಬಳಸಲ್ಪಟ್ಟಿದೆಯೆಂಬುದರಿಂದ ನಿರ್ಣಯಿಸಲ್ಪಡುತ್ತದೆ. ಇಂಗ್ಲೀಷನಲ್ಲಿ ಓದಬಲ್ಲ ಮತ್ತು ಎನ್ಐವಿ ಭಾಷಾಂತರವನ್ನು ಮಾಹಿತಿಗಾಗಿ ಉಪಯೋಗಿಸುವ ವಿದ್ಯಾರ್ಥಿಗಳು ಕನ್ನಡದ ಭಾಷಾಂತರವು ಸುಟ್ಟು ಹೋಗುವವು ಎಂದು 10 ನೇ ವಚನದ ಕಡೆಯ ಭಾಗದಲ್ಲಿ ಇರುವಾಗ ಯಾಕೆ ಬಹಿರಂಗಗೊಂಡಿದೆ (ಪ್ರಕಟಿಸಲ್ಪಡುವವು ಅಥವಾ ಬಹಿರಂಗಗೊಳ್ಳುವವು ಎಂದು ಅರ್ಥೈಸಲ್ಪಡುವುದು) ಎಂದು ವಿಸ್ಮಯಗೊಳ್ಳಬಹುದು.

ವ್ಯತ್ಯಾಸಗಳು ಗ್ರೀಕ್ ಹಸ್ತಪ್ರತಿಯೆಡೆಗೆ ಹೋಗುತ್ತದೆ ಅಲ್ಲಿ ಕೆಲಕಡೆ ಪ್ರಕಟಿಸಲ್ಪಡುವವು ಎಂದಿದ್ದಾರೆ. ಇನ್ನೂ ಕೆಲವೆಡೆ ಸುಟ್ಟು ಹೋಗುವವು ಎಂದಿದೆ.

## ಉತ್ತರಗಳು

1. ಸಮಯದ ಕುರಿತಾದ ದೇವರ ದೃಷ್ಟಿಕೋನವನ್ನು ನಮ್ಮ ದೃಷ್ಟಿಕೋನಕ್ಕಿಂತಲೂ ವಿಭಿನ್ನವಾಗಿದೆಯೆಂಬುದನ್ನು ಮರೆಯಲಾರದೆಂದು ಪೇತ್ರನು ತನ್ನ ಓದುಗರಿಗೆ ಹೇಳುತ್ತಾನೆ. ಆತನು ಇದನ್ನು ದೇವರ ಮನುಷ್ಯನಾದ ಮೋಶೆಯ ಪ್ರಾರ್ಥನೆಯ ಕೀರ್ತನೆಯಾದ 90 ರಿಂದ ಒಂದು ಸಾಲನ್ನು "ಕರ್ತನ ಎಣಿಕೆಯಲ್ಲಿ ಒಂದು ದಿನವು ಸಾವಿರ ವರ್ಷದಂತೆಯೂ, ಸಾವಿರ ವರ್ಷಗಳು ಒಂದು ದಿನದಂತೆಯೂ ಅವೆ" ಎಂದು ಬಳಸುತ್ತಾನೆ. ಈ ಕೀರ್ತನೆಯು ನಿತ್ಯನಿರಂತರ ದೇವರು ಮತ್ತು ಮನುಷ್ಯನ ಜೀವನದ ಅಲ್ಪತೆಯ ಮೇಲಿನ ಧ್ಯಾನವಾಗಿದ್ದು ತನ್ನ ಸೇವಕರ ಮೇಲೆ ಕರುಣೆ ಮತ್ತು ಕೃಪೆಯನ್ನು ತೋರಬೇಕೆಂದು ಮೋಶೆಯು ಬೇಡುವುದರೊಂದಿಗೆ ಅಂತ್ಯವಾಗುತ್ತದೆ.

2. ಯೇಸು ಕ್ರಿಸ್ತನ ಬರೋಣದ ನಿಧಾನತೆಗೆ ಪೇತ್ರನು ಎರಡು ಪ್ರಮುಖ ಕಾರಣಗಳನ್ನು ಕೊಡುತ್ತಾನೆ:

    a. ದೇವರ ಸಮಯದ ದೃಷ್ಟಿಕೋನವು ನಮಗಿಂತಲೂ ವಿಭಿನ್ನವಾಗಿದೆ (ವ.8). ಜೀವನವು ಸಾಮಾನ್ಯವೆಂಬಂತೆ ಹೋಗುತ್ತದೆಂದು ಕುಚೋದ್ಯಗಾರರು ಹೇಳುವರು. ವರ್ಷ ವರ್ಷಗಳು ಕಳೆದರೂ ದೇವರು ಮತ್ತು ಆತನ ದೃಷ್ಟಿಕೋನದ ಬಗೆಗಿನ ಹೇಳಿಕೆಯೊಂದಿಗೆ ಪೇತ್ರನು ಇದನ್ನು ತಿಳಿಸುತ್ತಾನೆ. ನಮಗೆ ದೀರ್ಘವೆನಿಸುವ ಸಮಯ ದೇವರಿಗೆ ಕೇವಲ ಒಂದು ದಿನದಂತಿದೆ.

    b. ದೇವರು ತಾಳ್ಮೆಯಿಂದಿದ್ದಾನೆ ಮತ್ತು ಅನೇಕ ಜನರು ತನ್ನ ರಕ್ಷಣೆಯನ್ನು ಸ್ವೀಕರಿಸಬೇಕೆಂದು ಅಪೇಕ್ಷಿಸುತ್ತಾನೆ (ವ.9, ವ.15 ಸಹ ನೋಡಿರಿ). ಖಂಡಿತವಾಗಿ ಕುಚೋದ್ಯಗಾರರು (ಸುಳ್ಳು ಬೋಧಕರಾದವರೂ ಸಹ) ದೇವರು ಮತ್ತು ಆತನ ತಾಳ್ಮೆ, ಪ್ರೀತಿ ಮತ್ತು ಕೃಪೆಯ ಬಗ್ಗೆ ಸರಿಯಾದ ತಿಳುವಳಿಕೆ ಹೊಂದಿಲ್ಲ.

3. ಎರಡು ಅಂಶಗಳಲ್ಲಿ ಕುಚೋದ್ಯಗಾರರು ತಪ್ಪಿದ್ದಾರೆ (ವ.3–9):

   a. ದೇವರ ಕಡೆಯಿಂದ ಯಾವುದೇ ಹಸ್ತಕ್ಷೇಪವಿಲ್ಲದೆ ಜಗತ್ತು ಸೃಷ್ಟಿಯಾದಂದಿನಿಂದ ತಲತಲಾಂತರಗಳಿಂದ ಹಾಗೆಯೇ ಜೀವನ ಸಾಗುತ್ತಾ ಇದೆ ಎಂದು ಅವರು ಹೇಳುವರು. ಆದರೆ ಇದು ತಪ್ಪೆಂದು ಪೇತ್ರನು ಹೇಳುತ್ತಾನೆ. ಅವರು ದೇವರ ವಾಕ್ಯದ ಶಕ್ತಿ ಮತ್ತು ಸ್ಥಿರತೆಯನ್ನು ಸಂಪೂರ್ಣವಾಗಿ ಮರೆತಿದ್ದಾರೆ. ತನ್ನ ಮಾತಿನಿಂದ/ವಕ್ಯದಿಂದ ದೇವರು ಎಲ್ಲವನ್ನು ಸೃಷ್ಟಿಸಿದನು. ತನ್ನ ವಾಕ್ಯದಿಂದ ದೇವರು ನೋಹನ ದಿನಗಳಲ್ಲಿ ಪ್ರಳಯವನ್ನು ಕಳುಹಿಸುವುದರ ಮೂಲಕ ಮನುಷ್ಯರ ಕೆಟ್ಟತನಕ್ಕೆ ತೀರ್ಪುಮಾಡಿದನು. ದೇವರು ಮನುಷ್ಯನ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡುತ್ತಾನೆ.

   b. ಯೇಸು ಕ್ರಿಸ್ತನ ಬರೋಣವು ನಿಧಾನವಾಗಿರುವ ಬಗ್ಗೆ ಸಹ ಅವರು ತಪ್ಪಿದ್ದಾರೆ. ನಿಧಾನತೆಯು ದೇವರು ಕಾಳಜಿವಹಿಸದೇ ಇರುವ ನಿಮಿತ್ತವಲ್ಲ, ಅಥವಾ ಆತನು ತನ್ನ ಮನಸ್ಸನ್ನು ಬದಲಾಯಿಸಿದ್ದಾನೆಂದಲ್ಲ, ನಿಧಾನತೆಯು ದೇವರು ತಾಳ್ಮೆಯುಳ್ಳವನೂ, ದೀರ್ಘಶಾಂತನೂ ಆಗಿದ್ದು ಯೇಸು ಕ್ರಿಸ್ತನ ಮೂಲಕ ಎಲ್ಲರೂ ರಕ್ಷಣೆಯನ್ನು ಹೊಂದಬೇಕೆಂದು ಬಯಸುತ್ತಿರುವ ಕಾರಣವಾಗಿದೆ.

4. ವಾಕ್ಯಭಾಗದಲ್ಲಿನ ಎರಡು ಉಪಮಾಲಂಕಾರಗಳು ಇಂತಿವೆ:

   a. *ಕರ್ತನ ಎಣಿಕೆಯಲ್ಲಿ ಒಂದು ದಿನವು ಸಾವಿರ ವರ್ಷದಂತೆಯೂ ಸಾವಿರ ವರ್ಷಗಳು ಒಂದು ದಿನದಂತೆಯೂ ಅವೆ* (ವ.8): ಸಮಾಜವು ದೇವರಿಗೆ ಪ್ರಾಮುಖ್ಯ ಸಂಗತಿಯಲ್ಲವೆಂಬುದು ಈ ಉಪಮಾಲಂಕಾರದ ಅರ್ಥವಾಗಿದೆ. ಆತನಿಗೆ ಅಲ್ಪ ಸಮಯ (ಒಂದು ದಿನ) ದೀರ್ಘ ಸಮಯಕ್ಕಿಂತ (ಒಂದು ಸಾವಿರ ವರ್ಷಗಳು) ವಿಭಿನ್ನವಾಗಿಲ್ಲ. ಅಲ್ಲದೇ ಸಮಯಕ್ಕಾಗಿನ ಅಳತೆಗಳು (ಒಂದು ದಿನ ಮತ್ತು ಒಂದು ಸಾವಿರ ವರ್ಷಗಳು) 'ಅಲ್ಪ ಸಮಯ' ಮತ್ತು 'ದೀರ್ಘ ಸಮಯ'ಕ್ಕಾಗಿ ಅಲಂಕಾರಿಕವಾಗಿ ಉಪಯೋಗಿಸಲಾಗಿದೆ.

   b. *ಕರ್ತನು ಕಳ್ಳನು ಬರುವಂತೆ ಬರುವನು* (ವ.10): ಈ ಉಪಮಾಲಂಕಾರದ ಅರ್ಥವು ಯೇಸು ಕ್ರಿಸ್ತನ ಎರಡನೇ ಬರೋಣವು ಪಕ್ಕನೆ ಮತ್ತು ಅನಿರೀಕ್ಷಿತವಾಗಿರುವುದು. ಯೇಸು ಕ್ರಿಸ್ತನು ಕಳ್ಳನು ಎಂಬುದು ಇದರರ್ಥವಲ್ಲ. ಆದರೆ ಆತನ ಆಗಮನವು ಕಳ್ಳನ ಮಧ್ಯರಾತ್ರಿಯ ಭೇಟಿಗೆ ಸಮಾನವಾಗಿರುವುದು ಎಂಬುದಾಗಿದೆ. ಮನೆಯಲ್ಲಿ ಎಲ್ಲರೂ ಮಲಗಿರುವಾಗ ಮತ್ತು ಯಾರೂ ಆತನನ್ನು ನಿರೀಕ್ಷಿಸದೇ ಇರುವಾಗ ಆತನು ಬರುತ್ತಾನೆ.

5. ವಚನ 10 ರಲ್ಲಿ ಪೇತ್ರನು ಉಪಯೋಗಿಸುವ ಗ್ರೀಕ್ ಪದವು ವಿಭಿನ್ನ ರೀತಿಯಲ್ಲಿ ಅರ್ಥೈಸಲಾಗಿದೆ. (ಇಂಗ್ಲೀಷನ ಎನ್ಐವಿ 'ಮೂಲವಸ್ತುಗಳು' ಎಂದಿದೆ, ಕನ್ನಡ ಭಾಷಾಂತರದಲ್ಲಿ ಹೋಲಿಸಿ ನೋಡಿರಿ. ಎನ್ಐಬಿವಿ 'ಮೂಲವಸ್ತು', ಜೆವಿ ಯಲ್ಲಿ 'ಸೂರ್ಯ, ಚಂದ್ರ, ನಕ್ಷತ್ರಗಳು' ಎಂದಿದೆ).

   ಪೇತ್ರನು ಈ ವಚನವನ್ನು ಕರ್ತನ ದಿನ ಮತ್ತು ಭೂಮಂಡಲದ ಸಂಪೂರ್ಣ ನಾಶನದ ಹಿನ್ನಲೆಯಲ್ಲಿ ಉಪಯೋಗಿಸುತ್ತಾನೆ. ವಾಕ್ಯವು ಎರಡು ಭಾಗಗಳನ್ನು ಒಳಗೊಂಡಿದೆ: ಮೊದಲನೆಯದಾಗಿ ಮೂಲವಸ್ತುಗಳೊಂದಿಗಿನ ಆಕಾಶ ಹಾಗೆಯೇ ಭೂಮಿ ಮತ್ತು

ಅದರಲ್ಲಿರುವುದೆಲ್ಲವು. ಹಾಗಾಗಿ ತಾರ್ಕಿಕವಾಗಿ ಮೂಲವಸ್ತುಗಳು ಆಕಾಶಗಳೊಂದಿಗೆ ಮತ್ತು ಅವುಗಳ ಕಾರ್ಯಗಳೊಂದಿಗೆ ಭೂಮಿಯೊಂದಿಗೆ ಹೊಂದಿಕೊಂಡಿರುತ್ತವೆ.

ನನ್ನ ಮುಕ್ತಾಯವೇನೆಂದರೆ– ಪೇತ್ರನು ಇಲ್ಲಿ 'ಆಕಾಶಕಾಯಗಳಿಗೆ' ಆಧಾರವಾಗಿ– ಸೂರ್ಯ, ಚಂದ್ರ, ಮತ್ತು ನಕ್ಷತ್ರಗಳೊಂದಿಗೆ 'ಕಾಯಗಳು/ಮೂಲವಸ್ತುಗಳು' ಎಂಬ ಪದವನ್ನು ಉಪಯೋಗಿಸುತ್ತಾನೆ. ಕರ್ತನ ದಿನವು ದೇವರ ಸೃಷ್ಟಿಸಲ್ಪಟ್ಟ ಜಗತ್ತು ಮತ್ತು ಅದರ ಎಲ್ಲಾಕಾರ್ಯಚಟುವಟಿಕೆಗಳ ಅಂತ್ಯವನ್ನು ತರುತ್ತದೆ.

6. ವಚನ 10 ರಿಂದ ಕರ್ತನ ದಿನದ ಬಗ್ಗೆ 3 ಸಂಗತಿಗಳನ್ನು ನಾವು ಕಲಿಯುತ್ತೇವೆ:

   a. ಕರ್ತನ ದಿನವು ಪಕ್ಕನೆ ಮತ್ತು ಅನಿರೀಕ್ಷಿತವಾಗಿ ಬರುತ್ತದೆ. ಕಳ್ಳನಂತೆ ಎಂಬ ರೂಪಾಲಂಕಾರದಿಂದ ಇದನ್ನು ಸ್ಪಷ್ಟವಾಗಿ ತಿಳಿಸಲಾಗಿದೆ. ಈ ಹೇಳಿಕೆಯು ಬಹುಶಃ ಮನುಷ್ಯಕುಮಾರನ ಆಗಮನದ ಬಗ್ಗೆ ಸ್ವತಃ ಯೇಸು ಕ್ರಿಸ್ತನ ಮಾತುಗಳೆಡೆಗೆ ಹೋಗುತ್ತದೆ:*ಹೀಗಿರಲಾಗಿ ನಿಮ್ಮ ಕರ್ತನು ಬರುವ ದಿನವು ನಿಮಗೆ ಗೊತ್ತಿಲ್ಲವಾದದ್ದರಿಂದ ಎಚ್ಚರವಾಗಿರ್ರಿ. ಕಳ್ಳನು ಬರುವ ಜಾವ ಮನೆಯ ಯಜಮಾನನಿಗೆ ತಿಳಿದಿದ್ದರೆ ಕನ್ನಹಾಕಗೊಡಿಸುತ್ತಿರಲಿಲ್ಲವೆಂದು ತಿಳಿದುಕೊಳ್ಳಿರಿ. ಆದಕಾರಣ ನೀವು ಸಹ ಸಿದ್ಧವಾಗಿರ್ರಿ. ನೀವು ನೆನಸದ ಗಳಿಗೆಯಲ್ಲಿ ಮನುಷ್ಯಕುಮಾರನು ಬರುತ್ತಾನೆ* (ಮತ್ತಾಯ 24:42–44). ನಂತರ ಪೌಲನು ಇದೇ ವಚನವನ್ನು ಥೆಸಲೋನಿಕದವರಿಗೆ ಬರೆದ ಮೊದಲ ಪತ್ರಿಕೆಯಲ್ಲಿ ಬಳಸುತ್ತಾನೆ: *ಸಹೋದರರೇ ಈ ಸಂಗತಿಗಳು ನಡೆಯಬೇಕಾದ ಕಾಲಗಳನ್ನು ಗಳಿಗೆಗಳನ್ನು ಕುರಿತು ನಿಮಗೆ ಬರೆಯುವುದು ಅವಶ್ಯವಿಲ್ಲ, ರಾತ್ರಿಯಲ್ಲಿ ಕಳ್ಳನು ಹೇಗೆ ಬರುತ್ತಾನೋ ಹಾಗೆಯೇ ಕರ್ತನ ದಿನವು ಬರುವುದೆಂದು ನೀವೇ ಚೆನ್ನಾಗಿ ತಿಳಿದಿದ್ದೀರಲ್ಲ. ಸಮಾಧಾನವಾಗಿಯೂ ನಿರ್ಭಯವಾಗಿಯೂ ಇರುತ್ತೇವೆಂದು ಜನರು ಹೇಳುತ್ತಿರುವಾಗಲೇ ಅವರ ಮೇಲೆ ನಾಶನವು ಗರ್ಭಿಣಿಗೆ ಪ್ರಸವವೇದನೆ ಬರುವ ಪ್ರಕಾರ ಬರುವುದು. ಅವರು ಹೇಗೂ ತಪ್ಪಿಸಿಕೊಳ್ಳಲಾರರು. ಆದರೆ ಸಹೋದರರೇ ಆ ದಿನವು ಕಳ್ಳನಂತೆ ನಿಮ್ಮ ಮೇಲೆ ಬರತಕ್ಕದ್ದಲ್ಲ. ನೀವು ಕತ್ತಲೆಯಲ್ಲಿರುವವರಲ್ಲ* (1 ಥೆಸ 5:1–4). ಇದನ್ನು ಯೇಸು ಕ್ರಿಸ್ತನು ಸಹ ಪ್ರಕಟನೆ ಪುಸ್ತಕದಲ್ಲಿ ಎರಡು ಬಾರಿ ಉಪಯೋಗಿಸುತ್ತಾನೆ.ಮೊದಲನೆಯದಾಗಿ ಸಾರ್ದಿಸಿನಲ್ಲಿರುವ ಸಭೆಗೆ ಬರೆಯುವ ಪತ್ರದಲ್ಲಿ (ಪ್ರಕ 3:3), ಆನಂತರ ದೇವರ ಕೋಪದ ಏಳನೆಯ ಪಾತ್ರೆಯೊಂದಿಗಿನ ಸಂಬಂಧದಲ್ಲಿ (ಪ್ರಕ 16:15) ಕಾಣಬಹುದು.

   b. ಕರ್ತನ ದಿನವು ಇಡೀ ಭೂಮಂಡಲದ ಮೇಲೆ ಆಕಾಶ ಮತ್ತು ಅದರಲ್ಲಿರುವುದೆಲ್ಲವುಗಳ ಭೂಮಿ ಮತ್ತು ಅದರ ಕಾರ್ಯಗಳ ಮೇಲೆಯೂ ನಾಶನವನ್ನು ತರುವುದು.

   c. ಈ ನಾಶನದ ಉಪಕರಣವು ಉರಿಯುವ ಅಗ್ನಿಯಾಗಿದೆ. 'ಘೋಷ' ಮತ್ತು 'ಅಗ್ನಿ/ಬೆಂಕಿ' ಎಂಬ ಪದಗಳನ್ನು ಅಲಂಕಾರಿಕವಾಗಿ ವ್ಯಾಖ್ಯಾನಿಸಲಾಗಿದೆ ಎಂದು ಕೆಲವು ಸತ್ಯವೇದ ಪಂಡಿತರು ಹೇಳುವರು. ಆದರೆ ನಾನು ಇದನ್ನು ನೋಡುವಂತೆ ಯೇಸು ಕ್ರಿಸ್ತನು ಬರುವಾಗ ಮತ್ತು ಕರ್ತನ ದಿನದಲ್ಲಿ ಏನಾಗುತ್ತದೆಂಬುದಕ್ಕೆ ಇದೊಂದು ಅಕ್ಷರಶಃ ವಿವರಣೆಯಾಗಬಲ್ಲದು.



## ಅವಲೋಕನ

ಈ ಚಿಕ್ಕದಾದ ಸತ್ಯವೇದ ಪಠ್ಯವು ನಮಗೆ ಮೂರು ಪ್ರಾಮುಖ್ಯವಾದ ಸಂಗತಿಗಳನ್ನು ಜ್ಞಾಪಿಸುತ್ತದೆ:

- ದೇವರು ಒಬ್ಬಪ್ರೀತಿಸುವ ದೇವರಾಗಿದ್ದಾನೆ: ಯಾವ ಮನುಷ್ಯ ಜೀವಿಯು ಸಹ ನಾಶವಾಗುವುದನ್ನು ನೋಡಲು ಆತನು ಬಯಸುವುದಿಲ್ಲ. ಹಾಗಾಗಿ ಸುವಾರ್ತೆಯು ಇನ್ನೂ ಅನೇಕ ಜನರಿಗೆ ತಲುಪಲ್ಪಟ್ಟು ಆ ಮೂಲಕ ಎಲ್ಲಾ ಜನರು *ಪಶ್ಚಾತ್ತಾಪ ಪಡುವುದಕ್ಕಾಗಿ* ಆತನು ತಾಳ್ಮೆಯಿಂದ ಕಾಯುತ್ತಿದ್ದಾನೆ.

- ಖಂಡಿತವಾಗಿಯೂ ಯೇಸು ಬರುವನು ಮತ್ತು ದೇವರ ನ್ಯಾಯತೀರ್ಪಿನ ದಿನವನ್ನು ಬರಮಾಡುವನು. ಇದು ಇಡೀ ಭೂಮಂಡಲಕ್ಕೆ ಮತ್ತು ಇದರಲ್ಲಿರುವ ಎಲ್ಲ ಕೆಟ್ಟತನಕ್ಕೆ ನಾಶನದ ದಿನವಾಗಿರುವುದು. ಆದರೆ ಆತನಿಗೆ ಸೇರಿದವರಾದ ನಮಗೆ ಇದು ರಕ್ಷಣೆಯ ದಿನವಾಗಿರುವುದು.

- ಜನರು ಆತನನ್ನು ನಿರೀಕ್ಷಿಸದೆ ಇರುವಾಗ ಯೇಸು ಬರುವನು. ಆತನ ಬರೋಣವು ಕೇವಲ ಅನಿರೀಕ್ಷಿತವಾಗಿರುವುದಿಲ್ಲ, ಬದಲಾಗಿ ಪಕ್ಕನೆ ಬರುವುದು.



# ಉತ್ತರಗಳು 20: ಕರ್ತನ ದಿನವನ್ನು ಮುನ್ನೋಡಿರಿ, 3:11–18

## ಶಿಕ್ಷಕರ ಗಮನಕ್ಕೆ

ಆತ್ಮಿಕ ಕೂಟದ 8 ನೇ ವಿಭಾಗವು (***ಆತ್ಮಿಕ ಕೂಟ*** ಎಂಬ ವಿಭಾಗವನ್ನು ನೋಡಿರಿ) ಕ್ರಿಸ್ತನ ಎರಡನೇ ಬರೋಣದ ನೆರಳಿನಲ್ಲಿ ದಕ್ಷಿಣ ಭಾರತದ ಸಭೆಯು ಹೇಗೆ ಜೀವಿಸಬೇಕೆಂದು ವಿದ್ಯಾರ್ಥಿಗಳ ತಿಳುವಳಿಕೆಯನ್ನು ಆಳವಾಗಿಸುತ್ತದೆ.

## ಉತ್ತರಗಳು

1. ಕಡೇ ದಿನದಲ್ಲಿ ಕುಚೋದ್ಯಗಾರರು ಮಾಡುವ 4 ತಪ್ಪುಗಳು ಇವಾಗಿವೆ (ವ.4–11):

   a. ಯೇಸು ಕ್ರಿಸ್ತನು ತಿರುಗಿ ಬರುತ್ತಾನೆಂಬ ವಾಗ್ದಾನದ ಬಗ್ಗೆ ಅವರು ಸಂಶಯಪಡುವರು (ವ.4).

   b. ದೇವರು ಯಾರಾಗಿದ್ದಾನೆ ಮತ್ತು ಆತನು ಯಾವಾಗಲೂ ತನ್ನ ಮಾತನ್ನು ತಪ್ಪುವುದಿಲ್ಲವೆಂಬುದನ್ನು ಅವರು ಮರೆತುಬಿಡುವರು (ವ.7).

   c. ದೇವರ ಸಮಯದ ದೃಷ್ಟಿಕೋನವು ನಮಗಿಂತ ವಿಭಿನ್ನವಾಗಿದೆ ಎಂಬುದನ್ನು ಅವರು ಮರೆತುಬಿಡುವರು (ವ.10).

   d. ಯೇಸು ಕ್ರಿಸ್ತನು ಬರುವುದಕ್ಕಾಗಿ ನಾವು ಕಾಯುತ್ತಿರುವಾಗ ದೇವರಿಗೆ ಮೆಚ್ಚಿಕೆಯಾದ ಜೀವಿತವನ್ನು ಹೇಗೆ ಜೀವಿಸಬೇಕೆಂಬುದನ್ನು ಅವರು ಮರೆತುಬಿಡುತ್ತಾರೆ (ವ.11).

2. 3 ನೇ ಅಧ್ಯಾಯದುದ್ದಕ್ಕೂ ಕರ್ತನ ದಿನವನ್ನು ವರ್ಣಿಸುವ ಅತೀ ಪ್ರಾಮುಖ್ಯ ಪದಗಳು ಮತ್ತು ಹೇಳಿಕೆಗಳು ಇಂತಿವೆ:

   a. ಆ ರೀತಿಯ ದಿನವು ಇರುವುದೇ ಇಲ್ಲವೆಂದು ಕುಚೋದ್ಯಗಾರರು ಹೇಳುವರು (ವ.3–4). ಯೇಸು ಕ್ರಿಸ್ತನ ಬರೋಣದ ನಿರೀಕ್ಷೆಯಲ್ಲಿ ಜೀವಿಸುವ ವಿಶ್ವಾಸಿಗಳನ್ನು ಸಹ ಅವರು ಹೀಯಾಳಿಸುವರು.

   b. ಬೆಂಕಿ/ಅಗ್ನಿ (ವ.7, 10, 12). 7 ನೇ ವಚನದಲ್ಲಿ ಪೇತ್ರನು ಪ್ರಸ್ತುತ ಭೂಮ್ಯಾಕಾಶಗಳು ಬೆಂಕಿಯಿಂದ ನಾಶವಾಗುವುದಕ್ಕಾಗಿ ಇಡಲ್ಪಟ್ಟಿವೆ ಎಂದು ದೇವರು ನುಡಿದಿದ್ದಾನೆಂದು ಹೇಳುತ್ತಾನೆ. ಬೆಂಕಿಯು ದೇವರ ನ್ಯಾಯತೀರ್ಪು ಮತ್ತು ದಂಡನೆಯನ್ನು ವರ್ಣಿಸುವ ಹಳೆ ಒಡಂಬಡಿಕೆಯ ಒಂದು ಸಾಮಾನ್ಯ ವಿಧವಾಗಿದೆ. (ಉದಾಹರಣೆಗೆ: ಯೆಶಾಯ 26:11– "ಆ ನಿನ್ನ ವಿರೋಧಿಗಳನ್ನು ಅಗ್ನಿಯು ದಹಿಸಿಬಿಡುವುದು", ಯೆಶಾಯ 4:4, 66:15–16, ಚೆಫನ್ಯ 1:18, 3:8, ಮಲಾಕಿ 4:1 ನ್ನು ನೋಡಿರಿ). ಪೌಲನು ಯೇಸು ಕ್ರಿಸ್ತನ ಎರಡನೇ ಬರೋಣದ ಸಂಬಂಧದೊಂದಿಗೆ ಬೆಂಕಿಯನ್ನು ಪ್ರಸ್ತಾಪಿಸುತ್ತಾನೆ. ಯೇಸು ಕ್ರಿಸ್ತನು ತನ್ನ ಶಕ್ತಿಯನ್ನು ತೋರ್ಪಡಿಸುವ ದೇವದೂತರಿಂದ ಕೂಡಿದವನಾಗಿ ಉರಿಯುವ ಬೆಂಕಿಯಲ್ಲಿ ಆಕಾಶದಿಂದ ಪ್ರತ್ಯಕ್ಷನಾಗುವ ಕಾಲದಲ್ಲಿ... (2 ಥೆಸ 1:7). ಪಾಪಿಗಳು ಕೇವಲ ಅತ್ಯಂತ

ಭಯದಿಂದ ಎದುರುನೋಡತಕ್ಕ ನ್ಯಾಯತೀರ್ಪು, ದೇವರ ವಿರೋಧಿಗಳನ್ನು ದಹಿಸುವ ತೀಕ್ಷ್ಣವಾದ ಅಗ್ನಿಯು ಇವನ್ನೂ ಮುನ್ನೋಡಬೇಕಾಗುವುದು (ಇಬ್ರಿಯ 10:27).

c. ನ್ಯಾಯತೀರ್ಪು (ವ.7), ಕರ್ತನ ದಿನವು ದೇವರು ಭಕ್ತಿಹೀನರನ್ನು ಶಿಕ್ಷಿಸುವ ದಿನವಾಗಿರುವುದು.

d. ನಾಶನ (ವ.7, 10, 11, 12, 16), ಪೇತ್ರನು ನಾಶಪಡಿಸುವ ಮತ್ತು ನಾಶನ ಎಂಬ ಪದಗಳನ್ನು ಈ ಅಧ್ಯಯನದಲ್ಲಿ ಹಲವು ಬಾರಿ ಉಪಯೋಗಿಸುತ್ತಾನೆ. ಹಾಗಾಗಿ ಕರ್ತನ ದಿನದ ಈ ಅಂಶದ ಬಗ್ಗೆ ಆತನು ತನ್ನ ಓದುಗರಿಗೆ ಯಾವುದೇ ಸಂಶಯವನ್ನು ಬಿಟ್ಟುಹೋಗುವುದಿಲ್ಲ. ಹಿಂದಿನ ಲೋಕವು ಸಂಪೂರ್ಣವಾಗಿ ನಾಶವಾಗುವುದು. ಬೆಂಕಿಯು ಈ ನಾಶನದ ಸಾಧನವಾಗಿರುವುದು. ಕೇವಲ ವಿಮೋಚಿಸಲ್ಪಟ್ಟ ದೇವರ ಜನರು ಮಾತ್ರ ತಪ್ಪಿಸಿಕೊಳ್ಳುವರು.

e. ದೇವರ ವಾಗ್ದಾನಗಳ ನೆರವೇರಿಕೆ (ವ.4, 9, 13), ಕುಚೋದ್ಯಗಾರರ ಮತ್ತು ನಿಧಾನತೆಯ ಹೊರತಾಗಿಯೂ ಸಹ ದೇವರು ತನ್ನ ವಾಗ್ದಾನವನ್ನು ಕಾಪಾಡಿಕೊಳ್ಳುವನು. ಕರ್ತನ ದಿನದಲ್ಲಿ ಅದು ಕುಚೋದ್ಯಗಾರರಿಗೆ ಮತ್ತು ಸುಳ್ಳು ಬೋಧಕರುಗಳಿಗೆ ಸಹ ಮಹತ್ವ ಪೂರ್ಣವೆನಿಸುವುದು.

f. *ಇದು ಕಳ್ಳನು ಬರುವಂತೆ ಬರುವುದು* (ವ.10), ಇದರರ್ಥ ಯೇಸು ಕ್ರಿಸ್ತನು ತನ್ನ ಶಿಷ್ಯರಿಗೆ ಹೇಳಿದಂತೆ ಪಕ್ಕನೆ ಮತ್ತು ಅನಿರೀಕ್ಷಿತವಾಗಿಯೂ ಬರುವುದು. ನೀವು ಸಹ ಸಿದ್ಧವಾಗಿರ್ರಿ. ನೀವು ನೆನಸದ ಗಳಿಗೆಯಲ್ಲಿ ಮನುಷ್ಯಕುಮಾರನು ಬರುತ್ತಾನೆ ಅಂದನು (ಲೂಕ 12:40).

g. *ಆಕಾಶಮಂಡಲವು ಮಹಾಘೋಷದಿಂದ ಇಲ್ಲದೇ ಹೋಗುವುದು* (ವ.10, 12). ಬೆಂಕಿಯು ಆಕಾಶವನ್ನೂ ಮತ್ತು ಆದರಲ್ಲಿರುವುದೆಲ್ಲವನ್ನು ನಾಶಮಾಡುವುದು.

h. ಸೌರಮಂಡಲದ ಶಕ್ತಿಗಳು – ಅಂದರೆ ಸೂರ್ಯ, ಚಂದ್ರ ಮತ್ತು ನಕ್ಷತ್ರಗಳು – ('ಪಂಚಭೂತಗಳು') ಬೆಂಕಿಯಿಂದ ನಾಶವಾಗುವವು (ವ. 10, 11, 12). ಅವುಗಳು ಉರಿದು ಲಯವಾಗಿ ಹೋಗುವವು.

i. *ಭೂಮಿಯು ಆದರಲ್ಲಿರುವುದೆಲ್ಲವು ಸುಟ್ಟುಹೋಗುವುದು* (ವ.10). ಇತರ ಇಂಗ್ಲೀಷ್ ಭಾಷಾಂತರಗಳನ್ನು ಹೋಲಿಸಿರಿ. ಎನ್ಎಎಸ್‌ಬಿ ಸುಟ್ಟುಹೋಗುವವು , ಎನ್ಆರ್ಎಸ್‌ವಿ ಪ್ರಕಾಶಗೊಳ್ಳುವುದು , ಇಎಸ್‌ವಿ ಬಹಿರಂಗಗೊಳ್ಳುವುದು . ಕನ್ನಡ ಭಾಷಾಂತರದಲ್ಲಿ ಸುಟ್ಟುಹೋಗುವವು ಎಂದಿದೆ . ಎರಡು ಗ್ರೀಕ್ ಪಠ್ಯಗಳು ದೈವಶಾಸ್ತ್ರೀಯ ಜ್ಞಾನವನ್ನು ಕೊಡುವವು. ಕರ್ತನ ದಿನದಲ್ಲಿ ಯಾವುದೂ ಮರೆಯಾಗಿರಲಾರವು. ಪ್ರತಿಯೊಂದು ಸಹ ಪ್ರಕಟಗೊಳ್ಳುವವು. ಆದರೆ ಇದು ಯಾವುದೇ ನಿತ್ಯತ್ವದ ಮೌಲ್ಯವಿರದೆ ಮತ್ತು ಹೊಸ ಭೂಮ್ಯಾಕಾಶಗಳಲ್ಲಿ ಯಾವುದೇ ಪಾಲಿಲ್ಲದಂತೆ ಸುಟ್ಟುಹೋಗುವವು.

j. ನೂತನ ಆಕಾಶ, ನೂತನ ಭೂಮಂಡಲ (ವ.13). ಇವು ಕರ್ತನ ದಿನದಲ್ಲಿ ಹಿಂದಿನ ಭೂಮಂಡಲದ ನಾಶನದ ಪರಿಣಾಮವಾಗಿರುವುದು. ಇದು ದೇವರ ಇನ್ನೊಂದು ಹಳೆ ಒಡಂಬಡಿಕೆಯ ವಾಗ್ದಾನದ ನೆರವೇರಿಕೆಯಾಗಿದೆ:

*ಇಗೋ ನೂತನಾಕಾಶಮಂಡಲವನ್ನು ನೂತನ ಭೂಮಂಡಲವನ್ನು ಸೃಷ್ಟಿಸುವೆನು, ಮೊದಲಿದ್ದದ್ದನ್ನು ಯಾರೂ ಜ್ಞಾಪಿಕೊಳ್ಳರು. ಅದು ನೆನಪಿಗೆ ಬಾರದು* (ಯೆಶಾಯ 65:17).

*ನಾನು ಸೃಷ್ಟಿಸುವ ನೂತನಾಕಾಶಮಂಡಲವೂ ನೂತನ ಭೂಮಂಡಲವೂ ನನ್ನ ಮುಂದೆ ಸ್ಥಿರವಾಗಿ ನಿಲ್ಲುವ ಪ್ರಕಾರ ನಿಮ್ಮ ಸಂತತಿಯೂ ನಿಮ್ಮ ಹೆಸರೂ ಸ್ಥಿರವಾಗಿ ನಿಲ್ಲುವವು* (ಯೆಶಾಯ 66:22).

k. ರಕ್ಷಣೆ (ವ.15). ದೇವರ ತಾಳ್ಮೆಯ ಪರಿಣಾಮವಾಗಿ ಬಹುಮಂದಿ ರಕ್ಷಿಸಲ್ಪಡುವರು. ಆದರೆ ಕರ್ತನ ದಿನವು ಆಗಮಿಸುವಾಗ ದೇವರ ರಕ್ಷಣೆಯನ್ನು ಅನುಭವಿಸಲು ಪಾಪಿಗಳಿಗೆ ಯಾವುದೇ ಹೆಚ್ಚಿನ ಅವಕಾಶವಿರುವುದಿಲ್ಲ.

3. ವಚನ 11 ರಲ್ಲಿನ *ನೀವು ಯಾವ ರೀತಿಯ ಜನರಾಗಿರಬೇಕು?* ಎಂಬ ಪ್ರಶ್ನೆಯನ್ನು ಗಮನಿಸಿರಿ. ಯೇಸು ಕ್ರಿಸ್ತನ ಎರಡನೇ ಬರೋಣದಲ್ಲಿ ಈ ಲೋಕದಲ್ಲಿರುವುದೆಲ್ಲವೂ ನಾಶವಾಗುವುದೆಂದು ಅರಿತುಕೊಂಡು ತನ್ನ ಓದುಗರು ಹೇಗಿರಬೇಕೆಂದು ತಾನು ಬಯಸುತ್ತೇನೆಂದು ಅವರಿಗೆ ಹೇಳುವಾಗ ಈ ವಾಕ್ಯಭಾಗದಲ್ಲಿ (11–18) ಪೇತ್ರನು ತನ್ನ ಸ್ವಂತ ಪ್ರಶ್ನೆಯನ್ನು ಉತ್ತರಿಸುತ್ತಾನೆ.

a. ವಿಶ್ವಾಸಿಗಳು ಪರಿಶುದ್ಧವಾದ ನಡವಳಿಕೆಯುಳ್ಳ ಮತ್ತು ಭಕ್ತಿಯುಳ್ಳವರಾಗಿ ಜೀವಿಸುವ ಜನರಾಗಿರಬೇಕು (ವ.11). ಈ ಪ್ರಸಕ್ತ ಜಗತ್ತಿನ ನಾಶನದ ಜ್ಞಾನ/ಪರಿಜ್ಞಾನವು ಜೀವನದ ಅಭಿಲಾಷೆಗಳನ್ನು ಪಾಪಮಯ ಮತ್ತು ಕಾಮುಕ ರೀತಿಯಲ್ಲಿ ಸುಖಿಸಲು ವಿಶ್ವಾಸಿಗಳಿಗೆ ಶೋಧನೆಯನ್ನೊಡ್ಡಬಾರದು. ಅಥವಾ ಪಾಪಿಗಳಾದ ಪ್ರಾಚೀನ ಯೆರೂಸಲೇಮಿನ ಜನರು ಹೇಳುವಂತೆ *ತಿನ್ನೋಣ, ಕುಡಿಯೋಣ, ನಾಳೆ ಸಾಯುವೆವು* (ಯೆಶಾಯ 22:13, 1 ಕೊರಿಂಥ 15: 32 ರಲ್ಲಿ ಪೌಲನಿಂದ ಸಹ ಉಪಯೋಗಿಸಲ್ಪಟ್ಟಿದೆ). ಬದಲಾಗಿ ಅವರ ಜೀವಿತವು ಅವರ ತಂದೆಯಾದ ದೇವರ ಮತ್ತು ಅವರ ರಕ್ಷಕನಾದ ಯೇಸು ಕ್ರಿಸ್ತನ ಪರಿಶುದ್ಧತೆಯನ್ನು ಪ್ರತಿಬಿಂಬಿಸಬೇಕು.

b. ವಿಶ್ವಾಸಿಗಳು ಕರ್ತನ ದಿನವನ್ನು ಮುನ್ನೋಡುವ ಜನರಾಗಿರಬೇಕು (ವ.12). ದೇವರಿಗೆ ಸಂಬಂಧಿಸದ ಜನರಿಗೆ ಈ ದಿನವು ಭಯಂಕರ ಮತ್ತು ಭಯಾನಕವಾಗಿರುವುದು. ಆದರೆ ಆತನ ಜನರಿಗೆ ಇದು ಬಿಡುಗಡೆಯ, ಆತನ ಕಡೆಯ ರಕ್ಷಣೆಯ ದಿನವಾಗಿರುವುದರಿಂದ ಮತ್ತು ನಾವು ಆತನನ್ನು ಮುಖಾಮುಖಿಯಾಗಿ ನೋಡುವ ದಿನವಾಗಿರುವುದರಿಂದ ಇದು ಉನ್ನತವಾದ ಒಂದು ಸಂತಸದ ದಿನವಾಗಿರುವುದು.

c. ವಿಶ್ವಾಸಿಗಳು ಕರ್ತನ ದಿನವನ್ನು ಹಾರೈಸುವ ಜನರಾಗಿರಬೇಕು (ವ.12). ಈ ಹಿಂದಿನ ಅಧ್ಯಾಯದಲ್ಲಿ ಪೇತ್ರನು ತನ್ನ ಓದುಗರಿಗೆ ಯೇಸು ಕ್ರಿಸ್ತನು ಇದುವರೆಗೂ ಬರದೇ ಇರುವುದಕ್ಕೆ ಮುಖ್ಯ ಕಾರಣವೇನೆಂದರೆ ದೇವರು ತಾಳ್ಮೆಯುಳ್ಳವನಾಗಿದ್ದಾನೆ. *ಯಾರೊಬ್ಬರೂ ನಾಶವಾಗಲು ಆತನು ಇಷ್ಟಪಡುವುದಿಲ್ಲ. ಆದರೆ ಎಲ್ಲರೂ ಪಶ್ಚಾತ್ತಾಪ*

*ಪಡಬೇಕೆಂದು ಬಯಸುತ್ತಾನೆಂದು ಹೇಳುತ್ತಾನೆ* (ವ.9). ಹಾಗಾಗಿ ಕರ್ತನ ದಿನವನ್ನು ನಾವು ಹಾರೈಸುವುದು ಹೇಗೆ? ಉತ್ತರವು ಸುಲಭವಾಗಿದೆ:ಯೇಸು ಕ್ರಿಸ್ತನು ತನ್ನ ಶಿಷ್ಯರಿಗೆ ಈ ಕೆಳಗಿನ ಮಾತುಗಳನ್ನು ಹೇಳುವಾಗ ಆತನು ಸಭೆಗೆ ಕೊಟ್ಟ ಕೆಲಸವನ್ನು ನೆರವೇರಿಸುವುದರ ಮೂಲಕ:*ಆದದರಿಂದ ನೀವು ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ, ಅವರಿಗೆ ತಂದೆಯ ಮಗನ ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿ, ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲ ಕಾಪಾಡಿಕೊಳ್ಳುವುದಕ್ಕೆ ಅವರಿಗೆ ಉಪದೇಶಮಾಡಿರಿ* (ಮತ್ತಾಯ 28:19–20). ಇದು ಅವರಿಗೆ ಯಾವುದೇ ಸುದ್ದಿಯಾಗಿರಲಿಲ್ಲ. ಇದು ಅವರಿಗೆ ಈ ಹಿಂದೆ ಬೋಧಿಸಿದ್ಧರ ಬಗ್ಗೆ ಒಂದು ಮನವರಿಕೆಯಾಗಿತ್ತು:*ಪರಲೋಕರಾಜ್ಯದ ಈ ಸುವಾರ್ತೆಯು ಸರ್ವಲೋಕದಲ್ಲಿ ಎಲ್ಲಾ ಜನಾಂಗಗಳಿಗೆ ಸಾಕ್ಷಿಯಾಗಿ ಸಾರಲಾಗುವುದು, ಆಗ ಅಂತ್ಯವು ಬರುವುದು* (ಮತ್ತಾಯ 24:14). ಯೇಸು ಕ್ರಿಸ್ತನ ಮೊದಲ ಮತ್ತು ಎರಡನೇ ಬರೋಣದ ನಡುವಿನ ಕಾಲವು ಸಭೆಯ ಕಾಲ, ಸುವಾರ್ತೆಯ ಕಾಲ, ಸೇವಾಯುಗವಾಗಿದೆ. ಈ ಸಮಯದಲ್ಲಿ ಪಾಪಿಗಳ ಮಾನಸಾಂತರ ಮತ್ತು ರಕ್ಷಣೆಗಾಗಿ ಭೂಲೋಕದ ಎಲ್ಲಾ ಮೂಲೆಯಲ್ಲಿಯೂ ಸುವಾರ್ತೆಯನ್ನು ಸಾರಲಾಗುತ್ತದೆ. ಆಗ ಕರ್ತನ ದಿನವು ಬರುತ್ತದೆ.

d. ವಿಶ್ವಾಸಿಗಳು *ನೂತನಾಕಾಶಮಂಡಲವನ್ನು, ನೂತನ ಭೂಮಂಡಲವನ್ನು ನೀತಿಯ ನಿವಾಸವನ್ನು ಎದುರು ನೋಡುವ* ಜನರಾಗಿರಬೇಕು (ವ.13). ದುಃಖಕರವೆಂದರೆ ಅನೇಕ ಕ್ರೈಸ್ತರು ಲೈಕಿಕ ವಿಷಯಗಳಲ್ಲಿ ಮತ್ತು ಪ್ರಾಪಂಚಿಕ ಚಿಂತೆಗಳಲ್ಲಿ ಸಿಲುಕಿಕೊಂಡಿರುವುದರಿಂದ ನಿತ್ಯತ್ವದ ಬಗ್ಗೆ ಯೋಚಿಸಲು ಅವರಿಗೆ ಸಮಯವೇ ಇಲ್ಲದಂತಾಗಿದೆ. ಇಹಲೋಕ ಜೀವನದ ಭವಿಷ್ಯವೇ ಅವರಿಗಿರುವ ದೊಡ್ಡ ಚಿಂತೆಯಾಗಿದೆ. ಹಾಗಾಗಿ ನೂತನಾಕಾಶ ಭೂಮಂಡಲಗಳಲ್ಲಿರುವ ನಿಜವಾದ ಭವಿಷ್ಯವು ಅವರಿಗೆ ಸಮಂಜಸವೆನಿಸುವುದಿಲ್ಲ.

e. ವಿಶ್ವಾಸಿಗಳು ಶಾಂತರಾಗಿದ್ದು *ನಿರ್ಮಲರಾಗಿಯೂ ನಿರ್ದೋಷಿಗಳಾಗಿಯೂ ಕಾಣಿಸಿಕೊಳ್ಳುವುದಕ್ಕೆ ಪ್ರಯಾಸಪಡುವವರಾಗಿರಬೇಕು* (ವ.14). ಇದನ್ನೇ ಪೌಲನು ಫಿಲಿಪ್ಪಿಯವರಿಗೆ ಬರೆಯುವ ತನ್ನ ಪತ್ರಿಕೆಯಲ್ಲಿ ತಿಳಿಸುತ್ತಾನೆ: *ಹೀಗಿರುವಲ್ಲಿ ನನ್ನ ಪ್ರಿಯರೇ ನೀವು ನನ್ನ ಮಾತನ್ನು ಯಾವಾಗಲೂ ಕೇಳಿದಂತೆ. ಈಗಲೂ ಕೇಳಿರಿ. ನಾನು ನಿಮ್ಮಲ್ಲಿರುವಾಗ ಮಾತ್ರವಲ್ಲದೆ ನಾನಿಲ್ಲದಿರುವಾಗಲೂ ಬಹು ಹೆಚ್ಚಾಗಿ ಮನೋಭೀತಿಯಿಂದ ನಡುಗುವವರಾಗಿ ನಿಮ್ಮ ನಿಮ್ಮ ರಕ್ಷಣೆಯನ್ನು ಸಾಧಿಸಿಕೊಳ್ಳಿರಿ (ಫಿಲಿಪ್ಪಿ 2:12). ಹೀಗಿರುವಲ್ಲಿ* ಎಂಬುದು ಹಿಂದಿನ ವಾಕ್ಯಭಾಗದಲ್ಲಿನ ಕ್ರಿಸ್ತನ ದೀನತೆಯನ್ನು ಅನುಸರಿಸುವುದರ ಬಗ್ಗೆ ಸೂಚಿಸುತ್ತದೆ(ಫಿಲಿಪ್ಪಿ 2:1–11). ಕೊಲೊಸ್ಸೆ ಪತ್ರಿಕೆಯಲ್ಲಿ ಅದೇ ಸಂಗತಿಯನ್ನು ವಿವರಿಸಲು *ಧರಿಸಿಕೊಳ್ಳಿರಿ* ಎಂಬ ರೂಪಾಲಂಕಾರವನ್ನು ಉಪಯೋಗಿಸುತ್ತಾನೆ: *ಹೀಗಿರಲಾಗಿ ನೀವು ದೇವರಿಂದ ಆರಿಸಿಕೊಂಡವರೂ ಪ್ರತಿಷ್ಠಿತರೂ ಪ್ರಿಯರೂ ಆಗಿರುವುದರಿಂದ ಕನಿಕರ, ದಯೆ, ದೀನಭಾವ, ಸಾತ್ವಿಕತ್ವ, ದೀರ್ಘಶಾಂತಿ ಎಂಬ ಸದ್ಗುಣಗಳನ್ನು ಧರಿಸಿಕೊಳ್ಳಿರಿ ಮತ್ತೊಬ್ಬನ ಮೇಲೆ ತಪ್ಪು ಹೊರಿಸುವುದಕ್ಕೆ ಕಾರಣವಿದ್ದರೂ ತಪ್ಪುಹೊರಿಸದೇ ಒಬ್ಬರಿಗೊಬ್ಬರು ಸೈರಿಸಿಕೊಂಡು ಕ್ಷಮಿಸಿರಿ. ಕರ್ತನು ನಿಮ್ಮನ್ನು ಕ್ಷಮಿಸಿದಂತೆಯೇ ನೀವೂ ಕ್ಷಮಿಸಿರಿ. ಇದೆಲ್ಲದರ ಮೇಲೆ ಪ್ರೀತಿಯನ್ನು ಧರಿಸಿಕೊಳ್ಳಿರಿ. ಅದು ಸಮಸ್ತವನ್ನು ಸಂಪೂರ್ಣ ಮಾಡುವ ಬಂಧವಾಗಿದೆ* (ಕೊಲೊಸ್ಸೆ

3:12–14). ಹಾಗಾಗಿ ನಿರ್ಮಲರಾಗಿಯೂ ನಿರ್ದೋಷಿಗಳಾಗಿಯೂ ಕಾಣಿಸಿಕೊಳ್ಳುವುದಕ್ಕೆ ಪ್ರಯಾಸಪಡಿರಿ ಎಂಬುದರ ಅರ್ಥವು ಯೇಸು ಕ್ರಿಸ್ತನ ಬರೋಣದ ದಿನದವರೆಗೂ ಆತನಂತೆ ನಾವು ಆಗುವವರೆಗೂ ನಾವು ಇನ್ನೂ ಹೆಚ್ಚಾಗಿ ಯೇಸು ಕ್ರಿಸ್ತನಂತೆ ಆಗಲು ತವಕಪಡಬೇಕೆಂಬುದಾಗಿದೆ. *ಪ್ರಿಯರೇ, ಈಗ ದೇವರ ಮಕ್ಕಳಾಗಿದ್ದೇವೆ, ಮುಂದೆ ನಾವು ಏನಾಗುವೆವೋ ಅದು ಇನ್ನು ಪ್ರತ್ಯಕ್ಷವಾಗಲಿಲ್ಲ. ಕ್ರಿಸ್ತನು ಪ್ರತ್ಯಕ್ಷನಾದರೆ ನಾವು ಆತನ ಹಾಗಿರುವೆವೆಂದು ಬಲ್ಲೆವು* (1 ಯೊಹಾನ 3:2).

f. ವಿಶ್ವಾಸಿಗಳು ಗ್ರಂಥಗಳನ್ನು ತಪ್ಪಾಗಿ ಅರ್ಥೈಸಿಕೊಳ್ಳದಂತ ಜನರಾಗಿರಬೇಕು (ವ.16). ಪೌಲನನ್ನು ಮತ್ತು ಆತನ ಪತ್ರಿಕೆಗಳನ್ನು ಅರ್ಥೈಸಿಕೊಳ್ಳುವುದರ ಬಗ್ಗೆ ತನ್ನ ಸ್ವಂತ ಹೋರಾಟದ ಬಗ್ಗೆ ಪೇತ್ರನು ಯಾಥಾರ್ಥನಾಗಿದ್ದಾನೆ.ಕೆಲವು ಸತ್ಯವೇದದ ಪಠ್ಯಗಳು ಕ್ಲಿಷ್ಟಕರವಾಗಿದ್ದು ಅವು ಸತ್ಯವೇದ ಪಂಡಿತರನ್ನು ಮತ್ತು ಸಾಮಾನ್ಯ ವಿಶ್ವಾಸಿಗಳನ್ನು ಪರ್ಯಾಯ ತರ್ಜುಮೆಯೆಡೆಗೆ ನಡೆಸುತ್ತದೆಂಬುದು ಸಹ ಸತ್ಯವಾಗಿದೆ. ಆದರೆ ಇದು ಪೇತ್ರನು ಇಲ್ಲಿ ಹೇಳುವ ಅಂಶವಲ್ಲ. ಶಾಸ್ತ್ರಗಳನ್ನು ತಪ್ಪಾಗಿ ಅರ್ಥೈಸಿಕೊಳ್ಳುವುದು ಸುಳ್ಳು ಬೋಧಕರುಗಳು ಮಾಡುವುದಾಗಿದೆ. ಅವರ ಉತ್ತಮವಾದ ತಿಳುವಳಿಕೆಗೆ ವಿರುದ್ದವಾಗಿ ಅಥವಾ ಕೆಲವೊಮ್ಮೆ ಅವರು ಸಾಕಾದಷ್ಟು ತಿಳುವಳಿಕೆ ಹೊಂದಿರದೇ ಇರುವ ಅವರು ತಪ್ಪಾಗಿ ವ್ಯಾಖ್ಯಾನಿಸುವರು ಅಥವಾ ಸತ್ಯವೇದದ ಸತ್ಯಗಳನ್ನು ತಿರುಚಿಹಾಕುವರು. ಇದನ್ನೇ ಪೇತ್ರನು ಖಂಡಿಸುತ್ತಾನೆ.

g. ವಿಶ್ವಾಸಿಗಳು ಎಚ್ಚರಿಕೆಯಿಂದಿರುವ ಜನರಾಗಿರಬೇಕು (ವ17). ಆ ಮೂಲಕ ಅವರು *ಅಧರ್ಮಿಗಳ ಭ್ರಾಂತಿಯ ಸೆಳೆಯುವಿಕೆಗೆ ಸಿಕ್ಕು ಸ್ಥಿರಮನಸ್ಸನ್ನು ಬಿಟ್ಟು ಭ್ರಷ್ಟರಾಗದಂತೆ* ನೋಡಿಕೊಳ್ಳಬಹುದು. ಈ ಪತ್ರಿಕೆಯ ಒಂದು ಮುಖ್ಯ ವಿಷಯವಸ್ತುವೇನೆಂದರೆ ಸಭೆಯಲ್ಲಿ ಸುಳ್ಳು ಬೋಧಕರ ಅಪಾಯವಾಗಿದೆ. ಈ ಸುಳ್ಳು ಬೋಧಕರುಗಳು ಸತ್ಯವೇದದ ಸತ್ಯಗಳು ಮತ್ತು ದೇವರ ವಾಗ್ದಾನಗಳ ಕುಚೋದ್ಯಗಾರರಾಗಿದ್ದಾರೆ. ವಿಶ್ವಾಸಿಗಳು ದೇವರನ್ನು ಮೆಚ್ಚಿಸಲು ಮತ್ತು ದೇವರ ರಾಜ್ಯದ ಮೌಲ್ಯಗಳನ್ನು ಪ್ರತಿಬಿಂಬಿಸುವ ಭಕ್ತಿಯುತ ಮತ್ತು ಪವಿತ್ರ ಜೀವನದ ಬಗ್ಗೆ ಸತ್ಯವೇದದ ಸತ್ಯಗಳನ್ನು ತಪ್ಪಾಗಿ ವ್ಯಾಖಾನಿಸುವವರಾಗಿದ್ದು ಅಧರ್ಮವನ್ನು ಸಾರುವವರಾಗಿದ್ದಾರೆ. ಸತ್ಯವೇದದ ಸ್ವಸ್ಥ ಬೋಧನೆಯು ಸಭೆಯನ್ನು ಈ ಅಪಾಯದಿಂದ ರಕ್ಷಿಸುತ್ತದೆ. ಆತ್ಮಿಕ ಕುರುಬರು ತಮ್ಮ ಮಂದೆಯನ್ನು ದುರ್ಬೋಧನೆಗಳಿಂದ ಕಾಯ್ದುಕೊಳ್ಳುವರು. ಆಗ ವಿಶ್ವಾಸಿಗಳು ಅಧರ್ಮ ಜೀವನವನ್ನು ನಡೆಸುವ ಸುಳ್ಳು ಬೋಧಕರಿಂದ ಶೋಧನೆಗೆ ಒಳಗಾಗುವುದಿಲ್ಲ.

h. ವಿಶ್ವಾಸಿಗಳು ತಮ್ಮ ಸ್ಥಿರ ಮನಸ್ಸನ್ನು ಬಿಡದವರಾಗಿರಬೇಕು (ವ.17). ತನ್ನ ಓದುಗರು ಹಿಂಜಾರುವವರಾಗಿರಬಾರದೆಂದು ಪೇತ್ರನು ತನ್ನ ಓದುಗರನ್ನು ಎಚ್ಚರಿಸುತ್ತಾನೆ. ಅವರು ಯೇಸು ಕ್ರಿಸ್ತನೊಂದಿಗೆ ಅನ್ಯೋನ್ಯವಾಗಿರುವವರೆಗೂ ಮತ್ತು *ಯೇಸು ಕ್ರಿಸ್ತನಿಂದಾದ ಬಿಡುಗಡೆಯ ಮೂಲಕ ದೇವರ ಕೃಪೆಗೆ* ಬೆನ್ನು ತಿರುಗಿಸದವರೆಗೂ ಅವರ ಸ್ಥಾನಮಾನವು ಸುರಕ್ಷಿತವಾಗಿರುತ್ತದೆ ಮತ್ತು ಅವರ ರಕ್ಷಣೆಯು ಖಚಿತವಾಗಿರುತ್ತದೆ (ರೋಮಾ 3:24).

i. ವಿಶ್ವಾಸಿಗಳು *ಕೃಪೆ* ಮತ್ತು *ನಮ್ಮ ರಕ್ಷಕನೂ ಕರ್ತನೂ ಆಗಿರುವ ಯೇಸು ಕ್ರಿಸ್ತನ ವಿಷಯವಾದ ಜ್ಞಾನದಲ್ಲಿ ಅಭಿವೃದ್ಧಿ ಹೊಂದುವ* ಜನರಾಗಿರಬೇಕು (ವ.18). ಅದು ಹೇಗೆ ಆಗುವದು? ಕೇವಲ ಪ್ರಾರ್ಥನೆಯಲ್ಲಿ ಯೇಸುವಿನೊಂದಿಗೆ ಹೆಚ್ಚು ಸಮಯ

ಕಳೆಯುವುದರಿಂದ ಮತ್ತು ದೇವರ ವಾಕ್ಯವನ್ನು ಅಧ್ಯಯನ ಮಾಡುವುದರಿಂದ ಮಾತ್ರ ಸಾಧ್ಯವಾಗುತ್ತದೆ.

4. ಪೇತ್ರನು ಪೌಲನ ಮತ್ತು ಆತನ ಪತ್ರಿಕೆಗಳ ಬಗ್ಗೆ 5 ಸಂಗತಿಗಳನ್ನು ವ್ಯಕ್ತಪಡಿಸುತ್ತಾನೆ (ವ.15–16):

   a. *ನಮ್ಮ ಪ್ರಿಯ ಸಹೋದರನಾದ ಪೌಲ* (ವ.15): ಪೌಲನು ಪೇತ್ರನಿಗೆ ಪ್ರೀಯ ಸಹೋದರನಾಗಿದ್ದಾನೆ. ಇದು ಸಾಂಧರ್ಭಿಕ ಅಸಮ್ಮತಿ ಮತ್ತು ವಿವಾದಗಳ ಹೊರತಾಗಿಯೂ ಅಪೋಸ್ತಲರು ಐಕ್ಯತೆಯಲ್ಲಿ ಕಾರ್ಯಮಾಡುವುದನ್ನು ಅರಿತಿದ್ದಾರೆಂಬುದನ್ನು ತೋರಿಸುತ್ತದೆ ಉದಾಹರಣೆ: ಗಲಾತ್ಯ 2:11, 14 ನ್ನು ನೋಡಿ). ಅವರು ಒಬ್ಬರನ್ನೊಬರು ಗೌರವಿಸಿದರು ಮತ್ತು ಬೆಂಬಲಿಸಿದರೂ ಸಹ ತಮ್ಮ ಕರ್ತನೂ ರಕ್ಷಕನೂ ಆದ ಯೇಸು ಕ್ರಿಸ್ತನೆಂಬ ಒಬ್ಬನೇ ಯಜಮಾನನ್ನು ಸೇವಿಸುವವರೆಂಬುದನ್ನು ಅರಿತಿದ್ದರು.

   b. *ದೇವರು ಅವನಿಗೆ ಕೊಟ್ಟ ಜ್ಞಾನದ ಪ್ರಕಾರ* (ವ.16): ಪೌಲನ ಪತ್ರಿಕೆಗಳ ಮೂಲಕ ಪ್ರಕಟಗೊಂಡಿದ್ದು ದೇವರ ಜ್ಞಾನವಾಗಿದೆ ಎಂಬುದನ್ನು ಪೇತ್ರನು ಅರಿತುಕೊಂಡಿದ್ದನು.

   c. *ಅದೇ ರೀತಿ, ಆ ಪ್ರಕಾರ* (ವ.15) (ವ. 16): ಸಭೆಗಳಿಗಾಗಿನ ಅಪೋಸ್ತಲರ ಸಂದೇಶಗಳಲ್ಲಿ ಐಕ್ಯತೆಯಿತ್ತು. ಅಪೋಸ್ತಲರು ವಿಭಿನ್ನವಾದ ವ್ಯಕ್ತಿತ್ವವನ್ನು ಹೊಂದಿದ್ದರು ಮತ್ತು ಅವರ ಸೇವೆಗಳು ವಿಭಿನ್ನವಾಗಿದ್ದವು. ಆದರೆ ದೇವರು, ಯೇಸು ಕ್ರಿಸ್ತನು ಮತ್ತು ಕ್ರೈಸ್ತೀಯ ಜೀವಿತದ ಬಗ್ಗೆ ಅವರು ಹೊಂದಿರುವ ಸಂದೇಶ ಒಂದೇ ಆಗಿತ್ತು.

   d. *ಕೆಲವು ಮಾತುಗಳು ತಿಳಿಯುವುದಕ್ಕೆ ಕಷ್ಟವಾಗಿವೆ* (ವ.16): ಅಂಶ 4 f ನ್ನು ನೋಡಿರಿ. ಪೌಲನು ಯೇಸು ಕ್ರಿಸ್ತನ ಸೇವೆಗಾಗಿ ತನ್ನ ಜೀವಿತವನ್ನು ಮುಡಿಪಾಗಿಟ್ಟ ಪಾಂಡಿತ್ಯವುಳ್ಳ ರಬ್ಬಿಯಾಗಿದ್ದನು. ಪೇತ್ರನು ಯೇಸು ಕ್ರಿಸ್ತನ ಕರೆಗೆ ಓಗೊಟ್ಟು ಆತನನ್ನು ಹಿಂಬಾಲಿಸಿದ ಬೆಸ್ತನಾಗಿದ್ದನು. ಇಬ್ಬರೂ ಸಹ ಅಪೋಸ್ತಲರಾಗಿದ್ದಾರೆ ಮತ್ತು ಇಬ್ಬರೂ ಸಹ ಪರಿಶುದ್ದಾತ್ಮನು ನಮ್ಮ ಹೊಸ ಒಡಂಬಡಿಕೆಯಲ್ಲಿ ಸೇರಿಸಿರುವ ಪುಸ್ತಕಗಳನ್ನು ಬರೆದವರಾಗಿದ್ದಾರೆ. ಪೇತ್ರನು ಪೌಲನ ಕೆಲವು ಪತ್ರಿಕೆಗಳನ್ನು ಕಷ್ಟಕರವೆಂದು ಕಂಡನು. ಆದರೆ ಆತನು ಅವನ್ನು ದೇವರ ಮಾತೆಂದು ಗುರುತಿಸಿದನು. ನಾವು ಪೇತ್ರನ (ಪೌಲನದ್ದು ಸಹ) ಕೆಲವು ಬರಹಗಳನ್ನು ತಿಳುಕೊಳ್ಳಲು ಕಷ್ಟಕರವೆಂದು ಕಾಣಬಹುದು. ಅದರೆ ನಾವು ಅದನ್ನು ಕೇವಲ ಮೊದಲ ಓದುಗರಿಗೆ ಮಾತ್ರವಲ್ಲ, ನಮಗೂ ಸಹ ದೇವರ ಮಾತಾಗಿದೆಂಬುದನ್ನು ನಾವು ಮರೆಯಬಾರದು.

   e. *ಮಿಕ್ಕಾದ ಗ್ರಂಥಗಳು* (ವ.16): ಹಳೆ ಒಡಂಬಡಿಕೆಯ ಪುಸ್ತಕಗಳಂತೆ ಪೌಲನ ಪತ್ರಿಕೆಗಳು ಪವಿತ್ರಾತ್ಮನಿಂದ ಪ್ರೇರಿತವಾದವೆಂಬುದನ್ನು ಪೇತ್ರನು ಅರಿತಿದ್ದನೆಂದು ಈ ಹೇಳಿಕೆ ತೋರಿಸುತ್ತದೆ.

5. ಪೇತ್ರನು ಹೇಗೆ ತನ್ನ ಪತ್ರಿಕೆಯನ್ನು ಮುಕ್ತಾಯಗೊಳಿಸುತ್ತಾನೆನ್ನುವ ಬಗ್ಗೆ 2 ಸಂಗತಿಗಳನ್ನು ಗಮನಿಸಬೇಕಾಗಿದೆ:

a. ತನ್ನ ಕರ್ತನೂ ರಕ್ಷಕನೂ ಆಗಿರುವ ಯೇಸುವಿಗೆ ಒಂದು ಸ್ತೋತ್ರದೊಂದಿಗೆ ಆತನು ಇದನ್ನು ಮುಗಿಸುತ್ತಾನೆ: *ಆತನಿಗೆ ಈಗಲೂ ಸದಾಕಾಲವೂ ಸ್ತೋತ್ರ! ಆಮೆನ್* (ವ.18).

b. ಆತನ ಬಳಿ ಯಾವುದೇ ಅಭಿನಂದನೆಗಳು ಇಲ್ಲ.

- ಆತನ ಯಾವುದೇ ಓದುಗರಿಗೆ ಇಲ್ಲ. ಇದು 2 ನೇ ಪೇತ್ರ ಪತ್ರಿಕೆಯು ಬಹುಶಃ 1 ಪೇತ್ರದಂತೆಯೇ ಅನೇಕ ಸಭೆಗಳಿಗಾಗಿನ ಪತ್ರಿಕೆಯಾಗಿರಬಹುದು (1 ಪೇತ್ರ 1:1).

- ಆತನ ಬಳಿಯಿರುವ ಯಾರಿಂದಲೂ ಸಹ ಇಲ್ಲ. ಹೆಚ್ಚಾಗಿ ಪೇತ್ರನು ರೋಮಿನ ಸೆರೆಯಲ್ಲಿ ಒಬ್ಬಂಟಿಗನಾಗಿದ್ದು ತನ್ನ ಸಾವಿಗಾಗಿ ಕಾಯುತ್ತಿದ್ದಾನೆನ್ನಬಹುದು. ಸೆರೆಯಲ್ಲಿ ಒಬ್ಬ ಅನಾಮಿಕ ಕ್ರೈಸ್ತ ಕಾವಲುಗಾರನು ಕಳ್ಳಸಾಗಣೆಯ ಮೂಲಕ ಒಂದು ಸುರುಳಿ, ಪೆನ್ನು ಮತ್ತು ಶಾಯಿಯ ಬಾಟಲಿಯನ್ನು ಸಾಗಿಸಿದ್ದರಿಂದ ಅಪೋಸ್ತಲನಿಗೆ ಏಷ್ಯಾ ಸೀಮೆಯಲ್ಲಿನ ಸಭೆಗಳಿಗೆ ತನ್ನ ಚಿತ್ತ ಮತ್ತು ಒಡಂಬಡಿಕೆಯನ್ನು ಬರೆಯಲು ಸಾಧ್ಯವಾಗಿಸಿತು ಎಂಬುದನ್ನು ನಾವು ಊಹಿಸಬಹುದು. ಇದಲ್ಲದೇ ಹೇಗೆ ಈ ಸೆರೆಯಲ್ಲಿನ ಕಾವಲುಗಾರನು ಜಾಗೂರಕತೆಯಿಂದ ಮತ್ತು ಗುಪ್ತವಾಗಿ ರೋಮಿನಲ್ಲಿನ ಸಭೆಯ ಮುಖಂಡರಿಗೆ ಸಾಗಿಸಿದನು ಮತ್ತು ಹೇಗೆ ಅವರು ಈ ಪತ್ರಿಕೆಯು ತನ್ನ ಗುರಿಯನ್ನು ಮುಟ್ಟುವಂತೆ ಮಾಡಿದರೆಂಬುದನ್ನು ಊಹಿಸಬಹುದು.

# ಉತ್ತರಗಳು 21: ಪೇತ್ರನು ಬರೆದ ಎರಡನೆಯ ಪತ್ರಿಕೆಯ ಕುರಿತು ಯೋಚಿಸಿರಿ

## ಶಿಕ್ಷಕರ ಗಮನಕ್ಕೆ

ಈ ಅಧ್ಯಯನವನ್ನು ನಿರ್ಲಕ್ಷಿಸಬೇಡಿರಿ/ಕಡೆಗಣಿಸಬೇಡಿರಿ. ಇದು ವಿದ್ಯಾರ್ಥಿಗಳಿಗೆ ಈ ಹಿಂದಿನ ಅಧ್ಯಯನಗಳಲ್ಲಿ ಕಲಿತ ಸಂಗತಿಗಳನ್ನು ಕ್ರೋಢಿಕರಿಸಲು ಸಹಾಯಕವಾಗುತ್ತದೆ. ವಿದ್ಯಾರ್ಥಿಗಳ ಮೇಲೆ ಅತಿಯಾಗಿ ಅಪೇಕ್ಷೆಯನ್ನು ಹೊಂದಿರಬೇಡಿರಿ. ಪ್ರಶ್ನೆ 2 ತುಂಬಾ ಕಷ್ಟಕರವಾಗಿದೆ. ಹಾಗಾಗಿ ವಿದ್ಯಾರ್ಥಿಗಳು ಏನನ್ನು ತಯಾರಿಸುತ್ತಾರೋ ಅದು ಪರಿಗಣನೆಗೆ ಯೋಗ್ಯವಾದದ್ದು. ಬಲಹೀನ ವಿದ್ಯಾರ್ಥಿಗಳಿಗೆ ದಯೆಯಿಂದಿರಿ. ಪ್ರಾಮುಖ್ಯ ಸಂಗತಿಯೆಂದರೆ ಪ್ರತಿಯೊಬ್ಬರೂ ಸಹ ತಮ್ಮಿಂದ ಉತ್ತಮವಾದದ್ದನ್ನು ಪ್ರಯತ್ನಿಸುತ್ತಾರೆ. ಶ್ರಮವು ಫಲಿತಾಂಶಕ್ಕಿಂತ ಪ್ರಾಮುಖ್ಯವಾದುದ್ದಾಗಿದೆ.

ವಿದ್ಯಾರ್ಥಿಗಳ ಸಾರಾಂಶವನ್ನು ಮೌಲ್ಯಮಾಪನಮಾಡಲು 3 ವಿಧಾನಗಳನ್ನು ಬಳಸಿರಿ (ಪ್ರಶ್ನೆ 2)

1. ಸಾರಾಂಶ: ಸಾರಾಂಶವು a-g ಯ ಅಂಶಗಳನ್ನು ಒಳಗೊಂಡಿದೆಯಾ?
2. ರಚನೆ: ಸಾರಾಂಶವು ಪಠ್ಯರೂಪಿಯಾ? ಅಥವಾ ಇದು ಕೇವಲ ಅಂಶಗಳ ಒಂದು ಪಟ್ಟಿಯಾ?
3. ಭಾಷೆ: ಪಠ್ಯವು ವಿಷಯಾಂಶವನ್ನು ತಾರ್ಕಿಕವಾಗಿ ಮತ್ತು ಸಂಬಂಧಿಸುವ ವಿಧದಲ್ಲಿ ಪ್ರಸ್ತುತಪಡಿಸುತ್ತದೆಯಾ? ಪಠ್ಯವು ಸಾಮಾನ್ಯ ಓದುಗನಿಗೆ ಅರ್ಥೈಸಿಕೊಳ್ಳುವಂತಿದೆಯಾ? (ಸಭೆಯಲ್ಲಿನ ಒಬ್ಬ ಸ್ನೇಹಿತನಿಗೆ).

## ಉತ್ತರಗಳು

1. –
2. 2 ಪೇತ್ರದಲ್ಲಿನ ಈ ಕೆಲವು ಪ್ರಾಮುಖ್ಯ ಸಂಗತಿಗಳು ವಿದ್ಯಾರ್ಥಿಗಳ ಸಾರಾಂಶದಲ್ಲಿ ಇರಬೇಕು.

    a. ಭಕ್ತಿಯುತ ಜೀವನ (1:3–11).

    b. ಮೂಲಭೂತವಾದವುಗಳನ್ನು ನೆನೆಸಿಕೊಳ್ಳಿರಿ (1:12–15).

    c. ಕ್ರೈಸ್ತೀಯ ಸಿದ್ಧಾಂತ ಮತ್ತು ಪವಿತ್ರ ಜೀವಿತಕ್ಕೆ ಎರಡು ಸಾಕ್ಷಿಗಳು (1:16–21).

    d. ಸುಳ್ಳುಬೋಧಕರುಗಳು ಮತ್ತು ದೇವರ ನ್ಯಾಯತೀರ್ಪು (2:1–9).

    e. ಸುಳ್ಳುಬೋಧಕರ ಗುಣಲಕ್ಷಣಗಳು (2:10–22).

    f. ಕರ್ತನ ದಿನ (3:1–10).

    g. ನಾವು ಆಗಬೇಕಾದ ರೀತಿ (3:11–18).

# ಆತ್ಮಿಕ ಕೂಟ

# ಆತ್ಮಿಕ ಕೂಟದ ಪರಿಚಯ

ಆತ್ಮಿಕ ಕೂಟ ಈ ವಿಷಯದ ಪ್ರಾಮುಖ್ಯವಾದ ಭಾಗವಾಗಿದೆ. ಕೇವಲ ಕೆಲವೆ ಅನ್ವಯಿಸುವಂತ ಪ್ರಶ್ನೆಗಳು ಈ ಅಧ್ಯಯನಗಳಲ್ಲಿವೆ. ಬದಲಾಗಿ ನಾನು ಆತ್ಮಿಕ ಕೂಟದ್ನು ವಿಷಯ (ಕೋರ್ಸಿನ) ಅನ್ವಯದ ಭಾಗವನ್ನಾಗಿ ಮಾಡಿದ್ದೇನೆ.

ಆತ್ಮಿಕ ಕೂಟದಲ್ಲಿನ ಹೆಚ್ಚಿನ ವಿಭಾಗಗಳು ಕೆಲವು ಗಂಟೆಗಳಲ್ಲಿ ಮುಗಿಸುವುದಕ್ಕಿಂತ ಹೆಚ್ಚು ವಿಷಯವನ್ನು ಒಳಗೊಂಡಿವೆ. ಹಾಗಾಗಿ ಯಾವುದನ್ನು ಮಾಡಬೇಕೆಂದು ನಿಮ್ಮ ಶಿಕ್ಷಕರ ಸಲಹೆಗಳನ್ನು ಪಾಲಿಸಿರಿ. ಖಂಡಿತವಾಗಿ ಬೇರೆ ಸಮಯದಲ್ಲಿ ಉಳಿದ ವಿಷಯಗಳನ್ನು ನೋಡಿಕೊಳ್ಳಲು ನಿಮಗೆ ಸ್ವಾತಂತ್ರವಿದೆ.

ಆತ್ಮಿಕ ಕೂಟ ವಿಭಾಗಗಳು ಈ ರೀತಿಯ ಅಧ್ಯಯನಗಳಿಗೆ ಹೊಂದಿಕೊಂಡಿವೆ.

ವಿಭಾಗ 1– ಅಧ್ಯಯನ 3

ವಿಭಾಗ 2– ಅಧ್ಯಯನ 5 ಮತ್ತು 6

ವಿಭಾಗ 3– ಅಧ್ಯಯನ 8

ವಿಭಾಗ 4– ಅಧ್ಯಯನ 9

ವಿಭಾಗ 5– ಅಧ್ಯಯನ 10

ವಿಭಾಗ 6– ಅಧ್ಯಯನ 13–15

ವಿಭಾಗ 7– ಅಧ್ಯಯನ 16 ಮತ್ತು 17

ವಿಭಾಗ 8– ಅಧ್ಯಯನ 18–20

ನಿಯಮಿತ ಅವಧಿಯಲ್ಲಿ ಆತ್ಮಿಕ ಕೂಟದ ಎಲ್ಲಾ ವಿಭಾಗಗಳನ್ನು ಅಭ್ಯಾಸಿಸಲು ಆಗದೇ ಇರಬಹುದು. ಒಂದು ವೇಳೆ ಹಾಗೆ ಆದರೆ ಯಾವ ವಿಭಾಗವನ್ನು ಬಿಡುವುದು ಎಂದು ನಿಮ್ಮ ಶಿಕ್ಷಕರು ಹೇಳುವರು. ಖಂಡಿತವಾಗಿ ನಿಮಗೆ ಲಭ್ಯವಿರುವ ಇತರೆ ಸಮಯದಲ್ಲಿ ಉಳಿದ ವಿಭಾಗಗಳನ್ನು ನೀವು ಸ್ವಾತಂತ್ರವಾಗಿ ನೋಡಿಕೊಳ್ಳಬಹುದು.

ಎಂಟು ವಿಭಾಗಗಳು ಕೆಳಕಂಡಂತೆ 4 ಮುಖ್ಯ ವಿಷಯಗಳನ್ನು ಸ್ಪರ್ಶಿಸುತ್ತವೆ.

ಜೀವನ ಶೈಲಿ ವಿಷಯಗಳು: ವಿಭಾಗ 1, 2, 3, 5 ಮತ್ತು6.

ಕ್ರೈಸ್ತೀಯ ಬಾಧೆ: ವಿಭಾಗ 4.

ಸುಳ್ಳುಬೋಧಕರುಗಳು: ವಿಭಾಗ 7.

ಯೇಸು ಕ್ರಿಸ್ತನ ಎರಡನೇ ಬರೋಣ: ವಿಭಾಗ 8.

ಹಂಚಿಕೊಳ್ಳುವ ಸಮಯದಲ್ಲಿ ಕೆಲವು ಅಧ್ಯಯನಗಳಲ್ಲಿ ವ್ಯವಹರಿಸಿದ ಕೆಲವು ವಿಷಯಗಳನ್ನು ಪರಾಮರ್ಶಿಸುವಿರಿ. ಮುಖ್ಯ ಉದ್ದೇಶವು ಈ ದಿನ ದಕ್ಷಿಣ ಭಾರತದಲ್ಲಿ ವಿಶ್ವಾಸಿಗಳಾಗಿ ಮತ್ತು ಸಭಾ ಕೆಲಸಗಾರರಾಗಿ ಈ ಹಿಂದೆ ನೀವಾಗಿ ನಿಮ್ಮ ನಿಮ್ಮ ಪರಿಸ್ಥಿತಿಗಳಿಗನುಗುಣವಾಗಿ ಅಳವಡಿಸಿಕೊಳ್ಳುವುದಾಗಿದೆ. ಚರ್ಚೆ ಮತ್ತು ಹಂಚುವಿಕೆಯಲ್ಲಿ ಒಬ್ಬರಿಗೊಬ್ಬರು ಪರಸ್ಪರ ಸಜ್ಜನಿಕೆ

ಮತ್ತು ಗೌರವವನ್ನು ತೋರಿಸಿರಿ. ನಿಮ್ಮ ಸಹ ವಿದ್ಯಾರ್ಥಿಯನ್ನು ಎಂದಿಗೂ ಅಣಕಿಸಬೇಡಿರಿ. ತಮ್ಮ ಬಗ್ಗೆ ಬೇರೆಯವರೊಂದಿಗೆ ಹರಡಲು ಇಷ್ಟಪಡದ ಸಂಗತಿಗಳನ್ನು ಪ್ರಕಟಿಸುವಂತೆ ನಿಮ್ಮ ಸಹ ವಿದ್ಯಾರ್ಥಿಯನ್ನು ಎಂದಿಗೂ ಒತ್ತಾಯಿಸಬೇಡಿರಿ. ಯಾವಾಗಲೂ ಉತ್ತೇಜಿಸುವವರೂ ಮತ್ತು ಬೆಂಬಲಿಸುವವರೂ ಆಗಿರಿ. ವಿಚಾರ ವಿನಿಮಯ/ಹಂಚಿಕೊಳ್ಳುವ ಸಮಯವು ಪ್ರಾರ್ಥನಾ ಸಮಯಕ್ಕೆ ಸಲಕರಣೆ/ಮಾಹಿತಿಗಳನ್ನು ಒದಗಿಸುವುದು.

ಹೆಚ್ಚಿನ ಆತ್ಮಿಕ ಕೂಟ ಪ್ರಾರ್ಥನೆಗಾಗಿ ಮೀಸಲಾಗಿರುವುದು. ಈ ಪ್ರಾರ್ಥನೆಯು ವ್ಯಕ್ತಿಗತವಾಗಿ ಅಥವಾ ಚಿಕ್ಕ ಗುಂಪುಗಳ ರೂಪದಲ್ಲಿರುವುದು. ನೀವು ಗುಂಪಾಗಿ ಪ್ರಾರ್ಥಿಸುವಾಗ ನಿಮ್ಮ ಸಹ ವಿದ್ಯಾರ್ಥಿಗಳೊಂದಿಗೆ ಸೂಕ್ಷ್ಮವಾಗಿರಬೇಕು. ಅವರು ಬೇರೆಯವರೊಂದಿಗೆ ಹಂಚಿಕೊಳ್ಳಲು ಇಷ್ಟ ಪಡದ ಸಂಗತಿಗಳನ್ನು ಹಂಚಲು ಒತ್ತಾಯಿಸಬಾರದು. ನೀವು ಪ್ರಾರ್ಥಿಸುವಾಗ ಉದಾಹರಣೆಗೆ ನೀವೆ ಒಬ್ಬ ಪ್ರಾರ್ಥನಾ ವೀರರೆಂದು ತೋರಿಸಿಕೊಳ್ಳುವಂತೆ ಗಮನವನ್ನು ನಿಮ್ಮೆಡೆಗೆ ಸೆಳೆದುಕೊಳ್ಳಬಾರದು.

ಆತ್ಮಿಕ ಕೂಟ ವಿಭಾಗವು ನಡವಳಿಕೆಯಲ್ಲಿ ಬದಲಾವಣೆಯ ಫಲಿತಾಂಶವನ್ನು ತರುತ್ತದೆಂದು ನಾವು ನಿರೀಕ್ಷಿಸುತ್ತೇವೆ. ನಿಮ್ಮಲ್ಲಿನ ಪ್ರತಿ ವಿದ್ಯಾರ್ಥಿ ಸಹ ಯೇಸು ಕ್ರಿಸ್ತನ ಜ್ಞಾನ ಮತ್ತು ಭಕ್ತಿಯಲ್ಲಿ ಬೆಳೆಯುವುದನ್ನು ನೋಡಲು ನಾವು  ಬಯಸುತ್ತೇವೆ. ನೀವು ಜೀವನ ಬದಲಾಯಿಸುವಂತ ನಿರ್ಧಾರಗಳನ್ನು ಕೈಗೊಳ್ಳುವಿರೆಂದು ನಾವು ನಿರೀಕ್ಷಿಸುತ್ತೇವೆ. ನಿಮ್ಮ ಸಹಾಯಕ್ಕಾಗಿ ನಿಮ್ಮ ನಿರ್ಧಾರಗಳನ್ನು ಬರೆದಿಡಬೇಕೆಂದು ಬಯಸುತ್ತೇವೆ. ಈ ಸಂಗತಿಗಳನ್ನು ನೀವು ಏನನ್ನು ನಿರ್ಧರಿಸಿರುವಿರಿ ಮತ್ತು ನಿಮ್ಮ ಜೀವನದಲ್ಲಿ ಏನನ್ನು ಮಾಡಬೇಕೆಂದು ನೀವು ಬಯಸುವಿರಿ ಎಂಬುದರ ಜ್ಞಾಪಕಾರ್ಥವಾಗಿ ಇಟ್ಟುಕೊಳ್ಳಿರಿ.ನಾವು ಏನನ್ನು ಕಲಿಯುತ್ತಿದ್ದೇವೆಂಬುದನ್ನು ಪ್ರಾಯೋಗಿಕವಾಗಿ ಉಪಯೋಗಿಸಲು ಸತ್ಯವೇದ ಅಧ್ಯಯನ (ಅಥವಾ ಒಂದು ಸಂದೇಶ, ಅಥವಾ ಒಂದು ಧ್ಯಾನ)  ಅತೀ ಪ್ರಾಮುಖ್ಯವಾದ ಒಂದು ವಿಧಾನವಾಗಿದೆ. ನನ್ನ ಪ್ರತಿ ಆತ್ಮಿಕ ಕೂಟ ವಿಭಾಗದಲ್ಲಿ ಯಾಕೆ ಈ ಅಂಶಗಳನ್ನು ಸೇರಿಸಿದ್ದೇನೆಂಬುದಕ್ಕೆ ಇದು ಒಂದು ಕಾರಣವಾಗಿದೆ. ಆದರೆ ನೀವಾಗಿಯೇ ಇದನ್ನು ಮಾಡುವುದರಿಂದ ಕಲಿಯುವಂತೆ ನಾನು ವಿವರವಾದ ರೂಪುರೇಶಿಯನ್ನು ಕೊಟ್ಟಿಲ್ಲ. ಖಂಡಿತವಾಗಿ ಪ್ರಮುಖ ಸಮಸ್ಯೆಯೆಂದರೆ ಅದು ಸಮಯವಾಗಿದೆ. ಆತ್ಮಿಕ ಕೂಟ ವಿಭಾಗದಲ್ಲಿ ಸತ್ಯವೇದ ಅಧ್ಯಯನ/ಸಂದೇಶ/ ಧ್ಯಾನವನ್ನು ಸಿದ್ಧಪಡಿಸಲು ನಿಮಗೆ ಸಾಕಷ್ಟು ಸಮಯವಿರುವುದಿಲ್ಲ. ಹಾಗಾಗಿ ನಿಮ್ಮ ಶಿಕ್ಷಕರು ಬಹುಶಃ ಇದನ್ನು ಸಾಯಂಕಾಲದ ವೇಳೆ ಅಥವಾ ವಾರದ ಕೊನೆಯಲ್ಲಿ ಅಸೈನ್‌ಮೆಂಟಾಗಿ ಮಾಡಲು ಹೇಳಬಹುದು.



# ವಿಭಾಗ 1: ಪರಿಶುದ್ಧರಾಗಿರ್ರಿ!

## ಪೀಠಿಕೆ

ಈ ಆತ್ಮಿಕ ಕೂಟ ಅವಧಿ ಪಠ್ಯಪುಸ್ತಕದಲ್ಲಿ, 1 ಪೇತ್ರ 1:13– 2:3 ಮತ್ತು ಅಧ್ಯಯನ 3 ರ ಮೇಲೆ ಆಧಾರಗೊಂಡಿದೆ.ಹಾಗಾಗಿ ನೀವಿ ಮೊದಲು ನಿಮ್ಮ ಜ್ಞಾಪಕಶಕ್ತಿಯನ್ನು ಎಚ್ಚರಿಸಿಕೊಳ್ಳಿರಿ.:

- 1 ಪೇತ್ರ 1:13– 2:3 ನ್ನು ಪುನಃ ಓದಿರಿ.
- ಅಧ್ಯಯನ 3 ನ್ನು ಅವಲೋಕಿಸಿರಿ/ಪರಿಶೀಲಿಸಿರಿ.
- ಉತ್ತರಗಳು 3 ನ್ನು ಅವಲೋಕಿಸಿರಿ/ಪರಿಶೀಲಿಸಿರಿ.

ಈ ಆತ್ಮಿಕ ಕೂಟದ ಉದ್ದೇಶವು ದಕ್ಷಿಣ ಭಾರತದ ಹಿನ್ನಲೆಯಲ್ಲಿ ಯಾವ ರೀತಿಯ ಪರಿಶುದ್ಧತೆಯ ಜೀವಿತವು ಪರಂಪರೆಯಾಗಿ ಬಂದದೆ ಎನ್ನುವ ನಿಮ್ಮ ತಿಳುವಳಿಕೆಯನ್ನು ಆಳವಾಗಿಸುವುದಾಗಿದೆ.

ಕ್ರೈಸ್ತತ್ವದಲ್ಲಿ ಪರಿಶುದ್ಧತೆಯು ರಕ್ಷಣೆಗೆ ನಡೆಸುವುದಿಲ್ಲ. ರಕ್ಷಣೆಯು ಪರಿಶುದ್ಧತೆಗೆ ನಡೆಸುತ್ತದೆ. ಒಬ್ಬ ವ್ಯಕ್ತಿಯು ಯೇಸು ಕ್ರಿಸ್ತನನ್ನು ತನ್ನ ಸ್ವಂತ ರಕ್ಷಕನನ್ನಾಗಿ ಸ್ವೀಕರಿಸುವಾಗ ಆತನು ಪರಿಶುದ್ಧಾತನಿಂದ ಶುದ್ಧೀಕರಿಸಲ್ಪಡುತ್ತಾನೆ. ಆತನು ಪರಿಶುದ್ಧನಾಗಿ ಮಾಡಲ್ಪಡುತ್ತಾನೆ. ಪೌಲನು ಅದನ್ನು ಈ ರೀತಿಯಲ್ಲಿ 'ಹೇಳುತ್ತಾನೆ, ಆದರೂ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿಯೂ ನಮ್ಮ ದೇವರ ಆತ್ಮದಲ್ಲಿಯೂ ನಿರ್ಣಯವನ್ನು ಹೊಂದಿದಿರಿ' (1 ಕೊರಿಂಥ 6:11). ಪರಿಶುದ್ಧರಾಗುವುದೆಂದರೆ ದೇವರಿಗಾಗಿ ಮತ್ತು ಆತನ ಸೇವೆಗಾಗಿ ಪ್ರತ್ಯೇಕಿಸಲ್ಪಡುವುದು. ಆದರೆ ಕ್ರೈಸ್ತರಾಗಿ ನಾವು ಬೆಳೆಯಬೇಕು ಮತ್ತು ಅಭಿವೃದ್ಧಿಯಾಗಬೇಕು. ತಾನು ಕೊರಿಂಥದವರಿಗೆ ಬರೆಯುವ ಪತ್ರಿಕೆಯಲ್ಲಿ ಪೌಲನು ಅದೇ ರೀತಿಯ ಅಂಶವನ್ನು ತಿಳಿಸುತ್ತಾನೆ, "ಈ ವಾಗ್ದಾನಗಳು ನಮಗಿರುವುದರಿಂದ ನಾವು ಶರೀರಾತ್ಮಗಳ ಕಲ್ಮಶವನ್ನು ತೊಲಗಿಸಿ ನಮ್ಮನ್ನು ಶುಚಿಮಾಡಿಕೊಂಡು ದೇವರ ಭಯದಿಂದ ಕೂಡಿದವರಾಗಿ ಪವಿತ್ರತ್ವವನ್ನು ಸಿದ್ಧಿಗೆ ತರುವುದಕ್ಕೆ ಪ್ರಯತ್ನಿಸೋಣ" (2 ಕೊರಿಂಥ 7:11).

## ಹಂಚಿಕೊಳ್ಳುವ ಸಮಯ

1. 1:3–16 ರಲ್ಲಿ ತನ್ನ ಓದುಗರಿಗಾಗಿ ಪೇತ್ರನು 5 ಎಚ್ಚರಿಕೆ/ಹಿತವಚನಗಳನ್ನು ಹೇಳುತ್ತಾನೆ. ಇಂದಿನ ದಕ್ಷಿಣ ಭಾರತದಲ್ಲಿನ ವಿಶ್ವಾಸಿಗಳ ದೃಷ್ಟಿಕೋನದಿಂದ ಈ ಎಚ್ಚರಿಕೆ/ಹಿತವಚನಗಳನ್ನು ನೋಡಿರಿ. ನಿಮ್ಮ ಸಾರಾಂಶಗಳನ್ನು ಬರೆಯಿರಿ/ಪಟ್ಟಿಮಾಡಿರಿ.

    a. ಕಾರ್ಯಕ್ಕಾಗಿ ನಿಮ್ಮ ಮನಸ್ಸುಗಳನ್ನು ನೀವು ಹೇಗೆ ಸಿದ್ಧಗೊಳಿಸುವಿರಿ?

    b. ನಿಮ್ಮ ಜೀವನದ ಯಾವ ಕ್ಷೇತ್ರದಲ್ಲಿ ನಿಮಗೆ ಸ್ವಸ್ಥ ತೀರ್ಪಿನ ಅವಶ್ಯಕತೆಯಿದೆ?

    c. ಯೇಸು ಕ್ರಿಸ್ತನ ಬರೋಣಕ್ಕೆ ನಿಮ್ಮ ಮನೋಭಾವನೆಯೇನು?

d. ನಿಮ್ಮ ಹಿಂದಿನ ಪಾಪಮಯ ಜೀವನದ ಕೆಟ್ಟ ಆಶೆಗಳು ಯಾವುವು? ಎಲ್ಲಿಯವರೆಗೆ ಅವು ನಿಮ್ಮನ್ನು ಈಗಲೂ ಪೀಡಿಸುತ್ತವೆ?

e. ನಿಮ್ಮ ದೈನಂದಿನ ಜೀವನದ ಯಾವ ಭಾಗವು ಇನ್ನೂ ಹೆಚ್ಚಾಗಿ ಪರಿಶುದ್ಧತೆಯಿಂದ ಶುದ್ಧಿಕರಿಸಲ್ಪಡಬೇಕು?

2. ಯಾವ ವಿಧದಲ್ಲಿ ನೀವು ಈ ಲೋಕದಲ್ಲಿ ಪರದೇಶಿಗಳಾಗಿ ಜೀವಿಸುವಿರಿ? ಕೆಲವು ಅಂಶಗಳನ್ನು ಪಟ್ಟಿಮಾಡಿರಿ.

3. ನಿಮ್ಮ 'ಆಹಾರ' ಯಾವುದು? ರಕ್ಷಣೆಯಲ್ಲಿ ಬೆಳೆಯುವುದಕ್ಕಾಗಿ ನೀವು ಏನನ್ನು ತಿನ್ನುವಿರಿ ಅಥವಾ ಕುಡಿಯುವಿರಿ? ನಿಮ್ಮ ಆತ್ಮಿಕ ಅಭಿವೃದ್ಧಿಗಾಗಿ ನೀವು ಏನನ್ನು ಅಶಿಸುವಿರಿ? ಕೆಲವು ಅಂಶಗಳನ್ನು ಪಟ್ಟಿಮಾಡಿರಿ.

## ಪ್ರಾರ್ಥನಾ ಸಮಯ

ನೀವು ಚಿಕ್ಕ ಗುಂಪಾಗಿ ಅಥವಾ ಒಬ್ಬರಾಗಿ ಪ್ರಾರ್ಥಿಸಬಹುದು. ಉಳಿದವುಗಳು ತೀರಾ ವೈಯಕ್ತಿಕ ಪ್ರಾರ್ಥನೆಗಾಗಿ ಮಾತ್ರ ಸೂಕ್ತವಾಗಿರುವುದರಿಂದ ಗುಂಪು ಪ್ರಾರ್ಥನೆಗಾಗಿ ಕೆಲವು ಅಂಶಗಳನ್ನು ಸೂಕ್ತವಾಗಿವೆ.

1. ಯಜ್ಞದ ಕುರಿಯ ರಕ್ತದಿಂದ ನೀನು ಪರಿಶುದ್ಧನಾಗಿ ಮಾಡಲ್ಪಟ್ಟಿವೆಯೆಂಬುದನ್ನು ನೀವೆಂದೂ ಮರೆಯದವರಾಗಿರುವಂತೆ ಪ್ರಾರ್ಥಿಸಿರಿ. ಇದು ನಿಮ್ಮ ಪ್ರಯತ್ನಗಳ ಮೂಲಕವಾಗಿ ಅಲ್ಲ, ಅಥವಾ ನೀನು ಏನನ್ನೂ ಮಾಡಿದ್ದರಿಂದಲ್ಲ. ಆದರೆ ಯೇಸು ಕ್ರಿಸ್ತನು ಮಾಡಿದ್ದರ ನಿಮಿತ್ತವಾಗಿದೆ. ಇದೆಲ್ಲವೂ ದೇವರ ಕೃಪೆಯಿಂದಾಗಿದೆ, ಆತನ ವಿಮೋಚನೆಯ ಮತ್ತು ತ್ಯಾಗಮಯವಾದ ಕೃಪೆಗಾಗಿ ಆತನಿಗೆ ಕೃತಜ್ಞತೆ ಸಲ್ಲಿಸಿರಿ.

   ಅಲ್ಲದೆ ಸಭೆಗಾಗಿನ ನಿಮ್ಮ ಸೇವೆಯಲ್ಲಿ ಈ ಮೂಲ ಸತ್ಯವನ್ನು ನೀವೆಂದೂ ಮರೆಯಬಾರದೆಂಬುದಾಗಿ ಪ್ರಾರ್ಥಿಸಿರಿ. ಯಾವಾಗಲೂ ದೇವರ ಕೃಪೆ ಮತ್ತು ಪ್ರೀತಿಯನ್ನು ಪ್ರಸಂಗಿಸಿರಿ ಮತ್ತು ಬೋಧಿಸಿರಿ. ಎಂದಿಗೂ ಧರ್ಮಶಾಸ್ತ್ರ/ಕಟ್ಟಳೆಯನ್ನು ಪ್ರಸಂಗಿಸದಿರಿ ಮತ್ತು ಬೋಧಿಸದಿರಿ. ಅದು ನಿಯಮಗಳನ್ನು ಪಾಲಿಸುವುದು ರಕ್ಷಣೆಯೆಡೆಗೆ ನಡೆಸುತ್ತದೆ, ಪವಿತ್ರ ಜೀವನವು ರಕ್ಷಣೆಗೆ ನಡೆಸುತ್ತದೆ ಎನ್ನುವುದು ದುರ್ಬೋಧನೆಯಾಗಬಲ್ಲದು. ಆದರೆ ನಿಮ್ಮ ಮಂದೆಯು ಆತ್ಮಿಕವಾಗಿ ಬೆಳೆದು ಮತ್ತು ಅಭಿವೃದ್ಧಿಯಾಗಿ, ಹೆಚ್ಚು ಹೆಚ್ಚಾಗಿ ಕ್ರಿಸ್ತನಂತೆ ಆಗುವುದಕ್ಕಾಗಿ ಪ್ರೋತ್ಸಾಹಿಸಿರಿ.

2. ಪ್ರಸ್ತುತ ದುಷ್ಟ ಜಗತ್ತಿನಲ್ಲಿನ ನಿನ್ನ ಜೀವನವು ಯಾವಾಗಲೂ ದೇವರ ಭಕ್ತಿಯನ್ನು ಮತ್ತು ಪರಿಶುದ್ಧತೆಯನ್ನು ವ್ಯಕ್ತಪಡಿಸುವುದಕ್ಕಾಗಿ ಪಾರ್ಥಿಸಿರಿ. ಇತರ ಸಹ ವಿಶ್ವಾಸಿಗಳೊಂದಿಗೆ ನಿಮ್ಮ ಸಂಬಂಧಗಳಲ್ಲಿ ಯಥಾರ್ಥವಾದ ಸಹೋದರ ಪ್ರೀತಿಯಿರಬೇಕು. ನಿಮ್ಮ ಸಭೆಯಲ್ಲಿ ದೀನತೆ ಮತ್ತು ಐಕ್ಯತೆಯ ಆತ್ಮವಿರಲಿ.

3. ನೀವು ಈ ಲೋಕದಲ್ಲಿ ನಿಮ್ಮ ಜೀವನಗಳಲ್ಲಿ ಸತ್ಯವೇದದ ದೃಷ್ಟಿಕೋನಗಳನ್ನು ಹೊಂದಿರುವಂತೆ ಪ್ರಾರ್ಥಿಸಿರಿ. ನೀವು ಪ್ರವಾಸಿಗಳೂ ಪರದೇಶಿಗಳೂ ಆಗಿದ್ದು ಮತ್ತು ಈ ಲೋಕವು ನಿಮ್ಮ ನಿಜವಾದ ಮನೆಯಲ್ಲವೆಂಬುದನ್ನು ಜ್ಞಾಪಕಮಾಡಿಕೊಳ್ಳಿರಿ. ನೀವು ದೇವರ

ರಾಜ್ಯದ ಪ್ರಜೆಗಳಾಗಿರುವಿರೆಂಬುದನ್ನು ನೆನಸಿಕೊಳ್ಳಿರಿ. ಯಾವಾಗಲೂ ನಿರ್ಗಮನಕ್ಕೆ ಸಿದ್ಧರಾಗಿರಿ. ಆತ್ಮಿಕ ಮತ್ತು ಲೌಕಿಕವಾದ ನಿಮ್ಮ ವ್ಯವಹಾರ/ಸಂಬಂಧಗಳು ಸರಿಯಾಗಿರುವಂತೆ ನೋಡಿಕೊಳ್ಳಿರಿ. ಯಾವಾಗಲೂ ಆತ್ಮಿಕವಾಗಿ ಎಚ್ಚರವಾಗಿದ್ದು ನಿಮ್ಮ ಕರ್ತನನ್ನು ಸಂಧಿಸುವುದಕ್ಕಾಗಿ ಸಿದ್ಧರಾಗಿರಿ. ಈ ಭೂಮಿಯ ಮೇಲಿನ ನಿಮ್ಮ ದಿನಗಳು ಈ ರಾತ್ರಿಯೇ ಮುಗಿಯಬಹುದು ಅಥವಾ ನಾಳೆಯೇ ಯೇಸು ಕ್ರಿಸ್ತನ ಬರೋಣದ ದಿನವಾಗಿರಬಹುದು.

4. ನೀವು ಸ್ವಂತವಲ್ಲದೆ ಸಭೆಯಾಗಿ ಸಹ ನಿಮ್ಮ ಆತ್ಮಿಕ ಬೆಳವಣಿಗೆಗಾಗಿ ಪ್ರಾರ್ಥಿಸಿರಿ. ಆತ್ಮಿಕ ಆಹಾರವು (ದೇವರ ವಾಕ್ಯ, ಸತ್ಯವೇದ) ಕೇವಲ ಸಂದೇಶ ಮತ್ತು ಸತ್ಯವೇದ ಅಧ್ಯಯನ ಮೂಲಕವಾಗಿ ಮಾತ್ರ ಲಭ್ಯವಾಗಬಾರದು, ಆದರೆ ಇದು ಭುಜಿಸುವಂತೆಯು ಮತ್ತು ಜೀರ್ಣಿಸಿಕೊಳ್ಳುವಂತೆಯು ಇರಬೇಕೆಂದು ಪ್ರಾರ್ಥಿಸಿರಿ. ನೀವು ಮತ್ತು ನಿಮ್ಮ ಸಹ ವಿಶ್ವಾಸಿಗಳು ದಾಹದಿಂದ ದೇವರ ವಾಕ್ಯದಿಂದ ಉಣಿಸಲ್ಪಡಬೇಕು/ಪೋಷಿಸಲ್ಪಡಬೇಕು. ಆದದರಿಂದ ನೀವು ಶುದ್ಧವಾದ ಹಾಲನ್ನು ಆಶಿಸಿ ದಾಹದಿಂದ ಕುಡಿಯುವಂತಾಗಬೇಕು. ಅದರಿಂದ ನೀವು ಬೆಳೆದು ಕ್ರಿಸ್ತನ ಪರಿಪೂರ್ಣತೆಯನ್ನು ಮುಟ್ಟಬಹುದು (ಎಫೆಸ 4:13).

5. ಹಂಚಿಕೊಳ್ಳುವ ಸಮಯದಲ್ಲಿ ನಿಮ್ಮ ನೋಟ್ಸ್‌ಗೆ ಹೋಗಿರಿ.

   a. ನೀವು ನಿಜವಾಗಲೂ ನಿಮಗೆ ಪ್ರಾರ್ಥನೆಯ ಅವಶ್ಯಕತೆಯಿರುವ ಎರಡು ವಿಷಯಗಳನ್ನು ಆರಿಸಿಕೊಳ್ಳಿರಿ. ಈ ವಿಷಯಗಳ ಬಗ್ಗೆ ಕೆಲವು ಸಮಯ ಪ್ರಾರ್ಥನೆಯಲ್ಲಿ ಕಳೆಯಿರಿ.

   b. ನೀವು ಬದಲಾವಣೆಯನ್ನು ಬಯಸುವ ಎರಡು ಕ್ಷೇತ್ರಗಳನ್ನು ಆರಿಸಿಕೊಳ್ಳಿರಿ. ಈ ಕ್ಷೇತ್ರಗಳ ಬಗ್ಗೆ ಪ್ರಾರ್ಥಿಸಿರಿ. ನಿಮ್ಮ ನಿರ್ಧಾರಗಳನ್ನು ಬರೆಯಿರಿ ಮತ್ತು ದೇವರ ರಾಜ್ಯದ ವಿಸ್ತರಣೆಗಾಗಿ ಪ್ರಯೋಜನಕಾರಿಯಾಗಿರುವ ಈ ನಿರ್ಧಾರಗಳನ್ನು ನಿಮ್ಮ ಜೀವನ ಮತ್ತು ಸೇವೆಯು ದೇವರಿಗೆ ಮಹಿಮೆ ತರುವಂತೆ ಜ್ಞಾನ ಮತ್ತು ಬಲ ಕೊಡುವಂತೆ ಪ್ರಾರ್ಥಿಸಿರಿ.

## ಸತ್ಯವೇದ ಅಧ್ಯಯನ/ಸಂದೇಶ/ಧ್ಯಾನ.

ಈ ಆತ್ಮಿಕ ಕೂಟ ವಿಭಾಗದ ವಿಷಯಗಳಿಂದ ಆಧಾರಿತಗೊಂಡಿರುವ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ.

*"ನಿಮ್ಮ ಹಿರಿಯರು ಕಲಿಸಿಕೊಟ್ಟ ವ್ಯರ್ಥವಾದ ನಡವಳಿಕೆಯಿಂದ ನಿಮಗೆ ಬಿಡುಗಡೆಯಾದದ್ದು ಬೆಳ್ಳಿಬಂಗಾರ ಮೊದಲಾದ ನಶಿಸಿಹೋಗುವ ವಸ್ತುಗಳಿಂದಲ್ಲ, ಪೂರ್ಣಾಂಗವಾದ ನಿಷ್ಕಳಂಕ ಯಜ್ಞದ ಕುರಿಯ ರಕ್ತದಿಂದಲೋ ಎಂಬಂತೆ ಕ್ರಿಸ್ತನ ಅಮೂಲ್ಯವಾದ ರಕ್ತದಿಂದಲೇ ಎಂದು ಬಲ್ಲಿರಲ್ಲವೇ"*
(1 ಪೇತ್ರ 1:1–8, 19).

# ವಿಭಾಗ 2: ಹೊಸ ಜೀವನ ಶೈಲಿ

ಪೀಠಿಕೆ: ಈ ವಿಭಾಗವು 1 ಪೇತ್ರ 2:11– 3:7 ಮತ್ತು ಪಠ್ಯಪುಸ್ತಕದಲ್ಲಿನ ಅಧ್ಯಯನ 5 ಮತ್ತು 6 ರ ಮೇಲೆ ಆಧರಿತಗೊಂಡಿದೆ. ಹಾಗಾಗಿ ಮೊದಲಿನದನ್ನು ನೀವು ನೆನಪಿಸಿಕೊಳ್ಳಬೇಕು.

- ಪುನಃ ಓದಿರಿ, 1 ಪೇತ್ರ 2:11– 3:7.
- ಅಧ್ಯಯನಗಳನ್ನು ವಿಮರ್ಶಿಸಿರಿ– 5 ಮತ್ತು 6.
- 5 ಮತ್ತು 6 ರ ಉತ್ತರಗಳನ್ನು ವಿಮರ್ಶಿಸಿರಿ.

ಈ ಆತ್ಮಿಕ ಕೂಟದ ಉದ್ದೇಶವು ದಕ್ಷಿಣ ಭಾರತದ ಹಿನ್ನಲೆಯಲ್ಲಿ ಹೇಗೆ ಹೊಸ ಜೀವನ ಶೈಲಿಯಲ್ಲಿ ಜೀವಿಸಬಹುದೆಂಬ ತಿಳುವಳಿಕೆಯನ್ನು ಆಳವಾಗಿಸುವುದಾಗಿದೆ.

ನಾವು ಯಾವಾಗಲೂ ಮುಖ್ಯ ನಿಯಮಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು: ಎಲ್ಲಾದರಲ್ಲಿ ನಾವು ಯೇಸು ಕ್ರಿಸ್ತನಂತೆ ಆಗಬೇಕು.

ಯೇಸು ಕ್ರಿಸ್ತನು ನಮಗಾಗಿ ಶಿಲುಬೆಯ ಮೇಲೆ ಸತ್ತಾಗ ಆತನು ನಮ್ಮನ್ನು ಪಾಪದಿಂದ ಮತ್ತು ಮರಣದಿಂದ ಬಿಡಿಸಿದನು. ನಮ್ಮ ರಕ್ಷಣೆಗಾಗಿ ಆತನು ತೆತ್ತ ಬೆಲೆಯು ಆತನ ಸ್ವಂತ ಜೀವವಾಗಿದೆ. ಈಗ ನಾವು ಆತನವರಾಗಿದ್ದೇವೆ ಮತ್ತು ನಾವು ಹೆಚ್ಚು ಹೆಚ್ಚಾಗಿ ಆತನಂತೆ ಆಗಬೇಕೆಂದು ಆತನು ಬಯಸುತ್ತಾನೆ. ಆತನು ಬಾಧೆಪಟ್ಟು ಸತ್ತಾಗ ಆತನು ನಮಗೊಂದು ಮಾದರಿಯನ್ನು ಬಿಟ್ಟು ಹೋಗಿದ್ದಾನೆ. ಅದೇನೆಂದರೆ– ನಾವು ಆತನ ಹೆಜ್ಜೆ ಜಾಡನ್ನು ಹಿಂಬಾಲಿಸುವುದು (1 ಪೇತ್ರ 2:21). ಅನ್ಯಾಯವಾಗಿ ಬಾಧೆಪಡುವುದರಲ್ಲಿ ಯೇಸು ಕ್ರಿಸ್ತನು ನಮಗೆ ಮಾದರಿಯಾಗಿದ್ದಾನೆ. ಸಾರ್ವಜನಿಕ ವ್ಯವಹಾರ/ಸಂಬಂಧ ಮತ್ತು ವೈಯಕ್ತಿಕ ಸಂಬಂಧಗಳಲ್ಲಿ ಸಹ ಯೇಸು ನಮ್ಮ ಮಾದರಿಯಾಗಿದ್ದಾನೆ. ಇಂದಿನ ದಕ್ಷಿಣ ಭಾರತದ ಹಿನ್ನಲೆಯಲ್ಲಿ ಸಹ ನಮ್ಮ ಹೊಸ ಜೀವನ ಶೈಲಿಗೆ ಯೇಸು ಕ್ರಿಸ್ತನು ಸಂಕೇತವಾಗಿದ್ದಾನೆ.

## ಹಂಚಿಕೊಳ್ಳುವ ಸಮಯ.

1. ವಿಶ್ವಾಸಿಗಳ ಜೀವಿತವನ್ನು ಪೇತ್ರನು ಈ ರೀತಿಯಲ್ಲಿ ವಿವರಿಸುತ್ತಾನೆ (1 ಪೇತ್ರ 2:11–12).

    a. ವಿಶ್ವಾಸಿಗಳು ಈ ಲೋಕದಲ್ಲಿ ಪ್ರವಾಸಿಗಳೂ ಮತ್ತು ಪರದೇಶಿಗಳೂ ಆಗಿದ್ದಾರೆ.

    b. ವಿಶ್ವಾಸಿಗಳು ಯುದ್ಧರಂಗದಲ್ಲಿ ಜೀವಿಸುತ್ತಿದ್ದಾರೆ.

    c. ವಿಶ್ವಾಸಿಗಳ ಉತ್ತಮ ಜೀವಿತವು ತಮ್ಮ ಸುತ್ತಣ, ವಿಶೇಷವಾಗಿ ಅಕ್ರೈಸ್ತರಿಗೆ ಒಂದು ಸಾಕ್ಷಿಯಾಗಿರುತ್ತದೆ.

    d. ವಿಶ್ವಾಸಿಗಳನ್ನು ದೂಷಿಸುವವರೂ ಸಹಅವರ ಜೀವಿತವನ್ನು ಕಂಡು ದೇವರನ್ನು ಮಹಿಮೆ ಪಡಿಸುವಂತಾಗಬಹುದು.

ಇಂದಿನ ದಕ್ಷಿಣ ಭಾರತದ ಹಿನ್ನಲೆಯಲ್ಲಿ ಈ ನಾಲ್ಕು ಅಂಶಗಳನ್ನು ವಿಮರ್ಶಿಸಿರಿ. ನಂತರ ಪೇತ್ರನ ಬೋಧನೆಯ ಬೆಳಕಿನಡಿಯಲ್ಲಿ ನಿಮ್ಮ ಮೌಲ್ಯ ಮತ್ತು ಜೀವನಶೈಲಿಯನ್ನು ಮೌಲ್ಯಮಾಪನ ಮಾಡಿರಿ. ಕೆಲವು ಅಂಶಗಳನ್ನು ಪಟ್ಟಿಮಾಡಿರಿ.

2. ಎಲ್ಲರನ್ನು ಸನ್ಮಾನಿಸಿರಿ (1 ಪೇತ್ರ 2:17). ಈ ಹೇಳಿಕೆಯಿಂದ ನಮ್ಮ ಸುತ್ತಣ ಜನರೊಂದಿಗೆ ವಿಶ್ವಾಸಿಗಳು ಹೇಗೆ ವರ್ತಿಸಬೇಕೆಂದು ಪೇತ್ರನು ಸಾರಾಂಶಗೊಳಿಸುತ್ತಾನೆ. ಅನಂತರ ಆತನು ಇದು ಹೇಗೆ ಆಗಬೇಕೆಂದು 3 ಉದಾಹರಣೆಗಳನ್ನು ಕೊಡುತ್ತಾನೆ.

   a. ನಾವು ನಮ್ಮ ಸಹೋದರರನ್ನು, ಸಹ ವಿಶ್ವಾಸಿಗಳನ್ನು ಪ್ರೀತಿಸಬೇಕು.

   b. ನಾವು ದೇವರಿಗೆ ಭಯಪಡಬೇಕು. ದೇವರಿಗೆ ಭಯಪಡುವುದೆಂದರೆ– ಆತನನ್ನು ಪ್ರೀತಿಸುವುದು, ಗೌರವಿಸುವುದು, ವಿಧೇಯರಾಗುವುದು ಮತ್ತು ಸನ್ಮಾನಿಸುವುದಾಗಿದೆ.

   c. ನಾವು ಅರಸರನ್ನು ಸನ್ಮಾನಿಸಬೇಕು. ಇದು ಕೇವಲ ಅರಸರನ್ನು ಮಾತ್ರವಲ್ಲ, ಮನುಷ್ಯರಿಂದ ಮಾಡಲ್ಪಟ್ಟ ಎಲ್ಲಾ ಅಧಿಕಾರವನ್ನು ಸನ್ಮಾನಿಸಬೇಕೆಂಬುದನ್ನು ಸೂಚಿಸುತ್ತದೆ (ವ.13).

   ದಕ್ಷಿಣ ಭಾರತದ ಹಿನ್ನಲೆಯಲ್ಲಿ ಈ ಮೂರು ಸಂಬಂಧಗಳಲ್ಲಿ ಯಾವುದು ಸುಲಭವೆಂದು ನೀವು ಕಾಣುವಿರಿ? ಯಾಕೆ? ಯಾವುದು ಕಷ್ಟಕರವೆಂದು ಕಾಣುವಿರಿ? ಯಾಕೆ? ಕೆಲವು ಅಂಶಗಳನ್ನು ಪಟ್ಟಿಮಾಡಿರಿ.

3. ನಿಮ್ಮ ಮೇಲಿನವರಿಂದ ಅನ್ಯಾಯವಾಗಿ ನೀವು ಬಾಧೆಪಡುವಾಗ ನೀವು ಏನೆಂದು ಎಣಿಸುವಿರಿ? ಮತ್ತು ಹೇಗೆ ಪ್ರತಿಕ್ರಿಯಿಸುವಿರಿ?

   ಅನ್ಯಾಯವಾಗಿ ಬಾಧೆಪಡುವ ಸಮಯಗಳಲ್ಲಿ ನಿಮ್ಮ ಕ್ರೈಸ್ತೀಯ ಜೀವನದ ಗುಣಮಟ್ಟದ ಬಗ್ಗೆ ನಿಮ್ಮ ಸಾರಾಂಶ/ಮುಕ್ತಾಯ ಏನು? ಟಿಪ್ಪಣಿ: ತಮ್ಮ ಮೇಲಿನವರಿಂದ ಅನ್ಯಾಯವಾಗಿ ಬಾಧೆಗೊಳಗಾಗುವಾಗ ಅನೇಕ ವಿಶ್ವಾಸಿಗಳು ಸಿಟ್ಟಿನಿಂದ ಪ್ರತಿಕ್ರಿಯಿಸುವರು. ಅವರು ಪ್ರತಿಕಾರ ತಗೆದುಕೊಳ್ಳಲು ಬಯಸುವರು ಅಥವಾ ಇದರ ಬಗ್ಗೆ ತಮ್ಮ ಸ್ನೇಹಿತರಿಗೆ ಅವರು ಕಹಿಯಾಗಿ ದೂರಬಹುದು. ಇದೆಲ್ಲವೂ ಮಾನುಷಿಕ– ಆದರೆ ಸತ್ಯವೇಧಾರಿತವಲ್ಲದ ಪ್ರತಿಕ್ರಿಯೆಗಳು.

   ನಿಮ್ಮ ಅವಲೋಕನಗಳನ್ನು ಪಟ್ಟಿಮಾಡಿರಿ.

4. 1 ಪೇತ್ರ 2:16 ರಲ್ಲಿ ಪೇತ್ರನು ಸ್ವಾತಂತ್ರ ದ ಬಗ್ಗೆ ಬರೆಯುತ್ತಾನೆ. ದೇವರಿಗೆ ಭಯಪಡುವುದು (ವ.17) ಎಂಬ ಹೇಳಿಕೆಯಲ್ಲಿ ಈ ವಚನವು ಏನೆಂದು ಹೇಳುತ್ತದೆಂಬುದನ್ನು ಅರ್ಥೈಸಿಕೊಳ್ಳಬಹುದು. ದೇವರಿಗೆ ಭಯಪಡುವುದರ ಒಂದು ನೋಟವು ಆತನ ಸೇವಕರಂತೆ ಜೀವಿಸುವುದು ಮತ್ತು ಆತನ ಚಿತ್ತವನ್ನು ನೆರವೇರಿಸುವುದಾಗಿದೆ. ಆತನಲ್ಲಿ ನಮಗೆ ಸ್ವಾತಂತ್ರವಿದೆ. ಆದರೆ ಇದು ಕೆಟ್ಟದ್ದನ್ನು ಮಾಡುವುದಕ್ಕಿರುವ ಸ್ವಾತಂತ್ರವಲ್ಲ. ಬದಲಾಗಿ ಒಳ್ಳೆಯದನ್ನು ಮಾಡಲು, ಆತನಿಗೆ ಮತ್ತು ನಮ್ಮ ಸ್ನೇಹಿತರಿಗೆ ಸೇವೆಮಾಡಲು ಇರುವ ಸ್ವಾತಂತ್ರವಾಗಿದೆ.

   ಇಂದು ದಕ್ಷಿಣ ಭಾರತದ ಹಿನ್ನಲೆಯಲ್ಲಿ ಸಭೆಯು ಹೇಗೆ ಈ ರೀತಿಯ ಸ್ವಾತಂತ್ರ್ಯವನ್ನು ವ್ಯಕ್ತಪಡಿಸಬಲ್ಲದು ಎಂಬುದಕ್ಕೆ ಉದಾಹರಣೆಯನ್ನು ಕೊಡಿರಿ. ಕೆಲವು ಅಂಶಗಳನ್ನು ಪಟ್ಟಿಮಾಡಿರಿ.

5. ಇಂದಿನ ದಕ್ಷಿಣ ಭಾರತದಲ್ಲಿನ ವಿಶ್ವಾಸಿಗಳ ಬೆಳಕಿನಡಿಯಲ್ಲಿ ನಮ್ಮ ಪ್ರಶ್ನೆ 7 ರ ಉತ್ತರದ ಮೇಲೆ ಒಟ್ಟಾಗಿ ಅವಲೋಕನ ಮಾಡಿರಿ (ಉತ್ತರ 6 ನ್ನು ನೋಡಿರಿ). ದೇವರ ರಾಜ್ಯಕ್ಕೆ (ಗಂಡ ಮತ್ತು ಹೆಂಡತಿಯ ನಡುವೆ ಪೂರ್ಣ ಸಮಾನತೆ ಇರುವಲ್ಲಿ) ಮತ್ತು ಸ್ಥಳಿಯ ಸಂಸ್ಕೃತಿಗೆ (ಈಗಲೂ ಸ್ತ್ರೀ ಮತ್ತು ಪುರುಷರ ನಡುವೆ ಮತ್ತು ಗಂಡ–ಹೆಂಡತಿಯರ ನಡುವೆ ಅಸಮಾನತೆ ಇರುವಲ್ಲಿ) ನಾವು ಹೇಗೆ ನೈಜವಾಗಿರಬಹುದು. ನಿಮ್ಮ ಸಾರಾಂಶವನ್ನು ಪಟ್ಟಿಮಾಡಿರಿ.

6. ಇಂದಿನ ದಕ್ಷಿಣ ಭಾರತದಲ್ಲಿ ಸಮಾಜದಲ್ಲಿನ ಮಹಿಳೆಯರ ಸ್ಥಾನಮಾನದ ಮೇಲೆ ಅವಲೋಕನ ಮಾಡಿರಿ. ಯಾವ ಮಟ್ಟದವರೆಗೆ ಮತ್ತು ಹೇಗೆ ಸ್ತ್ರೀಯರು ಪುರುಷರಿಗಿಂತ ಬಲಹೀನರಾಗಿದ್ದಾರೆ (ಹೆಂಡತಿಯರು ಗಂಡಂದಿರಿಗಿಂತ ಬಲಹೀನರು). ಜೀವನದ ವಿಭಿನ್ನವಾದ ಅಂಶಗಳನ್ನು ನೋಡಿರಿ: ದೈಹಿಕ, ಸಾಮಾಜಿಕ, ಸಾಂಸ್ಕೃತಿಕ, ಕಾನೂನಾತ್ಮಕ, ಆರ್ಥಿಕ, ಶೈಕ್ಷಣಿಕ ಮತ್ತು ಆತ್ಮಿಕ. ನಿಮ್ಮ ಸಾರಾಂಶವನ್ನು ಪಟ್ಟಿಮಾಡಿರಿ.

## ಪ್ರಾರ್ಥನಾ ಸಮಯ

ನೀವು ಚಿಕ್ಕ ಗುಂಪಾಗಿಯೇ ಅಥವಾ ವೈಯಕ್ತಿಕವಾಗಿ ಪ್ರಾರ್ಥಿಸಬಹುದು. ಕೆಲವು ಪ್ರಾರ್ಥನಾ ಅಂಶಗಳು ಗುಂಪು ಪ್ರಾರ್ಥನೆಗೆ ಹೊಂದಿಕೆಯಾದರೆ ಇನ್ನೂ ಕೆಲವುಗಳು ವೈಯಕ್ತಿಕವಾಗಿ ವ್ಯಕ್ತಿಗತ ಪ್ರಾರ್ಥನೆಗೆ ಹೊಂದಿಕೆಯಾಗಬಹುದು.

1. ಸಾರ್ವಜನಿಕವಾಗಿಯೂ ಮತ್ತು ವೈಯಕ್ತಿಕವಾಗಿಯೂ ನಿಮ್ಮ ಜೀವನವು ಸತ್ಯವೇದದ ಸ್ವಾತಂತ್ರ್ಯವನ್ನು ಪ್ರತಿಬಿಂಬಿಸುವಂತೆ ಪ್ರಾರ್ಥಿಸಿರಿ. ಇದು ನೀವು ಭಾವಿಸುವುದನ್ನೆಲ್ಲಾ ಮಾಡಲಿಕ್ಕಿರುವ ಸ್ವಾತಂತ್ರ್ಯವಲ್ಲ. ಆದರೆ ಒಳ್ಳೆಯದನ್ನು ಮಾಡಲು, ಕ್ರಿಸ್ತನಂತೆ ಆಗಲು ಇರುವ ಸ್ವಾತಂತ್ರ್ಯವಾಗಿದೆ.

2. ಯೇಸು ಕ್ರಿಸ್ತನ ಹೆಜ್ಜೆ ಜಾಡಿನಲ್ಲಿ ನಡೆಯುವುದು ಸಮರ್ಪಣೆಯೆಡೆಗೆ ಅಲ್ಲದೇ ಹಿಂಸೆಗೆ ಸಹ ನಡೆಸುತ್ತದೆ.

    a. ದಕ್ಷಿಣ ಭಾರತದಲ್ಲಿನ ಸಭೆಯು ದೀನತೆ, ಸಮರ್ಪಣೆ ಮತ್ತು ಅನ್ಯಾಯವಾಗಿ ಬಾಧೆಪಡುವುದರಲ್ಲಿ ಹೆಚ್ಚಾಗಿ ಕ್ರಿಸ್ತನಂತೆ ಆಗುವುದಕ್ಕಾಗಿ ಪ್ರಾರ್ಥಿಸಿರಿ.

    b. ನೀವು ಸಹ ದೀನತೆ, ಸಮರ್ಪಣೆ ಮತ್ತು ಅನ್ಯಾಯವಾಗಿ ಬಾಧೆಪಡುವುದನ್ನು ಕ್ರಿಸ್ತನಂತೆ ಆಗುವುದಕ್ಕಾಗಿ ಪ್ರಾರ್ಥಿಸಿರಿ.

3. ನೀವು 'ಹಂಚಿಕೊಳ್ಳುವ ಸಮಯ' ನೋಟ್ಸ್‌ಗೆ ಹೋಗಿರಿ.

    a. ನೀವು ನಿಜವಾಗಲೂ ಪ್ರಾರ್ಥಿಸಲು ಬಯಸುವ ಒಂದು ಅಥವಾ ಎರಡು ವಿಷಯಗಳನ್ನು ಆರಿಸಿಕೊಳ್ಳಿರಿ. ಈ ವಿಷಯಗಳಿಗಾಗಿ ಕೆಲಸಮಯ ಪ್ರಾರ್ಥನೆಯಲ್ಲಿ ಕಳೆಯಿರಿ.

    b. ನಿಮ್ಮ ಜೀವನದಲ್ಲಿ ನೀವು ಬದಲಾವಣೆ ಬಯಸುವ ಒಂದು ಅಥವಾ ಎರಡು ಕ್ಷೇತ್ರಗಳನ್ನು ಆರಿಸಿಕೊಳ್ಳಿರಿ. ಈ ಕ್ಷೇತ್ರಗಳ ಬಗ್ಗೆ ಪ್ರಾರ್ಥಿಸಿರಿ. ನಿಮ್ಮ ಜೀವನ ಮತ್ತು ಸೇವೆಯು ದೇವರಿಗೆ ಮಹಿಮೆ ತಂದು, ದೇವರ ರಾಜ್ಯದ ವಿಸ್ತರಣೆಗಾಗಿ

ಉಪಯೋಗವಾಗುವಂತೆ ಈ ನಿರ್ಧಾರಗಳನ್ನು ಕಾಪಾಡಿಕೊಳ್ಳಲು ಜ್ಞಾನ ಮತ್ತು ಬಲ ಕೊಡುವಂತೆ ಪವಿತ್ರಾತ್ಮನನ್ನು ಬೇಡಿಕೊಳ್ಳಿರಿ.

## ಸತ್ಯವೇದ ಅಧ್ಯಯನ/ಸಂದೇಶ/ಧ್ಯಾನ:

ಈ ಆತ್ಮಿಕ ಕೂಟ ವಿಭಾಗದ ಆಧಾರದ ಮೇಲೆ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ.ಇಂದಿನ ದಕ್ಷಿಣ ಭಾರತದಲ್ಲಿನ ಸಭೆಗೆ ಸಮಂಜಸವಾದ ಸಂದೇಶವನ್ನು ಇದು ಒಳಗೊಳ್ಳುವಂತೆ ನೋಡಿಕೊಳ್ಳಿರಿ.

# ಅವಧಿ 3: ಮಾನವನ ದುರಾಶೆಗಳೋ ಅಥವಾ ದೇವರ ಚಿತ್ತವೋ?

## ಪೀಠಿಕೆ

ಈ ಆತ್ಮಿಕ ಕೂಟ ಅವಧಿಯು 1 ಪೇತ್ರ 4:1–11 ಮತ್ತು ಈ ಪಠ್ಯಪುಸ್ತಕದಲ್ಲಿನ ಅಧ್ಯಯ 8 ರ ಮೇಲೆ ಆಧಾರಿತಗೊಂಡಿದೆ. ಹಾಗಾಗಿ ನಿಮ್ಮ ಜ್ಞಾಪಕಶಕ್ತಿಯು ಪುನಶ್ಚೇತನಗೊಳ್ಳಲಿ.

- 1 ಪೇತ್ರ 4:11 ನ್ನು ಪುನಃ ಓದಿರಿ.
- ಅಧ್ಯಯನ 8 ನ್ನು ಅವಲೋಕಿಸಿರಿ.
- ಉತ್ತರಗಳು 8 ನ್ನು ಅವಲೋಕಿಸಿರಿ.

ಈ ಆತ್ಮಿಕ ಕೂಟದ ಉದ್ದೇಶವು ದಕ್ಷಿಣ ಭಾರತದ ಹಿನ್ನಲೆಯಲ್ಲಿ ದೇವರ ಚಿತ್ತಕ್ಕಾಗಿ ಜೀವಿಸುವುದಕ್ಕೆ ಏನು ಪರಂಪರೆಯಾಗಿದೆ ಎಂಬುದರ ಬಗ್ಗೆ ನಿಮ್ಮ ತಿಳುವಳಿಕೆಯನ್ನು ಆಳವಾಗಿಸುವುದಾಗಿದೆ.

ಪೇತ್ರನು ತನ್ನ ಓದುಗರ ಮುಂದೆ ಎರಡು ರೀತಿಯ ಜೀವಿತಗಳನ್ನು ಚಿತ್ರಿಸುತ್ತಾನೆ. ಮೊದಲನೆಯದು, ಅವರು ಬಿಡುಗಡೆಯಾಗದ ಒಂದು ಹಳೆಯ ಜೀವನ. ಪೇತ್ರನು ಈ ಜೀವನದ ಬಗೆಯನ್ನು 'ಮನುಷ್ಯನ ಅಭಿಲಾಷೆಗಳಿಗಾಗಿನ ಜೀವಿತ' ಎನ್ನುತ್ತಾನೆ. ನಂತರ ಅವರನ್ನು ಈಗ ವಿಶ್ವಾಸಿಗಳೆಂದು ಗುರುತಿಸುವ ಹೊಸ ಕ್ರೈಸ್ತೀಯ ಜೀವಿತವಾಗಿದೆ. ಪೇತ್ರನು ಈ ಬಗೆಯ ಜೀವಿತವನ್ನು 'ದೇವರ ಚಿತ್ತಕ್ಕಾಗಿನ ಜೀವಿತ' ಎಂದು ಕರೆಯುತ್ತಾನೆ. ಹಾಗಾಗಿ ಹಳೆಯ ಜೀವಿತವು ಶರೀರಕ್ಕೆ ಸಂಬಂಧಿಸಿದ್ದಾಗಿದೆ (ಮನುಷ್ಯನ ಪಾಪಾಭಿಲಾಷೆ ಸ್ವಭಾವ). ಆದರೆ ಹೊಸ ಜೀವಿತವು ಆತ್ಮಿಕವಾದದ್ದಾಗಿದೆ ಮತ್ತು ದೇವರ ರಾಜ್ಯದ ನಿಯಮಗಳನ್ನು ಪ್ರತಿಬಿಂಬಿಸುತ್ತದೆ. ಮತ್ತು ಕ್ರೈಸ್ತೀಯ ವಿಶ್ವಾಸಿಗಳಾದ ನಾವು ಈ ವ್ಯತ್ಯಾಸದ ಬಗ್ಗೆ ಜಾಗ್ರತೆಯಿಂದಿರಬೇಕು ಮತ್ತು ಸರಿಯಾದ ಆಯ್ಕೆಯನ್ನು ಮಾಡಿಕೊಳ್ಳಬೇಕು.

## ಹಂಚಿಕೊಳ್ಳುವ ಸಮಯ

1. ವ. 7:1 ರಲ್ಲಿ ಪೇತ್ರನ ಎಚ್ಚರಿಕೆಯ ಹಿನ್ನಲೆಯ ಸನ್ನಿವೇಶವು– ನ್ಯಾಯತೀರ್ಪಾಗಿದೆ. ವಿಶ್ವಾಸಿಗಳಾದ ನಾವು ಕರ್ತನ ದಿನದ ನೆರಳಿನಲ್ಲಿ ಜೀವಿಸುವವರಾಗಿದ್ದೇವೆ. *ಎಲ್ಲವುಗಳ ಅಂತ್ಯವು ಹತ್ತಿರವಾಗಿದೆ.* ಹಾಗಾಗಿ ನಾವು ಯೇಸು ಕ್ರಿಸ್ತನ ಎರಡನೇ ಬರೋಣದ ಅಪೇಕ್ಷೆಯಲ್ಲಿ ಜವಾಬ್ದಾರಿಯುತವಾಗಿ ನಾವು ಜೀವಿಸಬೇಕು. ದಕ್ಷಿಣ ಭಾರತದಲ್ಲಿ ಇದು ಪ್ರಾಯೋಗಿಕವಾಗಿ ಸಭೆಗೆ ಮತ್ತು ವೈಯಕ್ತಿಕವಾಗಿ ವಿಶ್ವಾಸಿಗಳಿಗೆ ಏನರ್ಥವಾಗಬಹುದು? ಈ ವಿಷಯದ ಮೇಲೆ ಅವಲೋಕನ ಮಾಡಿರಿ.
2. ಇಂದು ದಕ್ಷಿಣ ಭಾರತದಲ್ಲಿನ ಕ್ರೈಸ್ತ ವಿಶ್ವಾಸಿಗಳಾಗಿ ಜೀವಿಸುವ ನಿಮ್ಮ ಜೀವನವನ್ನು ಹಳೆಯ ಜೀವನದೊಂದಿಗೆ ಹೋಲಿಸುವ ಒಂದು ಪಟ್ಟಿಯನ್ನು ಮಾಡಿರಿ. ಯಥಾರ್ಥರಾಗಿರಿ. ನೀವು ಯಥಾರ್ಥರಾಗಿರದಿದ್ದರೆ ಇದರಲ್ಲಿ ನಿಮ್ಮ ಸಮಯವನ್ನು ಕಳೆಯಬೇಡಿರಿ. ನಿಮಗಿಷ್ಟ ಬಂದಷ್ಟು ಉದ್ದವಾಗಿ ಈ ಪಟ್ಟಿಯನ್ನು ಮಾಡಬಹುದು

(ಹಿಂದೂ ಹಿನ್ನಲೆಯಿಂದ ಬದಲಾಗಿ ನೀವು ನಾಮಧೇಯ ಕ್ರೈಸ್ತ ಹಿನ್ನಲೆಯಿಂದ ಬಂದರೂ ಇದನ್ನು ಮಾಡಬಹುದು).

| ನನ್ನ ಹಳೆಯ ಜೀವಿತ | ಕ್ರಿಸ್ತನಲ್ಲಿ ನನ್ನ ಹೊಸ ಜೀವಿತ |
|---|---|
| | |
| | |
| | |

3. ಆದಿ ಸಭೆಯಲ್ಲಿ ಕಾರ್ಯ ನಿರ್ವಹಿಸಿದ ಎರಡು ಬಗೆಯ ನಾಯಕತ್ವ(ವರ)ದ ಬಗ್ಗೆ ಪೇತ್ರನು ಮಾತನಾಡುತ್ತಾನೆ (ವ.10–11). ಅವೆರಡೂ ಸಹ ದೇವರಿಂದ ದೊರಕಿದ ಕೃಪೆಯನ್ನು ವಿವಿಧ ರೀತಿಯಲ್ಲಿ ಉಪಯೋಗಿಸುವುದು ಎಂಬ ಹೇಳಿಕೆಯಿಂದ ವರ್ಣಿಸಲ್ಪಟ್ಟಿದೆ:

    a. ಬೋಧಿಸುವ ವರ: ಇದು ನಮ್ಮ ಪ್ರಸಕ್ತ ಸಭೆಗಳಲ್ಲಿನ ಪ್ರಸಂಗಿಸುವ ಮತ್ತು ಬೋಧಿಸುವ ಸೇವೆಯನ್ನು ಸೂಚಿಸುತ್ತದೆ.

    b. ಸೇವೆಮಾಡುವ ವರ: ಇದು ಪ್ರಸಕ್ತ ಸಭೆಗಳಲ್ಲಿನ ವಿವಿಧ ರೀತಿಯ ಪ್ರಾಯೋಗಿಕ ಮತ್ತು ಸಾಮಾಜಿಕ ಸೇವಾ ಕಾರ್ಯಗಳನ್ನು ಸೂಚಿಸುವುದಾಗಿದೆ.

   ನೀವು ಪ್ರತಿನಿಧಿಸುವ ಸಭೆಗಳಲ್ಲಿ ಈ ವರಗಳು ಹೇಗೆ ಕಾರ್ಯಮಾಡುತ್ತವೆಂಬುದನ್ನು ಅವಲೋಕಿಸಿರಿ. ನೀವು ಬಯಸಿದರೆ ಕೆಳಕಂಡ ಪ್ರಶ್ನೆಗಳನ್ನು ಉಪಯೋಗಿಸಬಹುದು:

    - ನಿಮ್ಮ ಸಭೆಯಲ್ಲಿ ಬೋಧಿಸುವವರು ಮತ್ತು ಪ್ರಸಂಗಿಸುವವರು ಯಾರು? ಕೇವಲ ಸಭಾಪಾಲಕರಾ? ಬೇರೆಯವರಾ?

    - ಸಮಾಜ ಸೇವೆಯ ಕ್ಷೇತ್ರದಲ್ಲಿ ನಿಮ್ಮ ಸಭೆ ಏನನ್ನು ಮಾಡುತ್ತದೆ? ರೋಗಿಗಳನ್ನು ಸಂಧಿಸುತ್ತದಾ? ವಿಧವೆಯರಿಗೆ ಸಹಾಯ ಮಾಡುತ್ತದಾ? ಸಾಮಾಜಿಕ ಸೇವೆಯನ್ನು ನಡೆಸುತ್ತದಾ? ಈ ಕಾರ್ಯವನ್ನು ಯಾರು ಮಾಡುತ್ತಾರೆ? ಕೇವಲ ಸಭಾಪಾಲಕರಾ? ಬೇರೆಯವರಾ?

    - ಸಭೆಯಲ್ಲಿನ ಗುಡಿಸುವ, ಒರೆಸುವ, ಗಿಡಗಳ ಆರೈಕೆ, ಕುರ್ಚಿಗಳನ್ನು ಹಾಕುವ, ವಾದ್ಯ ಬಾರಿಸುವ, ಲೆಕ್ಕಾಚಾರ ಇಡುವ, ಅಡುಗೆ ಮಾಡುವಂತಹ ಕಾರ್ಯರೂಪ ಸೇವೆಗಳ ಕುರಿತು ಏನು? ಈ ಕೆಲಸಗಳನ್ನು ಯಾರು ಮಾಡುತ್ತಾರೆ? ಯಾಕೆ ಅವರು ಮಾಡುತ್ತಾರೆ, ಸಭಾಪಾಲಕರು ಯಾಕೆ ಮಾಡುವುದಿಲ್ಲ?

4. ನಮ್ಮ ಕ್ರೈಸ್ತೀಯ ಮನೆವಾರ್ತೆಯ ಒಂದು ಉದ್ದೇಶವು ಎಲ್ಲದರಲ್ಲಿ *ಯೇಸು ಕ್ರಿಸ್ತನ ಮೂಲಕ ದೇವರಿಗೆ ಸ್ತೋತ್ರವುಂಟಾಗುವುದಾಗಿದೆ* ಎಂದು ಪೇತ್ರನು ಹೇಳುತ್ತಾನೆ (ವ.11).

ನಮ್ಮ ಜೀವಿತಗಳಲ್ಲಿ ದೇವರ ವರವನ್ನು ಗುರುತಿಸುವುದರಿಂದ ನಾವು ದೇವರನ್ನು ಸ್ತುತಿಸುತ್ತೇವೆ ಮತ್ತು ಇದನ್ನು ಮಾಡುವವರಾಗಿದ್ದೇವೆ.

ಈ ಸತ್ಯದ ಬೆಳಕಿನಡಿಯಲ್ಲಿ ನಿಮ್ಮ ದಕ್ಷಿಣ ಭಾರತದ ನಿಮ್ಮ ಸ್ವಂತ ಸಭೆಗಳಲ್ಲಿನ ಸ್ವಭಾವ/ಮನೋಭಾವನೆಯನ್ನು ಮೌಲ್ಯಮಾಪನ ಮಾಡಿರಿ. ಸಾರಾಂಶ ಬರೆಯಿರಿ.

## ಪ್ರಾರ್ಥನಾ ಸಮಯ

ನೀವು ಸಣ್ಣ ಗುಂಪಾಗಿ ಅಥವಾ ಒಬ್ಬರಾಗಿಯಾದರೂ ಪ್ರಾರ್ಥಿಸಿರಿ. ಕೆಲವು ಪ್ರಾರ್ಥನಾ ಮನವಿಗಳು ಗುಂಪು ಪ್ರಾರ್ಥನೆಗೆ, ಇನ್ನೂ ಕೆಲವು ವೈಯಕ್ತಿಕ ಪ್ರಾರ್ಥನೆಗೆ ಹೊಂದಿಕೆಯಾಗಬಹುದು.

1. ದಕ್ಷಿಣ ಭಾರತದ ಸಭೆಯು ಹಳೆಯ ಜೀವನ ಶೈಲಿ ಮತ್ತು ಕ್ರಿಸ್ತನಲ್ಲಿನ ಹೊಸ ಜೀವನದ ನಡುವಿನ ವ್ಯತ್ಯಾಸದ ಬಗ್ಗೆ ಎಚ್ಚರದಿಂದಿರುವಂತೆ ಪ್ರಾರ್ಥಿಸಿರಿ. ಅಲ್ಲದೆ ದಕ್ಷಿಣ ಭಾರತದ ಸಭೆಯು ಸಮಸ್ಯೆಗಳು ಉದ್ಭವಿಸುವಾಗ ಸರಿಯಾದ ನಿರ್ಧಾರ/ತೀರ್ಮಾನಗಳನ್ನು ಮಾಡುವಂತೆ ಪ್ರಾರ್ಥಿಸಿರಿ.

2. ಸ್ವತಃ ನೀವು ನಿಮ್ಮ ಹಳೆಯ ಜೀವನಶೈಲಿ ಮತ್ತು ಕ್ರಿಸ್ತನಲ್ಲಿನ ನಿಮ್ಮ ಹೊಸ ಜೀವನದ ನಡುವಿನ ವ್ಯತ್ಯಾಸದ ಬಗ್ಗೆ ಜಾಗರೂಕರಾಗುವಂತೆ ಪ್ರಾರ್ಥಿಸಿರಿ. ಅಲ್ಲದೆ ಸಮಸ್ಯೆಗಳನ್ನು ಎದುರಿಸುವಾಗ ನೀವು ಸರಿಯಾದ ಆಯ್ಕೆಯನ್ನು ಮಾಡಲು ನೀವು ಧೈರ್ಯ ಮತ್ತು ಬಲ ಹೊಂದುವುದಕ್ಕಾಗಿ ಪ್ರಾರ್ಥಿಸಿರಿ.

3. ಕ್ರೈಸ್ತೀಯ ಮನೆವಾರ್ತೆಯ ಜನರು ನೋಡುವಾಗ ನಿಮ್ಮ ಜೀವಿತವು *ಕ್ರಿಸ್ತನ ಮೂಲಕ ದೇವರಿಗೆ ಸ್ತೋತ್ರವುಂಟಾಗುವುದಕ್ಕಾಗಿ* ಪ್ರಾರ್ಥಿಸಿರಿ.

4. ನಿಮ್ಮ 'ಹಂಚಿಕೊಳ್ಳುವ ಸಮಯ' ನೋಟ್ಸ್‌ಗೆ ಹೋಗಿರಿ:

   ಎ) ನೀವು ನಿಜವಾಗಲೂ ಪ್ರಾರ್ಥಿಸಬೇಕೆಂಬ ಒಂದು ಅಥವಾ ಎರಡು ಸಂಗತಿಗಳನ್ನು ಆರಿಸಿಕೊಳ್ಳಿರಿ. ಈ ಸಂಗತಿಗಳ ಬಗ್ಗೆ ಕೆಲ ಸಮಯ ಪ್ರಾರ್ಥನೆಯಲ್ಲಿ ಕಳೆಯಿರಿ.

   ಬಿ) ನೀವು ನಿಜವಾಗಲೂ ಬದಲಾವಣೆಯನ್ನು ಬಯಸುವ ಒಂದು ಅಥವಾ ಎರಡು ಕ್ಷೇತ್ರಗಳನ್ನು ಆರಿಸಿಕೊಳ್ಳಿರಿ. ಈ ಕ್ಷೇತ್ರಗಳ ಬಗ್ಗೆ ಪ್ರಾರ್ಥಿಸಿರಿ. ನಿಮ್ಮ ನಿರ್ಧಾರಗಳನ್ನು ಪಟ್ಟಿಮಾಡಿರಿ ಮತ್ತು ಈ ನಿರ್ಧಾರಗಳನ್ನು ಕಾಪಾಡಿಕೊಳ್ಳಲು ಬಲ ಮತ್ತು ಜ್ಞಾನವನ್ನು ಕೊಡುವಂತೆ ಪವಿತ್ರಾತ್ಮನನ್ನು ಕೇಳಿಕೊಳ್ಳಿರಿ. ಇದರಿಂದ ನಿಮ್ಮ ಜೀವನ ಮತ್ತು ಸೇವೆಯು ದೇವರಿಗೆ ಮಹಿಮೆಯನ್ನು ತಂದು ದೇವರ ರಾಜ್ಯದ ವಿಸ್ತರಣೆಗಾಗಿ ಪ್ರಯೋಜನಕಾರಿಯಾಗುವುದು.

## ಸತ್ಯವೇದ ಅಧ್ಯಯನ/ಸಂದೇಶ/ಧ್ಯಾನ:

ಈ ಆತ್ಮಿಕ ಕೂಟ ಅವಧಿಯ ಆಧಾರದಿಂದ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ಇದು ಪ್ರಸ್ತುತ ದಕ್ಷಿಣ ಭಾರತದ ಸಭೆಯ ಸನ್ನಿವೇಶಕ್ಕೆ ಸಮಂಜಸವಾಗಿರಬೇಕು.

# ಅವಧಿ 4: ಬಾಧೆಪಡುವ ಸಭೆ

## ಪೀಠಿಕೆ

ಈ ಆತ್ಮಿಕ ಕೂಟ ಅವಧಿಯು 1 ಪೇತ್ರ 4:12–19 ಮತ್ತು ಈ ಪಠ್ಯ ಪುಸ್ತಕದಲ್ಲಿ ಅಧ್ಯಯನ 9 ರ ಮೇಲೆ ಆಧಾರಗೊಂಡಿದೆ. ಹಾಗಾಗಿ ನಿಮ್ಮ ನೆನಪನ್ನು ಪುನಶ್ಚೇತನಗೊಳಿಸಿಕೊಳ್ಳಿರಿ.

- 1 ಪೇತ್ರ 4:12–19 ನ್ನು ಪುನಃ ಓದಿರಿ.
- ಅಧ್ಯಾಯ 9 ನ್ನು ಅವಲೋಕಿಸಿರಿ.
- ಉತ್ತರಗಳು 9 ನ್ನು ಅವಲೋಕಿಸಿರಿ.

ಈ ಆತ್ಮಿಕ ಕೂಟ ಅವಧಿಯ ಉದ್ದೇಶವು ದಕ್ಷಿಣ ಭಾರತದ ಹಿನ್ನಲೆಯಲ್ಲಿ ಬಾಧೆಪಡುವ ಸಭೆಯು ಪರಂಪರೆಯಾಗಿಟ್ಟುಕೊಂಡಿದೆ ಎಂಬುದರಲ್ಲಿ ನಿಮ್ಮ ತಿಳುವಳಿಕೆಯನ್ನು ಆಳವಾಗಿಸುವುದಾಗಿದೆ.

ಅನೇಕ ಜನರು ಬಾಧೆಯನ್ನು ಇಷ್ಟಪಡುವುದಿಲ್ಲ ಮತ್ತು ಅನೇಕ ಸಭಾಪಾಲಕರುಗಳು ಬಾಧೆಪಡುತ್ತಿರುವ ಸಭೆಯ ಸಿದ್ಧಾಂತದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಆದರೆ ಪೇತ್ರನು ತನ್ನ ಪತ್ರಿಕೆಯಲ್ಲಿ ಇದನ್ನು ತಿಳಿಸುತ್ತಾನೆ. ನ್ಯಾಯವಾದುದ್ದಕ್ಕಾಗಿ ಮತ್ತು ಸರಿಯಾದ ವಿಧದಲ್ಲಿ ಭಾಧೆಪಡುವುದು ಇಂದು ದಕ್ಷಿಣ ಭಾರತದಲ್ಲಿನ ವಿಶ್ವಾಸಿಗಳಿಗೆ ಒಂದು ಸವಾಲಾಗಿದೆ. ನಾವು ಯಾಕೆ ಬಾಧೆಪಡುತ್ತೇವೆ? ಇದು ಯೇಸು ಕ್ರಿಸ್ತನ ನಾಮದ ನಿಮಿತ್ತವೋ? ಅಥವಾ ನಾವು ಬಾಧೆಪಡಲು ಬೇರೆ ತಪ್ಪಾದ ಕಾರಣಗಳಿವೆಯೋ?

## ಹಂಚಿಕೊಳ್ಳುವ ಸಮಯ

1. ಬಾಧೆಗಳು ಹೆಚ್ಚು ಅಥವಾ ಕಡಿಮೆ ತಪ್ಪಿಸಲಾಗದವುಗಳು. ನಾವೆಲ್ಲರೂ ಸಹ ವಿಭಿನ್ನವಾದ ವಿಧಗಳಲ್ಲಿ ಮತ್ತು ವಿಭಿನ್ನವಾದ ಕಾರಣಗಳಿಗಾಗಿ ಬಾಧೆಪಡುತ್ತೇವೆ.

    a. ನೀವು ಈಗ ಹಾದು ಹೋಗುತ್ತಿರುವ ವ್ಯೈಯಕ್ತಿಕವಾದ ಬಾಧೆಗೆ ಉದಾಹರಣೆಯನ್ನು ಕೊಡಿರಿ.

    b. ಪ್ರಸ್ತುತ ದಕ್ಷಿಣ ಭಾರತದಲ್ಲಿನ ಸಭೆಯು ಹಾದು ಹೋಗುತ್ತಿರುವ ಬಾಧೆಗೆ ಒಂದು ಉದಾಹರಣೆಯನ್ನು ಕೊಡಿರಿ.

2. ವಿಶ್ವಾಸಿಗಳಿಗೆ ಬರುವ ಸರಿಯಾದ ಮತ್ತು ತಪ್ಪಾದ ಬಗೆಯ ಬಾಧೆಗಳ ನಡುವಿನ ವ್ಯತ್ಯಾಸಗಳನ್ನು ಪೇತ್ರನು ತಿಳಿಸುತ್ತಾನೆ: ಒಂದು ವೇಳೆ ನಾವು ನಮ್ಮ ಕ್ರೈಸ್ತೀಯ ನಂಬಿಕೆಯ ಪರಿಣಾಮವಾಗಿ ಬಾಧೆಪಟ್ಟರೆ ಅದು ಸರಿಯಾದ ವಿಧದ ಬಾಧೆಯಾಗಿದೆ. ಆದರೆ ಒಂದು ವೇಳೆ ನಮ್ಮ ಅನೀತಿ ಮತ್ತು ಪಾಪದ ನಿಮಿತ್ತವಾಗಿ ಬಾಧೆಪಟ್ಟರೆ ಅದು ತಪ್ಪಾದ ಬಗೆಯ ಬಾಧೆಯಾಗಿದೆ. ಪೇತ್ರನ ಭಿನ್ನತೆಯ ಬೆಳಕಿನಡಿಯಲ್ಲಿ ಹಿಂದಿನ ಪ್ರಶ್ನೆಯಲ್ಲಿ ತಿಳಿಸಲಾದ ಬಾಧೆಯನ್ನು ಮೌಲ್ಯಮಾಪನ ಮಾಡಿರಿ. ಯಾವ ಬಾಧೆಯು ಸರಿಯಾದ ಬಗೆಯ ಬಾಧೆಗೆ ಸಂಬಂಧಿಸಿದ್ದಾಗಿದೆ? ಯಾವ ಬಾಧೆಯು ತಪ್ಪಾದ ಬಗೆಯ ಬಾಧೆಯ ವರ್ಗಕ್ಕೆ ಸೇರುತ್ತದೆ? ಪಟ್ಟಿಮಾಡಿರಿ.

3. ನಿಮ್ಮ ಕ್ರೈಸ್ತೀಯ ನಂಬಿಕೆಯ ಫಲವಾಗಿ ಬಾಧೆಪಡುವಾಗ ನೀವು ಹೇಗೆ ಪ್ರತಿಕ್ರಿಯಿಸುವಿರಿ? ನಿಮ್ಮ ಪ್ರತಿಕ್ರಿಯೆಗಳನ್ನು ಪಟ್ಟಿಮಾಡಿರಿ. ಪ್ರಾಮಾಣಿಕರಾಗಿರಿ.

4. ತಮ್ಮ ಕ್ರೈಸ್ತೀಯ ನಂಬಿಕೆಯ ಫಲವಾಗಿ ನಿಮ್ಮ ಕ್ರೈಸ್ತೀಯ ಸ್ನೇಹಿತರುಗಳು ಬಾಧೆಪಡುವಾಗ ಅವರು ಹೇಗೆ ಪ್ರತಿಕ್ರಿಯಿಸುತ್ತಾರೆ? (ಅಥವಾ ನಿಮ್ಮ ಸಭೆಯ ಸದಸ್ಯರು ಅಥವಾ ನಿಮ್ಮ ಸಭೆಯ ಸಭಾಪಾಲಕರು). ನಿಮ್ಮ ಬಾಧೆಯ ಬಗ್ಗೆ ಪಡುವ ಹೆಮ್ಮೆ/ಗರ್ವವು ಇವುಗಳಲ್ಲಿ ಒಂದು ಪ್ರತಿಕ್ರಿಯೆಯಾಗಿದೆಯಾ? ನಿಮ್ಮ ಅನುಭವವನ್ನು ಹಂಚಿಕೊಳ್ಳಿರಿ.

5. ಕ್ರೈಸ್ತೀಯ ಬಾಧೆಗೆ ಪೇತ್ರನು ಸರಿಯಾದ ಪ್ರತಿಕ್ರಿಯೆಗಳ ಒಂದು ಪಟ್ಟಿಯನ್ನು ನಮಗೆ ಕೊಡುತ್ತಾನೆ.

   - ನಾವು ಆಶ್ಚರ್ಯಚಕಿತರಾಗಬಹುದು, ನಮ್ಮ ಬಾಧೆಯು ನಿರೀಕ್ಷಿತವಾದದ್ದು.
   - ನಾವು ಹರ್ಷಿಸಬೇಕು, ನಮ್ಮ ಬಾಧೆಯು ನಾವು ಯೇಸು ಕ್ರಿಸ್ತನಿಗೆ ಸಂಬಂಧ ಪಟ್ಟಿದ್ದೇವೆಂಬುದನ್ನು ತೋರಿಸುತ್ತದೆ.
   - ಕ್ರಿಸ್ತನಿಗಾಗಿ ಬಾಧೆಪಡಲು ಯೋಗ್ಯರಾದುದ್ದಕ್ಕಾಗಿ ನಮ್ಮನ್ನು ನಾವು ಧನ್ಯರೆಂದು ಪರಿಗಣಿಸಲ್ಪಡಬೇಕು.
   - ನಾವು ನಾಚಿಕೆಪಡಬಾರದು
   - ನಾವು ಕ್ರೈಸ್ತೀಯ ಹೆಸರನ್ನು ಹೊರಲು ಅನುಮತಿಸಲ್ಪಟ್ಟದ್ದಕ್ಕಾಗಿ ದೇವರಿಗೆ ಸ್ತೋತ್ರ ಮಾಡಬೇಕು.
   - ನಾವು ದೇವರ ನಂಬಿಗಸ್ತಿಕೆಯಲ್ಲಿ ಭರವಸವಿಡಬೇಕು ಮತ್ತು ಇನ್ನೂ ಹೆಚ್ಚಾಗಿ ಆತನಿಗೆ ಒಪ್ಪಿಸಿಕೊಡಬೇಕು.
   - ಒಳ್ಳೆಯದನ್ನು ಮಾಡುವುದನ್ನು ನಾವು ಮುಂದುವರಿಸಬೇಕು.

   ಪೇತ್ರನ ಮೇಲಿನ ಅಂಶಗಳಿಗೆ ನಿಮ್ಮ ಉತ್ತರಗಳ ಬೆಳಕಿನಡಿಯಲ್ಲಿ ನಿಮ್ಮನ್ನು ಮೌಲ್ಯಮಾಪನಮಾಡಿರಿ. ಪ್ರಾಮಾಣಿಕರಾಗಿರಿ.

6. *ನಿಮ್ಮಲ್ಲಿ ಯಾವನಾದರೂ ಕೊಲೆಗಾರನು, ಕಳ್ಳನು, ದುಷ್ಟನು, ಪರರಕಾರ್ಯಗಳಲ್ಲಿ ತಲೆಹಾಕುವವನು ಆಗಿದ್ದು ಶಿಕ್ಷಾಪಾತ್ರನಾಗಬಾರದು* (1 ಪೇತ್ರ 4:15) ಎಂದು ಪೇತ್ರನು ಹೇಳುತ್ತಾನೆ. ನೀವೇನಾದರೂ ನಿಮ್ಮ (ನಿಮ್ಮ ಸಭಾಪಾಲಕರ, ನಿಮ್ಮ ಸಭಾ ಅನ್ಯೋನ್ಯತೆಯ) ಅನೈತಿಕತೆ, ಪಾಪಮಯ ಅಥವಾ ಅಜ್ಞಾನಿ ಸ್ವಭಾವದ ಫಲವಾಗಿ ಬಾಧೆಪಡುತ್ತಿರುವಿರಾ? ನೀವು ಈ ರೀತಿ ಮಾಡಿದ್ದರೆ ಪರಿಸ್ಥಿತಿಗಳನ್ನು ಬದಲಾಯಿಸಲು ನೀವು ಏನು ಮಾಡುವಿರಿ?

## ಪ್ರಾರ್ಥನಾ ಸಮಯ

ನೀವು ಸಣ್ಣ ಗುಂಪಾಗಿ ಅಥವಾ ಒಬ್ಬರಾಗಿಯಾದರೂ ಪ್ರಾರ್ಥಿಸಿರಿ. ಕೆಲವು ಪ್ರಾರ್ಥನಾ ಮನವಿಗಳು ಗುಂಪು ಪ್ರಾರ್ಥನೆಗೆ, ಇನ್ನೂ ಕೆಲವು ವೈಯಕ್ತಿಕ ಪ್ರಾರ್ಥನೆಗೆ ಹೊಂದಿಕೆಯಾಗಬಹುದು.

1. ಬಾಧೆ ಮತ್ತು ಹಿಂಸೆಯ ಸಮಯದಲ್ಲಿ ನೀವು ಮತ್ತು ನಿಮ್ಮ ಕ್ರೈಸ್ತ ಸ್ನೇಹಿತರು ನಂಬಿಕೆ ಕಳಕೊಳ್ಳದಂತೆ ಅಥವಾ ನಂಬಿಕೆಗೆ ಬೆನ್ನು ತಿರುಗಿಸದಂತೆ ಪ್ರಾರ್ಥಿಸಿರಿ.

2. ನೀವು 'ಕ್ರೈಸ್ತ'ರೆಂದು ಕರೆಯಲ್ಪಡುವುದಕ್ಕೆ ನಾಚಿಕೆಪಡದಂತೆ ಪ್ರಾರ್ಥಿಸಿರಿ.

3. ಬಾಧೆ ಮತ್ತು ಹಿಂಸೆಯ ಸಮಯದಲ್ಲಿ ನೀವು ಮತ್ತು ನಿಮ್ಮ ಕ್ರೈಸ್ತ ಸ್ನೇಹಿತರು ದೇವರ ಶಕ್ತಿ ಮತ್ತು ನಂಬಿಗಸ್ತಿಕೆಯಲ್ಲಿ ಭರವಸವಿಡುವಂತೆ ಪ್ರಾರ್ಥಿಸಿರಿ.

4. ಬಾಧೆ ಮತ್ತು ಹಿಂಸೆಯ ಮಧ್ಯೆ ನೀವು (ಮತ್ತು ನೀವು ಸೇರಿರುವ ವಿಶ್ವಾಸಿಗಳ ಗುಂಪು) ಒಳ್ಳೆಯದನ್ನು ಮಾಡುವುದನ್ನು ಮುಂದುವರಿಸುವುದಕ್ಕಾಗಿ ಪ್ರಾರ್ಥಿಸಿರಿ. 'ಒಳ್ಳೆಯದನ್ನು ಮಾಡುವುದು'– ಯಥಾಪ್ರಕಾರದ ಸಭಾಸೇವೆ, ಸುವಾರ್ತಿಕರಣ ಮತ್ತು ಸುವಾರ್ತೆ ಸಾರುವುದು, ಬೋಧನೆ ಮತ್ತು ವಿಶ್ವಾಸಿಗಳನ್ನು ಸಿದ್ಧಗೊಳಿಸುವುದು, ಬಡವರಿಗೆ ಮತ್ತು ಅಗತ್ಯವಿರುವವರಿಗೆ ಸಹಾಯ ಮಾಡುವುದು ಇನ್ನೂ ಮೊದಲಾದ ವಿಭಿನ್ನ ಬಗೆಯ ಸೇವೆಗಳನ್ನು ಒಳಗೊಂಡಿರುವುದು.

5. ನಿಮ್ಮ ಹಂಚಿಕೊಳ್ಳುವ ಸಮಯದ ನೋಟ್ಸ್‌ಗೆ ಹೋಗಿರಿ.

    a. ನೀವು ನಿಜವಾಗಲೂ ಪ್ರಾರ್ಥಿಸಬೇಕೆಂಬ ಒಂದು ಅಥವಾ ಎರಡು ವಿಷಯಗಳನ್ನು ಆಯ್ಕೆಮಾಡಿಕೊಳ್ಳಿರಿ.

    b. ನೀವು ಬದಲಾವಣೆಯನ್ನು ಬಯಸುವ ಒಂದು ಅಥವಾ ಎರಡು ಕ್ಷೇತ್ರಗಳನ್ನು ಆರಿಸಿಕೊಳ್ಳಿರಿ. ನಿಮ್ಮ ನಿರ್ಧಾರಗಳನ್ನು ಪಟ್ಟಿಮಾಡಿರಿ. ನೀವು ಈ ನಿರ್ಧಾರಗಳನ್ನು ಕಾಪಾಡಿಕೊಂಡು ಅವುಗಳ ಮೂಲಕ ನಿಮ್ಮ ಜೀವನ ಮತ್ತು ಸೇವೆಯು ದೇವರಿಗೆ ಗೌರವಯುತವಾಗಿರುವಂತೆ ಮತ್ತು ಆತನ ರಾಜ್ಯದ ವಿಸ್ತರಣೆಗಾಗಿ ಪ್ರಯೋಜನಕಾರಿಯಾಗಿರಲು ಜ್ಞಾನ ಮತ್ತು ಬಲಕ್ಕಾಗಿ ಪವಿತ್ರಾತ್ಮನನ್ನು ಬೇಡಿಕೊಳ್ಳಿರಿ.

## ಸತ್ಯವೇದ ಅಧ್ಯಯನ/ಸಂದೇಶ/ಧ್ಯಾನ

1. ಸಭಾ ನಾಯಕರಿಗಾಗಿ 'ದೇವರ ಮಂದೆಯ ಕುರುಬರು' ಎಂದು ಕರೆಯಲ್ಪಡುವ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಮಾಡಿರಿ. ಅಧ್ಯಯನ 10 ರ ಉತ್ತರ ಮತ್ತು ಈ ಆತ್ಮಿಕ ಕೂಟ ಅವಧಿವನ್ನು ಇದು ಆಧರಿಸಿರಲಿ. ಈ ಮೂರು ಮುಖ್ಯ ಅಂಶಗಳನ್ನು ಬಳಸಿರಿ.

    1. ಕುರುಬನ ಕರೆ

    2. ಕುರುಬನ ಮನೋಭಾವನೆ

    3. ಕುರುಬನ ಪ್ರತಿಫಲ

2. ಈ ಆತ್ಮಿಕ ಕೂಟ ಅವಧಿಯ ಮೇಲೆ ಆಧರಿತವಾಗಿರುವ ಸಂಗತಿಗಳಿಂದ ಒಂದು ಸಂದೇಶವನ್ನು ಸಿದ್ಧಪಡಿಸಿರಿ. ಆದರೆ ಇದು ಇಂದಿನ ದಕ್ಷಿಣ ಭಾರತದ ಸಭೆಗೆ ಸಮಂಜಸವಾದ ಸಂದೇಶವನ್ನು ಹೊಂದಿರಲಿ.



# ಅವಧಿ 5: ವಿಧೇಯರಾಗಿರ್ರಿ ಮತ್ತು ದೀನರಾಗಿರ್ರಿ

## ಪೀಠಿಕೆ

ಈ ಆತ್ಮಿಕ ಕೂಟ ಅವಧಿಯು 1 ಪೇತ್ರ 5:1–11 ಮತ್ತು ಈ ಪುಸ್ತಕದಲ್ಲಿನ ಅಧ್ಯಯನದ 10 ರ ಮೇಲೆ ಆಧರಿತವಾಗಿದೆ. ಹಾಗಾಗಿ ನಿಮ್ಮ ನೆನಪನ್ನು ಪುನಶ್ಚೇತನಗೊಳಿಸಿಕೊಳ್ಳಿರಿ.

- 1 ಪೇತ್ರ 5:1–11 ನ್ನು ಪುನಃ ಓದಿರಿ.
- ಅಧ್ಯಯನ 10 ನ್ನು ಅವಲೋಕಿಸಿರಿ.
- ಉತ್ತರಗಳು 10 ನ್ನು ಅವಲೋಕಿಸಿರಿ.

ಈ ಆತ್ಮಿಕ ಕೂಟ ಅವಧಿಯ ಉದ್ದೇಶವು ದಕ್ಷಿಣ ಭಾರತದ ಹಿನ್ನಲೆಯಡಿಯಲ್ಲಿ ಸಭೆಯೊಳಗಿನ ನಿಮ್ಮ ಸಂಬಂಧ ಮತ್ತು ಸ್ವಭಾವ/ಮನೋಭಾವನೆಗಳ ತಿಳುವಳಿಕೆಯನ್ನು ಆಳವಾಗಿಸುವುದಾಗಿದೆ.

ಸಭೆಯೊಳಗಿನ ಅನ್ಯೋನ್ಯತೆಯಲ್ಲಿ ಒಬ್ಬರಿಗೊಬ್ಬರು ಪರಸ್ಪರ ಹೇಗೆ ವ್ಯವಹರಿಸಬೇಕೆಂಬುದರ ಬಗ್ಗೆ ತನ್ನ ಓದುಗರನ್ನು ಎಚ್ಚರಿಸುವಾಗ ಪೇತ್ರನು ಬಳಸುವ ಮುಖ್ಯ ಪದಗಳು– 'ದೀನತೆ' ಮತ್ತು 'ವಿಧೇಯತೆ/ನಮ್ರತೆ'ಯಾಗಿವೆ. ಇವು ಯಾವುದೇ ಸಂಸ್ಕೃತಿಯಲ್ಲಿ ಕ್ಲಿಷ್ಟಕರವಾದ ಸ್ವಭಾವಗಳಾಗಿವೆ. ಸಭೆಯ ನಾಯಕತ್ವ ಸಹ ದೀನತೆ ಮತ್ತು ನಮ್ರತೆಯಿಂದ ಕೂಡಿರಬೇಕೆಂದು ಪೇತ್ರನು ಬೋಧಿಸುತ್ತಾನೆ.

ಸಭೆಯಲ್ಲಿನ ಇತರೆ ಅಗತ್ಯತೆ/ಬೇಡಿಕೆಗಳು.

- ಆತ್ಮೀಯ ಆತ್ಮ ಸಂಯಮ ಮತ್ತು ಪ್ರತಿ ವಿಶ್ವಾಸಿಗಳ ಎಚ್ಚರಿಕೆ.
- ಸೈತಾನ ಮತ್ತು ಆತನ ಬಲದ ಬಗೆಗಿನ ಸರಿಯಾದ ತಿಳುವಳಿಕೆ.
- ದೇವರೊಂದಿಗೆ ದೀನ ಮತ್ತು ಭರವಸವುಳ್ಳ ಸಂಬಂಧ.

## ಹಂಚಿಕೊಳ್ಳುವ ಸಮಯ

1. ದಕ್ಷಿಣ ಭಾರತದ ಸಭೆಯಲ್ಲಿನ ದೀನತೆ ಮತ್ತು ನಮ್ರತೆಯನ್ನು ಅವಲೋಕಿಸಿರಿ (ಪರಾಮರ್ಶಿಸಿರಿ).

    a. ದಕ್ಷಿಣ ಭಾರತದ ಹಿನ್ನಲೆಯಿಂದ ದೀನತೆ ಮತ್ತು ನಮ್ರತೆಗೆ ಸಕಾರಾತ್ಮಕ ಉದಾಹರಣೆಯನ್ನು ಕೊಡಿರಿ.

    b. ದಕ್ಷಿಣ ಭಾರತದ ಹಿನ್ನಲೆಯಿಂದ ದೀನತೆ ಮತ್ತು ನಮ್ರತೆಗೆ ನಕಾರಾತ್ಮಕ ಉದಾಹರಣೆಯನ್ನು ಕೊಡಿರಿ. ಕೆಲವು ಪ್ರಾಮುಖ್ಯವಾದ ಸಾರಾಂಶಗಳನ್ನು ಪಟ್ಟಿಮಾಡಿರಿ.

2. 1 ಪೇತ್ರ 5:1–4 ರ ಬೆಳಕಿನಡಿಯಲ್ಲಿ ನಿಮ್ಮ ಸ್ವಂತ ಸಭೆಯ ನಾಯಕತ್ವವನ್ನು ಪ್ರತಿಬಿಂಬಿಸುವಂತೆ ಒಂದು ಪಟ್ಟಿಯನ್ನು ಮಾಡಿರಿ. ನೀವು ಬಯಸಿದಷ್ಟು ಉದ್ದವಾಗಿ ಈ ಪಟ್ಟಿಯನ್ನು ಮಾಡಬಹುದು. ಪ್ರಾಮಾಣಿಕರಾಗಿರ್ರಿ ಮತ್ತು ಸಮತೋಲನವಿರಲಿ. ಗೇಲಿಮಾಡಬೇಡಿರಿ.

| ಬಲ | ಬಲಹೀನತೆ |
|---|---|
| | |
| | |
| | |
| | |

3. ನಿಮ್ಮ ಸಹಾ ನಾಯಕತ್ವವು ಉತ್ತಮವಾಗಬೇಕಿರಬಹುದು, ಅದನ್ನು ಹೇಗೆ ಮಾಡಬೇಕು? ನಿಮ್ಮ ಸಲಹೆಗಳನ್ನು ಬರೆಯಿರಿ.

4. ನಿಮ್ಮ ಸಭೆಗೆ ಒಬ್ಬ ಹೊಸ ಸಭಾ ನಾಯಕನ ಅವಶ್ಯಕತೆಯಿದ್ದು ಸರಿಯಾದ ವ್ಯಕ್ತಿಗಾಗಿ ಪ್ರಾರ್ಥಿಸುತ್ತಿದೆಯಾ? ಕೆಳಕಂಡವುಗಳಿಗಾಗಿ 1 ಪೇತ್ರ 5:1–4 ನ್ನು ಉಪಯೋಗಿಸಿರಿ.

   a. ಒಂದು 'ವ್ಯಕಿತ್ವದ ಪಾರ್ಶ್ವಚಿತ್ರವನ್ನು' ಮಾಡಲು: ಆತನು ಎಂಥಹ ವ್ಯಕ್ತಿಯಾಗಿರಬೇಕು? ಕೆಲವು ಅಂಶಗಳನ್ನು ಬರೆಯಿರಿ.

   b. 'ಹುದ್ದೆಯ ವರ್ಣನೆ'ಯನ್ನು ಮಾಡಲು: ಅವನು/ಳು ಏನು ಮಾಡಬೇಕೆಂದು ನೀವು ಅಪೇಕ್ಷಿಸುವಿರಿ? ಕೆಲವು ಅಂಶಗಳನ್ನು ಬರೆಯಿರಿ.

5. ನಾವು ಸ್ವಸ್ಥ ಚಿತ್ತರಾಗಿರಬೇಕು ಮತ್ತು ಎಚ್ಚರವಾಗಿರಬೇಕೆಂದು ಪೇತ್ರನು ಬರೆಯುತ್ತಾನೆ (ವ8). ಗ್ರೀಕ್‌ನಲ್ಲಿ ಮೊದಲ ಪದವು 'ಅಮಲೇರಿದವರಾಗಿ ಮತ್ತು ಒಬ್ಬರ ಜೀವನದ ಮೇಲೆ ಉತ್ತಮವಾದ ಹತೋಟಿಯನ್ನು ಸಾಧಿಸುವುದು' ಎಂದು ಅರ್ಥೈಸಿದರೆ, ಎರಡನೆಯ ಪದವು 'ಎಚ್ಚರವಾಗಿರುವುದು, ಒಬ್ಬರನ್ನು ಗಮನಿಸುವುದು' ಎಂದು ಅರ್ಥೈಸುತ್ತದೆ. ನಿಮ್ಮ ಕನ್ನಡ ಭಾಷಾಂತರದಲ್ಲಿ ಬಳಸಿದ ಹೇಳಿಕೆಯನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ?

   ಖಂಡಿತವಾಗಿ ಪೇತ್ರನು ಒಂದು ಒಳ್ಳೆಯ ಕ್ರೈಸ್ತೀಯ ಹವ್ಯಾಸಗಳ ಬಗ್ಗೆ ಹೇಳುತ್ತಿರಬಹುದು. ಅದೆಂದರೆ– ಕ್ರಮಬದ್ಧವಾದ ಪ್ರಾರ್ಥನಾ ಜೀವಿತ, ದೇವರ ವಾಕ್ಯವನ್ನು ನಿರಂತರವಾಗಿ ಮತ್ತು ಗಂಭೀರವಾಗಿ ಅಭ್ಯಾಸಿಸುವುದು, ಕುಟುಂಬವನ್ನು ಕಾಳಜಿವಹಿಸುವುದು, ಸಮಯವನ್ನು ವ್ಯರ್ಥಮಾಡದಿರುವುದು.

ನಿಮ್ಮ ದೈನಂದಿನ ಜೀವನದಿಂದ ಈ ರೀತಿಯಿರುವ ಜನರ ಬಗ್ಗೆ ಒಂದು ಉದಾಹರಣೆಯನ್ನು ಕೊಡಿರಿ. ನಿಮ್ಮ ಬಗ್ಗೆ ಏನು?

6. 1 ಪೇತ್ರ 5:1–11 ರಲ್ಲಿ ಕ್ರೈಸ್ತೀಯ ಜೀವನದ ಮೇಲೆ ಪ್ರಭಾವ ಬೀರುವ 3 ಬಲಗಳನ್ನು ತಿಳಿಸುತ್ತಾನೆ: ಇತರೆ ವಿಶ್ವಾಸಿಗಳು, ಸೈತಾನನು ಮತ್ತು ದೇವರು. ಸಹ ವಿಶ್ವಾಸಿಯೊಂದಿಗಿನ ನಮ್ಮ ಸಂಬಂಧವು ದೀನತೆ ಮತ್ತು ನಮ್ರತೆಯಿಂದ ಒಬ್ಬರಿಗೊಬ್ಬರು ಸೇವೆಮಾಡುವಂತಿರಬೇಕು (ವ.5). ಸೈತಾನನು ನಮ್ಮ ಮೇಲೆ ಆಕ್ರಮಣಮಾಡಲು ಪ್ರಯತ್ನಿಸುವಾಗ ನಾವು ಸ್ವಸ್ಥ ಚಿತ್ತರಾಗಿದ್ದು ಎಚ್ಚರವಾಗಿರಬೇಕು. ಆಗ ನಾವು ಆತನನ್ನು ಎದುರಿಸಿ ನಂಬಿಕೆಯಲ್ಲಿ ದೃಢವಾಗಿ ನಿಲ್ಲಬಹುದು (ವ.8–9). ದೇವರೊಂದಿಗಿನ ನಮ್ಮ ಮನೋಭಾವನೆಯು ದೀನತೆ ಮತ್ತು ಭರವಸೆಯಿಂದ ಕೂಡಿರಬೇಕು (ವ.6–7). ಸಹ ವಿಶ್ವಾಸಿಗಳೊಂದಿಗೆ, ಸೈತಾನನೊಂದಿಗೆ ಮತ್ತು ದೇವರೊಂದಿಗಿನ ನಿಮ್ಮ ಸಂಬಂಧವನ್ನು ಪೇತ್ರನ ಬೋಧನೆಯ ಬೆಳಕಿನಡಿಯಲ್ಲಿ ಮೌಲ್ಯಮಾಪನ ಮಾಡಿರಿ.

## ಪ್ರಾರ್ಥನಾ ಸಮಯ

ನೀವು ಸಣ್ಣ ಗುಂಪಾಗಿ ಅಥವಾ ಒಬ್ಬರಾಗಿಯಾದರೂ ಪ್ರಾರ್ಥಿಸಿರಿ. ಕೆಲವು ಪ್ರಾರ್ಥನಾ ಮನವಿಗಳು ಗುಂಪು ಪ್ರಾರ್ಥನೆಗೆ, ಇನ್ನೂ ಕೆಲವು ವೈಯಕ್ತಿಕ ಪ್ರಾರ್ಥನೆಗೆ ಹೊಂದಿಕೆಯಾಗಬಹುದು.

1. ನಿಮ್ಮ ಸಭಾ ಅನ್ಯೋನ್ಯತೆಯ ನಾಯಕತ್ವಕ್ಕಾಗಿ ಪ್ರಾರ್ಥಿಸಿರಿ. ನಿಮ್ಮ ಸ್ಥಳೀಯ ಸಭೆಯ ನಾಯಕತ್ವಕ್ಕಾಗಿ ಪ್ರಾರ್ಥಿಸಿರಿ. ಜ್ಞಾನ, ದೀನತೆ, ಸಮರ್ಪಣೆ, ಪ್ರೀತಿ, ನಂಬಿಗಸ್ತಿಕೆ, ನಿಸ್ವಾರ್ತತೆಯು ಮತ್ತು ಸೇವಾ ಮನೋಭಾವನೆಯ ಹೃದಯಕ್ಕಾಗಿ ಪ್ರಾರ್ಥಿಸಿರಿ.
2. ಭವಿಷ್ಯಕ್ಕಾಗಿ ದೇವರು ಒಳ್ಳೆಯ ನಾಯಕರನ್ನು ಕರೆದು, ಸಿದ್ಧಗೊಳಿಸುವಂತೆ ಪ್ರಾರ್ಥಿಸಿರಿ. ಆ ಮೂಲಕ ಸಭೆಯು ಬೆಳೆದು ವೃದ್ಧಿಯಾಗಿ ಭೂಮಿಯ ಮೇಲೆ ಅವರ ಕರೆಯನ್ನು ಪೂರ್ತಿಗೊಳಿಸುವುದು.
3. ಸ್ವತಃ ನಿಮ್ಮ ನಾಯಕತ್ವಕ್ಕಾಗಿ ಪ್ರಾರ್ಥಿಸಿರಿ. ಸರಿಯಾದ ಮನೋಭಾವನೆಗಾಗಿ ಪ್ರಾರ್ಥಿಸಿರಿ, ಆ ಮೂಲಕ ದೇವರು ನಿಮ್ಮನ್ನು ಇನ್ನೂ ಉತ್ತಮವಾದ ರೀತಿಯಲ್ಲಿ ಉಪಯೋಗಿಸಬಹುದು.
4. ನಿಮ್ಮ ಸ್ಥಳಿಯ ಸಭೆಯಲ್ಲಿನ ಸಂಬಂಧಗಳಿಗಾಗಿ ಪ್ರಾರ್ಥಿಸಿರಿ. ಸಭೆಯ ಸಂಬಂಧಗಳ ಕ್ಷೇತ್ರಗಳಲ್ಲಿ ದೇವರು ನಿಮ್ಮನ್ನು ಉಪಯೋಗಿಸುವಂತೆ ಪ್ರಾರ್ಥಿಸಿರಿ.
5. ನಿಮ್ಮ ಹಂಚಿಕೊಳ್ಳುವ ಸಮಯದ ನೋಟ್ಸ್‌ಗೆ ಹೋಗಿರಿ.
   a. ನೀವು ನಿಜವಾಗಲೂ ಪ್ರಾರ್ಥಿಸಬೇಕೆಂಬ ಒಂದು ಅಥವಾ ಎರಡು ವಿಷಯಗಳನ್ನು ಆಯ್ಕೆಮಾಡಿಕೊಳ್ಳಿರಿ.
   b. ನೀವು ಬದಲಾವಣೆಯನ್ನು ಬಯಸುವ ಒಂದು ಅಥವಾ ಎರಡು ಕ್ಷೇತ್ರಗಳನ್ನು ಆರಿಸಿಕೊಳ್ಳಿರಿ. ನಿಮ್ಮ ನಿರ್ಧಾರಗಳನ್ನು ಪಟ್ಟಿಮಾಡಿರಿ. ನೀವು ಈ ನಿರ್ಧಾರಗಳನ್ನು ಕಾಪಾಡಿಕೊಂಡು ಅವುಗಳ ಮೂಲಕ ನಿಮ್ಮ ಜೀವನ ಮತ್ತು ಸೇವೆಯು ದೇವರಿಗೆ ಗೌರವಯುತವಾಗಿರುವಂತೆ ಮತ್ತು ಆತನ ರಾಜ್ಯದ

ವಿಸ್ತರಣೆಗಾಗಿ ಪ್ರಯೋಜನಕಾರಿಯಾಗಿರಲು ಜ್ಞಾನ ಮತ್ತು ಬಲಕ್ಕಾಗಿ ಪವಿತ್ರಾತ್ಮನನ್ನು ಬೇಡಿಕೊಳ್ಳಿರಿ.

## ಸತ್ಯವೇದ ಅಧ್ಯಯನ/ಸಂದೇಶ/ಧ್ಯಾನ

ಈ ಆತ್ಮಿಕ ಕೂಟ ಅವಧಿಯ ಮೇಲೆ ಆಧರಿತವಾಗಿರುವ ಸಂಗತಿಗಳಿಂದ ಒಂದು ಸಂದೇಶವನ್ನು ಸಿದ್ಧಪಡಿಸಿರಿ. ಆದರೆ ಇದು ಇಂದಿನ ದಕ್ಷಿಣ ಭಾರತದ ಸಭೆಗೆ ಸಮಂಜಸವಾದ ಸಂದೇಶವನ್ನು ಹೊಂದಿರಲಿ.

# ಅವಧಿ 6: ಸಮತೋಲನ ಜೀವನ ಜೀವಿಸಿರಿ!

## ಪೀಠಿಕೆ

ಈ ಆತ್ಮಿಕ ಕೂಟ ಅವಧಿಯು 2 ಪೇತ್ರ 1:1–21 ಮತ್ತು ಈ ಪಠ್ಯಪುಸ್ತಕದಲ್ಲಿನ ಅಧ್ಯಯನ 13–15 ನ್ನು ಆಧರಿತಗೊಂಡಿದೆ.

- 2 ಪೇತ್ರ 1:1–21 ನ್ನು ಪುನಃ ಓದಿರಿ.
- ಅಧ್ಯಯನ 13–15 ನ್ನು ಮರು ಪರಿಶೀಲಿಸಿರಿ.
- ಉತ್ತರಗಳು 13–15 ನ್ನು ಮರು ಪರಿಶೀಲಿಸಿರಿ.

ಈ ಆತ್ಮಿಕ ಕೂಟ ಅವಧಿಯ ಉದ್ದೇಶವು ದಕ್ಷಿಣ ಭಾರತದ ಹಿನ್ನಲೆಯಲ್ಲಿ ನೀವು ನಿಮ್ಮ ಸಾಕ್ಷಿಯನ್ನು ತೋರ್ಪಡಿಸುವಾಗ ನಿಮ್ಮ ಕರೆ ಮತ್ತು ಆಯ್ಕೆಯನ್ನು ದೃಢಪಡಿಸುವುದಕ್ಕಾಗಿದೆ (ವ.10). ಇದಕ್ಕೆ ಯೇಸು ಕ್ರಿಸ್ತನ ಬಗೆಗಿನ ತಿಳುವಳಿಕೆ ಮತ್ತು ಭಕ್ತಿಯುತವಾದ ಜೀವನದ ನಡುವೆ ಸತ್ಯವೇಧಾರಿತ ಸಮತೋಲನವು ಬೇಕಾಗಿದೆ. ಈ ಸಮತೋಲನವನ್ನು ಅಭ್ಯಾಸಿಸಲು ನೀವು ಆತ್ಮಿಕವಾಗಿ ಬೆಳೆದಂತೆಲ್ಲಾ ಅದು ನಿಮ್ಮನ್ನು ಉತ್ತಮ ಮರಣಕ್ಕಾಗಿ ಸಿದ್ಧಪಡಿಸುವುದು ಮತ್ತು ಕರ್ತನೂ ರಕ್ಷಕನೂ ಆದ ಯೇಸುವಿನೊಂದಿಗೆ ನಿತ್ಯತೆಯನ್ನು ಕಾಣಲು ನೀವು ಸಿದ್ಧಗೊಳ್ಳುವಂತೆ ಮಾಡುವುದು.

## ಹಂಚಿಕೊಳ್ಳುವ ಸಮಯ

1. ಅವರ ಜೀವನಶೈಲಿಯ ಬಗ್ಗೆ ನೀವು ಪ್ರಶ್ನಿಸುವಾಗ ಕೆಲವು ವಿಶ್ವಾಸಿಗಳು ಈ ರೀತಿ ಉತ್ತರಿಸುತ್ತಾರೆ: 'ನೀವು ನಮ್ಮೊಂದಿಗೆ ತಾಳ್ಮೆಯಿಂದಿರಬೇಕು. ಇನ್ನು ದೇವರು ನನ್ನ ಜೀವನದಲ್ಲಿ ಕಾರ್ಯಮಾಡುತ್ತಿದ್ದಾನೆ ಮತ್ತು ಇನ್ನೂ ಅದನ್ನು ಮುಗಿಸಿಲ್ಲ'. ತನ್ನೊಂದಿಗೆ ನಿತ್ಯತ್ವವನ್ನು ಕಳೆಯುವಲ್ಲಿ ಆತನು ನಿನ್ನನ್ನು ಸಿದ್ಧಪಡಿಸುವಾಗ ದೇವರು ನಿಮ್ಮ ಜೀವನದಲ್ಲಿ ಏನನ್ನು ಸಾಧಿಸಲು ಪ್ರಯತ್ನಿಸುತ್ತಿರುವನೆಂದು ನೀವು ಯೋಚಿಸುವಿರಿ? ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ.
2. ವಚನ 3 ಕ್ರಿಸ್ತನ ಕುರಿತಾದ ಜ್ಞಾನ/ತಿಳುವಳಿಕೆ ಮತ್ತು ಪರಿಶುದ್ಧ ಜೀವನ(ಭಕ್ತಿ)ದ ಬಗ್ಗೆ ಹೇಳುತ್ತದೆ. ಇವು ಕ್ರೈಸ್ತೀಯ ಜೀವನದ ಪ್ರಾಮುಖ್ಯ ಅಂಶಗಳಾಗಿವೆ. ಇವೆರಡರ ಮಧ್ಯೆ ಸಮತೋಲನವಿರಬೇಕೆಂದು ಪೇತ್ರನು ಬೋಧಿಸುತ್ತಾನೆ. ನಿಮ್ಮ ಸ್ವಂತ ಜೀವಿತದಲ್ಲಿ ಈ ಸಮತೋಲನವನ್ನು ವಿಮರ್ಶಿಸಿರಿ. ಒಂದು ವೇಳೆ ಯೇಸು ಕ್ರಿಸ್ತನ ಕುರಿತಾದ ಜ್ಞಾನ ಅಥವಾ ಭಕ್ತಿಯು ಬಲಹೀನವಾದರೆ ಏನಾಗುತ್ತದೆ? ನಿಮ್ಮ ಪರಿಶೀಲನೆಯನ್ನು ಪಟ್ಟಿಮಾಡಿರಿ.
3. ನೀವು ನಿಮ್ಮ ಜೀವನವನ್ನು ತೋರ್ಪಡಿಸಬೇಕೆಂದು ಹೆಚ್ಚಾಗಿ ಬಯಸುವ ವಚನ 5–7 ರಲ್ಲಿ ತಿಳಿಸಿದ ಕ್ರೈಸ್ತೀಯ ಸದ್ಗುಣಗಳಲ್ಲಿ ಒಂದನ್ನು ಆರಿಸಿಕೊಳ್ಳಿರಿ. ನೀವು ಈ ಸದ್ಗುಣವನ್ನು ಹೆಚ್ಚು ನಂಬಿಗಸ್ತಿಕೆಯಿಂದ ಅಭ್ಯಾಸಿಸಬೇಕು.

    a. ಇದು ಹೇಗೆ ಕ್ರಿಸ್ತನ ಜ್ಞಾನವನ್ನು ಸೇರಿಸುತ್ತದೆ?

b. ಇದು ಹೇಗೆ ನಿನ್ನನ್ನು ಈ ಸುತ್ತಣ ಜಗತ್ತಿನ ದುಷ್ಟ ಪ್ರಭಾವಗಳಿಂದ ತಪ್ಪಿಸಿಕೊಳ್ಳಲು ಮತ್ತು ನಿನ್ನನ್ನು ಹೆಚ್ಚಾಗಿ ಭಯಭಕ್ತಿಯುಳ್ಳವನನ್ನಾಗಿ ಮಾಡಲು ಸಹಕರಿಸುತ್ತದೆ? ನಿಮ್ಮ ಸಾರಾಂಶಗಳನ್ನು ಬರೆಯಿರಿ. ಪರಸ್ಪರ ಹಂಚಿಕೊಳ್ಳಿರಿ.

4. ಯೇಸು ಕ್ರಿಸ್ತನ ದಿವ್ಯಶಕ್ತಿಯು ನಮಗೆ ಈ ಲೋಕದಲ್ಲಿ ಭಕ್ತಿಗೆ ಅಲ್ಲದೆ ನಮ್ಮ ನಿತ್ಯತ್ವಕ್ಕೆ ಬೇಕಾದದ್ದೆಲ್ಲವನ್ನು ಕೊಟ್ಟಿದೆಯೆಂದು ವಚನ 3 ಹೇಳುತ್ತದೆ. ಯೇಸು ಕ್ರಿಸ್ತನ ಮೂಲಕ ಲಭ್ಯವಿರುವ ದೇವರು ಕೊಡುವ ಶಕ್ತಿಯನ್ನು ನೀವು ಸ್ವೀಕರಿಸಲು ನಿರ್ಧರಿಸಿರುವುದಾದರೆ– ನಿಮ್ಮಲ್ಲಿ ಯಾವ ಬದಲಾವಣೆಯನ್ನು ನೀವು ಕಾಣುವಿರಿ? ನಿಮ್ಮ ಸಾರಾಂಶವನ್ನು ಬರೆಯಿರಿ. ನಂತರ ಇದನ್ನು ಒಬ್ಬರು ಇನ್ನೊಬ್ಬರೊಂದಿಗೆ ಹಂಚಿಕೊಳ್ಳಿರಿ.

5. ನಿಮ್ಮ ಜೀವನ ಈ ಲೋಕದಲ್ಲಿ ಮುಗಿಯಿತು ಮತ್ತು ನೀವು ಈ ಲೊಕದಲ್ಲಿ ಬಿಟ್ಟು ಹೋಗುತ್ತಿರುವ ಜನರಿಗೆ ನೀವೊಂದು ಅಂತಿಮ ಸಂದೇಶವನ್ನು ಕೊಡಬೇಕೆಂದು ಬಯಸುವಿರಿ ಎಂದು ನೀವು ಕಲ್ಪಿಸಿಕೊಳ್ಳಿರಿ.

    a. ಯಾರಿಗೆ ಅದನ್ನು ನೀವು ಹೇಳುವಿರಿ ಅಥವಾ ಬರೆಯುವಿರಿ? ಯಾಕೆ?

    b. ಅವರು ಏನನ್ನು ತಿಳಿಯಬೇಕೆಂದು ನೀವು ಬಯಸುವಿರಿ? ಯಾಕೆ?

    c. ಅವರ ನಂಬಿಕೆಗೆ ನಿರಂತರವಾದ ಬೆಂಬಲಕ್ಕಾಗಿ ಎಲ್ಲಿಗೆ ಸೂಚಿಸುವಿರಿ?

ನಿಮ್ಮ ಉತ್ತರಗಳನ್ನು ಬರೆಯಿರಿ. ನಂತರ ಅದನ್ನು ಇನ್ನೊಬ್ಬರೊಂದಿಗೆ ಹಂಚಿಕೊಳ್ಳಿರಿ.

6. ತನ್ನ ಓದುಗರು ತನ್ನ ಮೇಲೆ ಅತಿಯಾಗಿ ಆತುಕೊಂಡು, ಆತನ ಮರಣದ ನಂತರ ನಂಬಿಕೆಯು ಬಿದ್ದುಹೋಗಬಾರದೆಂದು ಅಪೇಕ್ಷಿಸುತ್ತಾನೆ. ಆದಾಗ್ಯೂ ಹೊಸ ವಿಶ್ವಾಸಿಗಳು ಹಳೆಯ/ಹಿರಿಯ ವಿಶ್ವಾಸಿಗಳನ್ನು ಅತಿಯಾಗಿ ಆತುಕೊಂಡಿರುತ್ತಾರೆಂದು ಆತನು ತಿಳಿದಿದ್ದನು. ಹಾಗಾಗಿ ಈ ವಾಕ್ಯಭಾಗದಲ್ಲಿ ಆತನು ನಿಜವಾದ ನಂಬಿಕೆಗೆ ಬೇಕಾದ ಬುನಾದಿಯ ಬಗ್ಗೆ ಸೂಚಿಸುತ್ತಾನೆ. ಸತ್ಯವೇದದಲ್ಲಿ ಪ್ರಕಟಿಸಲ್ಪಟ್ಟ ಕ್ರಿಸ್ತನು,

    a. ನಿಮ್ಮ ಜೀವಿತದಿಂದ ನೀವು ಯಾರನ್ನು ಪ್ರಭಾವಿಗೊಳಿಸಲು ಬಯಸುವಿರಿ?

    b. ಈ ಬಗ್ಗೆ ಉತ್ತಮವಾಗಿ ನೀವು ಹೇಗೆ ಮಾಡುವಿರಿ. ನಿಮ್ಮ ಸಾರಾಂಶವನ್ನು ಬರೆದು, ಇನ್ನೊಬ್ಬರೊಂದಿಗೆ ಹಂಚಿಕೊಳ್ಳಿರಿ.

7. ಒಂದು ಉತ್ತಮ/ಒಳ್ಳೆಯ ಮರಣಕ್ಕಾಗಿ ನಿಮನ್ನು ಸಿದ್ಧಪಡಿಸಿಕೊಳ್ಳಲು ನಿಮ್ಮ ಜೀವಮಾನದಲ್ಲಿ ನೀವು ಏನನ್ನು ಮಾಡುವಿರಿ? ನೀವು ಮರಣವನ್ನು ಸಮೀಪಿಸುವಾಗ ನಿಮ್ಮ ಭಾವನೆಗಳು ಹೇಗಿರುವವೆಂದು ನೀವು ನಿರೀಕ್ಷಿಸುವಿರಿ? ನಿಮ್ಮ ಸಾರಾಂಶಗಳನ್ನು ಬರೆಯಿರಿ.

## ಪ್ರಾರ್ಥನಾ ಸಮಯ

ನೀವು ಸಣ್ಣ ಗುಂಪಾಗಿ ಅಥವಾ ಒಬ್ಬರಾಗಿಯಾದರೂ ಪ್ರಾರ್ಥಿಸಿರಿ. ಕೆಲವು ಪ್ರಾರ್ಥನಾ ಮನವಿಗಳು ಗುಂಪು ಪ್ರಾರ್ಥನೆಗೆ, ಇನ್ನೂ ಕೆಲವು ವೈಯಕ್ತಿಕ ಪ್ರಾರ್ಥನೆಗೆ ಹೊಂದಿಕೆಯಾಗಬಹುದು.

1. ಯಾರು ನಿಮಗೆ ಆತ್ಮಿಕ ಬಂಡೆಯಾಗಿದ್ದಾರೆ ಮತ್ತು ನಿಮ್ಮ ನಂಬಿಕೆಯ ಜೀವನದಲ್ಲಿ ಸಹಾಯ ಮಾಡಿದ್ದಾರೆ? (ಇದು ನೀವು ಸಂಧಿಸಿದ ಒಬ್ಬ ವ್ಯಕ್ತಿಯಾಗಿರಬಹುದು ಅಥವಾ ನೀವು ಕೇಳಿಸಿಕೊಂಡ ಅಥವಾ ಓದಿದ ವ್ಯಕ್ತಿಯಾಗಿರಬಹುದು ಅಥವಾ ಸತ್ಯವೇದದಲ್ಲಿನ ಒಬ್ಬ ವ್ಯಕ್ತಿಯಾಗಿರಬಹುದು). ಆ ವ್ಯಕ್ತಿಯು ನಿಮಗೆ ಏನಾಗಿದ್ದಾರೆಂದು ಪಟ್ಟಿಮಾಡಿರಿ. ಆ ವ್ಯಕ್ತಿಗಾಗಿ ದೇವರಿಗೆ ಕೃತಜ್ಞತೆ ಸಲ್ಲಿಸಿರಿ.

2. ನಮ್ಮ ಕರ್ತನೂ ರಕ್ಷಕನೂ ಆದ ಯೇಸು ಕ್ರಿಸ್ತನ ನಿತ್ಯರಾಜ್ಯದಲ್ಲಿ ನಿಮ್ಮನ್ನು ಚಿತ್ರಿಸಿಕೊಳ್ಳಲು ಪ್ರಯತ್ನಿಸಿರಿ (ವ.11). ಆತನು ನಿಮಗಾಗಿ ಸಿದ್ಧಪಡಿಸುತ್ತಿರುವ ಭವಿಷ್ಯತ್ತಿಗಾಗಿ ದೇವರಿಗೆ ಕೃತಜ್ಞತೆ ಸಲ್ಲಿಸಿರಿ. ಆ ಸಮಯಕ್ಕಾಗಿ ನಿಮ್ಮನ್ನು ಸಿದ್ಧಗೊಳಿಸುವಂತೆ ಆತನನ್ನು ಬೇಡಿಕೊಳ್ಳಿರಿ.

3. ಆತನೊಂದಿಗೆ ನಿತ್ಯತ್ವದ ಮನೆಗಾಗಿನ ಪ್ರಯಾಣಕ್ಕಾಗಿ ನಮಗೆ ಬೇಕಾದುದ್ದನ್ನೆಲ್ಲವನ್ನು ದೇವರು ನಮಗೆ ಕೊಟ್ಟಿದ್ದಾನೆಂದು ವಚನ 3 ಹೇಳುತ್ತದೆ. ದೇವರು ಸಂಧಿಸಿದ ಕೆಳಕಂಡಂತಹ ಕೆಲವು ಸಂಗತಿಗಳನ್ನು ವಿಮರ್ಶಿಸಿರಿ.

    a. ತಾನು ಶಿಲುಬೆ ಮೇಲೆ ಸಾಯುವುದರಿಂದ ಯೇಸು ಕ್ರಿಸ್ತನು ನಮಗಾಗಿ ಮಾಡಿದ ತ್ಯಾಗ.

    b. ಯೇಸು ಕ್ರಿಸ್ತನನ್ನು ನಿಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿದ ದಿನ.

    c. ನಿಮ್ಮ ಜೀವಿತದಲ್ಲಿನ ಪವಿತ್ರಾತ್ಮನ ಕಾರ್ಯ.

    d. ಯೇಸು ಕ್ರಿಸ್ತನನ್ನು ನಿಮ್ಮ ರಕ್ಷಕನೆಂದು ಅರಿತ ದಿನದಿಂದ ಆದ ನಿಮ್ಮ ಆತ್ಮಿಕ ಬೆಳವಣಿಗೆ.

    ಹಾಗೆಯೇ ಕೆಲ ಸಮಯ ಪ್ರಾರ್ಥನೆಯಲ್ಲಿ ಕಳೆಯಿರಿ.

    - ದೇವರು ನಿಮಗೆ ಮಾಡಿದ ಎಲ್ಲಾ ಸಂಗತಿಗಳಿಗಾಗಿ ಆತನಿಗೆ ಕೃತಜ್ಞತೆ ಸಲ್ಲಿಸಿರಿ.
    - ನಿಮಗೆ ಬೇಕಾದದ್ದನ್ನೆಲ್ಲ ಕೊಟ್ಟಿದ್ದಕ್ಕಾಗಿ ದೇವರಿಗೆ ಕೃತಜ್ಞತೆ ಸಲ್ಲಿಸಿರಿ.
    - ನಿಮಗೆ ನಿರಂತರವಾದ ಆತ್ಮಿಕ ಬೆಳವಣಿಗೆ ಮತ್ತು ಭಕ್ತಿ ಹೆಚ್ಚಳಕ್ಕಾಗಿ ಪ್ರಾರ್ಥಿಸಿರಿ.

4. ನಿಮ್ಮ ಜೀವಮಾನದಲ್ಲಿ ನಿಮ್ಮ ಜೀವಿತದಿಂದ ಪ್ರಭಾವ ಬೀರುವವರಿಗಾಗಿ ಪ್ರಾರ್ಥಿಸಿರಿ. ಅವರೊಂದಿಗೆ ನಿಮ್ಮ ನಂಬಿಕೆಯನ್ನು ಹಂಚಿಕೊಳ್ಳಲು ಅವಕಾಶಗಳನ್ನು ಒದಗಿಸುವಂತೆ ದೇವರನ್ನು ಪ್ರಾರ್ಥಿಸಿರಿ. ಸರಿಯಾದ ವಿಧದಲ್ಲಿ ನಿಮ್ಮ ನಿರ್ಧಾರಗಳನ್ನು ಉಪಯೋಗಿಸುವಂತೆ ಪ್ರಾರ್ಥಿಸಿರಿ.

5. ಅರುಣೋದಯವಾಗುವ ಪರ್ಯಂತರ ಕತ್ತಲೆಯ ಸ್ಥಳದಲ್ಲಿ ಪ್ರಕಾಶಿಸುವ ದೀಪದಂತಿರುವ (1:19) ಪ್ರವಾದಿಗಳ ಕಡೆಗೆ ಲಕ್ಷಕೊಡಬೇಕೆಂದು ಪೇತ್ರನು ತನ್ನ ಓದುಗರಿಗೆ ಹೇಳುತ್ತಾನೆ.

ಯೇಸು ಕ್ರಿಸ್ತನ ಕುರಿತಾದ ಈ ಪ್ರವಾದನಾ ಮಾತುಗಳನ್ನು ಪರಾಮರ್ಶಿಸಿರಿ. ಈ ಮಾತುಗಳಲ್ಲಿ ನೀವು ಕಂಡ ಸತ್ಯಾಂಶಗಳಿಗಾಗಿ ದೇವರಿಗೆ ಕೃತಜ್ಞತೆ ಮಾಡಿರಿ.

- ಯೇಶಾಯ 40:1–11
- ಯೇಶಾಯ 53:1–12
- ಮೀಕ 5:2–5
- ಜೆಕರ್ಯ 9:9
- ಪ್ರಕಟನೆ 21:2– 22:7

## ಸತ್ಯವೇದ ಅಧ್ಯಯನ/ಸಂದೇಶ/ಧ್ಯಾನ

ಈ ಆತ್ಮಿಕ ಕೂಟ ವಿಭಾಗದಿಂದ ಆಧರಿತವಾಗಿರುವ ಸಂಗತಿಗಳಿಂದ ಒಂದು ಸಂದೇಶವನ್ನು ಸಿದ್ಧಪಡಿಸಿರಿ. ಆದರೆ ಇದು ಇಂದಿನ ದಕ್ಷಿಣ ಭಾರತದ ಸಭೆಗೆ ಸಮಂಜಸವಾದ ಸಂದೇಶವನ್ನು ಹೊಂದಿರಲಿ.

# ಅವಧಿ 7: ಅಪಾಯಗಳನ್ನು ಗುರುತಿಸುವುದು!

## ಪೀಠಿಕೆ

ಈ ಆತ್ಮಿಕ ಕೂಟ ಅವಧಿಯು 2 ಪೇತ್ರ 2:1–22 ಮತ್ತು ಈ ಪಠ್ಯ ಪುಸ್ತಕದಲ್ಲಿನ ಅಧ್ಯಯನ 16 ಮತ್ತು 17 ನ್ನು ಆಧರಿಸಿದೆ.

- 2 ಪೇತ್ರ 2:1–22 ನ್ನು ಪುನಃ ಓದಿರಿ.
- ಅಧ್ಯಯ 16 ಮತ್ತು 17 ನ್ನು ಪರಿಶೀಲಿಸಿರಿ.
- ಉತ್ತರಗಳು 16 ಮತ್ತು 17 ನ್ನು ಪರಿಶೀಲಿಸಿರಿ.

ಈ ಆತ್ಮಿಕ ಕೂಟ ಅವಧಿಯ ಉದ್ದೇಶವು ದಕ್ಷಿಣ ಭಾರತದ ಹಿನ್ನಲೆಯಲ್ಲಿ ಸುಳ್ಳುಬೋಧಕರನ್ನು ಗುರುತಿಸಲು ನಿಮಗೆ ಸಹಕರಿಸುವುದಾಗಿದೆ. ದುರ್ಬೋಧನೆಗಳು ಮತ್ತು ಸತ್ಯವಲ್ಲದ ಸಿದ್ಧಾಂತಗಳು ನಮ್ಮ ಸಭೆಗಳನ್ನು ಪ್ರವೇಶಿಸುವಂತೆ ನಾವು ತಡೆಯುವುದು ಅತೀ ಪ್ರಾಮುಖ್ಯವಾದುದ್ದಾಗಿದೆ. ಇದು ಸಭಾ ನಾಯಕತ್ವದ ಜವಾಬ್ದಾರಿಯಾಗಿದೆ. ಅಲ್ಲದೆ ಇದು ಸ್ವಸ್ಥ ಬೋಧನೆಗಳನ್ನೂ ಸಿದ್ದಾಂತಗಳನ್ನು ಬೋಧಿಸುವುದು ಮತ್ತು ಪ್ರಸಂಗಿಸುವ ಜವಾಬ್ದಾರಿಯಾಗಿದ್ದು ವಿಶ್ವಾಸಿಗಳಿಗೆ ಸಾಕಷ್ಟು ಆತ್ಮಿಕ ಆಹಾರವನ್ನು ಒದಗಿಸಿ, ಆಮೂಲಕ ಅವರು ಆತ್ಮಿಕ ಪುನಶ್ಚೇತನಕ್ಕಾಗಿ ಸಂಶಯಾತ್ಮಕ ಮೂಲಗಳೆಡೆಗೆ ತಿರುಗದಂತೆ ಮಾಡುವುದಾಗಿದೆ. ಈ ರೀತಿಯಾಗಿ ಮಾಡಲು ಸ್ವತಃ ಸಭಾ ನಾಯಕರುಗಳು ತಪ್ಪಾದವುಗಳಿಂದ ಸರಿಯಾದವುಗಳು, ಅಹಿತವಾದವುಗಳಿಂದ ಸ್ವಸ್ಥವಾದವುಗಳನ್ನು, ಸತ್ಯವೇದಾರಿತವಲ್ಲದವುಗಳಿಂದ ಸತ್ಯವೇಧಾರಿತವುಗಳು ಮತ್ತು ಅಕ್ರೈಸ್ತವಾದವುಗಳಿಂದ ಕ್ರೈಸ್ತೀಯವಾದವುಗಳನ್ನು ವಿವೇಚಿಸಲು ಶಕ್ತರಾಗಬೇಕಾಗಿದೆ. ಅಪಾಯಗಳು ಮತ್ತು ಅವು ಎಲ್ಲಿಂದ ಬರುತ್ತವೆಂಬುದರ ಬಗ್ಗೆ ಸಹ ಅವರು ಎಚ್ಚರದಿಂದಿರಬೇಕಾಗಿದೆ. ತಮ್ಮ ದೈವಶಾಸ್ತ್ರದ ನಿಲುವುಗಳ ಬಗ್ಗೆ ನಿಶ್ಚಿತತೆಯಿಲ್ಲದ ಅತಿಥಿ ಬೋಧಕರುಗಳನ್ನು ಆಹ್ವಾನಿಸದಿರಲು ಜ್ಞಾನವನ್ನು ಅವರು ಹೊಂದಿರಬೇಕು. ವಿಶ್ವಾಸಿಗಳನ್ನು ಸಂಪರ್ಕಿಸಿ ಸಭೆಯನ್ನು ಸೋಸಿಕೊಂಡು ಹೋಗಲು ಪ್ರಯತ್ನಿಸುವ ಸುಳ್ಳುಬೋಧಕರನ್ನು ಎದುರಿಸಲು ಅವರು ಧೈರ್ಯ ಹೊಂದಿರಬೇಕು. ಅವರು ತಮ ವಿಶ್ವಾಸಿಗಳು ಎಂಥ ಪುಸ್ತಕವನ್ನು ಓದಬೇಕು, ದೂರದರ್ಶನದಲ್ಲಿ ಬರುವ ಎಂಥ ಸುವಾರ್ತಿಕರನ್ನು ನೋಡಬೇಕು ಮತ್ತು ಎಂತಹ ಕೂಟಗಳಲ್ಲಿ ಭಾಗವಹಿಸಬೇಕೆಂದು ಸಲಹೆ ಕೊಡುವಂತಿರಬೇಕು. ಸಮತೋಲಿತವಾದ ಮತ್ತು ಸ್ವಸ್ಥ ಬೋಧನೆಯನ್ನು ಕೊಡುವ ಸತ್ಯವೇದ ಶಾಲೆ ಮಾತು ಕಾಲೇಜುಗಳಿಗೆ ತಮ್ಮ ಯೌವನಸ್ಥರನ್ನು ಅವರು ನಡೆಸಬೇಕು.

## ಹಂಚಿಕೊಳ್ಳುವ ಸಮಯ

1. ಯಾವುದು ನಿಜವಾಗಲೂ ಕ್ರೈಸ್ತೀಯವಾದುದ್ದಲ್ಲ ಮತ್ತು ಯಾವುದು ಸುಳ್ಳು ಬೋಧನೆ ಅಥವಾ ದುರ್ಬೋಧನೆ ಎಂಬುದರ ನಿಮ್ಮ ತಿಳುವಳಿಕೆಯನ್ನು ರೂಪಿಸಿಕೊಳ್ಳಲು ನೀವು ಉಪಯೋಗಿಸುವ ಮೂಲಗಳನ್ನು ಪಟ್ಟಿಮಾಡಿರಿ. ನಿಮ್ಮ ಪಟ್ಟಿಯು ಸತ್ಯವೇದ (ಸತ್ಯವೇದದಲ್ಲಿನ ಯಾವ ಪುಸ್ತಕಗಳು), ಆತ್ಮಿಕ ಪುಸ್ತಕಗಳು (ನಿಮ್ಮ ನೆಚ್ಚಿನ ಬರಹಗಾರರು ಯಾರು), ಕ್ರೈಸ್ತೀಯ ಮಾಸ ಪತ್ರಿಕೆಗಳು (ನೀವು ಯಾವಾಗಲು ಓದುವ ಮಾಸಪತ್ರಿಕೆ ಯಾವುದು), ನಿಮ್ಮ ಸ್ವಂತ ಸಭೆಯಲ್ಲಿನ ಸಭಾಪಾಲಕರು ಮತ್ತು ಸತ್ಯವೇದ

ಬೋಧಕರುಗಳು (ಯಾರು ಕುರಿಗಳಿಗೆ ಉತ್ತಮವಾಗಿ ಉಣಿಸುತ್ತಾರೆ ಮತ್ತು ಬಗೆಬಗೆಯ ಆತ್ಮಿಕ ಆಹಾರವನ್ನು ಕೊಡುತ್ತಾರೆಂದು ನೀವು ಯೋಚಿಸುವಿರಿ), ಸಮಾರಂಭ ಮತ್ತು ಆತ್ಮಿಕ ಕೂಟಗಳು (ನಿಮ್ಮ ನೆಚ್ಚಿನ ಪ್ರಸಂಗಿ ಯಾರು) ರೇಡಿಯೋ ಮತ್ತು ಟಿ.ವಿ ಸುವಾರ್ತಿಕರು (ನಿಮ್ಮ ನೆಚ್ಚಿನ ಕಾರ್ಯಕ್ರಮ ಯಾವುದು) ಇವುಗಳನ್ನು ಒಳಗೊಂಡಿರಲಿ. ಅನಂತರ ಈ ಮೂಲಗಳನ್ನು ಮೌಲ್ಯಮಾಪನ ಮಾಡಿರಿ. ಅವು ಎಷ್ಟು ನಂಬಲರ್ಹವಾಗಿವೆ? ಅವನ್ನು ನೀವು ಹೇಗೆ ಆರಿಸುವಿರಿ? ನಿಮ್ಮನ್ನು ಸುಳ್ಳು ಸಿದ್ಧಾಂತ ಮತ್ತು ದುರ್ಬೋಧನೆಗಳಲ್ಲಿ ನಂಬಿಕೆ ಇಡುವುದರಿಂದ ಕಾಪಾಡಿಕೊಳ್ಳಲು ನೀವು ಏನನ್ನು ಮಾಡುವಿರಿ? ಕೆಲವು ವಿಮರ್ಶೆಗಳನ್ನು ಪಟ್ಟಿಮಾಡಿರಿ.

2. ಕೆಲವು ಸಿದ್ಧಾಂತಗಳು ಅತೀ ಹೆಚ್ಚು ಮೂಲಭೂತವಾಗಿದ್ದು ಉಳಿದವುಗಳಿಗಿಂತ ಪ್ರಾಮುಖ್ಯವಾದವುಗಳಾಗಿವೆ. ಅದರ ಪ್ರತಿಪಾದಕರುಗಳಿಗೆ ಕ್ರೈಸ್ತೀಯ ಎಂದು ಕರೆಸಿಕೊಳ್ಳಲು ಸರಿಯೆನಿಸುವ ಸಿದ್ಧಾಂತಗಳು ಅವಾಗಿರಬಹುದು. ಒಂದು ವೇಳೆ ಅವು ತಪ್ಪಾಗಿದ್ದರೆ ಅದರ ಪ್ರತಿಪಾದಕರುಗಳು ದುರ್ಬೋಧಕ (ಸುಳ್ಳುಬೋಧಕ) ರಾಗಿದ್ದು ಎಂದಿಗೂ ಅವನ್ನು ಕ್ರೈಸ್ತೀಯ ಎಂದು ಕರೆಯಲಾಗದು. ಈ ಗುಂಪಿಗೆ ಸೇರಿದವುಗಳ ಉದಾಹರಣೆಗಳು:

- ತ್ರೈಯೇಕತ್ವದ ಸಿದ್ಧಾಂತ
- ಕ್ರಿಸ್ತನ ದೈವತ್ವದ ಸಿದ್ಧಾಂತ
- ರಕ್ಷಣೆಯ ಸಿದ್ಧಾಂತ (ಕೇವಲ ದೇವರ ಕೃಪೆ ಮತ್ತು ಕ್ರಿಸ್ತನಿಂದ)
- ಸಭೆಯ ಸಿದ್ಧಾಂತ (ದೇವ ಜನರು, ಭಕ್ತಿಯ ಜೀವಿತ, ಸುವಾರ್ತೆ ಸಾರುವುದು ಇತ್ಯಾದಿ)
- ಕ್ರಿಸ್ತನ ಬರೋಣ ಮತ್ತು ಪೂರ್ಣ ಮಟ್ಟದ ದೇವರ ರಾಜ್ಯದ ಸಿದ್ಧಾಂತ

ಉಳಿದ ಸಿದ್ಧಾಂತಗಳು ಕ್ರೈಸ್ತೀಯ ನಂಬಿಕೆಗೆ ಕೇಂದ್ರವಾದಂತವುಗಳಲ್ಲ. ಅವು ವಿಭಿನ್ನ ಸಭೆಗಳು ಮತ್ತು ಸಂಸ್ಥೆಗಳು ಒಪ್ಪದಿರುವ ಸಂಗತಿಗಳಾಗಿವೆ. ಕೆಲಸಮಯ ಅವು ಸಿದ್ಧಾಂತಗಳೆಂದು ಕರೆಯುವಂತವುಗಳಲ್ಲ, ಆದರೆ ನಂಬಿಕೆ ಮತ್ತು ಆಚರಣೆಗಳಾಗಿವೆ. ಈ ಗುಂಪಿಗೆ ಸೇರಿದವುಗಳು ಉದಾಹರಣೆಗೆ–

- ಸಭೆಯ ಕಾರ್ಯ ಮತ್ತು ಸಂಸ್ಥೆ (ಬಿಶೋಪಗಳ ನೇಮಕ, ಸಾಮಾನ್ಯರ ನಾಯಕತ್ವ, ಮಹಿಳಾ ಪ್ರಸಂಗಿಗಳು, ಸಭಾ ಸದಸ್ಯತ್ವ ಇತ್ಯಾದಿ).
- ಸಭಾ ಪದ್ಧತಿ/ಕ್ರಿಯಾವಿಧಿಗಳು (ಪಾದ ತೊಳೆಯುವುದು, ಪವಿತ್ರ ಬೋಜನ, ದೀಕ್ಷಾಸ್ನಾನ, ವಸ್ತ್ರಧಾರಣೆ, ಸಮಾಜದಲ್ಲಿನ ಪಾಲುಗಾರಿಕೆ, ಅವಿವಾಹಿತ ಪಾದ್ರಿ, ಸನ್ಯಾಸಾಶ್ರಮಗಳು ಇತ್ಯಾದಿ).
- ಸತ್ಯವೇದ ಪಠ್ಯಗಳು ಪರ್ಯಾಯ ವ್ಯಾಖ್ಯಾನ/ತರ್ಜುಮೆಗೆ ಹೋದ ಸಂಗತಿಗಳ ಮೇಲಿನ ನೋಟಗಳು: (ಜಗತ್ತಿನ ಸೃಷ್ಠಿಯ ವಿವರ, ಸೈತಾನನ ಉಗಮ, ಇಸ್ರಾಯೇಲ್ ಮತ್ತು ಇತರೆ ರಾಷ್ಟ್ರಗಳೊಂದಿಗಿನ ಸಂಬಂಧ, ಕ್ರೈಸ್ತೀಯ

ರಾಜ್ಯ, ವಿಧಿಬರಹ, ಸಹಸ್ರ ವರ್ಷಗಳು ಮತ್ತು ಇತರೆ ಅಂತ್ಯ ದಿನಗಳ ವಿವರ, ಪರಲೋಕದಲ್ಲಿನ ಜೀವನ ಹೇಗಿರುತ್ತದೆ)

ಪ್ರತ್ಯೇಕ ನಂಬಿಕೆ ಮತ್ತು ಆಚಾರಗಳನ್ನು ಸೂಚಿಸುವ ಈ ಎರಡು ವರ್ಗಗಳನ್ನು ಸಭೆಗಳು ಮತ್ತು ಸತ್ಯವೇದ ಬೋಧಕರುಗಳು ಖಂಡಿತವಾಗಿ ಒಪ್ಪದಿರಬಹುದು. 'ಕೇದ್ರ ಸಿದ್ಧಾಂತಗಳು' ಮತ್ತು 'ನಂಬಿಕೆ' ಮತ್ತು 'ಆಚಾರಗಳು' ಇವುಗಳ ಬಗ್ಗೆ ನಿಮ್ಮ ತಿಳುವಳಿಕೆಯನ್ನು ಹಂಚಿಕೊಳ್ಳಿರಿ.

3. ಸುಳ್ಳು ಬೋಧಕರ ಪ್ರಭಾವದಿಂದ ನಿಮ್ಮನ್ನು ನೀವು ಹೇಗೆ ರಕ್ಷಿಸಿಕೊಳ್ಳುವಿರಿ? ನಿಮ್ಮ ಸಾರಾಂಶಗಳನ್ನು ಬರೆಯಿರಿ.

4. ನಿಮ್ಮನ್ನು ಸುಳ್ಳು ಬೋಧಕರಾಗುವುದನ್ನು ತಪ್ಪಿಸಿಕೊಳ್ಳಲು ಏನು ಮಾಡುವಿರಿ? ನಿಮ್ಮ ಸಾರಾಂಶಗಳನ್ನು ಪಟ್ಟಿಮಾಡಿರಿ.

5. ಇಂದು ದಕ್ಷಿಣ ಭಾರತದಲ್ಲಿನ ಸ್ಥಳಿಯ ಸಭೆಯು ಸುಳ್ಳು ಬೋಧನೆಯು ಸಭೆಯೊಳಗೆ ನುಗ್ಗುವುದನ್ನು ನಿಲ್ಲಿಸಲು ಏನು ಮಾಡಬಹುದು? ನಿಮ್ಮ ಸ್ರಾಂಶ ಬರೆಯಿರಿ.

6. ಒಂದು ವೇಳೆ ಸುಳ್ಳು ಬೋಧಕರು ತಮ್ಮ ಕಾರ್ಯವನ್ನು ಮಾಡಲು ಸಭೆಯೊಳಗೆ ಅನುಮತಿಸಲ್ಪಟ್ಟರೆ ಪರಿಣಾಮ ಇದು ಒಬ್ಬರಿಗಷ್ಟೆ ಅಲ್ಲ, ಇಡೀ ಸಭೆಗೆ ದುರಂತವನ್ನು ತಂದೊಡ್ಡಬಲ್ಲದು. ದಕ್ಷಿಣ ಭಾರತದ ಹಿನ್ನಲೆಯಲ್ಲಿ ಈ ರೀತಿಯ ದುರಂತಕ್ಕೆ ಕಾರಣವಾದ ಪರಿಣಾಮಗಳ ನಿಮ್ಮ ಅನುಭವವನ್ನು ಹಂಚಿಕೊಳ್ಳಿರಿ.

## ಪ್ರಾರ್ಥನಾ ಸಮಯ

ನೀವು ಸಣ್ಣ ಗುಂಪಾಗಿ ಅಥವಾ ಒಬ್ಬರಾಗಿಯಾದರೂ ಪ್ರಾರ್ಥಿಸಿರಿ. ಕೆಲವು ಪ್ರಾರ್ಥನಾ ಮನವಿಗಳು ಗುಂಪು ಪ್ರಾರ್ಥನೆಗೆ, ಇನ್ನೂ ಕೆಲವು ವೈಯಕ್ತಿಕ ಪ್ರಾರ್ಥನೆಗೆ ಹೊಂದಿಕೆಯಾಗಬಹುದು.

1. ನೀವು ತಿಳಿದಿರುವ ಮತ್ತು ಸುಳ್ಳು ಬೋಧನೆಯೆಡೆಗೆ ಆಕರ್ಷಕರಾದ ಒಬ್ಬರಿಗಾಗಿ ಪ್ರಾರ್ಥಿಸಿರಿ.

2. ದೇವರು ನಿಮ್ಮನ್ನು ಮತ್ತು ನಿಮ್ಮ ಸಭೆಯನ್ನು ದುರ್ಬೋಧನೆಯಿಂದ ಮತ್ತು ಸುಳ್ಳು ಸಿದ್ಧಾಂತಗಳಿಂದ ತಪ್ಪಿಸುವಂತೆ ಪ್ರಾರ್ಥಿಸಿರಿ.

3. ನಿಮ್ಮ ಸತ್ಯವೇದ ಕಾಲೇಜು ಸುಳ್ಳು ಸಿದ್ಧಾಂತ ಮತ್ತು ದುರ್ಬೋಧನೆಯಿಂದ ಸಂರಕ್ಷಿಸಲ್ಪಡುವುದಕ್ಕಾಗಿ ಪ್ರಾರ್ಥಿಸಿರಿ.

4. ನಿಮ್ಮ ಹಂಚಿಕೊಳ್ಳುವ ಸಮಯದ ನೋಟ್ಸ್‌ಗೆ ಹೋಗಿರಿ.

    a. ನೀವು ನಿಜವಾಗಲೂ ಪ್ರಾರ್ಥಿಸಬೇಕೆಂಬ ಒಂದು ಅಥವಾ ಎರಡು ವಿಷಯಗಳನ್ನು ಆಯ್ಕೆಮಾಡಿಕೊಳ್ಳಿರಿ.

    b. ನೀವು ಬದಲಾವಣೆಯನ್ನು ಬಯಸುವ ಒಂದು ಅಥವಾ ಎರಡು ಕ್ಷೇತ್ರಗಳನ್ನು ಆರಿಸಿಕೊಳ್ಳಿರಿ. ನಿಮ್ಮ ನಿರ್ಧಾರಗಳನ್ನು ಪಟ್ಟಿಮಾಡಿರಿ. ನೀವು ಈ

ನಿರ್ಧಾರಗಳನ್ನು ಕಾಪಾಡಿಕೊಂಡು ಅವುಗಳ ಮೂಲಕ ನಿಮ್ಮ ಜೀವನ ಮತ್ತು ಸೇವೆಯು ದೇವರಿಗೆ ಗೌರವಯುತವಾಗಿರುವಂತೆ ಮತ್ತು ಆತನ ರಾಜ್ಯದ ವಿಸ್ತರಣೆಗಾಗಿ ಪ್ರಯೋಜನಕಾರಿಯಾಗಿರಲು ಜ್ಞಾನ ಮತ್ತು ಬಲಕ್ಕಾಗಿ ಪವಿತ್ರಾತ್ಮನನ್ನು ಬೇಡಿಕೊಳ್ಳಿರಿ.

## ಸತ್ಯವೇದ ಅಧ್ಯಯನ/ಸಂದೇಶ/ಧ್ಯಾನ

ಈ ಆತ್ಮಿಕ ಕೂಟ ಅವಧಿಯ ಮೇಲೆ ಆಧರಿತವಾಗಿರುವ ಸಂಗತಿಗಳಿಂದ ಒಂದು ಸಂದೇಶವನ್ನು ಸಿದ್ಧಪಡಿಸಿರಿ. ಆದರೆ ಇದು ಇಂದಿನ ದಕ್ಷಿಣ ಭಾರತದ ಸಭೆಗೆ ಸಮಂಜಸವಾದ ಸಂದೇಶವನ್ನು ಹೊಂದಿರಲಿ.

# ಅವಧಿ 8: ಕ್ರಿಸ್ತನ ಬರುವಿಕೆಗಾಗಿ ಸಿದ್ಧರಾಗಿರಿ!

## ಪೀಠಿಕೆ

ಈ ಆತ್ಮಿಕ ಕೂಟ ಅವಧಿಯು 2 ಪೇತ್ರ 3:1–18 ಮತ್ತು ಈ ಪಠ್ಯಪುಸ್ತಕದಲ್ಲಿ ಅಧ್ಯಯನ 18–20 ನ್ನು ಆಧರಿಸಿದೆ.

- 2 ಪೇತ್ರ 3:1–18 ನ್ನು ಪುನಃ ಓದಿರಿ.
- ಅಧ್ಯಯನ 18–20 ನ್ನು ವಿಮರ್ಶಿಸಿರಿ.
- ಉತ್ತರಗಳು 18–20 ನ್ನು ವಿಮರ್ಶಿಸಿರಿ.

ಈ ಅವಧಿಯ ಉದ್ದೇಶವು ಯೇಸು ಕ್ರಿಸ್ತನ ಬರೋಣದ ನೆರಳಿನಡಿಯಲ್ಲಿ ದಕ್ಷಿಣ ಭಾರತದ ಸಭೆಯು ಹೇಗೆ ಬದುಕಬೇಕೆಂಬ ನಿಮ್ಮ ತಿಳುವಳಿಕೆಯನ್ನು ಆಳವಾಗಿಸುವುದಾಗಿದೆ.

ಯೇಸು ಕ್ರಿಸ್ತನು ತಿರಿಗಿ ಬರುತ್ತಾನೆ ಮತ್ತು ಆತನ ಬರೋಣವು ಪಕ್ಕನೇ ಮತ್ತು ಅನಿರೀಕ್ಷಿತವಾಗಿರುವುದೆಂದು ನಮಗೆ ಗೊತ್ತು. ಆತನು ಯಾವಾಗ ಬರುತ್ತಾನೆಂದು ದೇವರು ನಮಗೆ ಸ್ಪಷ್ಟವಾಗಿ ಹೇಳಿಲ್ಲ. ಆದರೆ ಆ ಮಹಾ ದಿನಕ್ಕಾಗಿ ನಮ್ಮನ್ನು ಸಿದ್ಧಪಡಿಸಿಕೊಳ್ಳಬೇಕೆಂದು ಆತನು ಹೇಳಿದ್ದಾನೆ. ಖಂಡಿತವಾಗಿ ಪ್ರತಿಕ್ಷಣ ಸಹ ಸಿದ್ಧವಾದ ರೀತಿಯಲ್ಲಿ ಬದುಕಬೇಕಾಗಿದೆ. ಈ ಲೋಕವನ್ನು ಬಿಡುವುದಕ್ಕಾಗಿ ಸಿದ್ಧರಾಗಿರಬೇಕು. ಯೇಸು ಕ್ರಿಸ್ತನ ರಕ್ತದ ಮೂಲಕ ದೇವರಿಗೆ ಸೇರಿದವರಿಗಾಗಿ ಆತನು ಸಿದ್ಧಪಡಿದ ಹೊಸ ಭೂಮ್ಯಾಕಾಶಮಂಡಲಗಳ ಪಾಲುದಾರರಾಗಲು ಸಿದ್ಧರಾಗಬೇಕು.

## ಹಂಚಿಕೊಳ್ಳುವ ಸಮಯ

1. 'ಲೋಕದ ಅಂತ್ಯ'ವನ್ನು ನೀವು ಹೇಗೆ ಚಿತ್ರಿಸುವಿರಿ ಮತ್ತು ಅದರ ಬಗ್ಗೆ ಏನೆಂದು ಭಾವಿಸುವಿರಿ? ನಿಮ್ಮ ಆಲೋಚನೆ, ನಿರೀಕ್ಷೆ ಮತ್ತು ಭಯಗಳನ್ನು ಹಂಚಿಕೊಳ್ಳಿರಿ.
2. ನಿಮ್ಮ ಅಧ್ಯಯನ 20 ರಲ್ಲಿನ 3 ನೇ ಪ್ರಶ್ನೆಯ ಉತ್ತರಕ್ಕೆ ಹೋಗಿ (ನಾವು ಯಾವ ರೀತಿಯ ಜನರಾಗಿರಬೇಕು ಎಂಬುದರ ಬಗ್ಗೆ) ಪೇತ್ರನು ಈ ಅಧ್ಯಾಯದಲ್ಲಿ ವಿವರಿಸುವ ರೀತಿಯ ದಿನಕ್ಕಾಗಿ ಈ ರೀತಿ ಜೀವಿಸುವುದು ನಮ್ಮನ್ನು ಕರ್ತನ ದಿನಕ್ಕಾಗಿ ಸಿದ್ಧಪಡಿಸಬಲ್ಲದೆಂದು ನೀವು ಯಾಕೆ ಹೇಳುವಿರಿ (20 ನೇ ಅಧ್ಯಾಯ 2 ನೇ ಪ್ರಶ್ನೆಗೆ ಉತ್ತರ ನೋಡಿರಿ)?
3. ಪದೇ ಪದೇ ಈ ಅಧ್ಯಾಯದಲ್ಲಿ ನಾಶನ ಎಂಬ ಪದವನ್ನು ಪೇತ್ರನು ಬಳಸುತ್ತಾನೆ. ಅಲ್ಲದೇ ಈ ದಿನಕ್ಕಾಗಿ ಮುನ್ನೋಡುತ್ತಿದ್ದೇವೆಂದು 3 ಬಾರಿ (ವ.12,13,14) ಹೇಳುತ್ತಾನೆ. ಯಾಕೆ ಇದಕ್ಕಾಗಿ ನಾವು ಹಾರೈಸಬೇಕು? ಈ ಮಾಡುವುದು ಇಂದಿನ ದಕ್ಷಿಣ ಭಾರತದ ವಿಶ್ವಾಸಿಗಳಿಗೆ ಎಷ್ಟು ಸಮಂಜಸವೆನಿಸುತ್ತದೆ? ನಿಮ್ಮ ಸಾರಾಂಶಗಳನ್ನು ಬರೆಯಿರಿ.
4. ನಿಮ್ಮ ಜೀವಿತ ಕಾಲದಲ್ಲಿ ಕರ್ತನ ದಿನವು ಬರುವುದೆಂದು ಊಹಿಸಿಕೊಳ್ಳಿರಿ:

a. ಮೊದಲು ಏನನ್ನು ಸಾಧಿಸಬೇಕೆಂದು ನೀವು ಬಯಸುವಿರಿ? ಪಟ್ಟಿಮಾಡಿರಿ.

b. ಯಾವ ಸ್ಥಿತಿಯಲ್ಲಿ ದೇವರು ನಿಮ್ಮ ಜೀವನದ ಈ 3 ಕ್ಷೇತ್ರಗಳನ್ನು ಕಂಡುಹಿಡಿಯಬೇಕೆಂದು ಬಯಸುವಿರಿ?

- ನಿಮ್ಮ ಕೆಲಸ
- ಜನರೊಂದಿಗಿನ ನಿಮ್ಮ ಸಂಬಂಧ
- ಆತನೊಂದಿಗಿನ ನಿಮ್ಮ ಸಂಬಂಧ. ನಿಮ್ಮ ಉತ್ತರಗಳನ್ನು ಬರೆಯಿರಿ. ಉತ್ತರವನ್ನು ನಿಮ್ಮ ಗುಂಪಿನ ಇತರರೊಂದಿಗೆ ಹಂಚಿಕೊಳ್ಳಿರಿ

c. ದೇವರು ಯಾವ ಸ್ಥಿತಿಯಲ್ಲಿ ನಿಮ್ಮ ಸಭೆಯನ್ನು ಕಾಣಬೇಕೆಂದು ನೀವು ಬಯಸುವಿರಿ? ನಿಮ್ಮ ಉತ್ತರವನ್ನು ಬರೆಯಿರಿ. ನಿಮ್ಮ ಉತ್ತರವನ್ನು ಗುಂಪಿನ ಇತರರೊಂದಿ ಹಂಚಿಕೊಳ್ಳಿರಿ.

## ಪ್ರಾರ್ಥನಾ ಸಮಯ

ನೀವು ಸಣ್ಣ ಗುಂಪಾಗಿ ಅಥವಾ ಒಬ್ಬರಾಗಿಯಾದರೂ ಪ್ರಾರ್ಥಿಸಿರಿ. ಕೆಲವು ಪ್ರಾರ್ಥನಾ ಮನವಿಗಳು ಗುಂಪು ಪ್ರಾರ್ಥನೆಗೆ, ಇನ್ನೂ ಕೆಲವು ವೈಯಕ್ತಿಕ ಪ್ರಾರ್ಥನೆಗೆ ಹೊಂದಿಕೆಯಾಗಬಹುದು.

1. ನಿಮ್ಮ ಭಾವನೆ ಮತ್ತು ಪರಿಸ್ಥಿತಿಗಳನ್ನು ಪ್ರಾರ್ಥನೆಯಲ್ಲಿ ದೇವರ ಬಳಿ ತನ್ನಿರಿ. ಆತನ ಸಹಾಯ ಮತ್ತು ಆಧರಣೆಯನ್ನು ಕೇಳಿಕೊಳ್ಳಿರಿ. ಮುಂದೆ ಬರುವ ಲೋಕಕ್ಕಾಗಿ ಅಲ್ಲ, ಆದರೆ ಆತನು ಈ ಲೋಕದಲ್ಲಿ ಕೊಡುವ ಸ್ವಸ್ಥತೆ ಮತ್ತು ನಿರೀಕ್ಷೆಗಾಗಿ ಬೇಡಿಕೊಳ್ಳಿರಿ.
2. ಎಲ್ಲಾ ಸಂಗತಿಗಳ ಮೇಲೆ ದೇವರು ಅಧಿಕಾರ ಸಾಧಿಸುವುದಕ್ಕಾಗಿ ಮತ್ತು ಯಾವುದೂ ಸಹ ಆತನ ನಿಯಂತ್ರಣವನ್ನು ಮೀರಿ ಹೋಗಿರದಿರುವುದಕ್ಕಾಗಿ ದೇವರಿಗೆ ಕೃತಜ್ಞತೆ ಸಲ್ಲಿಸಿರಿ. ಸಂಧಿಸುವಿಕೆ ಯಾವಾಗ ಅಥವಾ ಹೇಗೆ ಆದರೂ ಸಹ ಆತನನ್ನು ಸಂಧಿಸಲು ನಿಮ್ಮನ್ನು ಸಿದ್ಧಗೊಳಿಸುವಂತೆ ದೇವರನ್ನು ಆಹ್ವಾನಿಸಿರಿ.
3. ಕರ್ತನ ದಿನ ಮತ್ತು ಯೇಸು ಕ್ರಿಸ್ತನ ಮಹಿಮೆಯ ಬರೋಣವನ್ನು ಎದುರಿಸಲು ಸಿದ್ಧವಾಗಿರುವಂತೆ ನಿಮ್ಮ ಸ್ನೇಹಿತರಿಗಾಗಿ ಮತ್ತು ಸಭೆಗಾಗಿ ಪ್ರಾರ್ಥಿಸಿರಿ.
4. ಯೇಸು ಕ್ರಿಸ್ತನ ಎರಡನೇ ಬರೋಣಕ್ಕಾಗಿ ನಿಮ್ಮ ಸ್ನೇಹಿತರನ್ನು ಮತ್ತು ಸಭೆಯನ್ನು ಸಿದ್ಧಗೊಳಿಸಲು ದೇವರು ನಿಮ್ಮನ್ನು ಉಪಯೋಗಿಸುವಂತೆ ಪ್ರಾರ್ಥಿಸಿರಿ.
5. ಸತ್ಯವೇದದ ಕೊನೆಯ ಅಧ್ಯಾಯ ಪ್ರಕಟಣೆ 22 ನ್ನು ಓದಿರಿ:

   a. ಈ ದೃಶ್ಯದಲ್ಲಿ ನಿಮ್ಮನ್ನು ಚಿತ್ರಿಸಿಕೊಳ್ಳಿರಿ ಮತ್ತು ಅಲ್ಲಿ ನೀವು ಕಾಣುವುದಕ್ಕಾಗಿ ದೇವರಿಗೆ ಕೃತಜ್ಞತೆ ಸಲ್ಲಿಸಿರಿ.

b. ಹೊಸ ಒಡಂಬಡಿಕೆಯ ಕಡೇ ಪ್ರಾರ್ಥನೆಯು (ಪ್ರಕ 22:20) ಯೇಸು ಕ್ರಿಸ್ತನನ್ನು ಬರಬೇಕೆಂದು ಆಹ್ವಾನಿಸುತ್ತದೆ. 'ಯೇಸುವೇ ಬಾ' ಪ್ರಾಮಾಣಿಕವಾಗಿ ಇದನ್ನು ಮಾಡಲು ಸಾಧ್ಯವಾದರೆ ಈ ರೀತಿಯಾಗಿ ನೀವು ಪ್ರಾರ್ಥಿಸಿರಿ.

6. ನಿಮ್ಮ ಹಂಚಿಕೊಳ್ಳುವ ಸಮಯದ ನೋಟ್ಸ್‌ಗೆ ಹೋಗಿರಿ.

   a. ನೀವು ನಿಜವಾಗಲೂ ಪ್ರಾರ್ಥಿಸಬೇಕೆಂಬ ಒಂದು ಅಥವಾ ಎರಡು ವಿಷಯಗಳನ್ನು ಆಯ್ಕೆಮಾಡಿಕೊಳ್ಳಿರಿ.

   b. ನೀವು ಬದಲಾವಣೆಯನ್ನು ಬಯಸುವ ಒಂದು ಅಥವಾ ಎರಡು ಕ್ಷೇತ್ರಗಳನ್ನು ಆರಿಸಿಕೊಳ್ಳಿರಿ. ನಿಮ್ಮ ನಿರ್ಧಾರಗಳನ್ನು ಪಟ್ಟಿಮಾಡಿರಿ. ನೀವು ಈ ನಿರ್ಧಾರಗಳನ್ನು ಕಾಪಾಡಿಕೊಂಡು ಅವುಗಳ ಮೂಲಕ ನಿಮ್ಮ ಜೀವನ ಮತ್ತು ಸೇವೆಯು ದೇವರಿಗೆ ಗೌರವಯುತವಾಗಿರುವಂತೆ ಮತ್ತು ಆತನ ರಾಜ್ಯದ ವಿಸ್ತರಣೆಗಾಗಿ ಪ್ರಯೋಜನಕಾರಿಯಾಗಿರಲು ಜ್ಞಾನ ಮತ್ತು ಬಲಕ್ಕಾಗಿ ಪವಿತ್ರಾತ್ಮನನ್ನು ಬೇಡಿಕೊಳ್ಳಿರಿ.

## ಸತ್ಯವೇದ ಅಧ್ಯಯನ/ಸಂದೇಶ/ಧ್ಯಾನ

ಈ ಆತ್ಮಿಕ ಕೂಟ ಅವಧಿಯ ಮೇಲೆ ಆಧರಿತವಾಗಿರುವ ಸಂಗತಿಗಳಿಂದ ಒಂದು ಸಂದೇಶವನ್ನು ಸಿದ್ಧಪಡಿಸಿರಿ. ಆದರೆ ಇದು ಇಂದಿನ ದಕ್ಷಿಣ ಭಾರತದ ಸಭೆಗೆ ಸಮಂಜಸವಾದ ಸಂದೇಶವನ್ನು ಹೊಂದಿರಲಿ.

*''ಪ್ರಿಯರೇ ಕರ್ತನ ಎಣಿಕೆಯಲ್ಲಿ ಒಂದು ದಿನವು ಸಾವಿರ ವರ್ಷಗಳಂತೆಯೂ ಸಾವಿರ ವರ್ಷಗಳು ಒಂದು ದಿನದಂತೆಯೂ ಅವೆ ಎಂಬುದನ್ನು ಮರೆಯಬೇಡಿರಿ. ಕರ್ತನು ತನ್ನ ವಾಗ್ದಾನವನ್ನು ನೆರವೇರಿಸುವುದಕ್ಕೆ ತಡಮಾಡುತ್ತಾನೆಂಬುದಾಗಿ ಕೆಲವರು ಅರ್ಥಮಾಡಿಕೊಳ್ಳುವ ಪ್ರಕಾರ ಆತನು ತಡಮಾಡುವವನಲ್ಲ. ಯಾವನಾದರೂ ನಾಶವಾಗುವುದರಲ್ಲಿ ಆತನು ಇಷ್ಟಪಡದೆ ಎಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪೇಕ್ಷಿಸುವವನಾಗಿದ್ದು ನಿಮ್ಮ ವಿಷಯದಲ್ಲಿ ದೀರ್ಘಶಾಂತಿಯುಳ್ಳವನಾಗಿದ್ದಾನೆ''* (2 ಪೇತ್ರ 8:9).

# ಶಿಕ್ಷಕರಿಗಾಗಿ

# ಸಾಮಾನ್ಯ ಸಲಹೆಗಳು

## ವಿದ್ಯಾರ್ಥಿಗಳ 6 ಗುರಿಗಳು

1. ವಿದ್ಯಾರ್ಥಿಗಳು ತಮ್ಮ ಓದುವ ಮತ್ತು ತಿಳುಕೊಳ್ಳುವ ಕಲೆಯನ್ನು ಅಭಿವೃದ್ಧಿಪಡಿಸಿಕೊಳ್ಳಬೇಕು.
2. ತಾವು ಏನನ್ನು ಓದಿದ್ದೇವೆ ಮತ್ತು ತಾವು ಅರ್ಥೈಸಿಕೊಂಡಿರುವುದರಿಂದ ಸಮಾರೋಪವನ್ನು ಹೊರತರುವುದರ ಬಗ್ಗೆ ಯೋಚಿಸಲು ವಿದ್ಯಾರ್ಥಿಗಳು ನಿರಂತರವಾಗಿ ಉತ್ತೇಜಿಸಲ್ಪಡಬೇಕು.
3. ವಿದ್ಯಾರ್ಥಿಗಳು 1 ಮತ್ತು 2 ನೇ ಪೇತ್ರವನ್ನು ಸರಿಯಗಿ ತಿಳಿದುಕೊಳ್ಳಬೇಕು.
4. ತಮ್ಮ ಸ್ವಂತ ದಕ್ಷಿಣ ಭಾರತದ ಪ್ರಸ್ತುತ ಸನ್ನಿವೇಶಗಳಿಗೆ ಈ ವರೆಗೆ ತಾವು ಕಲಿತವುಗಳನ್ನು ಅಳವಡಿಸಿಕೊಳ್ಳಲು ವಿದ್ಯಾರ್ಥಿಗಳು ಸವಾಲನ್ನು ತೆಗೆದುಕೊಳ್ಳಬೇಕು.
5. ಧ್ಯಾನ, ಸತ್ಯವೇದ ಅಧ್ಯಯನ ಮತ್ತು ಸಂದೇಶಗಳಿಗಾಗಿ 1 ಮತ್ತು 2 ನೇ ಪೇತ್ರದಿಂದ ವಚನಗಳನ್ನು ತೆಗೆದುಕೊಳ್ಳಲು ವಿದ್ಯಾರ್ಥಿಗಳು ಉತ್ತೇಜಿಸಲ್ಪಡಬೇಕು.
6. ಆತ್ಮಿಕ ಕೂಟದ ಮೂಲಕ ವಿದ್ಯಾರ್ಥಿಗಳು ಆತ್ಮಿಕವಾಗಿ ಬೆಳೆಯಲು ಉತ್ತೇಜಿಸಲ್ಪಡಲಿ.

## ಶಿಕ್ಷಕರಿಗಾಗಿ ಕೆಲವು ಸಲಹೆಗಳು

1. ಸಂಕ್ಷಿಪ್ತವಾಗಿ ಬೋಧಿಸಿರಿ ಮತ್ತು ಕಲಿಸಿರಿ.
2. ನಿಮ್ಮ ಬೋಧನೆಯು ಗುಂಪು ಚರ್ಚೆಯ ಮೇಲೆ ಆಧಾರವಾಗಿರಲಿ. ಅದಕ್ಕಾಗಿಯೇ ಈ ಪಠ್ಯಪುಸ್ತಕವು ವಿನ್ಯಾಸಗೊಂಡಿದೆ.
3. ಎಲ್ಲಾ ವಿದ್ಯಾರ್ಥಿಗಳು ತರಗತಿಯಲ್ಲಿ ಕ್ರಿಯಾತ್ಮಕರಾಗಿರುವಂತೆ ನೋಡಿಕೊಳ್ಳಿರಿ. ನಾಚಿಕೆ ಮತ್ತು ಬಲಹೀನರಾಗಿರುವವರನ್ನು ಉತ್ತೇಜಿಸಿರಿ.
4. ಯಾವುದೇ ವಿದ್ಯಾರ್ಥಿಯನ್ನು ಪರಿಹಾಸ್ಯ ಮಾಡಬೇಡಿರಿ. ಯಾವಾಗಲೂ ಉತ್ತೇಜಿಸಿರಿ.
5. ಪ್ರಶ್ನೆಗಳನ್ನು ಪ್ರೋತ್ಸಾಹಿಸಿರಿ ಮತ್ತು ನೀವು ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಲಾಗದುದ್ದಕ್ಕಾಗಿ ಪೇಚಾಡಬೇಡಿರಿ. ಯಾವ ಸತ್ಯವೇದ ಶಿಕ್ಷಕರೂ ಸಹ ಎಲ್ಲಾ ಉತ್ತರಗಳನ್ನು ಹೊಂದಿಲ್ಲ.
6. ವಿದ್ಯಾರ್ಥಿಗಳು ಅನಾವಶ್ಯಕ ಪ್ರಶ್ನೆಗಳಿಂದ ನಿಮ್ಮನ್ನು ಮತ್ತು ನಿಮ್ಮ ಸಂಗತಿಗಳನ್ನು ಮೂಲೆಗುಂಪಾಗಿ ಮಾಡದಂತೆ ನೋಡಿಕೊಳ್ಳಿರಿ.

## ಅಧ್ಯಯನವನ್ನು ಹೇಗೆ 4 ಹಂತಗಳಲ್ಲಿ ಮುಗಿಸುವುದು:

1. ಅಧ್ಯಯನವನ್ನು ನೀವು ಪರಿಚಯಿಸಿರಿ.

2. ವಿದ್ಯಾರ್ಥಿಗಳು ಸತ್ಯವೇದ ಭಾಗವನ್ನು ಓದಿ ಮತ್ತು ಪ್ರಶ್ನೆಗಳನ್ನು 3 ಅಥವಾ 4 ಜನರ ಗುಂಪಾಗಿ ಕಾರ್ಯಮಾಡಲಿ.
3. ತರಗತಿಯಲ್ಲಿ ಅವರ ಉತ್ತರಗಳನ್ನು ಗಮನಿಸಿರಿ. ಸಮಯವನ್ನು ವ್ಯರ್ಥಮಾಡಬೇಡಿರಿ. ಸರಳ ಪ್ರಶ್ನೆಗಳನ್ನು ಬಿಡಿರಿ ಮತ್ತು ವಿದ್ಯಾರ್ಥಿಗಳು ಕಷ್ಟಪಡುತ್ತಿರುವ ಪ್ರಶ್ನೆಗಳ ಮೇಲೆ ಹೆಚ್ಚು ಒತ್ತುಕೊಡಿರಿ. ತಪ್ಪು ತಿಳುವಳಿಕೆಯನ್ನು ಪರಿಹರಿಸಿರಿ.
4. ಮುಗಿಯದ ಕೆಲಸವನ್ನು ಗ್ರಂಥಾಲಯ ಸಮಯದಲ್ಲಿ ಮುಗಿಸುವಂತೆ ವಿದ್ಯಾರ್ಥಿಗಳನ್ನು ಉತ್ತೇಜಿಸಿರಿ.

## ಗ್ರಂಥಾಲಯ ಸಮಯ ಮತ್ತು ಮನೆಗೆಲಸ

ಸಾಧ್ಯವಾದರೆ ಗ್ರಂಥಾಲಯ ಸಮಯವು ಮೇಲ್ವಿಚಾರಣೆಗೊಳ್ಳಲಿ. ತಮ್ಮ ಸಮಯವನ್ನು ಹೆಚ್ಚು ಸಮರ್ಥವಾಗಿ ಉಪಯೋಗಿಸುವಂತೆ ವಿದ್ಯಾರ್ಥಿಗಳ ಮೇಲೆ ಇದು ಒತ್ತಡವನ್ನು ತರುವುದು. ಖಂಡಿತವಾಗಿ ಆಗ ಶಿಕ್ಷಕರುಗಳಿಗೆ ಕಲಿಸುವುದಕ್ಕಿರುವುದಿಲ್ಲ. ವಿದ್ಯಾರ್ಥಿಗಳು ಶಿಕ್ಷಕರ ಅಥವಾ ಸಹ ವಿದ್ಯಾರ್ಥಿಗಳ ಮಧ್ಯ ಪ್ರವೇಶವಿಲ್ಲದೆ ಸ್ವಂತವಾಗಿ ಕಲಿಯಲು ಪ್ರಯತ್ನಿಸಬೇಕು.

ಗ್ರಂಥಾಲಯ ಸಮಯದಲ್ಲಿ ಬಿಟ್ಟ ಕಾರ್ಯವನ್ನು ವಿದ್ಯಾರ್ಥಿಗಳು ಸಂಜೆ ಮಾಡಿ ಮುಗಿಸಬೇಕು. ವಿಶೇಷವಾಗಿ ನಿಧಾನಗತಿಯ ವಿದ್ಯಾರ್ಥಿಗಳು ತಮ್ಮ ಮನೆಕೆಲಸದ ಸಮಯವನ್ನು ಸರಿಯಾಗಿ ಉಪಯೋಗಿಸಲು ಉತ್ತೇಜಿಸಲ್ಪಡಬೇಕು. ಅಂಥವರನ್ನು ಪ್ರೋತ್ಸಾಹಿಸಿರಿ.

## ಆತ್ಮಿಕ ಕೂಟ

ಈ ಕೋರ್ಸ್ ಯಾವುದೇ ಪರೀಕ್ಷಾ ಪತ್ರಿಕೆಯನ್ನು ಒಳಗೊಂಡಿರುವುದಿಲ್ಲ, ಆದರೆ ಅಧ್ಯಾಯದಲ್ಲಿನ 2ನೇ ಪ್ರಶ್ನೆ '1 ಪೇತ್ರವನ್ನು ತಿರುಗಿ ಯೋಚಿಸಿರಿ' ಮತ್ತು 2 ಪೇತ್ರದೆಡೆಗೆ ತಿರುಗಿ ನೋಡಿರಿ ಇದು ಶಿಕ್ಷಕರಿಂದ ಪರೀಕ್ಷೆಗಾಗಿ ಉಪಯೋಗಿಸಲ್ಪಡಬಹುದು.

ಪರೀಕ್ಷೆ

ಈ ವಿಷಯಕ್ಕೆ ಯಾವುದೇ ಪರೀಕ್ಷೆ ಇರುವುದಿಲ್ಲ. ಆದರೆ ***ಪೇತ್ರನು ಬರೆದ ಮೊದಲನೆಯ ಪತ್ರಿಕೆಯ ಕುರಿತು ಯೋಚಿಸಿರಿ*** ಮತ್ತು ***ಪೇತ್ರನು ಬರೆದ ಎರಡನೆಯ ಪತ್ರಿಕೆಯ ಕುರಿತು ಯೋಚಿಸಿರಿ***ಎಂಬ ಅಧ್ಯಯನಗಳಲ್ಲಿರುವ ಎರಡನೆಯ ಪ್ರಶ್ನೆಯನ್ನು ಪರೀಕ್ಷೆಯ ಪ್ರಶ್ನೆಪತ್ರಿಕೆಯಾಗಿ ಬಳಸಬಹುದು.

## ಶಿಕ್ಷಕರ ಸಿದ್ಧತೆ

ಪ್ರತಿ ಪಾಠಕ್ಕಾಗಿ ಶಿಕ್ಷಕರು ತಮ್ಮನ್ನು ಪೂರ್ಣವಾಗಿ ಸಿದ್ಧಗೊಳಿಸಿಕೊಂಡಿರಬೇಕು. 1 ಮತ್ತು 2 ಪೇತ್ರದ ಕಷ್ಟ ಮತ್ತು ಸವಾಲಗಳನ್ನು ಕಡೆಗಣಿಸಬೇಡಿರಿ. ಉತ್ತಮವಾದ ಕೆಲಸ ಮಾಡಲು ನೀವು ಅತ್ಯುತ್ತಮವಾಗಿ ಸಿದ್ಧಗೊಂಡಿರಬೇಕು.

ಮುಂದಿನ ಅಧ್ಯಾಯದಲ್ಲಿ ನಾನು ಈ ಕೋರ್ಸನ್ನು ಹೇಗೆ ಯೋಚಿಸಬಹುದು ಮತ್ತು ಪಠ್ಯಪುಸ್ತಕವನ್ನು ಹೇಗೆ ಉಪಯೋಗಿಸಬಹುದೆಂಬುದನ್ನು ತೋರಿಸಿದ್ದೇನೆ. ಅಚ್ಚುಕಟ್ಟಾಗಿ ಮಾಡದಿದ್ದರೆ 2 ವಾರದೊಳಗೆ ಮುಗಿಸಲು ಆಗದೇ ಇರಬಹುದು.

# ಈ ಕೋರ್ಸ್‌ನ ಯೋಜನೆ

## ಪೀಠಿಕೆ

ಈ ಪಠ್ಯಪುಸ್ತಕವು 1 ಮತ್ತು 2 ಪೇತ್ರವನ್ನು ಪೂರ್ಣಗೊಳಿಸುವ 2 ವಾರಕ್ಕಾಗಿನ ಅಂಶಗಳನ್ನು ಒಳಗೊಂಡಿದೆ. ಅಧ್ಯಯನಗಳು ಉದ್ದವಾಗಿವೆ. ಹಾಗಾಗಿ ಪ್ರತಿ ಅಧ್ಯಯನಕ್ಕೆ ಎಷ್ಟು ಸಮಯ ಕೊಡಬೇಕೆಂದು ಶಿಕ್ಷಕರು ನಿರ್ಧರಿಸತಕ್ಕದ್ದು. ಆದರೆ ಸಾಧಾರಣವಾಗಿ ಪ್ರತಿ ಅಧ್ಯಯನಕ್ಕೆ ಒಂದು ಪಾಠಕ್ಕಿಂತ ಸ್ವಲ್ಪ ಹೆಚ್ಚಾಗಿರಲಿ. ಆದರೆ ಬಿಟ್ಟಿರುವುದಕ್ಕಾಗಿ ಸೋಮವಾರದಿಂದ ಗುರುವಾರದವರೆಗಿನ ಗ್ರಂಥಾಲಯ ಸಮಯ ಉಪಯೋಗಿಸಬಹುದು. ಚುರುಕು ಮತ್ತು ಪಾಂಡಿತ್ಯವಿರುವ ವಿದ್ಯಾರ್ಥಿಗಳು ಎಲ್ಲಾ ಪ್ರಶ್ನೆ ಮಾಡುವಾಗ ನಿಧಾನಗತಿಯ ವಿದ್ಯಾರ್ಥಿಗಳು ಕಡಿಮೆ ಪ್ರಶ್ನೆಗಳನ್ನು ಮಾಡಲು ಹೆಚ್ಚುವರಿಯಾಗಿ ಗ್ರಂಥಾಲಯ ಭಾಗದ ಕಾರ್ಯರೂಪದ ಭಾಗದಲ್ಲಿ ಹೆಚ್ಚು ಸಮಯ ಕಳೆಯಲಿ (ಪ್ರಶ್ನೆ 4 ಮತ್ತು 5).

## 2 ವಾರಗಳ ಈ ಕೋರ್ಸ್‌ನ ದೈನಂದಿನ ಯೋಜನೆ

### ಸೋಮವಾರ, ವಾರ 1:

- 1 ಪೇತ್ರ ಪರಿಚಯ/ಪೀಠಿಕೆ
- 1 ಪೇತ್ರ ಓದುವುದು
- ಅಧ್ಯಯನ 1
- ಅಧ್ಯಯನ 2
- ಅಧ್ಯಯನ 2 ರ ಕೊನೆಯಲ್ಲಿ ಗ್ರಂಥಾಲಯ ಸಮಯದ ಸಲಹೆಗಳು

### ಮಂಗಳವಾರ, ವಾರ 1:

- ಅಧ್ಯಯನ 3
- ಅಧ್ಯಯನ 4
- ಅಧ್ಯಯನ 5
- ಅಧ್ಯಯನ 5 ರ ಕೊನೆಯಲ್ಲಿ ಗ್ರಂಥಾಲಯ ಸಮಯದ ಸಲಹೆಗಳು

### ಬುಧವಾರ, ವಾರ 1:

- ಅಧ್ಯಯನ 6

- ಅಧ್ಯಯನ 7
- ಅಧ್ಯಯನ 8
- ಅಧ್ಯಯನ 8 ರ ಕೊನೆಯಲ್ಲಿ ಗ್ರಂಥಾಲಯ ಸಮಯದ ಸಲಹೆಗಳು

**ಗುರುವಾರ, ವಾರ 1:**

- ಅಧ್ಯಯನ 9
- ಅಧ್ಯಯನ 10
- ಅಧ್ಯಯನ 11
- ಅಧ್ಯಯನ 11 ರ ಕೊನೆಯಲ್ಲಿ ಗ್ರಂಥಾಲಯ ಸಮಯದ ಸಲಹೆಗಳು

**ಶುಕ್ರವಾರ, ವಾರ 1:**

- ಅಧ್ಯಯನ 12
- 2 ಪೇತ್ರ ಪರಿಚಯ
- 2 ಪೇತ್ರ ಓದುವುದು
- ಅಧಯನ 13

**ಸೋಮವಾರ, ವಾರ 2:**

- ಅಧ್ಯಯನ 14
- ಅಧಯನ 15
- ಅಧ್ಯಯನ 16
- ಅಧ್ಯಯನ 16 ರ ಕೊನೆಯಲ್ಲಿ ಗ್ರಂಥಾಲಯ ಸಮಯದ ಸಲಹೆಗಳು

**ಮಂಗಳವಾರ, ವಾರ 2:**

- ಅಧ್ಯಯನ 17

- ಅಧ್ಯಯನ 18
- ಅಧ್ಯಯನ 19
- ಅಧ್ಯಯನ 19 ರ ಕೊನೆಯಲ್ಲಿ ಗ್ರಂಥಾಲಯ ಸಮಯದ ಸಲಹೆಗಳು

## ಬುಧವಾರ, ವಾರ 2:

- ಅಧ್ಯಯನ 20
- ಅಧ್ಯಯನ 21
- ಆತ್ಮಿಕ ಕೂಟ ಅವಧಿ 1
- ಆತ್ಮಿಕ ಕೂಟ ಅವಧಿ 2

## ಗುರುವಾರ, ವಾರ 2:

- ಆತ್ಮಿಕ ಕೂಟ ಅವಧಿ 3
- ಆತ್ಮಿಕ ಕೂಟ ಅವಧಿ 4
- ಆತ್ಮಿಕ ಕೂಟ ಅವಧಿ 5
- ಆತ್ಮಿಕ ಕೂಟ ಅವಧಿ 6

## ಶುಕ್ರವಾರ, ವಾರ 2:

- ಆತ್ಮಿಕ ಕೂಟ ಅವಧಿ 7
- ಆತ್ಮಿಕ ಕೂಟ ಅವಧಿ 8

# ಆತ್ಮಿಕ ಕೂಟ

## ಪೀಠಿಕೆ

ಆತ್ಮಿಕ ಕೂಟ ಈ ಕೋರ್ಸಿನ ಅತೀ ಪ್ರಾಮುಖ್ಯ ಭಾಗವಾಗಿದೆ. ಕಾರಣವು ಅಧ್ಯಯನಗಳಲ್ಲಿ ಕೆಲವು ಅಳವಡಿಸಿಕೊಳ್ಳಬೇಕಾದ ಪ್ರಶ್ನೆಗಳಿವೆ. ಬದಲಾಗಿ ಆತ್ಮಿಕ ಕೂಟವನ್ನು ನಾನು ಕೋರ್ಸಿನ ಅಳವಡಿಸಬೇಕಾದ ಭಾಗವನ್ನಾಗಿ ಮಾಡಿದ್ದೇನೆ.

ಕೆಲವು ಕಾರಣಗಳಿಗಾಗಿ ಆತ್ಮಿಕ ಕೂಟಗಾಗಿ ನೀವು ಸಿದ್ಧಪಡಿಸಲು ಸಾಧ್ಯವಾಗದಿದ್ದರೆ (ಮನಸಿಲ್ಲದಿದ್ದರೆ) ಈ ಅಧ್ಯಯನ ಮಾಡುವಾಗ ಆತ್ಮಿಕ ಕೂಟ ಅವಧಿಗಳಂತ ವಿಷಯಗಳನ್ನು ಉಪಯೋಗಿಸಿರಿ. ಇಂದಿನ ದಕ್ಷಿಣ ಭಾರತದ ಸಭೆಯ ಸನ್ನಿವೇಶಕ್ಕೆ ಪೇತ್ರನ ಪತ್ರವನ್ನು ಅಳವಡಿಸದಿದ್ದರೆ ನೀವು 1 ಮತ್ತು 2 ಪೇತ್ರ ಕಲಿಸುವುದು ತುಂಬಾ ತಪ್ಪಾಗುತ್ತದೆ.

ಆತ್ಮಿಕ ಕೂಟ ಅವಧಿಗಳು ಮತ್ತು ಅಧ್ಯಯನಗಳು ಈ ರೀತಿ ಹೊಂದಿಕೊಂಡಿವೆ:

ಅವಧಿ 1 – ಅಧ್ಯಯನ 3

ಅವಧಿ 2 – ಅಧ್ಯಯನ '5 ಮತ್ತು 6

ಅವಧಿ 3 – ಅಧ್ಯಯನ 8

ಅವಧಿ 4 – ಅಧ್ಯಯನ 9

ಅವಧಿ 5 – ಅಧ್ಯಯನ 10

ಅವಧಿ 6 – ಅಧ್ಯಯನ 13–15

ಅವಧಿ 7 – ಅಧ್ಯಯನ 16–17

ಅವಧಿ 8 – ಅಧ್ಯಯನ 18–20

## ಆರಿಸಿಕೊಳ್ಳಿರಿ

ಹೆಚ್ಚಿನ ಆತ್ಮಿಕ ಕೂಟ ಅವಧಿಗಳು ಕೆಲವು ಗಂಟೆಗಳಲ್ಲಿ ಪೂರ್ತಿಗೊಳಿಸಲಾಗದ ಅಧಿಕ ವಿಷಯಗಳನ್ನು ಒಳಗೊಂಡಿವೆ. ಹಾಗಾಗಿ ನಿಮಗೆ ಹೆಚ್ಚಿನ ಸಮಯವಿಲ್ಲದಿರುವಾಗ ನೀವು ಆರಿಸಿಕೊಳ್ಳತಕ್ಕದ್ದು. ಗಡಿಬಿಡಿಯಲ್ಲಿ ಮುಗಿಸಲು ಹೋಗಬೇಡಿರಿ. ಎರಡೂ ವಿಷಯಗಳನ್ನು ಗಡಿಬಿಡಿಯಲ್ಲಿ ಮಾಡಿ ಮುಗಿಸುವುದಕ್ಕಿಂತ ಒಂದು ವಿಷಯವನ್ನು ಸರಿಯಾಗಿ ಮಾಡುವುದು ಉತ್ತಮ.

ನೀವು ಆರಿಸಿಕೊಳ್ಳುವವರಾಗಿರಲು 2 ಮಾರ್ಗಗಳಿವೆ:

1. **ಪ್ರತಿ ವಿಭಾಗಕ್ಕೂ ಸಹ ಯಾವ ಸಂಗತಿಯನ್ನು ಉಪಯೋಗಿಸಬೇಕೆಂದು ನಿರ್ಧರಿಸಿರಿ!**

   ಕೆಳಕಂಡ ನಿರ್ಧಾರಗಳನ್ನು ನೀವು ಮಾಡಬೇಕು:

- ಪೀಠಿಕೆ ಭಾಗದಲ್ಲಿ ವಿದ್ಯಾರ್ಥಿಗಳು ಎಷ್ಟು ಸಮಯ ಕಳೆಯಬೇಕು?

- *ಹಂಚಿಕೊಳ್ಳುವ ಸಮಯದ* ಯಾವ ಪ್ರಶ್ನೆಗಳು ಅನೇಕ ವಿದ್ಯಾರ್ಥಿಗಳಿಗೆ ಅತೀ ಪ್ರಾಮುಖ್ಯವಾಗಿವೆ? ಈ ಪ್ರಶ್ನೆಗಳಿಗೆ ಮೊದಲು ಉತ್ತರಿಸುವಂತೆ ವಿದ್ಯಾರ್ಥಿಗಳಿಗೆ ಅನುವು ಮಾಡಿಕೊಡಿರಿ. ಒಂದು ವೇಳೆ ಕೆಲವು ವಿದ್ಯಾರ್ಥಿಗಳಿಗೆ ಸಮಯವಿದ್ದರೆ ಅವರು ಇತರ ಪ್ರಶ್ನೆಗಳನ್ನು ಸಹ ಉತ್ತರಿಸಬಹುದು. ವಿದ್ಯಾರ್ಥಿಗಳು ತಾವೇ ತಮಗೆ ಅತೀ ಪ್ರಾಮುಖ್ಯವಾದ ಪ್ರಶ್ನೆ ಯಾವುದೆಂದು ಆಯ್ಕೆಮಾಡಿಕೊಳ್ಳಲು ನೀವು ಅನುಮತಿಸಬಹುದು.

- *ಪ್ರಾರ್ಥನಾ ಸಮಯದ* ಯಾವ ಸಂಗತಿಗಳು ನಮ್ಮ ವಿದ್ಯಾರ್ಥಿಗಳಿಗೆ ಹೆಚ್ಚು ಸಮಂಜಸವಾಗಿವೆ? ವಿದ್ಯಾರ್ಥಿಗಳು ಈ ಸಂಗತಿಯನ್ನು ಮೊದಲು ಮಾಡುವಂತೆ ನೋಡಿಕೊಳ್ಳಿರಿ. ಅವರಿಗೆ ಅತೀ ಪ್ರಾಮುಖ್ಯವೆನಿಸುವ ಸಂಗತಿಯನ್ನು ಪ್ರಾರ್ಥಿಸಲು ಆಯ್ಕೆಮಾಡಲು ವಿದ್ಯಾರ್ಥಿಗಳಿಗೆ ಬಿಡಿರಿ.

- *ಸತ್ಯವೇದ ಅಧ್ಯಯನ/ಸಂದೇಶ/ಧ್ಯಾನಕ್ಕೆ* ಅಲ್ಲಿ ಸಮಯ ಉಳಿದಿದೆಯೋ?

**2. ಬಿಟ್ಟುಬಿಡಬಹುದಾದ ವಿಭಾಗ ಯಾವುದೆಂದು ತೀರ್ಮಾನಿಸಿ!**

ನೀವು ಈ ರೀತಿಯ ಪ್ರಶ್ನೆಗಳನ್ನು ಉತ್ತರಿಸಬೇಕು:

- ಎಲ್ಲಾ 8 ಅವಧಿಗಳನ್ನು ಮಾಡಲು ನಮಗೆ ಸಮಯವಿದೆಯಾ? ಆದಾಗ್ಯೂ 4 ಅವಧಿಗಳನ್ನು ಸರಿಯಾಗಿ ಸಮಯವಿರುವುದನ್ನು ನೀವು ಕಾಣುವಿರಿ.

- ನನ್ನ ವಿದ್ಯಾರ್ಥಿಗಳಿಗೆ ಅತೀ ಪ್ರಾಮುಖ್ಯವೆನಿಸುವ ಆತ್ಮಿಕ ಕೂಟ ಅವಧಿಯ ವಿಷಯಗಳಾವುವು? 4 ಬಗೆಬಗೆಯ ವಿಷಯಗಳು ನಮ್ಮ ವಿದ್ಯಾರ್ಥಿಗಳಿಗೆ ಉತ್ತಮವಾಗಬಲ್ಲವೆಂಬ ಅಂತಿಮ ನಿರ್ಧಾರಕ್ಕೆ ನೀವು ಬರುವಿರಿ.

  - ಒಂದು ಅಥವಾ ಹೆಚ್ಚು ಅವಧಿಗಳನ್ನು ಆರಿಸಿಕೊಳ್ಳಿರಿ, 1, 2, 3, 5 ಮತ್ತು 6– ಇವೆಲ್ಲವೂ ಜೀವನಶೈಲಿಯ ಬಗ್ಗೆ ವ್ಯವಹರಿಸುತ್ತವೆ.
  - ಅವಧಿ 4 ನ್ನು ಆರಿಸಿಕೊಳ್ಳಿರಿ– ಇದು ಕ್ರೈಸ್ತೀಯ ಬಾಧೆಯ ಕುರಿತಾಗಿದೆ.
  - ಅವಧಿ 7 ನ್ನು ಆರಿಸಿಕೊಳ್ಳಿರಿ– ಇದು ಸುಳ್ಳು ಬೋಧನೆಯ ಕುರಿತಾಗಿದೆ.
  - ಅವಧಿ 8 ನ್ನು ಆರಿಸಿಕೊಳ್ಳಿರಿ– ಇದು ಯೇಸುವಿನ ಎರಡನೇ ಬರೋಣದ ಬಗ್ಗೆ ಆಗಿದೆ.

- ಬಿಟ್ಟಂತಹ ಅವಧಿದೊಂದಿಗೆ ಏನು ಮಾಡುವುದು? ನಿರೀಕ್ಷಿತವಾಗಿ ಇದರಲ್ಲಿನ ಕೆಲವು ಅಂಶಗಳನ್ನು ಅಧ್ಯಯನಗಳಲ್ಲಿ ಉಪಯೋಗಿಸಬಹುದಿತ್ತೆಂದು ನೀವು ನೆನಪುಮಾಡಿಕೊಳ್ಳುವಿರಿ. (ಮೇಲಿನ ಪೀಠಿಕೆ/ಪರಿಚಯ ನೋಡಿರಿ).

## ಪ್ರಾರ್ಥನೆಯ ಮೇಲೆ ಗಮನ

ಮಾತು, ಚರ್ಚೆ, ಹಂಚಿಕೊಳ್ಳುವುದಕ್ಕಿಂತ ಹೆಚ್ಚಿನ ಸಮಯವನ್ನು ಪ್ರಾರ್ಥನೆಯಲ್ಲಿ ಕಳೆಯಬೇಕು. ಆದರೆ ಪ್ರಾರ್ಥನಾ ಸಮಯವು ಅರ್ಥವತ್ತಾಗಿರಬೇಕು ಮತ್ತು ಹೆಚ್ಚು ಗಮನ ಹರಿಸಲ್ಪಡಬೇಕು. ಹಾಗೆಯೆ ಹಂಚಿಕೊಳ್ಳುವ ಸಮಯ ಬರುವುದು. ಹಂಚಿಕೊಳ್ಳುವ ಸಮಯದಲ್ಲಿ ಚರ್ಚಿಸಲ್ಪಟ್ಟ ಮತ್ತು ಹಂಚಿಕೊಂಡ ಸಂಗತಿಗಳು  ಪ್ರಾರ್ಥನಾ ಸಮಯಕ್ಕೆ ಹೆಚ್ಚು ಒತ್ತುಕೊಡುವವು. ಇದು ವಿದ್ಯಾರ್ಥಿಗಳಿಗೆ ಪ್ರಾರ್ಥಿಸಲು ಸಹಾಯಿಸುವುದು.

ಪ್ರಾರ್ಥನೆಯು ವೈಯಕ್ತಿಕವಾಗಿ ಅಥವಾ ಚಿಕ್ಕಗುಂಪುಗಳ ರೂಪದಲ್ಲಿ ಸಂಘಟಿಸಲ್ಪಡಲಿ. ಶಿಕ್ಷಕ ಮತ್ತು ಆತ್ಮಿಕ ಕೂಟದ ನಾಯಕರಾದ ನೀವು ಭಾಗವಹಿಸುವವರ ಬಗ್ಗೆ ಗಮನಬರಿಸಬೇಕು. ಬೇರೆಯವರಿಗೆ ಹೇಳಲು ಅವರು ಬಯಸದ ವೈಯಕ್ತಿಕ ಸಂಗತಿಗಳನ್ನು ಹೇಳಿಕೊಳ್ಳಲು ಅವರು ಒತ್ತಾಯಿಸಲ್ಪಡದಂತೆ ನೋಡಿಕೊಳ್ಳಲಿ. ಅಲ್ಲದೆ ವಿದ್ಯಾರ್ಥಿಗಳು ಯಾವಾಗಲೂ ಒಬ್ಬರಿಗೊಬ್ಬರು ಜಾಗ್ರತೆ ಮತ್ತು ಗೌರವದಿಂದ ನೋಡಿಕೊಳ್ಳುವಂತಿರಲಿ. ವಿದ್ಯಾರ್ಥಿಗಳು ಪ್ರಾರ್ಥನಾ ಸಮಯವನ್ನು ತಮ್ಮೆಡೆಗೆ ಗಮನ ಸೆಳೆದುಕೊಳ್ಳಲು ಉಪಯೋಗಿಸದಂತೆ ನೋಡಿಕೊಳ್ಳಲಿ. ಉದಾರಹಣೆಗೆ ತಾವೇ ದೊಡ್ಡ ಪ್ರಾರ್ಥನಾ ವೀರರೆಂದು ತೋರಿಕೊಳ್ಳುವುದು.

## ತೀರ್ಮಾನಗಳನ್ನು ಮಾಡುವ ಪ್ರಾಮುಖ್ಯತೆ

ಹಂಚಿಕೊಂಡು, ಚರ್ಚಿಸಿ ನಂತರ ಪ್ರಾರ್ಥಿಸಿದ ಫಲಿತಾಂಶವಾಗಿ ವಿದ್ಯಾರ್ಥಿಗಳ ಸ್ವಭಾವದಲ್ಲಿ ಬದಲಾವಣೆಯನ್ನು ತರುವುದು ಸಹ ಅತೀ ಪ್ರಾಮುಖ್ಯವಾಗಿದೆ. ಹಾಗಾಗಿ ಹಂಚಿಕೊಳ್ಳುವ ಸಮಯ ಮತ್ತು ಪ್ರಾರ್ಥನಾ ಸಮಯವು ವಿದ್ಯಾರ್ಥಿಗಳು ಜೀವನ ಬದಲಾಗುವಂತ ತೀರ್ಮಾನಗಳನ್ನು ತೆಗೆದುಕೊಳ್ಳುವಂತೆ ಮಾಡಬೇಕು. ವಿದ್ಯಾರ್ಥಿಗಳು ತಮ್ಮ ತೀರ್ಮಾನಗಳನ್ನು ಬರೆದಿಟ್ಟರೆ ಮತ್ತು ತಮ್ಮ ನೋಟ್ಸ್‌ನ್ನು ತಾವು ಏನನ್ನು ತೀರ್ಮಾನಿಸಿದ್ದಾರೋ ಮತ್ತು ತಮ್ಮ ಜೀವನದಲ್ಲಿ ದೇವರು ಮಾಡಬೇಕೆಂದು ಬಯಸುವರೋ ಅದರ ಜ್ಞಾಪಕವಾಗಿ ಇಟ್ಟುಕೊಳ್ಳುವುದು ಒಳ್ಳೆಯದು.

## ಸತ್ಯವೇದ ಅಧ್ಯಯನ/ಸಂದೇಶ/ಧ್ಯಾನ

ಸತ್ಯವೇದ ಅಧ್ಯಯನ (ಅಥವಾ ಸಂದೇಶ/ಧ್ಯಾನ) ವನ್ನು ಸಿದ್ಧಪಡಿಸುವುದು ನಮ್ಮ ತಿಳುವಳಿಕೆಯನ್ನು ಹೆಚ್ಚಿಸಿಕೊಳ್ಳಲು ಮತ್ತು ನಾವು ಏನನ್ನು ಕಲಿತಿದ್ದೇವೋ ಅದನ್ನು ಪ್ರಾಯೋಗಿಕವಾಗಿ ಬಳಸಲು ಅತೀ ಪ್ರಾಮುಖ್ಯವಾದ ಒಂದು ವಿಧಾನವಾಗಿದೆ. ಹಾಗಾಗಿ ಇದನ್ನು ನಿರ್ಲಕ್ಷಿಸಬೇಡಿರಿ.

ಈ ಕೋರ್ಸ್/ವಿಷಯದ ಸಮಸ್ಯೆಯೇನಂದರೆ– ಸಮಯವಾಗಿದೆ. ಆತ್ಮಿಕ ಕೂಟ ಅವಧಿಯ ಸಮಯದಲ್ಲಿ ವಿದ್ಯಾರ್ಥಿಗಳಿಗೆ ಸತ್ಯವೇದ ಅಧ್ಯಯನ/ಸಂದೇಶ/ಧ್ಯಾನವನ್ನು ಸಿದ್ಧಪಡಿಸಲು ಸಾಕಷ್ಟು ಸಮಯ ಸಿಗದೆ ಇರಬಹುದು. ಆದರೆ ಆ ಸಮಸ್ಯೆಯನ್ನು ಪರಿಹರಿಸಲು ಶಿಕ್ಷಕರು ಮಾರ್ಗವನ್ನು ಕಂಡುಹಿಡಿಯಬೇಕು. ವಿದ್ಯಾರ್ಥಿಗಳು ಇದನ್ನು ಸಂಜೆವೇಳೆ ಅಥವಾ ವಾರದ ಕೊನೆಯಲ್ಲಿ ಅಸ್ಯೈನ್‌ಮೆಂಟ್ ಆಗಿ ಸಹ ಮಾಡಬಹುದು.

# ಪದಸೂಚಿ


ಪ್ರವಾಸಿಗಳು, ಪರದೇಶಿಗಳು – 36, 59, 64, 66, 67, 70, 78, 83, 96, 124, 141, 142, 185, 189

ದೇವದೂತರು – 98, 150, 151, 152, 155, 167, 173

ಅಪೋಸ್ತಲ/ರು – 09, 37, 64, 66, 72, 108, 109, 111, 118, 127, 131, 132, 143, 144, 147, 166, 178, 179

ಅಧಿಕಾರ – 37, 84, 89, 93, 94, 113, 116, 120, 122, 127, 131, 150, 153, 155, 158, 159, 160, 188, 211

ಬಾಬಿಲೋನ್ – 09, 58, 59, 120, 121

ಬಿಳಾಮ – 148, 157, 159

ದೀಕ್ಷಾಸ್ನಾನ – 27, 96, 98, 100, 176, 207

ಬಾರ್ನಬ – 33, 118, 119, 120, 132

ದೇವದೂಷಣೆ – 158

ಕ್ರಿಸ್ತನ ರಕ್ತ – 67, 68, 75, 211

ಸಹೋದರ ಸ್ನೇಹ – 16, 43, 74, 84, 94, 97, 102, 103, 120, 122, 137, 185, 188

ಕರೆ – 19, 22, 41, 44, 66, 67, 80, 81, 86, 87, 88, 105, 134, 135, 137, 138, 139, 150, 178, 200

ಕಾಳಜಿ – 31, 45, 95, 112, 114, 120, 121, 143, 146, 147, 168, 170, 199

ಕ್ರೈಸ್ತೀಯ ಜೀವನ/ನಂಬಿಕೆ/ದೀನತೆ – 22, 24, 26, 32, 39, 47, 48, 59, 70, 72, 73, 76, 85, 89, 94, 114, 115, 116, 121, 128, 140, 143, 149, 153, 154, 163, 178, 188, 191, 194

ಸಭಾಪಾಲಕ/ಸಭಾಪಾಲಕತ್ವ – 45, 47, 118, 155, 192, 194

ಸಭಾ ನಾಯಕ/ನಾಯಕತ್ವ – 31, 37, 64, 111, 112, 113, 115, 116, 121, 132, 158, 160, 192, 196, 198, 199, 200, 206

ನಾಯಕ/ನಾಯಕತ್ವ – 09, 27, 102, 112, 150, 158, 160, 207

ಕರ್ತನ ದಿನ – 53, 55, 56, 101, 107, 129, 136, 137, 144, 153, 154, 165, 166, 170, 171, 173, 174, 175, 176, 180, 191, 210, 211

ಮರಣ – 38, 45, 47, 69, 74, 91, 100, 101, 114, 115, 134, 141, 142, 143, 152, 187, 202, 203

ಕ್ರಿಸ್ತನ ಮರಣ – 27, 51, 67, 71, 88, 95, 96, 97, 98, 99, 100, 119, 132, 153, 167

ಕ್ರಿಸ್ತನ ಪುನರುತ್ಥಾನ – 65, 69, 71, 72, 78, 93, 94, 95, 96, 97, 100, 111, 118, 132, 153, 167

ಕ್ರಿಸ್ತನ ಎರಡನೇ ಬರೋಣ – 36, 39, 70, 73, 101, 107, 114, 124, 129, 144, 145, 165, 166, 168, 170, 173, 175, 176, 182, 191, 211, 221

ನಾಶನ – 55, 64, 137, 138, 139, 150, 152, 156, 167, 168, 170, 171, 172, 174, 175, 210

ಸೈತಾನ – 32, 34, 96, 114, 115, 116, 118, 121, 122, 198, 200, 207

ಚದುರಿಸಲ್ಪಟ್ಟ – 9, 10, 20, 36, 58, 59, 62, 66, 67, 68, 107, 117, 118, 120, 124

ಕುಡುಕ/ಕುಡುಕತನ – 26, 28, 97, 100, 102, 109, 152

ಆಯ್ಕೆ – 13, 15, 44, 53, 67, 99, 117, 134, 138, 139, 141, 191, 193, 196, 200, 202, 209

ನಂಬಿಕೆ – 10, 14, 28, 30, 34, 39, 42, 43, 45, 47, 66, 70, 74, 78, 79, 81, 95, 96, 97, 101, 108, 109, 115, 116, 121, 122, 132, 136, 137, 140, 142, 146, 154, 161, 162, 163, 195, 196

ನಂಬಿಗಸ್ತಿಕೆ – 11, 72, 103, 106, 115, 196, 200, 202

ಸುಳ್ಳು ಬೊಧನೆ/ಬೋಧಕರುಗಳು — 38, 39, 47, 48, 50, 54, 55, 56, 128, 129, 132, 142, 144, 146, 148, 149, 150, 153, 155, 156, 157, 159, 160, 161, 162, 163, 174, 177, 180, 182, 206, 207, 208, 221

ಕುಟುಂಬ – 78, 81, 82, 95, 96, 97, 114, 164, 199

ಭಯಭಕ್ತಿ/ಭಕ್ತಿ — 27, 36, 41, 43, 56, 74, 76, 88, 103, 109, 119, 122, 125, 128, 129, 134, 135, 136, 137, 138, 140, 143, 146, 148, 149, 151, 153, 154, 161, 162, 165, 168, 175, 177, 180, 182, 185, 202, 203

ದೇವರ ಯೋಜನೆ — 67, 81, 109, 137, 139, 167

ದೇವರ ವಾಕ್ಯ — 73, 75, 76, 145, 146, 147, 154, 167, 178, 186, 199

ದೇವರ ರಾಜ್ಯ — 22, 29, 83–86, 88–90, 97, 106, 109, 113, 136, 177, 186, 189, 191, 193, 206

ಪರಿಶುದ್ಧತೆ — 73, 74, 76, 80, 85, 184, 185

ಪವಿತ್ರಾತ್ಮ — 66–68, 71, 72, 75, 76, 78, 81, 93, 115, 135, 145, 146, 167, 176, 178

ಯೆಹೂದಿ – 58, 59, 79, 89, 118, 120, 131, 154

ಜ್ಞಾನ/ತಿಳುವಳಿಕೆ — 67, 90, 116, 130, 133, 135, 137–141, 143, 146, 153, 161, 165, 174, 177, 178, 183

ಜೀವನ ಶೈಲಿ – 22, 24, 28, 83, 87, 149, 152, 159, 163, 182, 187, 193

ಗರ್ಜಿಸುವ ಸಿಂಹದಂತೆ — 32, 34, 114, 116, 121

ಶರೀರದಾಶೆ — 100, 102, 156, 158, 161

ಮದುವೆ — 89, 90, 148, 150, 151

ದೀನತೆ — 11, 31, 32, 72, 90, 94, 97, 111, 113–116, 119–122, 153, 158, 176, 185, 189, 198, 200

ಕರುಣೆ — 19, 81, 94, 97, 109, 119, 120, 124, 169

ನಿರೀಕ್ಷೆ — 14, 15, 25, 51, 61, 62, 69, 71, 73, 74, 76, 80, 95, 96, 101, 111, 124, 135, 136, 173, 211

ತಾಳ್ಮೆ — 43, 77, 137, 143, 169, 170, 172, 175, 202

ಆತ್ಮ ಸಂಯಮ — 16, 102, 140, 198

ಸ್ವಸ್ಥ ಚಿತ್ತತೆ – 32, 102, 200, 201

ಗೌರವ – 20, 84, 90, 91, 146, 155, 183, 197, 201, 210, 213

ಸೇವೆ – 27, 46, 58, 66, 72, 80, 84, 86, 102, 108, 110, 113, 115, 118, 119, 121, 122, 132, 145, 159, 163, 165, 178, 184, 185, 186, 188, 189, 192, 193, 201

ರಕ್ಷಣೆ – 10, 13, 14, 16, 18, 64, 67, 70–76, 80, 88, 96, 105, 107, 108, 114, 136–139, 149, 162, 169, 170, 172, 175, 177, 184

ಹಿಂಸೆ – 09, 10, 38, 58, 59, 61, 65, 109, 127, 189, 197

ಪಾಪ – 27, 48, 66, 67, 74, 76, 83, 88, 91, 97, 99, 100, 103, 105, 107, 115, 120, 135, 140, 149, 150–154, 158, 165, 175, 185, 187, 195, 196

ಗುಲಾಮತನ/ದಾಸತ್ವ – 20, 50, 85, 89, 159, 160, 161,

ಗರ್ವ – 94, 115, 122, 153, 160, 196

ನೋಹ – 48, 93–96, 151, 152, 167, 170

ಪೌಲ – 09, 10, 29, 33, 37, 38, 48, 59, 65, 76, 79, 80, 81, 85, 87, 89, 97, 98, 100, 101, 106, 113, 115, 117–120, 126, 127, 132, 154, 165, 171, 174, 175–178, 184

ಮಾರ್ಕ – 33, 65, 118, 119, 120, 121

ನಿರೋ – 09, 38, 58, 65, 127

ನೂತನ ಆಕಾಶ – 175

ಸ್ತುತಿ/ಆರಾಧನೆ – 76, 102, 106, 115, 193, /108, 115, 122

ವಾಗ್ದಾನಗಳು – 41–44, 50, 51, 54, 129, 134, 135, 138, 140, 145, 158–161, 163, 166, 167, 173–175

ಪ್ರವಾದಿ – 29, 69, 70, 72, 81, 106, 129, 131, 141, 143, 145, 147, 148, 163, 166, 204

ಜ್ಞಾನೋಕ್ತಿ – 29, 50, 105, 108, 113, 115, 156, 157

ಗಂಡ – 22, 23, 27, 87–91, 189

ರೂಪಾಂತರ – 38, 45, 64, 66, 67, 141, 143, 144

ಸಾಕ್ಷಿ – 11, 45, 48, 56, 72, 83, 95, 96, 97, 108, 111, 118, 128, 129, 132, 141, 143, 144, 146, 149, 153, 154, 166, 167, 176, 180, 187, 202